ಸಂವಾದ

ಏಪ್ರಿಲ್ ೨೦೦೮ ರೂ. ೨೦



ಅಂಬೇಡ್ಕರ್ ವಿಶೇಷಾಂಕ

ಅಂಬೇಡ್ಕರ್-ಲೋಹಿಯಾ ಸಾಂಸ್ಕೃತಿಕ ಅನುಸಂಧಾನ

ಒಳಮೀಸಲಾತಿ: ದಲಿತರಿಂದ ದಲಿತರಿಗೆ ನ್ಯಾಯ!

ಭಾರತೀಯ ರಾಜಕಾರಣದಲ್ಲಿ ಕೋಮುವಾದ-ಜಾತಿವಾದ

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೬

ಏಪ್ರಿಲ್ ೨೦೦೮

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ.

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

© ೨೩೪೮೦೨೭೮/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

honnapura@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

© 080-23480278, 94480 48306

e- mail : samvaada@hotmail.com

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೦೩
- ಹೊಸ ಪುಸ್ತಕ ೦೪
- ಅಂತರಂಗ ೦೫
- ಸಂಪಾದಕರೊಂದಿಗೆ ಸಂವಾದ ೦೬
- ಜಾಗತೀಕರಣ: ದಲಿತರ ಸ್ಥಿತಿ:ಗತಿ ೦೮
  - ನರಸಿಂಹ ಗುಂಜಹಳ್ಳಿ
- ಸ್ವಾತಂತ್ರ್ಯಕ್ಕಾಗಿ ಡಾ॥ ಬಿ.ಆರ್. ಅಂಬೇಡ್ಕರ್ ಕೊಡುಗೆ ೧೦
  - ವಿಕಾಸ್ ಆರ್. ಮೌರ್ಯ







- ಅಂಬೇಡ್ಕರ್-ಲೋಹಿಯಾ ಸಾಂಸ್ಕೃತಿಕ ಅನುಸಂಧಾನ ೧೨
  - ಡಾ॥ ಎಚ್.ಟಿ. ಪೋತೆ
- ದಲಿತರಿಂದ ದಲಿತರಿಗೆ ನ್ಯಾಯ! ೧೮
  - ಕೆ. ಬಾಲಗೋಪಾಲ್
- ರಾಜಕಾರಣ ಚರ್ಚೆ ೨೬
  - ರಾಮಲಿಂಗಪ್ಪ ಟಿ. ಬೇಗೂರು
  - ಡಾ॥ ಹಿ.ಶಿ. ರಾಮಚಂದ್ರಗೌಡ
  - ಸಾರಾ ಅಬೂಬಕ್ಕರ್
  - ಟಿ. ಮಹೇಶ್ ಹರವೆ
  - ಡಾ॥ ಶ್ರೀನಿವಾಸ ಗಿಳಿಯಾರು
  - ಬಿ.ಟಿ. ಜಾಹ್ನವಿ

- ಭಾರತೀಯ ರಾಜಕಾರಣದಲ್ಲಿ ಕೋಮುವಾದ... ೩೨
  - ಡಾ॥ ಬಿ.ಯು ಸುಮಾ
- ಪುಸ್ತಕ ಅವಲೋಕನ ೩೮
  - ಮೇಟಿ ಮಲ್ಲಿಕಾರ್ಜುನ
- ಮಾತಿನ ಹಂಗು ೩೮
  - ರಹಮತ್ ತರೀಕೆರೆ
- ದಲಿತ್ ಡೈರಿ ೪೬
  - ಚಂದ್ರಭಾನ್ ಪ್ರಸಾದ್/ ಡೊಮಿನಿಕ್
- ಬುದ್ಧಾಯಣ ೫೦
  - ಸಿ.ಎಚ್ ರಾಜಶೇಖರ್

ಕವನಗಳು :
- ನಿತಾಂತ ದಾರ್ಶನಿಕನ ಕಣ್ಬೆಳಕು ೩೭
- ಸಂತ ಮತ್ತು ಗಡ್ಡ ೩೭
- ಹಾದಿ ಹುಣ್ಣಿಮೆ ೪೯

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪೊಲೀಸ್ ದೌರ್ಜನ್ಯ: ತಿಂಗಳ ಟಿಪ್ಪಣಿಗಳು

ಮಾನ್ಯ ಸಂಪಾದಕರೇ,

ಹಾಸನ ಜಿಲ್ಲೆಯ ಅರಸಿಕೆರೆಯಲ್ಲಿ ೧೨ ವರ್ಷದ ಹುಡುಗಿಯೊಬ್ಬಳು ಅಪ್ಪ ಅಮ್ಮನೊಂದಿಗೆ ಜಗಳವಾಡಿ ಮನೆಬಿಟ್ಟು ಬಂದದ್ದನ್ನು ನೋಡಿ ಪೊಲೀಸ್ ಪೇದೆಯೊಬ್ಬ ರಕ್ಷಣೆ ನೀಡುತ್ತೇನೆ ಎಂದು ನಂಬಿಸಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಮಾಡಿದ್ದಾರೆ.

ಮೈಸೂರಿನಲ್ಲಿ ಪೊಲೀಸ್ ಪೇದೆಯೊಬ್ಬ ತನ್ನ ಕೌಟುಂಬಿಕ ಸಮಸ್ಯೆಗಳಿಂದ ತನ್ನ ಹೆಂಡತಿಯನ್ನು ಕೊಲೆ ಮಾಡಿ ತಾನು ಆತ್ಮಹತ್ಯೆ ಮಾಡಿಕೊಂಡಿದ್ದು ವರದಿಯಾಗಿದೆ.

ಮುಂಬೈನಲ್ಲಿ ಹೊಸ ವರ್ಷ ಆಚರಣೆ ಸಂದರ್ಭದಲ್ಲಿ ಮಹಿಳೆಯೊಬ್ಬರ ಮೇಲೆ ಯುವಕರ ಗುಂಪೊಂದು ಲೈಂಗಿಕ ಕಿರುಕುಳ ನೀಡಿದ್ದು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿತ್ತು. ಆ ಸಂದರ್ಭದಲ್ಲಿ ಕುಡಿದು ಅಮಲಿನಲ್ಲಿದ್ದ ಯುವತಿಯರಿಗೆ ಪೊಲೀಸರು ಅವರ ನಡವಳಿಕೆ ಬಗ್ಗೆ ಎಚ್ಚರಿಕೆ ನೀಡಿದರು. ಆದರೆ ಇತ್ತ ಮೈಸೂರಿನಲ್ಲಿ ಪೊಲೀಸನೊಬ್ಬ ಕುಡಿದ ಅಮಲಿನಲ್ಲಿ ಪಾರ್ಕ್‌ವೊಂದರಲ್ಲಿ ಬಿದ್ದಿದ್ದು ಕಂಡು ಬಂದಿತ್ತು.

ಬೆಂಗಳೂರಿನಲ್ಲಿ ಐದು ಜನ ಪೊಲೀಸರೇ ಅಪಾರ್ಟ್‌ಮೆಂಟ್‌ಗೆ ನುಗ್ಗಿ ರೋಲ್‌ಕಾಲ್ ಮಾಡಿದ್ದು ಇತ್ತೀಚಿನ ದಿನಗಳಲ್ಲಿ ವರದಿಯಾಗಿತ್ತು.

ಈ ಮೇಲಿನ ೪ ಘಟನೆಗಳು ಈ ಜನವರಿಯಲ್ಲಿಯೇ ವರದಿಯಾಗಿವೆ ಮತ್ತು ಇವೆಲ್ಲಕ್ಕೂ ಪೊಲೀಸರೇ ಕಾರಣರಾಗಿದ್ದಾರೆ. ಒಂದು ಸಮಾಜ ಇಡಿಯಾಗಿ ತನ್ನನ್ನೂ ತಾನೇ ಭ್ರಷ್ಟಗೊಳಿಸಿಕೊಳ್ಳುವಾಗ ಪ್ರಭುತ್ವ ರಕ್ಷಣೆಗಾಗಿ ಹುಟ್ಟು ಹಾಕಿದ ಸಾಮಾಜಿಕ Co-ersive ರಕ್ಷಣಾ ವ್ಯವಸ್ಥೆ ಅಂದರೆ ಪೊಲೀಸ್ ವ್ಯವಸ್ಥೆ ಈ ಮಾಸ್ ಅಪರಾಧೀಕರಣಕ್ಕೆ ಯಾವ ರೀತಿ ತನ್ನ ಕೊಡುಗೆ ನೀಡುತ್ತಿದೆ ಎಂಬುದನ್ನು ಸಮಾಜ ಮತ್ತು ಪೊಲೀಸ್ ವ್ಯವಸ್ಥೆಯ ಸಂಬಂಧದ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಪ್ರಯತ್ನಿಸುತ್ತಿದ್ದಾನೆ.

ಸಮಾಜದ ಒಂದು ಕಣ್ಣು ಪೊಲೀಸ್, ಸಮಾಜದಲ್ಲಿ ನಡೆಯುವ ದುರ್ಘಟನೆ ನಡೆಯದಂತೆ ರಕ್ಷಿಸುವ ಹಕ್ಕನ್ನು ಕಾನೂನು ಪೊಲೀಸರಿಗೆ ನೀಡಿದೆ ಆದರೆ ಇಂದಿನ ದಿನಗಳಲ್ಲಿ ಬೇಲಿಯೆ ಎದ್ದು ಹೊಲ ಮೇಯ್ದಂತಾಗಿದೆ. ಸಮಾಜದಲ್ಲಿ ವೃತ್ತಿ ಗೌರವ ಮತ್ತು ಕರ್ತವ್ಯ ನಿಷ್ಠೆಯಿಂದ ಕಾರ್ಯ ನಿರ್ವಹಿಸುವ ಹಾಗೂ ಜನತೆಯೊಂದಿಗೆ ಕಾನೂನನ್ನು ರಕ್ಷಿಸುವ ಮತ್ತು ಕಾಪಾಡುವ ಜವಾಬ್ದಾರಿ ಹೊಂದಿರಬೇಕಾದ ಪೊಲೀಸರೆ ಅಪರಾಧಿಗಳಾಗುತ್ತಿದ್ದಾರೆ.

ಕಾನೂನಿನಲ್ಲಿ ಒಬ್ಬ ಸಾಮಾನ್ಯ ವೃತ್ತಿ ಮಹಿಳೆ ಮೇಲೆ ನಡೆಯುವ ಅಪರಾಧ ಕೃತ್ಯಗಳಲ್ಲಿ ಭಾಗಿಯಾದರೆ ಸೆಕ್ಷನ್ (೩೭೬) ರಲ್ಲಿ ೭ ವರ್ಷಗಳ ಕಾಲ ಶಿಕ್ಷೆ ನೀಡಲಾಗುವುದು, ಆದರೆ ಈ ಅಪರಾಧವನ್ನು ಪೊಲೀಸ್ ಅಧಿಕಾರಿ ಮಾಡಿದರೆ ಸೆಕ್ಷನ್ ೩೭೬(೨)ರಲ್ಲಿ ೧೦ ವರ್ಷಗಳ ಕಾಲ ಶಿಕ್ಷೆ ನೀಡಲಾಗುತ್ತದೆ.

ಮೇಲಾಧಿಕಾರಿಗಳಿಂದ ಪೊಲೀಸ್ ಪೇದೆಗಳಿಗೆ ವರ್ಗಾವಣೆಗೊಳ್ಳುವ ಕೆಲಸದ ಒತ್ತಡದಿಂದ ಪೇದೆಗಳೂ ಹಲವಾರು ರೀತಿಯ ಮಾನಸಿಕ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಈ ರೀತಿಯ ಸಮಸ್ಯೆಗಳಿಗೆ ಕಾರಣವೇನು ಎಂದು ಪೊಲೀಸ್ ಅಕಾಡೆಮಿ ಉಪ ನಿರ್ದೇಶಕ ಮತ್ತು ಮನಃಶಾಸ್ತ್ರಜ್ಞರನ್ನು ಸಂದರ್ಶಿಸಿದೆ ಈ ತರಹ ಕೃತ್ಯಗಳೂ ಸಾಮಾನ್ಯವಾಗಿ ನಡೆಯುತ್ತಿರುತ್ತವೆ, ಆದರೆ ಒಬ್ಬ ಪೊಲೀಸ್ ಅಧಿಕಾರಿ ಘಟನೆಗೆ ಕಾರಣನಾಗಿದ್ದಾನೆ ಎಂದರೆ ಸಮಾಜ ಆಶ್ಚರ್ಯವಾಗಿ ನೋಡುತ್ತದೆ. ಪೊಲೀಸ್ ಅಧಿಕಾರಿಗಳಿಗೆ ಮಕ್ಕಳು ಮತ್ತು ಸ್ತ್ರೀಗೆ ನೀಡುವ ಗೌರವದ ಬಗ್ಗೆ ವರ್ಷಕ್ಕೆ ಒಮ್ಮೆ 'ಲಿಂಗ ಸಂವೇದನಾ ಮತ್ತು ಜನಸ್ನೇಹಿ ಪೊಲೀಸ್ ತರಬೇತಿ' ಮತ್ತು ಕೌನ್ಸಲಿಂಗ್‌ಗಳನ್ನೂ ವರ್ಷಕ್ಕೆ ಒಮ್ಮೆ ನೀಡಲಾಗುತ್ತಿದೆ ಮೈಸೂರು ಪೊಲೀಸ್ ಅಕಾಡೆಮಿ ಉಪನಿರ್ದೇಶಕ ಎಂದು ರಾಜೇಂದ್ರಪ್ರಸಾದ್ ತಿಳಿಸಿದರು.

ಮನಃಶಾಸ್ತ್ರ ಉಪನ್ಯಾಸಕ ವೆಂಕಟೇಶ್ ಕುಮಾರ್ ಪ್ರತಿಯೊಬ್ಬ ಸಾಮಾನ್ಯ ಜೀವಿಯೂ ತನ್ನ ಜೀವನದಲ್ಲಿ ಸುಖ, ಸಂತೋಷ ಮತ್ತು ನೆಮ್ಮದಿಯಿಂದ ಬದುಕಬೇಕೆಂದು ಇಚ್ಛಿಸುತ್ತಾನೆ. ಆದರೆ ತನ್ನ ಕಾರ್ಯಕ್ಷೇತ್ರದಲ್ಲಿನ ಕೆಲಸದೊತ್ತಡ, ಆರ್ಥಿಕತೆ, ಸಾಮಾಜಿಕ ಮೌಲ್ಯಗಳ ಏರುಪೇರುಗಳಿಂದ ಮಾನಸಿಕ ಒತ್ತಡಕ್ಕೆ ಸಿಲುಕಿ ವಿಕೃತ ಮನಸ್ಸಿಗೆ ಬದಲಾಗುತ್ತಾನೆ.

ಪತ್ರಗಳು

ಇದರಿಂದ ತೃಪ್ತಿ ಹೊಂದಲು ಅನೈತಿಕ ಚಟುವಟಿಕೆಗಳಲ್ಲಿ ತೊಡಗುತ್ತಾನೆ ಎಂದು ಅಭಿಪ್ರಾಯಪಟ್ಟರು.

ಶಿಕ್ಷಣ ತಿಳಿದ ಪೊಲೀಸ್ ಅಧಿಕಾರಿಗಳಿಗೆ ಈ ರೀತಿಯ ಅಪರಾಧಕ್ಕೆ ಕಾನೂನಿನಲ್ಲಿರುವ ಶಿಕ್ಷೆಯ ಬಗ್ಗೆ ತಿಳಿದಿದ್ದು, ತಿಳಿಯದ ಹಾಗೆ ವರ್ತಿಸುತ್ತಿದ್ದಾರೆ. ರಕ್ಷಕನೇ ಭಕ್ಷಕನಾಗುತ್ತಿರುವ ಈ ಸಮಾಜದ ಸ್ಥಿತಿಗತಿ ಏನಾಗಬಹುದು?

ಸಮಾಜದಲ್ಲಿ ನಡೆಯುವ ಅಪರಾಧಕ್ಕೆ ಕಡಿವಾಣ ಹಾಕಿ ರಕ್ಷಣೆ ನೀಡಬೇಕಾದ ಪೊಲೀಸರು ಮಾನಸಿಕ ಒತ್ತಡಕ್ಕೆ ಸಿಲುಕದಂತೆ ವೃತ್ತಿ ಮತ್ತು ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಿ ಇತರಿಗೆ ಮಾದರಿಯಾಗಿ ತಾವು ಇರುವ ಸಂಸ್ಥೆಗೆ ಗೌರವ ತರುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕಾಗಿದೆ.

ಲಿಖಿತ ಗಿ ಬಾಳಗೋಡು
ಹಾಸನ ಜಿಲ್ಲೆ

ನಮ್ಮ ಸ್ವಾತಂತ್ರ್ಯದ ದುರಂತ

ಪ್ರಿಯ ಸಂಪಾದಕರೆ,

ನಿಮ್ಮ ಓಟು ಯಾರಿಗೆ?

ಹೌದು! ಇದೊಂದು ಮುಂಬರುವ 'ಓಟಿಗೆ' ಓಟು ಹಾಕಲಿರುವವರೆಲ್ಲರ ಮುಂದಿರುವ ಪ್ರಶ್ನೆ. ನೋಟು ಕೊಡುವವರಿಗೆ ಓಟು ಹಾಕುವವರೇ ಈಗ ಹೆಚ್ಚು. ಓಟಿಗೆ ನಿಲ್ಲುವವರಿಗೆ ಈ ಗುಟ್ಟು ಮನದಟ್ಟಾಗಿದೆ. ನೋಟಿನ ಓಟದ ಮೇಲೆ ಕೋಟಿ ಖರ್ಚು ಮಾಡಿದರೆ ಕೋಟಿ ಕೋಟಿಗಳ ಅಧಿಪತಿಯಾಗುವರೆಂಬುದು ಈಗ ಗುಟ್ಟಲ್ಲವೆ ಅಲ್ಲವೆಂಬುದು ದಿಟ.

ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ; ಇದು ಹಳೆಯ ಗಾದೆ. ಹೊಟ್ಟೆ ಹಸಿದಿರುವಾಗ ಒಂದು ಹೊತ್ತಿನ ತುತ್ತು ಸಿಕ್ಕಿದದರೆ ಹಿಂದು ಮುಂದಿನ ಆಲೋಚನೆ ಹುಟ್ಟುವುದಿಲ್ಲ. ಈ ಗುಟ್ಟನ್ನು ಅರಿತವರೇ ಇಂದು ಓಟಿಗೆ ನಿಲ್ಲುವರು. ಸೆಕ್ಯುಲರಿಸಂ ಎನ್ನುವುದು ಓಟಿಗೆ ಒಂದು ಘೋಷಣೆ ಮಾತ್ರ.

ಇಂದಿರಾಗಾಂಧಿಯವರ 'ಗರೀಬಿ ಹಟಾವೊ' ಕೇವಲ ಓಟಿಗೆ ಸೀಮಿತವಾಗಿದೆಯೆನ್ನುವುದು ಈಗ ಇತಿಹಾಸ. ಇಂದು ವೈಜ್ಞಾನಿಕ ಸೈದ್ಧಾಂತಿಕತೆಯಾಗಲಿ ತಾತ್ವಿಕತೆಯಾಗಲಿ ಎದ್ದು ಕಾಣುವುದಿಲ್ಲ. ಇದು ನಮ್ಮ ಸ್ವಾತಂತ್ರ್ಯದ ದುರಂತವೆನಿಸುತ್ತದೆ.

ದುರ್ಬಲ ವರ್ಗದ ಅಸಹಾಯಕತೆಯನ್ನು ಸ್ಥಿರಗೊಳಿಸಲು ಜಾಗತೀಕರಣ ಎದುರಾಗಿದೆ. ಎಲ್ಲ ಹೋರಾಟಗಳಿಗೆ ರಾಜಕೀಯದ ಲೇಪನ ಹಚ್ಚಲಾಗಿದೆ!

"ಹಿಂದೂಮತ'ದಂತೆ ಕ್ರೈಸ್ತ ಮತವೂ ಜಾತಿಯನ್ನೇ ಆಧಾರವಾಗಿಟ್ಟುಕೊಂಡಿದೆಯೆಂದು ಭಾಸವಾಗುತ್ತದೆ. ಧರ್ಮವು ಈ ಮತಗಳಲ್ಲಿ ಅರ್ಥವನ್ನು ಕಳಕೊಂಡಂತಿದೆ. ಬರಗೂರರ 'ಶಬರಿ' ಕಟ್ಟಿದ ಕನಸು ಮತ್ತು ಕಪಟತನಗಳ ಅರಿವು ಸಾರ್ವತ್ರಿಕವಾದೀತೇ?

೨೦೦೮ರ ಸಂವಾದವನ್ನು ಈ ಹಿಂದಿನಂತೆ ವಿಶೇಷಾಂಕವಾಗಿ ನಿರೀಕ್ಷಿಸಿದ್ದೆ ಆದರೆ ಚಿಂತೆಯಿಲ್ಲ, ಪತ್ರಿಕೆಯೇನೂ ಕಮ್ಮಿಯಾಗಿಲ್ಲ. 'ಸಂವಾದ'ವು ಪ್ರಸ್ತುತ ಪ್ರಮೇಯಗಳ ಸಂವಾಹಕವಾಗಿದೆ.

ಪಿ. ಗೋಕುಲ್‌ದಾಸ್,
ಮಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಒ./ಡಿ.ಡಿ. ಮಾತ್ರ ಕಳುಹಿಸಬೇಕು.



ಪ್ರತಿಮಾ ಲೋಕ
ಗೋಪಾಲ ಕೃಷ್ಣ ಅಡಿಗ–ಮರು ಓದು
ಸಂ: ಎಸ್.ಆರ್. ವಿಜಯ ಶಂಕರ
ಬೆಲೆ: ೨೫೦/–

ನವ್ಯ ಸಂಪ್ರದಾಯದ ಅತ್ಯಂತ ಪ್ರಮುಖ ಕವಿಗಳಾದ ಗೋಪಾಲಕೃಷ್ಣ ಅಡಿಗರನ್ನು ಕುರಿತ ಮರು ಓದು ಈ ಕೃತಿ. ಅಡಿಗರ ತಲೆ ಮಾರಿನವರು, ನಂತರದವರು ಮತ್ತು ಅಡಿಗರನ್ನು ಹೊಸದಾಗಿ ಓದಿಕೊಂಡ ಹೊಸ ತಲೆ ಮಾರಿನ ಬಹುಮುಖ್ಯ ಲೇಖಕರು ಅಡಿಗರ ಸಾಹಿತ್ಯ ಕುರಿತಂತೆ ಬರೆದ ಲೇಖನಗಳು ಇಲ್ಲಿವೆ. ಅಡಿಗರ ಸಮಗ್ರ ಸಾಹಿತ್ಯ–ವಿಮರ್ಶೆ ಕುರಿತು ಒಂದೇ ಕೃತಿಯಲ್ಲಿ ಸಿಗುವ ವಿಫುಲ ಸಾಹಿತ್ಯವೇ ಈ ಕೃತಿಯ ಹೆಗ್ಗಳಿಕೆ.

ಪ್ರಕಾಶಕರು: ಅಂಕಿತ ಪ್ರಕಾಶನ,
ಗಾಂಧಿ ಬಜಾರ್,
ಬೆಂಗಳೂರು–೫೬೦೦೦೪

ಹೊಸ ಪುಸ್ತಕ

ನೇರಳೆ ಮರ
ಲೇ: ಕೇಶವ ಮಳಗಿ
ಬೆಲೆ: ರೂ. ೬೦/–

ಪ್ರಸ್ತುತ ಸಾಹಿತ್ಯ ಸಂದರ್ಭದ ಸೂಕ್ಷ್ಮ ಬರಹಗಾರರಲ್ಲಿ ಒಬ್ಬರಾದ ಕೇಶವ ಮಳಗಿ ಅವರೊಳಗಿನ ಕಥೆಗಾರ ಕಂಡ ರೂಪಕ ಲೋಕದ ಕಥನಗಳ ಸಂಗ್ರಹ ಇದು. ಕಥೆ, ಕಾವ್ಯ, ಲಲಿತ ಪ್ರಬಂಧವೇ ಮೊದಲಾದ ಸಾಹಿತ್ಯ ಪ್ರಕಾರಗಳಿಗೆ ಹೊರತಾದ ಕಥನ ರೂಪ ಇಲ್ಲಿನ ಬರಹಗಳಿಗೆ ಇದೆ. ಮನುಷ್ಯನ ಅತಿ ಮೂಲ ಭೂತ ಗುಣ ಲಕ್ಷಣಗಳಾದ ಅನುರಾಗ, ಅಗಲಿಕೆ, ಅಸ್ತಿತ್ವ ಹಾಗೂ ಸಾವಿನ ಭಯ, ಸಂಬಂಧಗಳ ಗೋಜಲು ಇತ್ಯಾದಿಗಳನ್ನು ಒಳಗೊಂಡ ಇಲ್ಲಿನ ಕಥನಗಳು ತಮ್ಮ ವಿಶಿಷ್ಟ ಅಭಿವ್ಯಕ್ತಿಯಿಂದಾಗಿ ಅಪರೂಪವೆನಿಸುತ್ತವೆ.

ಪ್ರಕಾಶಕರು: ಕಥನ ಪ್ರಕಾಶನ,
ನಾಗರಭಾವಿ, ಬೆಂಗಳೂರು–೫೬೬೭೨

ಹೊಸ ಪುಸ್ತಕ

ಕಾಲನೌಕೆ
ಲೇ: ಎಚ್.ಜಿ. ವೆಲ್ಸ್
ಬೆಲೆ: ರೂ. ೫೦/–

ಭೂಮಧ್ಯಕ್ಕೆ ಒಂದು ಪಯಣ
ಲೇ: ಜೂಲ್ಸ್ ವರ್ನ್
ಬೆಲೆ: ರೂ.೮೦/–

ಮಾಯಾ ಮನುಷ್ಯ
ಎಚ್.ಜಿ. ವೆಲ್ಸ್
ಬೆಲೆ: ರೂ. ೯೦/–

ಬೆನ್‌ಹರ್
ಲೇ: ಲೂ ವಾಲೇಸ್
ಬೆಲೆ: ರೂ. ೬೦/–







ನಮ್ಮ ನಡುವಿನ ಅಪರೂಪದ ಲೇಖಕರಾದ ಡಾ॥ ಕೆ. ಪುಟ್ಟಸ್ವಾಮಿ ಅವರ ಅಪರೂಪದ ಪುಸ್ತಕಗಳು ಇವು.

ಡಾ॥ ಕೆ. ಪುಟ್ಟಸ್ವಾಮಿ ಅವರು ವಿಜ್ಞಾನದ ವಿಚಾರಗಳನ್ನು ಸರಳವಾಗಿ ನಿರೂಪಿಸುವಲ್ಲಿ ನಿಪುಣತೆಯನ್ನು ಪಡೆದಿದ್ದಾರೆ. ವಿಜ್ಞಾನ–ಸಾಹಿತ್ಯ ಎರಡೂ ಬೇರೆ ಬೇರೆ ಶಿಸ್ತುಗಳಲ್ಲ ಎಂಬುದನ್ನು ತಮ್ಮ ಸೃಜನಶೀಲ ಬರಹಗಳಿಂದ ಮನಗಾಣಿಸಿದ್ದಾರೆ. ಕ್ರೀಡೆ, ಜೀವಜಗತ್ತುಗಳನ್ನು ಅರ್ಥ ಮಾಡಿಕೊಂಡು ಕನ್ನಡದಲ್ಲಿ ಬರೆಯುತ್ತಿರುವ ಬಹು ಮುಖ್ಯ ಬರಹಗಾರರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಡಾ॥ ಕೆ. ಪುಟ್ಟಸ್ವಾಮಿ ಅವರು ಜಗತ್ತಿನ ಹೆಸರಾಂತ ಬರಹಗಾರರ ಕೃತಿಗಳ ಸಂಗ್ರಹಾನುವಾದವನ್ನು 'ಕಥಾ ಕಡಲು' ಎಂಬ ವಿಶಿಷ್ಟವೂ ವಿಭಿನ್ನೂ ಆದ ಸುಮಾರು ಹದಿನೈದು ಪುಸ್ತಕಗಳ ಹೊಸ ಮಾಲೆಯನ್ನು 'ಅಲೆ'ಗಳ ರೂಪದಲ್ಲಿ ಒದಗಿಸಿದ್ದಾರೆ. ಈ ಅಲೆಗಳಲ್ಲಿ ವೈಜ್ಞಾನಿಕತೆ, ರೋಚಕತೆ, ಹುಡುಕಾಟ, ಫ್ಯಾಂಟಸಿ ಮತ್ತು ಕನ್ನಡದ ಮಕ್ಕಳ ಮನೋಲೋಕಗಳನ್ನು ಸೃಜನಾತ್ಮಕವಾಗಿ ವಿಸ್ತರಿಸುವ ಕಾರ್ಯ ಮಾಡಿದ್ದಾರೆ.

ಎಚ್.ಜಿ. ವೇಲ್ಸ್ ಅವರ 'ಟೈಮ್ ಮಷಿನ್' ಕೃತಿ 'ಕಾಲನೌಕೆ'ಯಾಗಿ, ಜೂಲ್ಸ್ ವರ್ನ್ ಅವರ 'ಎ ಜರ್ನಿ ಟು ದಿ ಸೆಂಟರ್ ಆಫ್ ದಿ ಅರ್ಥ್' ಕೃತಿ 'ಭೂಮಧ್ಯಕ್ಕೆ ಒಂದು ಪಯಣ'ವಾಗಿ, ಎಚ್.ಜಿ. ವೆಲ್ಸ್ ಅವರ 'ದಿ ಇನ್ ವಿಸಿಬಲ್ ಮ್ಯಾನ್' 'ಮಾಯಾ ಮನುಷ್ಯ' ನಾಗಿ ಲೂ ವಾಲೇಸ್ ಅವರ 'ಬೆನ್‌ಹರ್' ಅದೇ ಹೆಸರಿನಲ್ಲಿ ಸುಂದರ ಅನುವಾದ ಮತ್ತು ಮುದ್ರಣದೊಂದಿಗೆ ಹೊರಬಂದಿವೆ

ಜಾಗತಿಕ ಸಾಹಿತ್ಯ ಕನ್ನಡಕ್ಕೆ ಹೊಸತೇನೂ ಅಲ್ಲದಿದ್ದರೂ, ಅಪರೂಪದ ಇಂಥ ಕೃತಿಗಳು ಇನ್ನೂ ಕನ್ನಡದಲ್ಲಿ ಬಾರದಿದ್ದುದೇ ಒಂದು ಕೊರತೆಯಾಗಿತ್ತು. ಡಾ॥ ಪುಟ್ಟಸ್ವಾಮಿ ಅವರ ಶ್ರದ್ಧಾಪೂರ್ಣ ಅನುವಾದ ಮತ್ತು ಉತ್ತಮ ಮುದ್ರಣ ಈ ಕೊರತೆಯನ್ನು ನೀಗಿಸಿವೆ.

ಮೇಲಿನ ಎಲ್ಲಾ ಪುಸ್ತಕಗಳ ಪ್ರಕಾಶಕರು:
ಪ್ರಗತಿ ಗ್ರಾಫಿಕ್ಸ್,
ಆರ್.ಪಿ.ಸಿ ಬಡಾವಣೆ,
ಬೆಂಗಳೂರು–೫೬೦ ೦೪೦.

ಸಂಪಾದಕೀಯ



ಅಂತರಂಗ



ಅಂಬೇಡ್ಕರ್ ನಿರಂತರ ಅಂತರ್‌ಪ್ರವಾಹ

ಇದು 'ಸಂವಾದ'ದ ಆರನೇ ಅಂಬೇಡ್ಕರ್ ವಿಶೇಷಾಂಕ. ನಾಡು ಕಂಡ ಅದ್ಭುತ ಚೇತನ ಅಂಬೇಡ್ಕರ್. ಬುದ್ಧ, ಬಸವರ ನಂತರ ಇಡೀ ಸಮಾಜದ ಸ್ವಾಸ್ಥ್ಯಕ್ಕಾಗಿ ಹಂಬಲಿಸಿ ಹಗಲಿರುಳು ದುಡಿದು ಸರ್ವಸ್ವವನ್ನು ತ್ಯಾಗ ಮಾಡಿದವರು ಅಂಬೇಡ್ಕರ್. ತಳಸಮುದಾಯಗಳಿಗೆ ಸ್ವಾಭಿಮಾನದ ಅರಿವು ಮುಡಿಸಿದ ಮಹಾ ದಾರ್ಶನಿಕ ಅವರು.

ಪ್ರತಿ ಬಾರಿ ಅಂಬೇಡ್ಕರ್ ವಿಶೇಷಾಂಕ ಸಿದ್ಧಪಡಿಸುವಾಗಲೂ, ಸಾವಿನ ನಂತರ ಅವರು ಪಡೆದುಕೊಂಡ ಸಾಮಾಜಿಕ ಮಾನ್ಯತೆ ಕಂಡು ಆಶ್ಚರ್ಯವಾಗುತ್ತದೆ. ಒಂದು ಕಡೆ ತಳಸಮುದಾಯಗಳು ಅಸ್ತಿತ್ವಕ್ಕಾಗಿ ಅಂಬೇಡ್ಕರ್ ಅವರನ್ನು ಅವಲಂಬಿಸಿದರೆ, ಇತರೆ ಸಮುದಾಯಗಳು ತಳ ಸಮುದಾಯದ ಮೇಲಿರುವ ಅವರ ಪ್ರಭಾವಕ್ಕಾಗಿ ಅವರನ್ನು ಅವಲಂಬಿಸಿವೆ. ಭಾರತೀಯ ಸಮಾಜದ ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ 'ಮಾರುಕಟ್ಟೆ ಮೌಲ್ಯ'ವುಳ್ಳ ಏಕೈಕ ವ್ಯಕ್ತಿ ಅಂಬೇಡ್ಕರ್ ಮಾತ್ರವಾಗಿದ್ದಾರೆ.

ಸದ್ಯದ ಸಾಮಾಜಿಕ ಸಂದರ್ಭ ಎಂದರೆ ಅದು ಒಂದು ರೀತಿಯಲ್ಲಿ ತಳಸಮುದಾಯಗಳ ಸಂಕ್ರಮಣ ಕಾಲ. ಸಹ ಮಾನವ ಸಂಬಂಧಗಳ ಕನಿಷ್ಟ ಅಸ್ತಿತ್ವಕ್ಕಾಗಿಯಾದರೂ ಹೋರಾಡುವ ಅವಕಾಶ ತಳಸಮುದಾಯಗಳಿಗೆ ಈಗ ಸಿಕ್ಕಿದೆ. ಆದರೆ ಈ ತಳ ಸಮುದಾಯಗಳು ಒಂದು ಘಟಕವಾಗಿ ವರ್ತಿಸುವ ಅಥವಾ ಸಮಾನ ಆಶಯ-ಚಿಂತನೆಗಳನ್ನು ಸಂಘಟಿತವಾಗಿ ವ್ಯಕ್ತಪಡಿಸುವ ಪ್ರಯತ್ನಗಳನ್ನು ಮಾಡದೇ ಇರುವುದರಿಂದ ಅವುಗಳು ಬಿಡಿ ಬಿಡಿ ಹೋರಾಟಗಳಲ್ಲಿ ಇತರೆ ಸಮುದಾಯಗಳನ್ನು ಪೋಷಣೆ ಮಾಡುವ ಮಟ್ಟಕ್ಕೆ ಮಾತ್ರ ಬಂದು ನಿಂತಿವೆ. ಅಂಬೇಡ್ಕರ್ ಅವರು ಅಸ್ಪೃಶ್ಯ ಜನ ಸಮುದಾಯದವರನ್ನು ಸಂಘಟಿಸಿದರೂ ಅವರ ಆಶಯಗಳಿದ್ದದ್ದು ಎಲ್ಲ ತಳ ಸಮುದಾಯಗಳ ಏಳಿಗೆಯತ್ತ. ಇಂಥ ಎಲ್ಲ ತಳ ಸಮುದಾಯಗಳ ನಡುವಿನ ಸಮಾನ ಅಂಶಗಳ ಆಧಾರದ ಮೇಲೆ ಅವರೆಲ್ಲರನ್ನು ಸಂಘಟಿಸುವ ಮಹದಾಸೆ ಅವರಿಗಿತ್ತು.

ಅವರ ಈ ಮುಂಗಾಣ್ಕೆಗೆ ಬಹುದೊಡ್ಡ ಅಡ್ಡಿಯಾಗಿದ್ದು ಕಾಂಗ್ರೆಸ್ ಮತ್ತು ಅದರೊಳಗಿದ್ದ ಮತೀಯ ಶಕ್ತಿಗಳು. ಒಂದು ಕಡೆ ಗಾಂಧಿ ಪ್ರಣೀತ ಸುಧಾರಣ ತಂತ್ರಗಳು ಅಂಬೇಡ್ಕರ್ ಅವರನ್ನು ನೈತಿಕವಾಗಿ ಹಿಮ್ಮೆಟ್ಟಿಸಿದರೆ, ಆರೆಸ್ಸೆಸ್ ಪ್ರಣೀತ ಹಿಂದೂ ಕೋಮುವಾದ ಅವರನ್ನು ತಾತ್ವಿಕವಾಗಿ ಹಿಮ್ಮೆಟ್ಟಿಸಿತು. ಇದಕ್ಕೆಲ್ಲ ಪೂರಕವಾಗುವಂತೆ ಕಾಂಗ್ರೆಸ್ ತನ್ನ ರಾಜಕೀಯ ಉಳಿವಿಗಾಗಿ ಜಗಜೀವನ್ ರಾಮ್‌ರನ್ನು ಎತ್ತಿಕಟ್ಟಿ ಅಂಬೇಡ್ಕರ್ ಅವರನ್ನು ಒಳಗಿನಿಂದ ಮುಗಿಸುವ ಪಿತೂರಿ ಮಾಡಿತು. ವೈದಿಕ ಧರ್ಮ ಮತ್ತು ಕಾಂಗ್ರೆಸ್ ಬಾಬಾ ಸಾಹೇಬರ ಐತಿಹಾಸಿಕ ಹೋರಾಟವನ್ನು ಹಿಮ್ಮೆಟ್ಟಿಸಲು ಜಂಟಿಯಾಗಿ ನಿಂತವು.

ಅಗಾಧ ಇಚ್ಛಾ ಶಕ್ತಿಯ ಅಂಬೇಡ್ಕರ್ ಇದಾವುದಕ್ಕೂ ಜಗ್ಗಲಿಲ್ಲ. ದೇಶವಿಡಿ ಸುತ್ತಾಡಿ ಜನರನ್ನು ಬಡಿದೆಬ್ಬಿಸಿದರು. ರಾಜಕೀಯ ಸಾಮಾಜಿಕ ಹೋರಾಟಗಳ ಮೂಲಕ ತಳಸಮುದಾಯಗಳಲ್ಲಿ ಅರಿವಿನ ಬೀಜ ಬಿತ್ತಿದರು. ಅಷ್ಟಕ್ಕೂ ತೃಪ್ತರಾಗಿದೆ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ಬೌದ್ಧಧರ್ಮ ಸ್ವೀಕರಿಸುವ ಮೂಲಕ ದಲಿತ ಜನಾಂಗಕ್ಕೆ ಒಂದು ಧಾರ್ಮಿಕ ನೆಲೆಗಟ್ಟನ್ನು ತಂದುಕೊಟ್ಟರು.

ಅಂಬೇಡ್ಕರ್ ಕಾಲಾನಂತರ ಅವರ ಪ್ರಭಾವ ಹೆಚ್ಚಾಗತೊಡಗಿತು. ಬಹುಷಃ ಇಡೀ ಜಗತ್ತಿನಲ್ಲಿ ಇಂದು ಅಂಬೇಡ್ಕರ್ ಭಾವಚಿತ್ರ, ವಿಗ್ರಹಗಳಿರುವಷ್ಟು ಬೇರಾವ ವ್ಯಕ್ತಿಯದ್ದೂ ಇರಲಿಕ್ಕಿಲ್ಲವೇನೊ! ಭಾರತದಲ್ಲಂತೂ ಅಂಬೇಡ್ಕರ್ ಇಲ್ಲದ ಊರುಕೇರಿಗಳಿಲ್ಲ! ಆದರೆ ವಿಷಾದದ ಸಂಗತಿ ಎಂದರೆ ಅಂಬೇಡ್ಕರ್ ತಳ ಸಮುದಾಯದ, ಅದರಲ್ಲೂ ದಲಿತ ಸಮುದಾಯದ ವ್ಯಾವಹಾರಿಕ ಜಗತ್ತನ್ನು ಮಾತ್ರ ತುಂಬಿಕೊಂಡಿದ್ದಾರೆಯೇ ಹೊರತು ಆಂತರಿಕ ಬದುಕನ್ನು ತುಂಬಿ ಕೊಂಡಂತೆ ಕಾಣಿಸುತ್ತಿಲ್ಲ.

ದಲಿತ ಚಳವಳಿಯ ಬಹುತೇಕ ಹೋರಾಟ, ಚಟುವಟಿಕೆಗಳೆಲ್ಲ ಬಾಹ್ಯ ಒತ್ತಡಗಳ ಪರಿಣಾಮವಾಗಿ ಮೂಡಿ ಬಂದ ಪ್ರತಿಕ್ರಿಯೆಗಳಂತೆ ಕಾಣುತ್ತಿವೆ. ಅಂತರಂಗದ ಕಸುವು ಅಲ್ಲಿ ಕಂಡು ಬರುತ್ತಿಲ್ಲ. ಇದಕ್ಕೆ ಬಹು ಮುಖ್ಯ ಕಾರಣ ಚಳವಳಿಕಾರರಲ್ಲಿರುವ ವೈಚಾರಿಕ ದಾರಿದ್ರ್ಯ ಹಾಗೂ ದೂರ ದೃಷ್ಟಿಯ ಕೊರತೆ. ಮತ್ತು ಎಲ್ಲವನ್ನು ಈ ಕ್ಷಣದ ತೃಪ್ತಿಗಾಗಿ ಮಾಡುವ ಗ್ರಾಹಕ ಮಾನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವುದು. ಹಾಗಾಗಿಯೇ ದಲಿತ ಚಳವಳಿಗಳು ದಲಿತರ ವ್ಯಾವಹಾರಿಕ ದಾಹವನ್ನಷ್ಟೇ ತೀರಿಸುವ ವೇದಿಕೆಗಳಾಗುತ್ತಿವೆಯೇ ಹೊರತು ಅವರ ಅಂತರಂಗದ ಅಗತ್ಯಗಳನ್ನು ಪೂರೈಸುವ, ದಾಸ್ಯ ಮುಕ್ತ ಬದುಕನ್ನು ಕಟ್ಟಿಕೊಡುವ 'ಅನುಭವ ಮಂಟಪ'ಗಳಾಗುತ್ತಿಲ್ಲ.

ಈಗಿನ ರಾಜಕೀಯ ಪರಿಸ್ಥಿತಿಯನ್ನೇ ನೋಡಿ. ಚುನಾವಣೆ ದಿಡೀರನೇ ಮನೆ ಬಾಗಿಲಿಗೆ ಬಂದು ನಿಂತಿದೆ. ಆದರೆ ಶೇ. ೨೩ರಷ್ಟಿರುವ ದಲಿತರ ಬದುಕನ್ನು ಪ್ರತಿನಿಧಿಸುವ ಯಾವುದೇ ರಾಜಕೀಯ ವೇದಿಕೆ ನಮ್ಮ ಮುಂದೆ ಇಲ್ಲ. ಚುನಾವಣೆಗಳು ಬಂದಾಗಷ್ಟೇ ಅವುಗಳ ಬಾಹ್ಯ ಒತ್ತಡಕ್ಕೆ ಮಣಿದು ದಲಿತ ಗುಂಪುಗಳು ವಿವಿಧ ರಾಜಕೀಯ ಪಕ್ಷಗಳ ಬೆಂಬಲಕ್ಕಿಳಿಯುತ್ತವೆ. ಆದರೆ ನಿಜವಾದ ದಲಿತರ ರಾಜಕಾರಣ ಕಟ್ಟಿ ಬೆಳೆಸುವ ಪ್ರಯತ್ನಗಳು ನಡೆವಾಗ ಅವುಗಳನ್ನು ಹಾಳುಗೆಡುಹುವ ಕೆಲಸವನ್ನು ಕೂಡ ಇದೇ ದಲಿತ ಗುಂಪುಗಳು ಮಾಡುತ್ತವೆ. ಯಾಕೆಂದರೆ ದೀರ್ಘಕಾಲೀನ ಕಾರ್ಯಕ್ರಮ ಮತ್ತು ಪರಿಹಾರಕ್ಕಿಂತ ಅವುಗಳಿಗೆ ತಾತ್ಕಾಲಿಕ ಲಾಭವೇ ಮುಖ್ಯವಾಗಿರುತ್ತದೆ.

ನನಗೆ ಆಶ್ಚರ್ಯವಾಗುವುದು, ಈ ಎಲ್ಲ ಗುಂಪುಗಳೂ ಹೂಡುವ ವಾದ! ಇವರೆಲ್ಲ ಅಪ್ಪಟ ಅಂಬೇಡ್ಕರ್ ವಾದಿಗಳೆಂದು ಬಿಂಬಿಸಿಕೊಳ್ಳುತ್ತಾರೆ. ದಲಿತ ಪ್ರಭುತ್ವ ಕಟ್ಟುವ ಬಗ್ಗೆ ಗಂಟೆಗಟ್ಟಲೆ ಭಾಷಣ ಬಿಗಿಯುತ್ತಾರೆ. 'ಅಭಿವೃದ್ಧಿಗೆ ಅಧಿಕಾರವೇ ಕೀಲಿ ಕೈ' ಎಂದು ಅಬ್ಬರಿಸುತ್ತಾರೆ. ಅಂಬೇಡ್ಕರ್ ವಾರಸುದಾರಿಕೆ ತಮ್ಮದೇ ಎಂದು ಬೀಗುತ್ತಾರೆ. ಆದರೆ ಯಾರೊಬ್ಬರೂ ನೈಜ ನೆಲೆಗಟ್ಟಿನಲ್ಲಿ ಅಂಬೇಡ್ಕರ್ ಅವರನ್ನು ಅರ್ಥೈಸಿಕೊಳ್ಳುವುದಕ್ಕಾಗಲಿ, ಅವರ ವಿಚಾರಗಳನ್ನು ಅಳವಡಿಸಿಕೊಳ್ಳುವುದಕ್ಕಾಗಲೀ ಪ್ರಯತ್ನಿಸುವುದಿಲ್ಲ. ಅಂಬೇಡ್ಕರ್ ತುಳಿದ ದಾರಿಯನ್ನು ತುಳಿಯಲೂ ಸಿದ್ಧರಿಲ್ಲ!

ಆದರೂ, ಇದು ಹತಾಶ ಸ್ಥಿತಿಯೇನಲ್ಲ. ಇದೆಲ್ಲವನ್ನು ಮೀರಿ ಬಾಬಾ ಸಾಹೇಬರ ಆಶಯಗಳನ್ನು ನಿಜ ಅರ್ಥದಲ್ಲಿ ಜನಸಮುದಾಯಕ್ಕೆ ತಲುಪಿಸುವ ಪ್ರಯತ್ನ ಅಲ್ಲಲ್ಲಿ ನಡೆಯುತ್ತಿವೆ. ಅಂಬೇಡ್ಕರ್ ಬಡಿದೆಬ್ಬಿಸಿದ ತಳ ಸಮುದಾಯದ ಸ್ವಾಭಿಮಾನ, ದಲಿತರನ್ನು ನಿರಂತರ ಎಚ್ಚರದಲ್ಲಿಡುವ ಅಂತರ್‌ಪ್ರವಾಹವಾಗಬೇಕು. ಅಂಬೇಡ್ಕರ್‌ಗಿದ್ದ ಪಾಂಡಿತ್ಯ, ಧಾರಣಾ ಸಾಮರ್ಥ್ಯ, ಇಚ್ಛಾಶಕ್ತಿ, ಮತ್ತು ಕೃತುಶಕ್ತಿಗಳು ಎಲ್ಲರಲ್ಲಿ ಮೂಡಿಬರಬೇಕು. ಭಾರತದ ಪ್ರತಿ ದಲಿತನೂ ಅಂಬೇಡ್ಕರ್ ಆಗಬೇಕು.

ಇದು 'ಸಂವಾದ'ದ ಆಶಯ.

❍ ಇಂದೂಧರ ಹೊನ್ನಾಪುರ

ಬರಗೂರರ ಕೈ ಯಾರ ಜೋಬಿನಲ್ಲಿ?

ಎನ್.ಎಸ್. ಶಂಕರ್

ಪ್ರೀತಿಯ ಸಂಪಾದಕರೇ,

ಸಂವಾದ'ದ ಮಾರ್ಚಿ ೨೦೦೮ರ ಸಂಚಿಕೆಯಲ್ಲಿ ಡಾ. ಬರಗೂರು ರಾಮಚಂದ್ರಪ್ಪನವರ 'ಸಿನಿಮಾ: ಒಂದು ಜನಪದ ಕಲೆ' ಲೇಖನವನ್ನು ಕೌತುಕಗೊಂಡು ಓದಿದೆ.

ಬರಗೂರರು "ಸಿನಿಮಾ ಮಾಧ್ಯಮವು ಒಂದು ಜನಪದ ಕಲೆ ಎನ್ನುವುದು ನನ್ನ ಪರಿಕಲ್ಪನೆ" ಎಂಬ ಮಾತಿನಿಂದಲೇ ತಮ್ಮ ಲೇಖನ ಆರಂಭಿಸುತ್ತಾರೆ. ಇಲ್ಲಿ ಅವರು ನನಗೆ ಗೊತ್ತೇ ಇರದ ಎಷ್ಟೋ ಸಂಗತಿಗಳು– ಉದಾಹರಣೆಗೆ ೧೮೪೬ರಲ್ಲಿ ವಿಲಿಯಂ ಥಾಮ್ಸ್ ರೂಪಿಸಿದ 'ಫೋಕ್‌ಲೋರ್' ಪದ; ಅಲನ್ ದಂಡೇಸ್ ಎಂಬುವವರ ಜಾನಪದ ಕುರಿತ ಇಪ್ಪತ್ತೊಂದು ನಿರ್ವಚನಗಳು; ಜನಪದ– ಜಾನಪದದ ಸೂಕ್ಷ್ಮ ವ್ಯತ್ಯಾಸ, ಇತ್ಯಾದಿ ವಿದ್ವತ್‌ಪೂರ್ಣ ಉಲ್ಲೇಖಗಳನ್ನು ತಂದರೂ, ಅವರು ಅಷ್ಟು ನಿಸ್ಸಂದಿಗ್ಧ ಒತ್ತು ಕೊಟ್ಟು 'ನನ್ನ ಪರಿಕಲ್ಪನೆ' ಎಂಬ ಹಕ್ಕು ಸ್ಥಾಪನೆಗೆ ಹೊರಟಿದ್ದರಲ್ಲೇ ನನ್ನ ಆಸಕ್ತಿ. ಯಾಕೆಂದರೆ 'ಸಿನಿಮಾ ಎಂಬುದು ಆಧುನಿಕ ಜಾನಪದ' ಎಂಬ ಅನಿಸಿಕೆಯನ್ನು ಮೊದಲು ಮಂಡಿಸಿದ್ದು ನಾನು; ಸಿನಿಮಾ ವಿದ್ಯಮಾನಗಳನ್ನು ಕುರಿತು 'ಲಂಕೇಶ್ ಪತ್ರಿಕೆ'ಗೆ ಬರೆಯುತ್ತಿದ್ದ ಸಂದರ್ಭದಲ್ಲಿ.

ನನಗಿಂತ ಹಿರಿಯರೂ, ತಿಳಿವಳಿಕಸ್ಥರೂ ಆದ ಪ್ರೊ. ಬರಗೂರು– ಈ ಪ್ರತಿಪಾದನೆಯನ್ನು ಈಗ ಯಾಕೆ ತಮ್ಮ ಹೆಸರಿನಲ್ಲಿ ನೊಂದಾಯಿಸಿಕೊಳ್ಳಲು ಹವಣಿಸುತ್ತಿದ್ದಾರೋ ತಿಳಿಯುತ್ತಿಲ್ಲ. ಅವರು ಈ ಹಿಂದೆಯೂ ಒಂದೆರಡು ಬಾರಿ ತಮ್ಮ ಭಾಷಣಗಳಲ್ಲಿ ಈ ಕಲ್ಪನೆಯನ್ನು ತಮ್ಮದೆಂಬಂತೆ ತೇಲಿಬಿಟ್ಟಿದ್ದನ್ನು ನಾನು ಬಲ್ಲೆನಾದರೂ, ಬರಹದಲ್ಲಿ ನನ್ನ ಕಣ್ಣಿಗೆ ಬಿದ್ದಿದ್ದು ಇದೇ ಮೊದಲ ಸಲವಾದ್ದರಿಂದ ಪ್ರತಿಕ್ರಿಯೆ ನೀಡುತ್ತಿದ್ದೇನೆ.

ಈ ಪರಿಕಲ್ಪನೆ ಮೊದಲ ಬಾರಿ ಪ್ರಸ್ತಾಪವಾಗಿದ್ದು 'ಮಾಯಾಮೃಗದ ಬೆನ್ನಟ್ಟಿ...' ಎಂಬ ನನ್ನ ಬರಹದಲ್ಲಿ. (ಲಂಕೇಶ್ ಪತ್ರಿಕೆ, ೧೭ ಫೆಬ್ರವರಿ ೧೯೯೩). ನಮ್ಮ ಜನಪ್ರಿಯ ಸಿನಿಮಾಗಳ "ತರ್ಕಶೂನ್ಯ" ಸ್ವರೂಪ ಕುರಿತು ಆಲೋಚಿಸುತ್ತಿದ್ದಾಗ ಮೂಡಿದ ಹೊಳಹಿದು. ಆ ಲೇಖನದಲ್ಲಿ ಬರುವ ಸಾಲುಗಳು ಹೀಗಿವೆ:

...(ನಮ್ಮಲ್ಲಿ ಕಥೆಗಳಿಲ್ಲ ಎಂಬ) ಈ ಅಸಹಾಯಕತೆಯ ಮುಖ್ಯ ಕಾರಣ– ಯಶಸ್ಸಿನ ಸೂತ್ರಗಳಿಗೆ ಕಟ್ಟುಬಿದ್ದ ನಮ್ಮ ಚಿತ್ರನಗರಿ. ನೀವು ಯಾವುದೇ ಕಥೆ ಕೊಟ್ಟರೂ ಅದು ಮೊದಲಿಗೆ ಆ ಸೂತ್ರಗಳ ಚೌಕಟ್ಟಿಗೆ ಒಳಪಡಬೇಕು. ಹಾಗಿಲ್ಲದಿದ್ದರೆ ಅದನ್ನು ತಟ್ಟಿ ತೀಡಿ ಬಗ್ಗಿಸಿ ಆ ಚೌಕಟ್ಟಿಗೇ ತರುತ್ತಾರೆ. ಅಂತೂ ಹೊಸ ಕಥೆಯೂ ಹಳೇ ಕಥೆಯ ರೂಪಕ್ಕೆ ಬಂದಾಗಲೇ ಅವರಿಗೆ ಸಮಾಧಾನ!..

ಮುಖ್ಯ ಈ ಪ್ರವೃತ್ತಿ ಹುಟ್ಟಿದ್ದಾದರೂ ಹೇಗೆ? ಈ ಸೂತ್ರಕ್ಕೆ ಕಟ್ಟು ಬಿದ್ದ ನೂರಕ್ಕೆ ೯೫ ಚಿತ್ರಗಳು ಸೋತುಹೋದರೂ, ಇದೇ ಸೂತ್ರಗಳ ಮೇಲೆ ಯಾಕಿಂಥ ಭರವಸೆ, ಅವಲಂಬನೆ? ಬುಡ ಅಲ್ಲಾಡಿಸುವ ಸರ್ವಾಂಗ ಸೋಲೂ ಕಣ್ಣಿಗೆ ಕಾಣದಂಥ ಈ ಕುರುಡು ಮೋಹದ ಹಿನ್ನೆಲೆಯಾದರೂ ಏನು?

ಈ ಪ್ರಶ್ನೆಯ ಬಗ್ಗೆ– ಅಂದರೆ ಈ ಸೂತ್ರ ಹುಟ್ಟಿಕೊಂಡ ರೀತಿಯ ಬಗ್ಗೆ ಹೆಚ್ಚು ಜನ ತಲೆ ಕೆಡಿಸಿಕೊಂಡಂತಿಲ್ಲ. ಅಕ್ಷರ ಹಾಗೂ ನಗರೀಕರಣಗಳ ಮುಖಾಂತರ ಆಧುನಿಕಗೊಂಡ ಭಾರತೀಯ ಮನಸ್ಸಿನ ಪಾಲಿಗೆ ಚಲನಚಿತ್ರವೇ ಸಮಕಾಲೀನ ಜಾನಪದ. ಓದು ಬರಹ ಬಾರದವನೂ ಸಿನಿಮಾ ನೋಡುತ್ತಾನೆ, ಆನಂದಿಸುತ್ತಾನೆ ಎಂಬ ಹಿನ್ನೆಲೆಯಲ್ಲಿ ಈ ವಾದವನ್ನು ಪರಿಶೀಲಿಸಬೇಕು.

ತೆರೆ ಮೇಲಿನ ನಾಯಕ, ನಾಯಕಿ, ಖಳನಾಯಕರೆಲ್ಲರೂ, ನಿಜಸ್ಥಿತಿಯ ನೆರಳಿನಲ್ಲೇ ಹುಟ್ಟಿದರೂ, ಒಂದು ಹಂತದಲ್ಲಿ ವಾಸ್ತವದಿಂದ ಪಾರಾದ ದಂತಕತೆಗಳ ರೂಪದಲ್ಲಿ ಯಾಕೆ ಜನಮೆಚ್ಚುಗೆಗಳಿಸುತ್ತಾರೆ ಎಂಬುದನ್ನು ಯೋಚಿಸಬೇಕು. ಸರ್ವಗುಣ ಸಂಪನ್ನನಾದ ಸರ್ವಶಕ್ತನಾದ, ಹತ್ತು ಜನರನ್ನು ಒಟ್ಟಿಗೇ ಹೊಡೆದುರುಳಿಸಬಲ್ಲ ನಾಯಕ; ಸೌಂದರ್ಯ, ಮುಗ್ಧತೆ ಹಾಗೂ ಶೀಲವಂತಿಕೆಯ ಸಂಗಮವಾದ ನಾಯಕಿ; ಒಳಿತಿನ ಲವಲೇಶವೂ ಇಲ್ಲದ ಖಳನಾಯಕ... ಸಾಮೂಹಿಕ ಅನುಭವವನ್ನು ಪುರಾಣದ ರೂಪದಲ್ಲಿ ಮಾತ್ರ ಸ್ವೀಕರಿಸಬಲ್ಲ ಸರಳ ಮನಸ್ಸೇ ಇಂಥ ಸೂತ್ರಗಳ ಮೂಲವೆಂಬಂತೆ ತೋರುತ್ತದೆ.

ಹದಿನೈದು ವರ್ಷಗಳ ಹಿಂದೆ ನಾನು ಈ ಪ್ರತಿಪಾದನೆ ಮಾಡುವಾಗ ನನ್ನ ಮನಸ್ಸಿನಲ್ಲಿದ್ದ ಸ್ಥೂಲ ಕಲ್ಪನೆ ಇದು:

೧. ಜಾನಪದದ ಹಾಗೆ ಸಿನಿಮಾ ಕೂಡ, ಸೀಮಿತ ಅರ್ಥದಲ್ಲಾದರೂ–"ಸೃಷ್ಟಿಕರ್ತನ ಸಹಿಯಿಲ್ಲದ" ಸಮೂಹ ಸೃಷ್ಟಿ. ಜಾನಪದದಲ್ಲಿ ಕವಿಗಿಂತ ನಾಯಕನಿಗೇ ಪ್ರಾಮುಖ್ಯ. ಸಿನಿಮಾದಲ್ಲೂ ಅಷ್ಟೇ. ಪ್ರೇಕ್ಷಕರಿಗೆ, ಅನೇಕ ಸಲ ನಿರ್ದೇಶಕನ ಹೆಸರು ಗೊತ್ತಿರುವುದಿಲ್ಲ. ಆದರೆ ಅವರು ಸದಾ ನಾಯಕನ ಪ್ರಭೆಯ ಆರಾಧನೆಯಲ್ಲಿ ಮಗ್ನರು. ಉದಾಹರಣೆಗೆ, ಡಾ. ರಾಜ್ ಅಭಿನಯದ ಎಷ್ಟೋ ಚಿತ್ರಗಳ ನಿರ್ದೇಶಕರ ಹೆಸರುಗಳೇ ಇಂದಿಗೂ ಗೊತ್ತಿಲ್ಲ!

೨. ಜಾನಪದದ ಹಾಗೆಯೇ ಸಿನಿಮಾ, ಒಟ್ಟಾರೆ ಸಮುದಾಯದ ಸುಪ್ತ ಅಭೀಪ್ಸೆಗಳನ್ನು ಹೇಳುತ್ತದೆ.

೩. ಜಾನಪದದ ಹಾಗೆಯೇ ಸಿನಿಮಾದಲ್ಲಿ ಉತ್ಪ್ರೇಕ್ಷಾಲಂಕಾರ ಮತ್ತು ಅತಿರಂಜನೆಗೆ ವಿಶೇಷ ಸ್ಥಾನವಿದೆ. ಇತ್ಯಾದಿ.

ಈ ಮೇಲಿನ ಲೇಖನ ೨೦೦೫ರಲ್ಲಿ ಪ್ರೆಸ್‌ಕ್ಲಬ್ ಪ್ರಕಾಶನ ಹೊರತಂದ ನನ್ನ **ಮಾಯಾಬಝಾರ್** ("ಜನಪ್ರಿಯ" ಚಿತ್ರಸಂಸ್ಕೃತಿಯ ಅಂಗಳದಲ್ಲಿ) ಪುಸ್ತಕದ ಮೊದಲ ಲೇಖನವಾಗಿ ಅಚ್ಚಾಗಿದೆ. ಅದೇ ಸಂಕಲನದ 'ತರ್ಕದ ಗೋಣು ಮುರಿದು..' (ಈ ಲೇಖನ ಬೆಂಗಳೂರು ವಿವಿ ಮೊದಲ ಬಿಎ, ಬಿಎಸ್ಸಿ ವಿದ್ಯಾರ್ಥಿಗಳ ಈ ಸಾಲಿನ ಕನ್ನಡ ಪಠ್ಯಪುಸ್ತಕದಲ್ಲೂ ಸೇರ್ಪಡೆಯಾಗಿದೆ) ಎಂಬ ಇನ್ನೊಂದು ಬರಹದಲ್ಲಿಯೂ ಈ ಪ್ರಸ್ತಾಪವಿದೆ:

ಬಹುತೇಕ ಅನಕ್ಷರಸ್ಥರೇ ತುಂಬಿರುವ ನಮ್ಮ ನಾಡಿನಲ್ಲಿ, ಈ ಕಾರಣಕ್ಕೇ ಸಿನಿಮಾ ದಂತಕತೆಯ ರೂಪದಲ್ಲಿ ಬರುವ ಆಧುನಿಕ ಜಾನಪದವಾಗಿದೆ ಎಂಬುದನ್ನು ಹಿಂದೊಮ್ಮೆ ಇದೇ ಅಂಕಣದಲ್ಲಿ ಕಾಣಿಸಿದ್ದೇವೆ.

ಈ ಎರಡನೇ ಬರಹದ ಈ ಅನಿಸಿಕೆಗೆ ಮುಂಚಿನ ಸಾಲುಗಳು, ಸಿನಿಮಾಗಳಲ್ಲಿ ತರ್ಕದ ಪಾತ್ರವೇನು ಎಂಬ ಪ್ರಶ್ನೆಯನ್ನು ವಿವೇಚಿಸುತ್ತವೆ:

...ಯಾಕೆಂದರೆ ಶುದ್ಧ ತರ್ಕವೊಂದೇ, ಎಂದೂ ಯಾವುದೇ ಕಲೆಯ ಜೀವಾಳವಾದದ್ದಿಲ್ಲ. "ಸಪ್ತ ಸಮುದ್ರದಾಚೆ ಏಳು ಕೋಟೆಯೊಳಗೆ ಪಂಜರದಲ್ಲಿ ಬಂದಿಯಾದ ರಾಕ್ಷಸನ ಜೀವ"ದ ಕಥೆಯನ್ನು ಬೆರಗಿನಿಂದ ಕೇಳಿ ಸ್ವೀಕರಿಸುವ ಸಂಸ್ಕೃತಿ ನಮ್ಮದು.

ಅಷ್ಟೇಕೆ, ಜಾಗತಿಕ ಸಾಹಿತ್ಯದಲ್ಲೂ ತರ್ಕಾತೀತ ವಸ್ತುವಿನ್ಯಾಸದ

ಬರಗೂರರು "ಸಿನಿಮಾ ಮಾಧ್ಯಮವು ಒಂದು ಜನಪದ ಕಲೆ ಎನ್ನುವುದು ನನ್ನ ಪರಿಕಲ್ಪನೆ" ಎಂಬ ಮಾತಿನಿಂದಲೇ ತಮ್ಮ ಲೇಖನ ಆರಂಭಿಸುತ್ತಾರೆ. ಇಲ್ಲಿ ಅವರು ನನಗೆ ಗೊತ್ತೇ ಇರದ ಎಷ್ಟೋ ಸಂಗತಿಗಳು- ಉದಾಹರಣೆಗೆ ೧೮೪೬ರಲ್ಲಿ ವಿಲಿಯಂ ಥಾಮ್ಸ್ ರೂಪಿಸಿದ 'ಫೋಕ್‌ಲೋರ್' ಪದ; ಅಲನ್ ದಂಡೇಸ್ ಎಂಬುವವರ ಜಾನಪದ ಕುರಿತ ಇಪ್ಪತ್ತೊಂದು ನಿರ್ವಚನಗಳು; ಜನಪದ- ಜಾನಪದದ ಸೂಕ್ಷ್ಮ ವ್ಯತ್ಯಾಸ, ಇತ್ಯಾದಿ ವಿದ್ವತ್‌ಪೂರ್ಣ ಉಲ್ಲೇಖಗಳನ್ನು ತಂದರೂ, ಅವರು ಅಷ್ಟು ನಿಸ್ಸಂದಿಗ್ಧ ಒತ್ತು ಕೊಟ್ಟು 'ನನ್ನ ಪರಿಕಲ್ಪನೆ' ಎಂಬ ಹಕ್ಕು ಸ್ಥಾಪನೆಗೆ ಹೊರಟಿದ್ದರಲ್ಲೇ ನನ್ನ ಆಸಕ್ತಿ. ಯಾಕೆಂದರೆ 'ಸಿನಿಮಾ ಎಂಬುದು ಆಧುನಿಕ ಜಾನಪದ' ಎಂಬ ಅನಿಸಿಕೆಯನ್ನು ಮೊದಲು ಮಂಡಿಸಿದ್ದು ನಾನು; ಸಿನಿಮಾ ವಿದ್ಯಮಾನಗಳನ್ನು ಕುರಿತು 'ಲಂಕೇಶ್ ಪತ್ರಿಕೆ'ಗೆ ಬರೆಯುತ್ತಿದ್ದ ಸಂದರ್ಭದಲ್ಲಿ.

ಗಣ್ಯ ಕೃತಿಗಳು ಪಡೆದಿರುವ ಮನ್ನಣೆ ನಮ್ಮ ಕಣ್ಣ ಮುಂದಿದೆ. ಅಂಥ ಕಡೆಗೆಲ್ಲ ತರ್ಕದ ಇಂಚುಪಟ್ಟಿ ಹಿಡಿದು ಹೊರಟರೆ ನೊಬೆಲ್ ಪ್ರಶಸ್ತಿ ವಿಜೇತ ಸಾಹಿತಿ ಮಾರ್ಕ್ವೆಸ್‌ನ 'ಏಕಾಂತದ ನೂರು ವರ್ಷ' ಕೃತಿ ಯನ್ನು ಕಸದ ಬುಟ್ಟಿಗೆಸೆಯಬೇಕಾಗುತ್ತದೆ.

ತರ್ಕಾತೀತವಾದ ಜೀವನವನ್ನು ಹಾಗೆ ಹಾಗೇ ಹಿಡಿದಿಡಲು, ಕಲೆ ಯಾವಾಗಲೂ ತರ್ಕದ ಆಚೆ ಕೈ ಚಾಚಬೇಕಾಗುತ್ತದೆ. ಇದು ತರ್ಕವನ್ನು ಅಥವಾ 'ಕಾಮನ್‌ಸೆನ್ಸ್' ತಿಳಿವಳಿಕೆಯನ್ನು ತಳ್ಳಿ ಹಾಕುವುದಲ್ಲ. ಆದರೆ ತರ್ಕವನ್ನೂ ಮೀರಿದ ನಿಗೂಢ ಗಳನ್ನು ಅರ್ಥ ಮಾಡಿಕೊಳ್ಳುವ ಅನಿವಾರ್ಯ ಕ್ರಮ. ಇದು ಸಾಹಿತ್ಯಕ್ಕೆ ಹೇಗೆ ನಿಜವೋ, ಚಿತ್ರಕಲೆಗೆ ಹೇಗೆ ನಿಜವೋ, ಸಿನಿಮಾಗೂ ಅಷ್ಟೇ ಮಟ್ಟಿಗೆ ನಿಜ. ಅದಕ್ಕೇ ತರ್ಕಬದ್ಧ ಮನಸ್ಸಿಗೆ ಅಸಂಗತ ಅನಿಸುವ ವಿಪರೀತ ಗಳನ್ನೂ ಜನ ಸಿನಿಮಾದಲ್ಲಿ ಒಪ್ಪಿಕೊಳ್ಳಲು ಸಾಧ್ಯವಾಗಿದೆ.

ಆದರೆ ಈ ತರ್ಕಶೂನ್ಯತೆಗೂ ಒಂದು ಆಧಾರವಿದೆ! ಅದು– ಜನಸಾಮಾನ್ಯರ ಅನುಭವ. ಈ ಅನುಭವ "ಕೇವಲ ತರ್ಕಬದ್ಧತೆಯನ್ನು" ನಿರಾಕರಿಸುವ ಹಾಗೆಯೇ ಮತಿಹೀನ ತರ್ಕಶೂನ್ಯತೆಯನ್ನೂ ಒದ್ದೋಡಿಸುತ್ತದೆ. ಇಲ್ಲ

ಸಂಪಾದಕರೊಡನೆ ಸಂವಾದ

ದಿದ್ದರೆ ತಲೆ ಕೆಟ್ಟ ಬುದ್ಧಿಜೀವಿ ಸಿನಿಮಾದಂತೆಯೇ, ತಲೆ ಕೆಟ್ಟ ವಿಕೃತ ವ್ಯಾಪಾರಿ ಸಿನಿಮಾಗಳೂ ಸೋಲುವ ಪ್ರಮೇಯವೇ ಇರಲಿಲ್ಲ. ಅಂದರೆ ಮೇಲು ಮೇಲೆ ತರ್ಕರಹಿತವಾಗಿ ಕಾಣುವ ಘಟನೆಗಳು ತಮ್ಮ ಮೂಲದಲ್ಲಿ ಯಾವ ಸಂಗತಿ ಹೇಳುತ್ತಿವೆ ಎಂಬುದನ್ನು ಪ್ರೇಕ್ಷಕ ಸದಾ ಗ್ರಹಿಸುತ್ತಾನೆ. ನಾಯಕ ಏಕಾಂಗಿಯಾದರೂ ನಡೆಸುವ ಅತಿಮಾನುಷ ಹೊಡೆದಾಟ, ಹೋರಾಟಗಳಲ್ಲಿ ಪ್ರೇಕ್ಷಕ ಒಳಿತು–ಕೆಡುಕಿನ ಸಮರವನ್ನು ಕಾಣಲು ಸಾಧ್ಯವಾದರೆ ಮಾತ್ರ ಆ "ಸೂತ್ರ"ವನ್ನು ಒಪ್ಪಿಕೊಳ್ಳುತ್ತಾನೆ. ಇಲ್ಲದಿದ್ದರೆ ಇಲ್ಲ. ಜನ ತೆರೆಯ ಮೇಲೆ ಕಾಣುವ ಹಾಗೆ ಡ್ಯುಯೆಟ್‌ಗಳನ್ನು ಹಾಡದಿರಬಹುದು. ಆದರೆ ಹತ್ತು ಜನ ಒಂದಾಗಿ ಭಾರ ಎತ್ತುವ ಅಥವಾ ಏನನ್ನಾದರೂ ತಳ್ಳುವ ಸಂದರ್ಭದಲ್ಲಿ ಹೊಮ್ಮುವ ಲಯಬದ್ಧ 'ಚಾಮುಂಡಮ್ಮ, ಐಸ್ಸಾ'ದ ಸೊಲ್ಲಿನಲ್ಲಿ ಹಾಡು, ಸಂಗೀತವಿದೆ. ಅದಕ್ಕೇ ನಾಯಕ ನಾಯಕಿಯರ ಹಾಡಿನ ಮಾಧುರ್ಯವನ್ನು ಪ್ರೇಕ್ಷಕ ಅವರ ನಲಿವಿನ ರೂಪಕವಾಗಿ ಗ್ರಹಿಸುತ್ತಾನೆ.... (೩ ನವೆಂಬರ್ ೧೯೯೩)

ಎಲ್ಲರಂತೆ ನಾನೂ ಮುಂಚೆ ಸಿನಿಮಾದಲ್ಲಿ "ಸಂಭಾವ್ಯ" ವಾಸ್ತವವನ್ನು ನಿರೀಕ್ಷಿಸುತ್ತಿದ್ದೆ. ಆ ಘಟ್ಟದಲ್ಲಿ ವ್ಯಾಪಾರಿ ಸಿನಿಮಾಗಳ ಅತಿರಂಜನೆ ಹಾಸ್ಯಾಸ್ಪದವಾಗಿ ಕಾಣುತ್ತಿತ್ತು. ಬಹುಶಃ ಹೊಸ ಅಲೆ ಹೆಸರಿನಲ್ಲಿ ಬಂದ ಸಿನಿಮಾಗಳು ನನ್ನ ತಲೆಮಾರಿನ ಮೇಲೆ ಬೀರಿದ ಪ್ರಭಾವವದು. ಆದರೆ ಮುಂದಕ್ಕೆ ನನ್ನ ತಿಳಿವಳಿಕೆಯಲ್ಲೇ ತಪ್ಪಿದೆ ಅನಿಸತೊಡಗಿತು. ಜನಪ್ರಿಯವಾದುದೆಲ್ಲ ಅಗ್ಗದ ಕಲೆ ಎಂಬ ಪೂರ್ವಗ್ರಹ ದೂರವಾದ ಮೇಲೆ ಸಿನಿಮಾ ಗಳ ನುಡಿಗಟ್ಟೇ ಬೇರೆ ಇರಬೇಕು, ನಮ್ಮ ನಿರೀಕ್ಷೆ ಹಾಗೂ ಗ್ರಹಿಕೆಯ ಕ್ರಮವೇ ಬಹುಶಃ ತಪ್ಪು ಎಂದು– ಅಸ್ಪಷ್ಟವಾಗಿಯಾದರೂ– ಹೊಳೆಯತೊಡಗಿತು. ಭಾರತೀಯರು ತಲೆಮಾರುಗಳ ಕಾಲ ಸುಮ್ಮಸುಮ್ಮನೆ ಈ "ಜನಪ್ರಿಯ" ಚಿತ್ರಗಳನ್ನು ಮೆಚ್ಚಿ ಆನಂದಿಸುತ್ತ ಬಂದಿಲ್ಲವೇ? ಆ ಕೋಟ್ಯಂತರ ಪ್ರೇಕ್ಷಕ ವರ್ಗ ದಡ್ಡರು; ನಾವು ಮಾತ್ರ ಬುದ್ಧಿವಂತರು ಎಂದೇ?

ಭಾರತದಲ್ಲಿ ಹರಿಕಥೆ ಹಾಗೂ ವೃತ್ತಿ ರಂಗಭೂಮಿಯ ವಿಸ್ತರಣೆಯಾಗಿ ರೂಪುಗೊಂಡ ಸಿನಿಮಾ ಆ ನುಡಿಗಟ್ಟನ್ನೇ ಮುಂದುವರೆಸಿದ್ದು ಮತ್ತು ಜನ ಅದನ್ನು ಒಪ್ಪಿ ಆಸ್ವಾದಿಸಿದ್ದು ಸಹಜವಾಗಿತ್ತು. ಅಸಂಖ್ಯಾತ ಹಾಡುಗಳು, ಅತಿಮಾನುಷ ವ್ಯಕ್ತಿ, ಸನ್ನಿವೇಶ, ಸಂಘರ್ಷಗಳು... ಆಗ ನನಗೆ ಹೊಳೆದಿದ್ದು, ಮುಂಚೆ ಯಾವುದು ಜಾನಪದವಾಗಿತ್ತೋ ಆ ಸ್ಥಾನದಲ್ಲಿ ಈಗ ಚಲನಚಿತ್ರವಿದೆ. ಅಂದರೆ ನಮ್ಮ ಸುಪ್ತಪ್ರಜ್ಞೆ ಸಿನಿಮಾದ ಅನುಭವವನ್ನು ಸ್ವೀಕರಿಸುವ ಕ್ರಮದಲ್ಲಿ ಜಾನಪದದ ಆತ್ಮವಿದೆ....

ಹದಿನೈದು ವರ್ಷಗಳ ಹಿಂದೆ ನಾನು ಈ ಪ್ರತಿಪಾದನೆ ಮಾಡುವಾಗ ನನ್ನ ಮನಸ್ಸಿನಲ್ಲಿದ್ದ ಸ್ಥೂಲ ಕಲ್ಪನೆ ಇದು:

೧. ಜಾನಪದದ ಹಾಗೆ ಸಿನಿಮಾ ಕೂಡ, ಸೀಮಿತ ಅರ್ಥದಲ್ಲಾದರೂ–"ಸೃಷ್ಟಿಕರ್ತನ ಸಹಿಯಿಲ್ಲದ" ಸಮೂಹ ಸೃಷ್ಟಿ. ಜಾನಪದದಲ್ಲಿ ಕವಿಗಿಂತ ನಾಯಕನಿಗೇ ಪ್ರಾಮುಖ್ಯ. ಸಿನಿಮಾದಲ್ಲೂ ಅಷ್ಟೇ. ಪ್ರೇಕ್ಷಕರಿಗೆ, ಅನೇಕ ಸಲ ನಿರ್ದೇಶಕನ ಹೆಸರು ಗೊತ್ತಿರುವುದಿಲ್ಲ. ಆದರೆ ಅವರು ಸದಾ ನಾಯಕನ ಪ್ರಭೆಯ ಆರಾಧನೆಯಲ್ಲಿ ಮಗ್ನರು. ಉದಾಹರಣೆಗೆ, ಡಾ. ರಾಜ್ ಅಭಿನಯದ ಎಷ್ಟೋ ಚಿತ್ರಗಳ ನಿರ್ದೇಶಕರ ಹೆಸರುಗಳೇ ಇಂದಿಗೂ ನನಗೇ ಗೊತ್ತಿಲ್ಲ!

೨. ಜಾನಪದದ ಹಾಗೆಯೇ ಸಿನಿಮಾ, ಒಟ್ಟಾರೆ ಸಮುದಾಯದ ಸುಪ್ತ ಅಭೀಪ್ಸೆಗಳನ್ನು ಹೇಳುತ್ತದೆ.

೩. ಜಾನಪದದ ಹಾಗೆಯೇ ಸಿನಿಮಾದಲ್ಲಿ ಉತ್ಪ್ರೇಕ್ಷಾಲಂಕಾರ ಮತ್ತು ಅತಿರಂಜನೆಗೆ ವಿಶೇಷ ಸ್ಥಾನವಿದೆ. ಇತ್ಯಾದಿ.

ಇವೆಲ್ಲ ಅಂತಿಮ ಸತ್ಯಗಳೆಂದೇನೂ ಅಲ್ಲ. ಈ ಮೂಲಕ, ಚರ್ಚೆಯೊಂದನ್ನು ಪ್ರಚೋದಿಸಲು ನಾನು ಸಫಲನಾದರೆ ಸಾಕೆಂಬ ಭಾವನೆಯಲ್ಲಿ ಆಗ ಬರೆದ ಮಾತುಗಳಿವು. ಆದರೆ ಬರಗೂರರು ಈಗ ಸಂಶೋಧನಾ ಪ್ರಬಂಧವೊಂದನ್ನು ಬರೆಯುವವರ ಗಾಂಭೀರ್ಯದಲ್ಲಿ ಹಲವಾರು 'ಕಲ್ಪನೆ, ನಿರ್ವಚನಗಳ' ದ್ರಾವಿಡ ಪ್ರಾಣಾಯಾಮದಲ್ಲಿ ಮುಳುಗಿ ಕಡೆಗೆ '..ಈ ಎಲ್ಲ ವಿವರ ಮತ್ತು ವಿಶ್ಲೇಷಣೆಯ ಮೂಲಕ ನಾನು ಲೇಖನದ ಆರಂಭದಲ್ಲಿ ಹೇಳಿದ ಮಾತಿಗೆ ಬರುತ್ತೇನೆ: ಸಿನಿಮಾ ಒಂದು ಜನಪದ ಕಲೆ, ಆಧುನಿಕ ಜನಪದ ಕಲೆ' ಎಂದು ಉದ್ಘೋಷಿಸಿ ಈ ವಾದದ 'ಓನರ್‌ಶಿಪ್'ಗೆ ಅರ್ಜಿ ಹಾಕಿದ್ದಾರೆ! ಯಾಕೋ?!

ಇದೂ ಏನು ದೊಡ್ಡ ವಿಷಯವಲ್ಲ. ಆದರೆ ನಾಳೆ ನನ್ನ ಬರಹಗಳನ್ನು ಓದಿದವರ್ಯಾರಾದರೂ, ನಾನೇ ಬರಗೂರರ ಜೋಬಿಗೆ ಕೈ ಇಳಿ ಬಿಟ್ಟು, ಅವರ ಚಿಂತನೆಯನ್ನು ಕದ್ದು ಅವರ ಹೆಸರು ಹೇಳುವ ಸೌಜನ್ಯವೂ ಇಲ್ಲದೆ ನನ್ನದೆಂದು ಸಾರಿಕೊಳ್ಳುತ್ತಿದ್ದೇನೆ ಎಂದು ತಪ್ಪು ತಿಳಿಯಬಾರದಲ್ಲ, ಅದಕ್ಕಾಗಿ ಈ ಸ್ಪಷ್ಟನೆ. □

ಬರಗೂರು ಉತ್ತರ

ಮಾನ್ಯರೆ–

ಗೆಳೆಯ ಎಸ್.ಎಸ್. ಶಂಕರ್ ಅವರು ನನ್ನ 'ಸಿನಿಮಾ; ಒಂದು ಜನಪದ ಕಲೆ' ಎಂಬ ಲೇಖನಕ್ಕೆ ಪ್ರತಿಕ್ರಿಯಿಸಿ ೧೯೯೩ರಲ್ಲೇ ಈ ವಿಷಯವನ್ನು ತಾವೇ ಮೊದಲು ಪ್ರತಿಪಾದಿಸಿದ್ದಾಗಿ ಬರೆದಿರುವ ವಿಷಯವನ್ನು ಶ್ರೀ ಇಂದೂಧರ ಹೊನ್ನಾಪುರ ಅವರು ನನಗೆ ತಿಳಿಸಿದರು. ಶಂಕರ್ ಅವರ ಬರಹ ಪ್ರಕಟವಾದ ಮೇಲೆ ನಾನು ಪ್ರತಿಕ್ರಿಯಿಸಬೇಕೆಂಬುದು ಇಂದೂಧರ ಅವರ ಅಪೇಕ್ಷೆಯಾಗಿತ್ತು. ಆದರೆ, ಅವರು ಶಂಕರ್ ಬರಹದ ವಿವರಗಳನ್ನು ಹೇಳಿದ್ದರಿಂದ ಮತ್ತು ಇಂತಹ ವಿಷಯಗಳಲ್ಲಿ ಅನಗತ್ಯ ಕ್ಯಾತೆ ಮಾಡುವ ಸ್ವಭಾವ ನನ್ನದಲ್ಲವಾದ್ದರಿಂದ ಈಗಲೇ ನನ್ನ ಪ್ರತಿಕ್ರಿಯೆ ತಿಳಿಸುತ್ತೇನೆಂದು ಅವರಿಗೆ ತಿಳಿಸಿದೆ.

ನಿಜ ಹೇಳಬೇಕೆಂದರೆ ನಾನು ಶಂಕರ ಅವರ ಲೇಖನವನ್ನು ಖಂಡಿತ ಗಮನಿಸಿಲ್ಲ. ಹಾಗೆ ಗಮನಿಸಿದ್ದರೆ ಅವರ ಲೇಖನವನ್ನು ಪ್ರಸ್ತಾಪಿಸಿಯೇ ನನ್ನ ವಿಚಾರಗಳನ್ನು ಮುಂದುವರಿಸುತ್ತಿದ್ದೆ. ಅಷ್ಟರ ಮಟ್ಟಿನ ನೈತಿಕತೆ ನನ್ನಲ್ಲಿದೆಯೆಂದು ಸ್ನೇಹದಿಂದಲೇ ತಿಳಿಸಬಯಸುತ್ತೇನೆ. ನಾನು ಬರೆದದ್ದಕ್ಕಿಂತ ಮೊದಲೇ ಶಂಕರ್ ಅವರು ಬರೆದಿರುವುದರಿಂದ ಅವರು ನನ್ನಿಂದ ಪ್ರೇರಣೆ ಪಡೆದರೆಂದು ಹೇಳಲು ಸಾಧ್ಯ ಇಲ್ಲ. ಅವರು ಬರೆದದ್ದನ್ನು ನಾನು ಓದಿಲ್ಲವಾದ್ದರಿಂದ ನಾನೂ ಅವರಿಂದ ಪ್ರೇರಣೆ ಮತ್ತು ಮಾಹಿತಿ ಪಡೆದಿಲ್ಲ. ಅವರು ಹೇಳಿದೆದಾಗಲಿ, ಅಥವಾ ಒಂದು ವೇಳೆ ಅವರಿಗಿಂತ ಮೊದಲೇ ಯಾರಾದರೂ ಹೇಳಿದ್ದರೆ ಅವನ್ನು ಕುರಿತಾಗಲಿ, ನಾನು ಉಪೇಕ್ಷಿಸುವ ಪ್ರಶ್ನೆಯಿಲ್ಲ. ಈ ವಿಚಾರ ಹೇಳಿದವರಲ್ಲಿ ನಾನು ಎರಡನೆಯವನೂ ಮೂರನೆಯವೂ ಆಗಿದ್ದರೂ ನನಗೆ ನಿರಾಶೆಯೇನೂ ಇಲ್ಲ ಇದೆ. ಪ್ರತಿಪಾದಿಸಿದ ಸ್ನೇಹಿತರ ಸಾಲಿನಲ್ಲಿ ನಾನೂ ಇದ್ದೇನೆ ಎಂದು ಸಂತೋಷಿಸುತ್ತೇನೆ ಮತ್ತು ಸಮಾನ ವಿಚಾರಗಳು ಒಂದಾಗಿಯೇ ಈ ವಿಷಯದ ಪ್ರತಿಪಾದನೆಯಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುತ್ತೇನೆ. ಈ ವಿಷಯದಲ್ಲಿ ಶಂಕರ್ ಅವರೇ ಮೊದಲಿಗರಾಗಲಿ. ಸಂತೋಷ. ಆದರೆ ಪ್ರತಿಪಾದನೆಯ ವಿವರಗಳು ಕೆಲವೊಮ್ಮೆ ಬೇರೆಯಾಗಿರುತ್ತವೆಯೆಂಬ ಅರಿವಿನಿಂದ ನಾವು ಪರಸ್ಪರ ಪೂರಕವಾಗಬೇಕು! ಅಷ್ಟೆ

ಬರಗೂರು ರಾಮಚಂದ್ರಪ್ಪ

ಜಾಗತೀಕರಣ: ದಲಿತರ ಸ್ಥಿತಿ-ಗತಿ

ನರಸಿಂಹ ಗುಂಜಹಳ್ಳಿ

೧೯೯೧ರ ನಂತರ ಭಾರತವು ಕೈಗೊಂಡ ಆರ್ಥಿಕ ಸುಧಾರಣೆಗಳು ಬಡವರಲ್ಲೆ ಬಡವರಾದ ದಲಿತರ ಮೇಲೆ ಪೆಟ್ಟಾಗಿದೆ. ಈ ಸುಧಾರಣೆಗಳು ಆಹಾರ ಧಾನ್ಯಗಳ ಮೇಲಿನ ಸಬ್ಸಿಡಿಯಲ್ಲಿ ಕಡಿತ, ಸೇವ ಮತ್ತು ಸಾರ್ವಜನಿಕವಲಯಗಳ ಹುದ್ದೆಗಳು ರದ್ದು, ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಸಬ್ಸಿಡಿ ಕಡಿತ, ಒಟ್ಟಾರೆ ಸಾಮಾಜಿಕ ವಲಯದ ಮೇಲೆ ಜಾಗತಿಕರಣದ ಆರ್ಥಿಕ ಸುಧಾರಣೆಗಳು ಕಡಿತ ಹೇರುತ್ತಲೆ ಬರಲಾಗಿದೆ. ಮೊದಲೇ ಶೈಕ್ಷಣಿಕವಾಗಿ ತೀರಾ ಹಿಂದುಳಿದ ಹಾಗೂ ಸೇವಾ ಕ್ಷೇತ್ರದಲ್ಲಿ ನ್ಯಾಯಯುತವಾಗಿ ಅವಕಾಶಗಳು ಸಿಗದೇ ವಂಚಿತರಾಗಿರುವ ದಲಿತರು ತೀವ್ರವಾಗಿ ಸಂಕಷ್ಟಕ್ಕೆ ಒಳಗಾಗಿದ್ದಾರೆ. ೧೯೫೦ ಜನವರಿ ೨೬ರಲ್ಲಿ ಸಂವಿಧಾನ ಜಾರಿಗೆ ಬಂದ ನಂತರ ದಲಿತರಿಗೆ ಸಿಗುತ್ತಿದ್ದ ಅಲ್ಪಸ್ವಲ್ಪ ಅವಕಾಶಗಳು ೧೯೯೧ರ ನಂತರ ಜಾಗತಿಕರಣದಿಂದ ಮರೀಚಿಕೆಯಾಗಿವೆ.

ದಲಿತರು ಎಂದರೆ ಆರ್ಥಿಕವಾಗಿ ದುರ್ಬಲವಾಗಿರುವ, ಸಾಮಾಜಿಕವಾಗಿ ತಾರತಮ್ಯವನ್ನು ಅನುಭವಿಸುತ್ತಿರುವ ಈ ಹಿಂದೆ ಅಸ್ಪೃಶ್ಯರೆಂದು ಗುರುತಿಸಲ್ಪಟ್ಟ ಜನರೇ ದಲಿತರು. ಮತ್ತು ಜಾಗತಿಕರಣ ಎಂದರೆ ಬಂಡವಾಳಶಾಹಿಯ ಆಧುನಿಕತೆ, ಸಾಮ್ರಾಜ್ಯವಾದ, ಮತ್ತು ನವಬ್ರಾಹ್ಮಣವಾದಿ ಪ್ರಕ್ರಿಯೆಗಳೇ ಎಂದರ್ಥ.

ನವ ಆರ್ಥಿಕ ಸುಧಾರಣೆಗಳ ಭಾಗವಾಗಿ ಜುಲೈ ೧೯೯೧ ರಲ್ಲಿ ಭಾರತ ಸರಕಾರವು ಆಮೂಲಾಗ್ರ ಹೊಂದಾಣಿಕೆ ಕಾರ್ಯಕ್ರಮ (Structural Adjustment Programme)ವನ್ನು ಅಂಗೀಕರಿಸಿತು. ಈ ನವ ಆರ್ಥಿಕ ಸುಧಾರಣೆಗಳಿಗೆ ನೀಲನಕ್ಷೆ ಒದಗಿಸಿದ್ದು ಅಂತಾರಾಷ್ಟ್ರೀಯ ಹಣಕಾಸು ನಿಧಿImF), ವಿಶ್ವಬ್ಯಾಂಕ್ ೧೯೯೧ರಿಂದ ಜಾರಿಗೆ ಬಂದಿರುವ ಆರ್ಥಿಕ ಸುಧಾರಣೆಗಳಿಂದ ಭಾರತದ ದಲಿತರು, ಆದಿವಾಸಿಗಳು, ಕಾರ್ಮಿಕರು, ರೈತರು ಮಹಿಳೆಯರು ವಿದ್ಯಾರ್ಥಿಗಳು, ಸಣ್ಣ ಹಿಡುವಳಿದಾರರು ಸರ್ವನಾಶವಾಗಿದ್ದಾರೆ. ಹಾಗೂ ನೀರು, ಗಾಳಿ, ಆಹಾರ, ಪರಿಸರ, ಭೂಮಿ ಅರಣ್ಯಗಳು ಜಾಗತಿಕರಣದಿಂದ ತತ್ತರಿಸಿವೆ

೧೯೯೧ರ ನಂತರ ಭಾರತವು ಕೈಗೊಂಡ ಆರ್ಥಿಕ ಸುಧಾರಣೆಗಳು ಬಡವರಲ್ಲೆ ಬಡವರಾದ ದಲಿತರ ಮೇಲೆ ಹಲ್ಲೆ ಮಾಡಿವೆ. ಈ ಸುಧಾರಣೆಗಳು ಆಹಾರ ಧಾನ್ಯಗಳ ಮೇಲಿನ ಸಬ್ಸಿಡಿಯಲ್ಲಿ ಕಡಿತ, ಸೇವೆ ಮತ್ತು ಸಾರ್ವಜನಿಕ ವಲಯಗಳ ಹುದ್ದೆಗಳು ರದ್ದು, ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಸಬ್ಸಿಡಿ ಕಡಿತ, ಒಟ್ಟಾರೆ ಸಾಮಾಜಿಕ ವಲಯದ ಮೇಲೆ ಜಾಗತಿಕರಣದ ಆರ್ಥಿಕ ಸುಧಾರಣೆಗಳು ಕಡಿತ ಹೇರುತ್ತಲೇ ಬರಲಾಗಿದೆ. ಮೊದಲೇ ಶೈಕ್ಷಣಿಕವಾಗಿ ತೀರ ಹಿಂದುಳಿದ ಹಾಗೂ ಸೇವಾ ಕ್ಷೇತ್ರದಲ್ಲಿ ನ್ಯಾಯಯುತವಾಗಿ ಅವಕಾಶಗಳು ಸಿಗದೇ ವಂಚಿತರಾಗಿರುವ ದಲಿತರು ತೀವ್ರವಾಗಿ ಸಂಕಷ್ಟಕ್ಕೆ ಒಳಗಾಗಿದ್ದಾರೆ. ೧೯೫೦ರಲ್ಲಿ ಸಂವಿಧಾನ ಜಾರಿಗೆ ಬಂದ ನಂತರ ದಲಿತರಿಗೆ ಸಿಗುತ್ತಿದ್ದ ಅಲ್ಪಸ್ವಲ್ಪ ಅವಕಾಶಗಳು ೧೯೯೧ರ ನಂತರ ಜಾಗತಿಕರಣದಿಂದ ಮರೀಚಿಕೆಯಾಗಿವೆ.

ದಲಿತ ಸಮುದಾಯದ ಮೇಲೆ ೧೯೯೧ರಿಂದ ಜಾರಿಗೊಂಡಿರುವ ನವ ಆರ್ಥಿಕ ನೀತಿಗಳ ಪರಿಣಾಮಗಳು ಈ ಕೆಳಕಂಡಂತಿವೆ. ೨೦೦೧ರ ಜನಗಣತಿಯ ಪ್ರಕಾರ SCಗಳ ಜನಸಂಖ್ಯೆ ಭಾರತದ ಒಟ್ಟಾರೆ ಜನ ಸಂಖ್ಯೆಯ ಶೇ. ೧೬.೨ ರಷ್ಟಿದೆ ಅಂದರೆ ಸುಮಾರು ೧೭ ಕೋಟಿಗಿಂತ ಹೆಚ್ಚು. ಹಾಗೂ STಗಳ ಸಂಖ್ಯೆ ಶೇ. ೮.೨ ರಷ್ಟು ಇದೆ. ಅಂದರೆ ಸುಮಾರು ೮ ಕೋಟಿಗಿಂತ ಹೆಚ್ಚು, ಎರಡು ಸೇರಿಸಿದರೆ ಒಟ್ಟು ಶೇ. ೨೪.೪ ರಷ್ಟಿದೆ ಅಂದರೆ ೨೫ ಕೋಟಿಯಾಗುತ್ತದೆ ದಲಿತ ಕುಟುಂಬಗಳ ಸಾಮಾಜಿಕ, ಆರ್ಥಿಕ ಸ್ಥಿತಿಯು ತೀರಾ ಶೋಚನೀಯವಾಗಿದೆ. ಇವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸೋಣ.

ಭೂಮಿ

೧೯೯೧ರಲ್ಲಿ ಭಾರತದಲ್ಲಿ ದಲಿತರು ಶೇ ೭೦ ಕುಟುಂಬಗಳು ಭೂಹೀನರಾಗಿದ್ದರು. ಇನ್ನು ಕೆಲವರು ಒಂದು ಎಕರೆಗಿಂತಲೂ ಕಡಿಮೆ ಭೂಮಿ ಹೊಂದಿದ್ದರು. ಇವರ ಪ್ರಮಾಣ ೨೦೦೦ ಹೊತ್ತಿಗೆ ಶೇ ೭೫ಕ್ಕೆ ಏರಿತು. ೧೯೯೫-೯೬ರ ಕೃಷಿ ಸಮೀಕ್ಷೆ ಪ್ರಕಾರ ಭಾರತದಲ್ಲಿ ಶೇ ೬೧.೬ ರಷ್ಟು ಕುಟುಂಬಗಳು ಶೇ ೧೭.೨ರಷ್ಟು ಭೂಮಿಯನ್ನು ಹೊಂದಿವೆ ಇದಕ್ಕೆ ವ್ಯತಿರಿಕ್ತವಾಗಿ ಶೇ ೭.೩ ರಷ್ಟು ಕುಟುಂಬಗಳು (ಭೂಮಾಲೀಕ) ಶೇ ೪೦.೧ ರಷ್ಟು ಭೂಮಿಯನ್ನು ಹೊಂದಿವೆ. ಶೇ ೯೫ ರಷ್ಟು ದಲಿತರು ಕೃಷಿಯನ್ನು ಅವಲಂಬಿಸಿದ್ದಾರೆ. ಒಟ್ಟಾರೆ ಭೂಹೀನರಾಗಿರುವ ದಲಿತರು ಊರಿನ ಭೂಮಾಲೀಕರ ಮನೆಯಲ್ಲಿ ತುತ್ತು ಅನ್ನಕ್ಕಾಗಿ ಬಿಟ್ಟಿಚಾಕರಿ ಮಾಡುತ್ತಿದ್ದಾರೆ.

ಕೃಷಿ ಕಾರ್ಮಿಕರು

೨೦೦೦ನೇ ವರ್ಷದಲ್ಲಿ SC ಜನರಲ್ಲಿ ಶೇ ೪೯.೦೬ ರಷ್ಟು ಕೃಷಿ ಕೂಲಿಕಾರರು ಇದ್ದಾರೆ. STಗಳಲ್ಲಿ ೩೨.೬೯ರಷ್ಟು ಕೃಷಿ ಕೂಲಿಕಾರರು ಇದ್ದಾರೆ. ಇತರ ಜಾತಿಯ ಜನರಲ್ಲಿ ಕೇವಲ ೧೯.೬೬ ರಷ್ಟು ಇದೆ. ೧೯೯೧-೨೦೦೦ರ ನಡುವೆ ಭಾರತದಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ ೭.೪೬ ಕೋಟಿಯಿಂದ ೧೦.೭೪ಕೋಟಿಗೆ ಏರಿದೆ. ಇದರಲ್ಲಿ ಕೃಷಿ ಕಾರ್ಮಿಕರು ಹೆಚ್ಚಾಗಿ ದಲಿತರಿದ್ದಾರೆ ಕರ್ನಾಟಕದಲ್ಲಿ ೧೩೧ ಲಕ್ಷ ಜನ ಕೃಷಿಯನ್ನು ಅವಲಂಬಿಸಿದ್ದಾರೆ. ಇದರಲ್ಲಿ ೨೫ ಲಕ್ಷ ಮಂದಿ ದಲಿತರಿದ್ದಾರೆ. ಕರ್ನಾಟಕದಲ್ಲಿ ೬೨ ಲಕ್ಷ ಭೂರಹಿತ ಕೃಷಿ ಕಾರ್ಮಿಕರಿದ್ದಾರೆ ಈ ಮೇಲಿನ ಅಂಶಗಳನ್ನು ಗಮನಿಸಿದರೆ ಕೃಷಿ ಕಾರ್ಮಿಕರಾಗಿ ಹೆಚ್ಚಾಗಿ ದಲಿತರಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಇವರನ್ನು ಗಮನದಲ್ಲಿಟ್ಟುಕೊಂಡು ಕೃಷಿ ನೀತಿಗಳನ್ನು ರೂಪಿಸುವ ಬದಲು ಆಳುವವರು ಭೂಮಾಲೀಕರಿಗೆ ಅನುಕೂಲವಾಗುವ ಹಾಗೆ ನೀತಿಗಳನ್ನು ರೂಪಿಸಲಾಗಿದೆ. ಜಾಗತಿಕರಣ ಪ್ರಭಾವದಿಂದ ಕೃಷಿ ಕಾರ್ಮಿಕರಿಗೆ ಕೆಲಸದ ದಿನಗಳು ಕಡಿಮೆ ಆಗಿವೆ ೧೯೮೧ರಲ್ಲಿ ವರ್ಷಕ್ಕೆ ೧೨೩ ದಿನಗಳು ಕೆಲಸ ಇದ್ದವು. ೧೯೯೧ ರಲ್ಲಿ ೧೦೦ ಇದ್ದವು ೨೦೦೧ರಲ್ಲಿ ೭೮ ಇದ್ದವು. ೨೦೦೫ರಲ್ಲಿ ವರ್ಷಕ್ಕೆ ೭೦ ದಿನಗಳು ಇವೆ. ಬಹುಪಾಲು ದಲಿತರು ಕೃಷಿ ಕಾರ್ಮಿಕರಾಗಿರುವುದರಿಂದ ಈ ಹೊಡೆತ ದಲಿತರಿಗೆ ತಟ್ಟಿದೆ. ಹಾಗಾಗಿ ಗ್ರಾಮೀಣ ಪ್ರದೇಶದಲ್ಲಿ ಬಹುಪಾಲು ದಲಿತರು ದುಡಿಯುವ ಕೈಗಳಿಗೆ ಕೆಲಸವಿಲ್ಲದೆ ಬೆಂಗಳೂರು. ಬಾಂಬೆ, ಗೋವಾದಂತಹ ಮಹಾನಗರಗಳಿಗೆ ವಲಸೆ ಹೋಗಿದ್ದಾರೆ.

ಬಾಲಕಾರ್ಮಿಕರು

ಭಾರತದಲ್ಲಿರುವ ೬ ಕೋಟಿ ಬಾಲಕಾರ್ಮಿಕರಲ್ಲಿ ಶೇ. ೪೦ ರಷ್ಟು ದಲಿತ ಸಮುದಾಯದಿಂದ ಬಂದಿರುವವರು. ಹೋಟೆಲ್, ಕೈಗಾರಿಕೆ, ಕಟ್ಟಡ ನಿರ್ಮಾಣ. ಶೌಚಾಲಯಗಳನ್ನು ಶುಚಿಗೊಳಿಸುವುದು. ಕಸಾಯಿಖಾನೆಗಳಲಿ ಮುಂತಾದ ಕೆಲಸಗಳಲ್ಲಿ ದುಡಿಯುತ್ತಿರುವ ಬಾಲಕಾರ್ಮಿಕರಲ್ಲಿ ಶೇ. ೮೦ ರಷ್ಟು ದಲಿತ ಬಾಲಕಾರ್ಮಿಕರು.

ತಲಾ ಆದಾಯ

೨೦೦೦ನೇ ವರ್ಷದಲ್ಲಿ ರಾಷ್ಟ್ರೀಯ ತಲಾ ಆದಾಯ ರೂ ೪೪೮೫ ಇತ್ತು. ಇದರಲ್ಲಿ ದಲಿತರ ವಾರ್ಷಿಕ ತಲಾದಾಯ ರೂ ೩೨೩೭ ಮಾತ್ರ. ಅಂದರೆ ಒಂದು ದಿನಕ್ಕೆ ೮.೮೬ ರೂ ಮಾತ್ರ. ಇದರಲ್ಲಿ ಊಟ, ಆರೋಗ್ಯ, ಶಿಕ್ಷಣ, ವಸತಿ ಇನ್ನಿತರ ಸೌಲಭ್ಯಗಳು ನಿಭಾಯಿಸಲು ಸಾಧ್ಯವೆ...? ಪರಿಶಿಷ್ಟ ಜಾತಿಯವರು ದೇಶದಲ್ಲಿ ಶೇ. ೭೨ ರಷ್ಟು ಜನ ೨೦,೦೦೦ ಗಿಂತ ಕಡಿಮೆ ಆದಾಯವನ್ನು ಹೊಂದಿದ್ದಾರೆ. ಶೇ. ೨೧ರಷ್ಟು ದಲಿತರು ೪೦,೦೦೦ ಗಿಂತ ಕಡಿಮೆ ಆದಾಯವನ್ನು ಹಾಗೂ ಶೇ. ೦.೭೦ರಷ್ಟು ದಲಿತರು ೪೦,೦೦೦ ಕ್ಕಿಂತ ಹೆಚ್ಚು ಆದಾಯವನ್ನು ಹೊಂದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರ ಮಾಸಿಕ ತಲವಾರು ವೆಚ್ಚ ರೂ ೪೧೯ ಮಾತ್ರ, ಇದೆ.

ಬಡತನ

೨೦೦೦ನೇ ವರ್ಷದಲ್ಲಿ ಇತರ ಜನರಲ್ಲಿ ಶೇ ೨೧ ರಷ್ಟು ಜನರ ಬಡತನ ರೇಖೆಗಿಂತ ಕೆಳಗಿದ್ದರೆ. ದಲಿತರು ಶೇ ೩೫.೪ರಷ್ಟು ಇದ್ದಾರೆ. ನಗರ ಪ್ರದೇಶದಲ್ಲಿ ಇತರ ಜಾತಿಯಲ್ಲಿ ಶೇ ೧೫ ಜನರು ಬಡತನ ರೇಖೆಗಿಂತ ಕಡಿಮೆಯಿದ್ದರೆ ದಲಿತರಲ್ಲಿ ಶೇ ೩೯ ಜನರು ಬಡತನ ರೇಖೆಗಿಂತ ಕೆಳಗೆ ಬದುಕುತ್ತಿದ್ದಾರೆ ಬಡತನ ಕೃಷಿಕಾರ್ಮಿಕರಲ್ಲಿ ಜಾಸ್ತಿ ಇದೆ.

ಮೀಸಲಾತಿ

ದಲಿತರ ಅಭಿವೃದ್ಧಿಗಾಗಿ ಕೈಗೊಂಡ ಯೋಜನೆಗಳಲ್ಲಿ ಮೀಸಲಾತಿ ಬಹಳ ಪ್ರಮುಖವಾದದ್ದು. ಸಾವಿರಾರು ವರ್ಷಗಳಿಂದ ದಲಿತರಿಗೆ ಸರಿಯಾದ ರೀತಿಯಲ್ಲಿ ಸೌಲಭ್ಯಗಳು ಕೊಟ್ಟಿದ್ದರೆ ಇಂದು ಮೀಸಲಾತಿ ಅವಶ್ಯಕತೆಯೇ ಇರುತ್ತಿರಲಿಲ್ಲ. ಕೇಂದ್ರ ಸರಕಾರದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ ೧೫ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ ೭.೫ ರಷ್ಟು ಒಟ್ಟು ೨೨.೫ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ ಸರಕಾರಿ ಅರೆಸರಕಾರಿ, ಸಾರ್ವಜನಿಕ. ಅನುದಾನಿತ ಹಾಗೂ ಇನ್ನಿತರ ಇಲಾಖೆಗಳಲ್ಲಿ ಮೀಸಲಾತಿ ಅಡಿಯಲ್ಲಿ ದಲಿತರಿಗೆ ಕೆಲವು ಕೆಲಸಗಳು ಸಿಕ್ಕಿವೆ. ಆದರೆ ಇಂದು ಜಾಗತಿಕರಣ ಭಾಗವಾಗಿ ಖಾಸಗಿಕರಣ ಬಿಸಿ ಮೀಸಲಾತಿಗೆ ತಟ್ಟಿದೆ InF. WB. WTO. ನಿರ್ದೇಶನದಂತೆ ಆರ್ಥಿಕ ಸುಧಾರಣೆಗಳು ಜಾರಿಗೊಂಡ ನಂತರ ಸಾರ್ವಜನಿಕ ವಲಯಗಳನ್ನು ಖಾಸಗಿಕರಣಗೊಳಿಸುತ್ತಿದ್ದಾರೆ ಇದರಿಂದ ದಲಿತರಿಗೆ ಸಿಗುತ್ತಿದ್ದ ಅವಕಾಶಗಳು ನಶಿಸುತ್ತ ಮೀಸಲಾತಿಯನ್ನು ಅಸಂಬದ್ಧಗೊಳಿಸುತ್ತ ಆಳುವವರು ದಲಿತರನ್ನು ಬೀದಿಪಾಲು ಮಾಡುತ್ತಿದ್ದಾರೆ ಇಂದು ಮೀಸಲಾತಿ ಇದ್ದಾಗಲೂ ಉಚ್ಚನ್ಯಾಯಲಯದಲ್ಲಿ ೫೪೪ ನ್ಯಾಯಧೀಶರಲ್ಲಿ ಕೇವಲ ೧೩ ಮಂದಿ ಮಾತ್ರ ಪರಿಶಿಷ್ಟ ಜಾತಿಯವರು ಮತ್ತು ೪ ಮಂದಿ ಪರಿಶಿಷ್ಟ ಪಂಗಡದವರು ಇದ್ದಾರೆ. ದೇಶದ್ಯಾಂತ ಶಾಲಾ ಶಿಕ್ಷಕರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆಯು ಕೇವಲ ಶೇ. ೨.೬ ರಷ್ಟು ಮಾತ್ರವಿದೆ ರಾಷ್ಟ್ರದ ೧೩೮ ದಶಲಕ್ಷ ದಲಿತರಲ್ಲಿ ಮೀಸಲಾತಿ ಇದ್ದಾಗ್ಯೂ ಸರಕಾರಿ ಸೇವೆ ಕ್ಷೇತ್ರ ವಲಯಗಳಲ್ಲಿ ಉದ್ಯೋಗ ಪ್ರಮಾಣ ಕೇವಲ ಒಂದು ದಶಲಕ್ಷ ಅಂದರೆ ನೂರಕ್ಕೆ ಒಬ್ಬರೂ ಇಲ್ಲ.

ಉದ್ಯೋಗ

ಒಂದು ದೇಶ ಅಭಿವೃದ್ಧಿಯಾಗಬೇಕಾದರೆ ಒಂದು ಸಮುದಾಯ ನೆಮ್ಮದಿಯಾಗಿ ಬದುಕಬೇಕಾದರೆ ಆ ಜನ

ದಲಿತರ ಬದುಕನ್ನು ಬದಲಾವಣೆ ಮಾಡುವ ಪ್ರಮುಖ ಸಾಧನ ಶಿಕ್ಷಣ. ಇದು ಇರದೇ ಹೋದರೆ ಉದ್ಯೋಗ ದಲ್ಲಿ ಮೀಸಲಾತಿ ನೀಡಿದರೂ ವ್ಯರ್ಥ, ಜಾಗತಿ ಕರಣದ ದುಷ್ಪರಿಣಾಮಗಳು ಶಿಕ್ಷಣ ಕ್ಷೇತ್ರಕ್ಕೂ ಆವರಿಸಿವೆ ಶಿಕ್ಷಣ ಸಂಸ್ಥೆ ಗಳಿಗೆ ಸಿಗುತ್ತಿದ್ದ ಧನ ಸಹಾಯ ಇಂದು ಸಿಗುತ್ತಿಲ್ಲ.

ಉದ್ಯೋಗಗವನ್ನು ಅವಲಂಬಿಸಿರುತ್ತಾರೆ. ದಲಿತರು ಕಡಿಮೆ ವರಮಾನ ತರುವ ಉದ್ಯೋಗಳಲ್ಲಿ ಹಾಗು ಕುಲವೃತ್ತಿಗಳಲ್ಲಿ ತೊಡಗಿದ್ದಾರೆ. ಆರ್ಥಿಕ ವರಮಾನ ತರುವ ಉದ್ಯೋಗಗಳು ಇನ್ನು ದಲಿತರಿಗೆ ಸಿಕ್ಕಿಲ್ಲ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ೨೦೦೦ನೇ ವರ್ಷದಲ್ಲಿ ಇತರ ಜಾತಿಯವರ ನಿರುದ್ಯೋಗದ ಪ್ರಮಾಣ ಶೇ ೩.೫ ರಷ್ಟುಯಿದ್ದರೆ ದಲಿತರ ನಿರುದ್ಯೋಗದ ಪ್ರಮಾಣ ಶೇ. ೫, ರಷ್ಟು ಇದೆ ಕೂಲಿಕಾರ್ಮಿಕರನ್ನು ಕೊಳೆ ತೊಳೆಯುವ ಕೆಲಸಗಳನ್ನು ಕಸಗೂಡಿಸುವವರನ್ನ ಹೊಂದಿರುವ ದಲಿತ ಕುಟುಂಬಗಳ ಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿ ಶೇ ೬೧.೪ ರಷ್ಟುಯಿದ್ದರೆ ನಗರ ಪ್ರದೇಶಗಳಲ್ಲಿ ಶೇ ೨೬ ರಷ್ಟು ಇದೆ ಇತರ ಜಾತಿಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇ. ೨೫.೫ ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇ. ೭.೪೫ ರಷ್ಟು ಕುಟುಂಬಗಳಿವೆ. ಇಂದು IT.BT. ಹಾಗು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುವವರು ಮೇಲ್ಜಾತಿಯವರಾಗಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ಮತ್ತು ದೇಶಿಯ ಕಂಪನಿಗಳು ದಲಿತ ವಿದ್ಯಾರ್ಥಿಗಳು ಇತರ ವಿದ್ಯಾರ್ಥಿಗಳಿಗಿಂತ ಹೆಚ್ಚು ಅಂಕಗಳು ಪರೀಕ್ಷೆಗಳಲ್ಲಿ ಪಡೆದುಕೊಂಡಿದ್ದರೂ ಉದ್ಯೋಗಕ್ಕೆ ನೇಮಿಸಿಕೊಳ್ಳುವುದಿಲ್ಲ ಎಂಬ ಅಂಶವನ್ನು ಇತ್ತೀಚಿನ ಅಧ್ಯಯನವೊಂದರಿಂದ ತಿಳಿದುಬಂದಿದೆ.

ಶಿಕ್ಷಣ

ದಲಿತರ ಬದುಕನ್ನು ಬದಲಾವಣೆ ಮಾಡುವ ಪ್ರಮುಖ ಸಾಧನ ಶಿಕ್ಷಣ. ಇದು ಇರದೇ ಹೋದರೆ ಉದ್ಯೋಗದಲ್ಲಿ ಮೀಸಲಾತಿ ನೀಡಿದರೂ ವ್ಯರ್ಥ, ಜಾಗತಿಕರಣದ ದುಷ್ಪರಿಣಾಮಗಳು ಶಿಕ್ಷಣ ಕ್ಷೇತ್ರಕ್ಕೂ ಆವರಿಸಿವೆ ಶಿಕ್ಷಣ ಸಂಸ್ಥೆಗಳಿಗೆ ಸಿಗುತ್ತಿದ್ದ ಧನ ಸಹಾಯ ಇಂದು ಸಿಗುತ್ತಿಲ್ಲ. ಶಿಕ್ಷಣದ ವೆಚ್ಚವನ್ನು ವಿದ್ಯಾರ್ಥಿಗಳ ಮೇಲೆ ಹಾಕಿ ಶಿಕ್ಷಣ ಶುಲ್ಕವನ್ನು ಏರಿಸುತ್ತಿದ್ದಾರೆ. ಇದರಿಂದ ಉನ್ನತ ಶಿಕ್ಷಣ. ದುಬಾರಿಯಾಗುತ್ತಿದೆ ಶಿಕ್ಷಣ ಉಳ್ಳವರ ಸ್ವತ್ತು ಆಗುತ್ತಿದೆ. ಒಟ್ಟಾರೆ ಇಂದು ಶಿಕ್ಷಣ ವ್ಯಾಪಾರಿಕರಣವಾಗಿದೆ. ಮೊದಲೇ ತುತ್ತು ಅನ್ನಕ್ಕು ಪರದಾಡುತ್ತಿದ್ದ ದಲಿತರು ಕಡ್ಡಾಯ ಶಿಕ್ಷಣ, ಮುಂತಾದವುಗಳನ್ನು ಸರಕಾರವು ನಿರ್ಲಕ್ಷ ಮಾಡುತ್ತಿದೆ ಆರ್ಥಿಕ ಸುಧಾರಣೆಗಳ ದುಷ್ಪರಿಣಾಮಗಳಿಂದ ಉನ್ನತ ಶಿಕ್ಷಣ ದಲಿತರಿಗೆ ಗಗನ ಕುಸುಮವಾಗುತ್ತಿದೆ.

೨೦೦೧ ರಲ್ಲಿ ಸಾಕ್ಷರತ ಪ್ರಮಾಣ ಇತರರಲ್ಲಿ ಶೇ. ೬೮.೮ ರಷ್ಟಿದ್ದರೆ ಪರಿಶಿಷ್ಟ ಜಾತಿಗಳಲ್ಲಿ ಶೇ. ೫೪.೭ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಶೇ. ೪೭.೧ ಹಾಗು ಪರಿಶಿಷ್ಟ ಜಾತಿಯ ಮಹಿಳಾ ಸಾರತೆ ಪ್ರಮಾಣ ಶೇ. ೪೧.೯ ಇದೆ. ಪರಿಶಿಷ್ಟ ಪಂಗಡಗಳಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣ ಶೇ. ೩೪.೮ ಇದೆ ಇತರರಲ್ಲಿ ಶೇ. ೫೮.೨ ರಷ್ಟು ಇದೆ.

ಶಾಲಾ ಹಾಜರಾತಿಯಲ್ಲಿ ಇತರೆ ಹುಡುಗರಿಗಿಂತ ಪರಿಶಿಷ್ಟ ಜಾತಿ ಹುಡುಗರ ಶಾಲಾ ಹಾಜರಾತಿ ಶೇ. ೧೦ ರಷ್ಟು ಕಡಿಮೆ ಇದೆ ಹಾಗೂ ಪರಿಶಿಷ್ಟ ಬಾಲಕೀಯರ ಶಾಲಾ ಹಾಜರಾತಿ ಇತರ ಬಾಲಕಿಯರಿಗಿಂತ ಶೇ. ೫೦ ರಷ್ಟು ಕಡಿಮೆ ಇದೆ. ಶಾಲೆಗಳಲ್ಲಿ ದಲಿತರ ಮಕ್ಕಳು ಹಲವು ತಾರತಮ್ಯಗಳಿಂದ ನರಳುತ್ತಿದ್ದಾರೆ. ಇಂದು ಪ್ರಾಥಮಿಕ ಶಾಲೆಗಳಲ್ಲಿ ಬಿಸಿ ಊಟವನ್ನು ದಲಿತ ಮಕ್ಕಳಿಗೆ ಪ್ರತ್ಯೇಕವಾಗಿ ಪ್ಲೇಟು ಮತ್ತು ನೀರಿನ ಲೋಟ ಕೊಡುತ್ತಿರುವ ಪ್ರಕಾರಣಗಳು ನಡೆದಿವೆ ಇಂದು ದಲಿತರ ಮಕ್ಕಳ ಬಡತನ ಇನ್ನಿತರ ಹಾಗು ಇನ್ನಿತರ ಕಾರಣಗಳಿಂದ ಶಾಲೆಗೆ ಸರಿಯಾಗಿ ಹೋಗುತ್ತಿಲ್ಲ. ಹೋದರೂ ಶಾಲೆಯನ್ನು ಮಧ್ಯದಲ್ಲಿ ಬಿಡುತ್ತಿದ್ದಾರೆ.

ಆರೋಗ್ಯ

೨೦೦೦ ನೇ ದಲಿತರ ಶಿಶು ಮರಣ ದರ (ಒಂದು ವರ್ಷಕ್ಕೆ ಕೆಳಗಿನ)ವು ೧೦೦೦ ಜನ ಸಂಖ್ಯೆಗೆ ೮೩ ಇದ್ದರೆ ಇತರರಲ್ಲಿ ೬೧.೮ ರಷ್ಟಿತ್ತು. ಮತ್ತು ಮಕ್ಕಳ ಮರಣ ದರ (೫ ವರ್ಷ ಕೆಳಗಿನವು)ವು ೧೦೦೦ ಜನ ಸಂಖ್ಯೆಗೆ ೧೧೯.೩ ರಷ್ಟಿದ್ದರೆ ಇತರರಲ್ಲಿ ೮೨.೬ ರಷ್ಟಿದೆ. ದಲಿತರಲ್ಲಿ ಇಂತಹ ಹೆಚ್ಚಿನ ದರವು ಕಂಡುಬರಲು ಬಡತನ, ಕೆಳಮಟ್ಟದ ಶಿಕ್ಷಣ, ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ತಾರತಮ್ಯಗಳೆ ಕಾರಣವಾಗಿವೆ. ಶೇ. ೭೫ ರಷ್ಟು ದಲಿತ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಹಾಗೂ ಶೇ. ೭೦ಕ್ಕಿಂತ ಹೆಚ್ಚಿನ ದಲಿತ ಮಹಿಳೆಯರ ಹೆರಿಗೆ ಮನೆಯಲ್ಲೆ ಆಗಿದೆ. ಹಾಗೂ ಶೇ ೭೫ ಕ್ಕಿಂತ ಹೆಚ್ಚಿನ ದಲಿತ ಮಕ್ಕಳಲ್ಲಿ ರಕ್ತಿಹೀನತೆ ಇದೆ ಶೇ. ೫೦ಕ್ಕಿಂತ ಹೆಚ್ಚಿನ ದಲಿತರ ಮಕ್ಕಳ ವಿವಿಧ ಬಗೆಯ ಪೌಷ್ಠಿಕಾಂಶ ಕೊರತೆಯಿಂದ ಬಳಲುತ್ತಿದ್ದಾರೆ.

ಅಸ್ಪೃಶ್ಯತೆ ಮತ್ತು ದೌರ್ಜನ್ಯಗಳು

ಇಂದು ದಲಿತರು ಅಸ್ಪೃಶ್ಯತೆ ಮತ್ತು ದೌರ್ಜನ್ಯಕ್ಕೆ ಒಂದಲ್ಲ ಒಂದು ರೀತಿಯಲ್ಲಿ ತುತ್ತಾಗುತ್ತಿದ್ದಾರೆ ಜಾಗತಿಕರಣ ಯುಗದಲ್ಲಿ ಜಾತಿಯತೆ ಅಸ್ಪೃಶ್ಯತೆ ಹೊಸರೂಪ ಪಡೆದುಕೊಂಡಿದೆ ಸಾರ್ವಜನಿಕ ಕೊಳವೆ ಬಾವಿ ದೇವಸ್ಥಾನಗಳು ಹೊಟೆಲ್‌ಗಳು, ಸಾರ್ವಜನಿಕ ರಸ್ತೆ, ಹಾಗೂ ಇನ್ನಿತರ ಸಾಮಾಜಿಕ ಸೇವೆಗಳ ವಿಷಯಗಳಲ್ಲಿ ಅಸ್ಪೃಶ್ಯತೆ ಮತ್ತು ಸಾಮಾಜಿಕ ತಾರತಮ್ಯದ ಆಚರಣೆಗಳು ಹೆಚ್ಚಿನ ರೀತಿಯಲ್ಲಿ ನಡೆಯುತ್ತಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವು ದಲಿತರ ಮೇಲಿನ ದೌರ್ಜನ್ಯ, ಕೊಲೆ, ಅತ್ಯಾಚಾರ, ಹಲ್ಲೆ, ಅಪಮಾನ, ಅಸ್ಪೃಸ್ಯತೆ, ಮಾನಭಂಗ, ಮುಂತಾದ ಪ್ರಕರಣಗಳ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಿ ಸರಕಾರಕ್ಕೆ ವರದಿ ನೀಡಿದರೂ ಪ್ರಭುತ್ವ, ಆಳುವವರು ಗಮನ ಹರಿಸುತ್ತಿಲ್ಲ ಏಕೆಂದರೆ ಪ್ರಭುತ್ವ ಮೇಲ್ಜಾತಿಯವರ ಹಿಡಿತದಲ್ಲಿರುವುದರಿಂದ ದಲಿತರ ಮೇಲಿನ ದೌರ್ಜನ್ಯಗಳ ಬಗ್ಗೆ ಸಮಗ್ರವಾದ ಚಿಂತನೆ ನಡೆಯಲ್ಲಿಲ್ಲ.

ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಅಧ್ಯಯನ ವರದಿ ಪ್ರಕಾರ ಭಾರತದಲ್ಲಿ ಪ್ರತಿ ದಿನ ಸುಮಾರು ೫೦ ದೌರ್ಜನ್ಯಗಳು ದಲಿತರ ಮೇಲೆ ನಡೆಯುತ್ತವೆ. (ಸುಮಾರು ಎಷ್ಟೋ ಪ್ರಕರಣಗಳು ದಾಖಲಾಗದೇ ಹೋಗುತ್ತವೆ) ಈ ದೌರ್ಜನ್ಯಗಳನ್ನು ಅಯೋಗವು ೪೫ ಬಗೆಯಲ್ಲಿ ವಿಂಗಡಿಸಿದೆ ಉದಾ:- ಮೇಲ್ಜಾತಿಯವರ ಏರಿಯದಲ್ಲಿ ದಲಿತರ ಚಪ್ಪಲಿ, ಬಟ್ಟೆ

(೧೭ನೇ ಪುಟಕ್ಕೆ)

ಸ್ವಾತಂತ್ರ್ಯಕ್ಕಾಗಿ ಡಾ|| ಬಿ.ಆರ್. ಅಂಬೇಡ್ಕರರ ಕೊಡುಗೆ

"ಭಾರತೀಯರ ಮೇಲೆ ನಿರಂತರವಾಗಿ ಅಧಿಕಾರ ನಡೆಸಿಕೊಂಡು ಹೋಗಬಹುದೆಂಬ ಎಣಿಕೆ ಬ್ರಿಟಿಷರದ್ದಾಗಿದ್ದರೆ ಅದೊಂದು ಬರೀ ಭ್ರಮೆ" "ಬ್ರಿಟಿಷರು ಆಯ್ಕೆ ಮಾಡಿದ್ದನ್ನು ಭಾರತ ಒಪ್ಪಿಕೊಳ್ಳುವ ಕಾಲ ಮುಗಿಯಿತು" "ಈ ಹಂತದಲ್ಲಿ ನಿಮ್ನವರ್ಗಗಳು ಬಯಸುವುದು, ತಮ್ಮ ಜನರೂ ಭಾಗವಾಗುವಂಥ ಒಂದು ಸ್ವತಂತ್ರ ಸರ್ಕಾರವನ್ನು. ಆದ್ದರಿಂದ ಬ್ರಿಟಿಷರ ಆಡಳಿತ ಅಂತ್ಯಗೊಳ್ಳಲೇ ಬೇಕು" ಈ ರೀತಿಯಲ್ಲಿ ಬ್ರಿಟಿಷರ ವಿರುದ್ಧ ಸಿಡಿಲು ಬಡಿದಂತೆ ಮಾತನಾಡಿದ ಮಹಾನ್ ವ್ಯಕ್ತಿಯನ್ನು ಬ್ರಿಟಿಷರ ಏಜೆಂಟು ಎಂದ ಅಸಮಾನತಾವಾದಿಗಳಿಗೆ ಏನು ಹೇಳಬೇಕು? ಬ್ರಿಟಿಷರು ಭಾರತ ಬಿಟ್ಟು ತೊಲಗಲು ಅಂಬೇಡ್ಕರರು ಸಹ ತಮ್ಮ ಕೈಲಾದ ಕೊಡುಗೆ ನೀಡಿದ್ದಾರೆ ಎಂಬುದಕ್ಕೆ ಅವರಾಡಿರುವ ಈ ಮೇಲಿನ ಎಲ್ಲಾ ಮಾತುಗಳೇ ಸಾಕ್ಷಿ.

ವಿಕಾಸ ಆರ್. ಮೌರ್ಯ

ಭಾರತದ ಸ್ವಾತಂತ್ರಕ್ಕಾಗಿ ಹಲವಾರು ಚಳವಳಿಗಳನ್ನು ಹಮ್ಮಿಕೊಂಡು ಅನೇಕ ಘೋಷಣೆಗಳನ್ನು ಕೂಗಿ, ಪ್ರಾಣತ್ಯಾಗ ಮಾಡಿ, ನಮಗೆ ಸ್ವಾತಂತ್ರ್ಯ ತಂದುಕೊಟ್ಟಿರುವುದು ಈಗ ಇತಿಹಾಸ. ಅಂತಹವರಲ್ಲಿ ಪ್ರಮುಖರು ಗಾಂಧೀಜಿ, ಸುಭಾಷರು, ಭಗತ್‌ಸಿಂಗ್, ಆಜಾದ್, ನೆಹರೂಜಿ, ಪಟೇಲರು ಮುಂತಾದವರು. ಆದರೆ ಈ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿರುವ ಹಲವಾರು ಮಹಾನ್ ವ್ಯಕ್ತಿಗಳು ಇಂದು ಎಲೆ ಮರೆಯ ಕಾಯಿಯಂತೆಯೇ ಇದ್ದಾರೆ. ಅಂತಹವರಲ್ಲಿ ಒಬ್ಬರು ಬಾಬಾಸಾಹೇಬ್ ಅಂಬೇಡ್ಕರ್‌ರವರು. ವಿಪರ್ಯಾಸವೆಂದರೆ ಸ್ವಾತಂತ್ರ್ಯದಲ್ಲಿ ಬಾಬಾಸಾಹೇಬರ ಕೊಡುಗೆ ಇಲ್ಲವೇ ಇಲ್ಲವೆಂಬ ವಾದವನ್ನು ಮಾಡುವ ಜನರು ಇರುವುದು, ಅದೇ ನಂಬಿಕೆಯನ್ನು ಮುಂದಿನ ಪೀಳಿಗೆಗೆ ರವಾನಿಸುತ್ತಿರುವುದು.

೧೯೩೦ ರಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನಲ್ಲಿ ಮತ್ತು ಅದಕ್ಕೂ ಮುಂಚೆ ಭಾರತದಲ್ಲಿ ನಡೆದ ಸಭೆಯೊಂದರಲ್ಲಿ ಬಾಬಾಸಾಹೇಬರು ಮಾಡಿದ ಭಾಷಣಗಳಿಂದ, ಅವರಾಡಿದ ರೋಷಭರಿತ ಮಾತುಗಳಿಂದ ಅವರ ದೇಶ ಪ್ರೇಮದ ಬಗ್ಗೆ ಸ್ವಾತಂತ್ರ್ಯಕ್ಕಾಗಿ ಅವರು ನೀಡಿರುವ ಕೊಡುಗೆಯ ಬಗ್ಗೆ, ಬ್ರಿಟಿಷರ ನೆಲದಲ್ಲಿ ಬ್ರಿಟಿಷರ ವಿರುದ್ಧವೇ ಬೆಂಕಿ ಚೆಂಡಿನಂತಹ ಮಾತುಗಳನ್ನಾಡಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಕೇಳಿದ ಬಗ್ಗೆ ತಿಳಿಯುತ್ತದೆ. ಜತೆ ಜತೆಗೆ ಪ್ರಮುಖವಾಗಿ ನಿಮ್ನ ವರ್ಗಗಳ ಸ್ವಾತಂತ್ರ್ಯಕ್ಕೆ ಒತ್ತು ಕೊಟ್ಟಿದ್ದರಿಂದ ಇತಿಹಾಸದಲ್ಲಿ ಈ ಪ್ರಸಂಗವನ್ನು ಪ್ರಸಂಗದ ಮಹತ್ವವನ್ನು ಮರೆಮಾಚಲಾಗಿದೆ.

ಸೆಪ್ಟೆಂಬರ್ ೬, ೧೯೩೦ ರಂದು ಅಂದಿನ ಬ್ರಿಟಿಷ್ ವೈಸ್‌ರಾಯ್‌ರವರ ಮೂಲಕ ಅಂಬೇಡ್ಕರ್‌ರವರಿಗೆ ಪರಿಷತ್ತಿಗೆ ಹಾಜರಾಗಬೇಕೆಂಬ ಆಹ್ವಾನ ಬಂದಿತು. ಅಂದಿನ ದಿನಗಳಲ್ಲಿ ಭಾರತದ ನಿಮ್ನವರ್ಗದವರನ್ನು ಹಿಂದೂ ಸವರ್ಣೀಯರ ಸರಿಸಮಾನಾಗಿ ನೋಡಿದ ಕಾರ್ಯಕ್ರಮವಾದ್ದರಿಂದ ಸಹಜವಾಗಿಯೇ ನಿಮ್ನ ವರ್ಗದವರಿಗೆ ಸಂತೋಷದ ಸಂಗತಿಯಾಗಿತ್ತು. ಈ ಪರಿಷತ್ತಿಗೆ ಭಾರತದ ಅನೇಕ ವರ್ಗದವರಿಗೆ ಆಹ್ವಾನ ನೀಡಲಾಗಿತ್ತು ಗಾಂಧೀಜಿಯವರಿಗೂ ಆಹ್ವಾನವಿತ್ತಾದರು ಮುಂದೆ ಅವರು ಒಂದನೇ ದುಂಡು ಮೇಜಿನ ಪರಿಷತ್ತಿಗೆ ಭಾಗವಹಿಸಲಿಲ್ಲ. ಕಾಂಗ್ರೆಸ್ಸಿಗರಂತೂ ಪರಿಷತ್ತಿಗೆ ತೆರಳಿದ ಎಲ್ಲರನ್ನು "ಬ್ರಿಟಿಷರ ಏಜೆಂಟ್" ಎಂದು ಕರೆದರು. ಇಂತಹ ಪರಿಸ್ಥಿತಿಯಲ್ಲಿ ದುಂಡು ಮೇಜಿನ ಪರಿಷತ್ತಿಗೆ ಹೊರಟ ಅಂಬೇಡ್ಕರ್‌ರವರಿಗೆ ನಿಮ್ನ ವರ್ಗದವರಿಂದ ಅದ್ದೂರಿ ಬೀಳ್ಕೊಡುಗೆಯೇ ದೊರೆಯಿತು. ಅಂದು ಅವರಾಡಿದ ಮಾತುಗಳೇ ಅವರ ದೇಶಭಕ್ತಿಯನ್ನು ಧೃಡೀಕರಿಸುತ್ತವೆ.

"ನಿಮ್ನ ವರ್ಗಗಳಿಗೆ ಬ್ರಿಟಿಷರು ತೊಗುವುದರಿಂದ ಮಾತ್ರ ಪ್ರಯೋಜನವಿಲ್ಲ. ಬ್ರಿಟಿಷರು ತೊಲಗುವ ಜತೆಗೆ ಹಿಂದೂ ಸವರ್ಣೀಯರ ಸನಾತನವಾದ ಕೂಡ ನಿರ್ನಾಮವಾಗಬೇಕು" ಎಂದು ಹೇಳಿದ್ದರು. ಈ ಮಾತುಗಳಿಂದ ಅವರಲ್ಲಿದ್ದ ನಿಲುವನ್ನು ಮೇಲ್ನೋಟಕ್ಕೆ ತಿಳಿಯುವುದಕ್ಕಿಂತ ಭಾರತವನ್ನು ಒಂದು ಸಮೃದ್ಧ ರಾಷ್ಟ್ರವನ್ನಾಗಿ ಕಟ್ಟಬೇಕೆಂಬ ಅವರ ಧೋರಣೆ ನಿಜಕ್ಕೂ ಕೊಂಡಾಡುವಂತಾದ್ದು. ಅಂಬೇಡ್ಕರ್‌ರವರಿಗೂ ಸಹ ಗಾಂಧೀಜಿಯವರಂತೆ ಬ್ರಿಟಿಷರು ಭಾರತಕ್ಕೆ ಪ್ರಯೋಜನವಾಗದವರು ಎನಿಸಿರುವುದನ್ನು ಮೇಲಿನ ಮಾತುಗಳಿಂದ ತಿಳಿಯಬಹುದಾಗಿದೆ. ಆದರೆ ಅಷ್ಟೇ ಕಠೋರ ಸತ್ಯವೆಂದರೆ ನಿಮ್ನ ವರ್ಗದವರು ಕೇವಲ ಬ್ರಿಟಿಷರಿಂದಲ್ಲದೆ ನಮ್ಮವರೇ ಆದ ಹಿಂದೂ ಸವರ್ಣೀಯರಿಂದಲೂ ಕೂಡ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಬೇಕೆಂದು ಕರೆ ನೀಡುತ್ತಾರೆ. ಆದರೆ ಕೇವಲ ಈ ಸಂಗತಿಯನ್ನು ಮುಂದಿಟ್ಟುಕೊಂಡು ಅಂಬೇಡ್ಕರರ ದೇಶಪ್ರೇಮವನ್ನು ಕಡೆಗಣಿಸುವುದು ಖಂಡನೀಯ. "ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರ ಅಧಿಕಾರ ಹೊಂದಲಾಗದು" ಎಂದು ಯಾವಾಗಲು ಹೇಳುತ್ತಿದ್ದ ಬಾಬಾಸಾಹೇಬರ ಮಾತುಗಳು ಅವರಲ್ಲಿನ ದೇಶಭಕ್ತಿಯನ್ನು ಎತ್ತಿ ತೋರಿಸುವೆ.

ಅಂದು ಬ್ರಿಟಿಷರ ಆಡಳಿತವನ್ನು ಉದ್ದೇಶಿಸಿ ಮಾತನಾಡಿದ ಅವರು "ಇದೊಂದು ಅತ್ಯಂತ ದುಬಾರಿ ಆಡಳಿತ, ಐಷಾರಾಮಿ ಆಡಳಿತ, ಜನ ಸಾಮಾನ್ಯರ ಭವಿಷ್ಯವನ್ನು ಕಾಲ ಕಸದಂತೆ ಕಂಡ ಆಡಳಿತ, ಬ್ರಿಟಿಷ್ ಆಡಳಿತದ ಮೊದಲರ್ಧ ಶತಮಾನದಲ್ಲಿ ಐದು ಭೀಕರ ಬರಗಾಲಗಳು ಬಂದವು. ಇವುಗಳಲ್ಲಿ ಒಟ್ಟು ೧೦ ಲಕ್ಷಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡರು. ಇಷ್ಟೇ ಸಂಖ್ಯೆಯ ಜನ ಮನೆ–ಮಾರು ಕಳೆದುಕೊಂಡರು. ಎರಡನೇ ಅರ್ಧ ಶತಮಾನದಲ್ಲಿ ಮತ್ತೆ ಆರು ಬರಗಾಲಗಳು ಅಪ್ಪಳಿಸಿದವು. ಆಗ ೫೦ ಲಕ್ಷ ಜನ ಅಸುನೀಗಿದರು. ಕಡೇ ಅರ್ಧ ಶತಮಾನದಲ್ಲಾದರೂ ಬರಗಾಲಗಳ ಸಂಖ್ಯೆ ೧೮ ಕ್ಕೇರಿತು. ಇವುಗಳಲ್ಲಿ ೨೬೦ ಲಕ್ಷ ಜನ ಬಲಿಯಾದರು. ಇದಕ್ಕೆಲ್ಲ ಯಾರು ಹೊಣೆ? ಜನರ ಜೀವನಾವಶ್ಯಕತೆಗಳನ್ನು ಪೋಷಿಸಲಾಗದ ಬ್ರಿಟಿಷರೇ ಅಲ್ಲವೇನು? ಜನರ ಜೀವನದೊಂದಿಗೆ ಪ್ರಾಣಗಳೊಂದಿಗೆ ಭವಿಷ್ಯದೊಂದಿಗೆ ಚೆಲ್ಲಾಟವಾಡುವ ಅಧಿಕಾರ ಬ್ರಿಟಿಷ್ ಆಡಳಿತಕ್ಕೆ ಎಲ್ಲಿದೆ? ಬ್ರಿಟಿಷರು ಭಾರತದಲ್ಲಿ ಇರುವವರೆಗೆ ಇಲ್ಲಿನ ಜನರಿಗೆ ಮುಕ್ತಿ ಇಲ್ಲ ಅವರು ತೊಲಗಿದಾಗಲೇ ಅವರ ಕೆಟ್ಟ ನೀತಿಗಳು ತೊಲಗಿಯಾವು" ಎಂದು ಗುಡುಗಿದ್ದರು. ಈ ಮಾತುಗಳನ್ನು ಕೇಸರಿ ಅಂತಹ ಪತ್ರಿಕೆಗಳೂ ಸಹ ಕೊಂಡಾಡಿ ಬರೆದಿದ್ದವು. ಈ ಮೇಲಿನ ಮಾತುಗಳಿಂದ ಬಾಬಾಸಾಹೇಬರು ಬ್ರಿಟಿಷರ ಮೇಲಿರಿಸಿದ್ದ ಮನೋಭಾವವನ್ನು ಗಮನಿಸಬಹುದು. ದುಂಡು ಮೇಜಿನ ಪರಿಷತ್ತಿನ ಬಗ್ಗೆ ಮಾತನಾಡಿದ ಅಂಬೇಡ್ಕರರು "ನಿಮ್ನ ವರ್ಗಗಳು ಸೇರಿದಂತೆ ಪರಿಷತ್ತಿಗೆ ಹೋಗುತ್ತಿರುವ ಎಲ್ಲರೂ ಸ್ವರಾಜ್ಯವನ್ನು ಪಡೆದುಕೊಳ್ಳುವುದೇ ಭಾರತದ ಗುರಿಯಾಗಿದೆ ಎಂಬುದನ್ನು ನಂಬಿದ್ದಾರೆ." ಎಂದು ಭರ

ವಸೆ ನೀಡಿದ್ದರು. ಇಲ್ಲಿ ಸ್ವರಾಜ್ಯ ಎಂಬುದು ಇಡೀ ಭಾರತೀಯರ ಪರವಾಗಿ ಹೇಳಿರುವುದನ್ನು ಗಮನಿಸಬಹುದು.

ಲಂಡನ್ನಿನಲ್ಲಿ ನವೆಂಬರ್ ೧೨-೧೯೩೦ರಂದು ಒಂದನೇ ದುಂಡು ಮೇಜಿನ ಪರಿಷತ್ತು ಪ್ರಾರಂಭವಾಯಿತು. ಹಲವು ಕಡೆ ಈ ಪರಿಷತ್ತಿನ ಬಗ್ಗೆ ಕುತೂಹಲವಿದ್ದದ್ದಂತು ಸುಳ್ಳಲ್ಲ. ಈ ಸಮಾರಂಭದ ಅಧ್ಯಕ್ಷತೆಯನ್ನು ರ್ಯಾಂಸೆ ಮ್ಯಾಕ್‌ಡೊನಾಲ್ಡ್‌ರವರು ವಹಿಸಿದ್ದರು. ಈ ಅಧಿವೇಶನದಲ್ಲಿ ಅಂಬೇಡ್ಕರರು ಭಾರತದಲ್ಲಿನ ಜಾತಿ ಪದ್ಧತಿ, ಅಸಮಾನತೆ, ಅಸ್ಪೃಶ್ಯತೆಗಳಂತಹ ಸಮಸ್ಯೆಗಳನ್ನು ತೀವ್ರವಾಗಿ ಖಂಡಿಸುತ್ತಲೇ "ಭಾರತದಲ್ಲಿ ಬ್ರಿಟಿಷರ ಆಡಳಿತ ಕೊನೆಗೊಂಡು ಜನರಿಂದ, ಜನರಿಗಾಗಿ ಜನರ ಆಡಳಿತ ಪ್ರಾರಂಭಗೊಳ್ಳುವ ಕನಸನ್ನು ಭಾರತದ ನಿಮ್ನ ವರ್ಗಗಳು ತಮ್ಮ ಕಣ್ಗಳಲ್ಲಿ ತುಂಬಿಕೊಂಡಿದ್ದಾರೆ" ಎಂದು ಘಂಟಾಘೋಷವಾಗಿ ಹೇಳಿದರು. ಬ್ರಿಟಿಷರ ನೆಲದಲ್ಲೆ ಬ್ರಿಟಿಷರ ವಿರುದ್ಧವೇ ಈ ಮಾತುಗಳನ್ನು ಬಾಬಾಸಾಹೇಬರು ಆಡಿದಾಗ ಆ ಸಭೆಯಲ್ಲಿದ್ದ ಪ್ರತಿಯೊಬ್ಬರು ಕೂಡ ಆಶ್ಚರ್ಯ ಚಕಿತರಾದರು.

ಬಹಳ ಗಟ್ಟಿಧ್ವನಿಯಲ್ಲೆ ಮಾತನಾಡಿದ ಅವರು "ಬ್ರಿಟಿಷರು ಭಾರತಕ್ಕೆ ಬರುವ ಮುಂಚೆ ಭಾರತದ ನಿಮ್ನ ವರ್ಗಗಳು ಯಾವ ಸ್ಥಿತಿಯಲ್ಲಿ ಇದ್ದವೋ. ಬಹುತೇಕವಾಗಿ ಅದೇ ಸ್ಥಿತಿಯಲ್ಲಿ ಬ್ರಿಟಿಷ್ ಆಡಳಿತದಲ್ಲೂ ಇವೆ. ಮೊದಲು ನಾವು ಸಾರ್ವಜನಿಕ ಸ್ಥಳದಲ್ಲಿ ನೀರು ತೆಗೆದುಕೊಳ್ಳಲು ಆಗುತ್ತಿರಲಿಲ್ಲ ಈಗಲೂ ಸಹ ನೀರು ಸಿಗುತ್ತಿಲ್ಲ. ಈ ಸಣ್ಣ ಹಕ್ಕನ್ನಾದರೂ ಬ್ರಿಟಷರು ನಮಗೆ ಕೊಡಿಸಿದರೆ? ಮೊದಲು ನಮಗೆ ಮಂದಿರಗಳಲ್ಲಿ ಪ್ರವೇಶವಿರಲಿಲ್ಲ ಈಗಲೂ ಪ್ರವೇಶವಿಲ್ಲ, ಪೋಲೀಸ್-ಮಿಲಿಟರಿ ಸೇವೆಯಿಂದ ಮೊದಲು ನಮ್ಮನ್ನು ದೂರವಿಡಲಾಗಿತ್ತು ಈಗಲೂ ಸಹ ನಮ್ಮನ್ನು ದೂರ ಇಡಲಾಗಿದೆ. ಆದ್ದರಿಂದ ಬ್ರಿಟಿಷರ ಆಳ್ವಿಕೆ ಕೊನೆಗೊಳ್ಳಲೇ ಬೇಕು" ಎಂದು ಹೇಳಿದ್ದರು. ಮುಂದುವರೆವದು ಬ್ರಿಟಿಷ್ ಆಡಳಿತವು ಭಾರತಕ್ಕೆ ಏನು ಒಳ್ಳೆಯದು ಮಾಡಿದೆ? ಎಂಬ ಪ್ರಶ್ನೆ ಅಲ್ಲಿದ್ದ ಎಲ್ಲಾ ಬ್ರಿಟಿಷರಿಗೂ ಆಳವಾಗಿ ಇರಿಯಿತು. ಬಹುಶ: ಯಾವುದೇ ಭಾರತೀಯ ಅಲ್ಲಿವರೆಗೆ ಬ್ರಿಟಷರ ನಾಡಿನಲ್ಲೆ ಬ್ರಿಟಿಷರ ವಿರುದ್ಧ ಇಂತಹ ಮಾತನಾಡಿದ್ದು ಅದೇ ಮೊದಲು.

ಅಂಬೇಡ್ಕರರ ಮಾತಲ್ಲಿ ನಿಮ್ನವರ್ಗಗಳ ಏಳಿಗೆಯ ಜತೆಗೆ ತಳುಕು ಹಾಕಿಕೊಂಡಿದ್ದ ಅವರ "ದೇಶಪ್ರೇಮ" ಬಹುಶಃ ಇತಿಹಾಸಕಾರರ ಕಣ್ಣಿಗೆ ಗೋಚರಿಸಲಿಲ್ಲವೆನಿಸುತ್ತದೆ. ಅಥವಾ ಬೇಕೆಂದು ಮರೆಮಾಚಿದ್ದಾರೆಂದರೆ ತಪ್ಪಾಗಲಾರದು. ಭಾರತದಿಂದ ಹಲವು ಸಮುದಾಯಗಳ ಪರವಾಗಿ ಆಗಮಿಸಿದ್ದ ಗಣ್ಯರುಗಳಂತೆ ನಿಮ್ನವರ್ಗಗಳ ಪರವಾಗಿ ಆಹ್ವಾನಿತರಾಗಿದ್ದ ಅಂಬೇಡ್ಕರರು ಎಲ್ಲಾ ಮಾತುಗಳನ್ನು ನಿಮ್ನವರ್ಗದ ನಾಯಕನಾಗಿಯೇ ಮಾತನಾಡಿದರು ಅವರ ವಿಶಾಲದೃಷ್ಟಿಯನ್ನು ಅವರ ಮಾತುಗಳಲ್ಲಿ ನಾವು ಕಾಣಬಹುದಾಗಿದೆ. ಕಾಂಗ್ರೆಸ್ಸಿಗರೆಲ್ಲರು ಬ್ರಿಟಿಷರ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳಲು ಹಪಹಪಿಸುತ್ತಿದ್ದ ಆ ಕಾಲದಲ್ಲಿ ಅಂಬೇಡ್ಕರರು ಆ ಕಪಿಮುಷ್ಟಿಯ ಜತೆ ಜತೆಗೆ ಹಿಂದೂ ಸವರ್ಣೀಯರ ವಜ್ರಮುಷ್ಟಿಯಿಂದ ತಪ್ಪಿಸಿಕೊಳ್ಳಲು ಯೋಜನೆ ರೂಪಿಸಿದ್ದರು. ಆದರೆ ಇತಿಹಾಸಕಾರರು ಅಂಬೇಡ್ಕರ್‌ರವರನ್ನು ಕೇವಲ ನಿಮ್ನ ವರ್ಗಗಳ ನಾಯಕನನ್ನಾಗಿ ಬಿಂಬಿಸಿದ್ದು ಮಾತ್ರ ಶೋಚನೀಯ. ಇಷ್ಟು ತಿಳಿದ ಮೇಲೂ ಅಂಬೇಡ್ಕರರು ಸ್ವಾತಂತ್ರ್ಯಕ್ಕೆ ಕೊಡುಗೆ ನೀಡಿಲ್ಲವೆಂದು ಭಾವಿಸಿದರೆ ನಿಮ್ನವರ್ಗದವರು ಭಾರತೀಯರೇ ಅಲ್ಲ ಎಂಬ ಅಭಿಪ್ರಾಯವಾಗುತ್ತದೆ. ಅಂಬೇಡ್ಕರರ ಇನ್ನೂ ಹಲವು ಮಾತುಗಳು ಅಂದು ಹಾಜರಿದ್ದ ಬ್ರಿಟಿಷರನ್ನು ಕೆಣಕುತ್ತವೆ. ಅವರನ್ನು ಅವರು ಅರ್ಥಮಾಡಿಕೊಳ್ಳುವಂತೆ ಮಾಡುತ್ತವೆ. ಅಂತಹ ಮಾತುಗಳು ಕೆಳಗಿನಂತಿವೆ ಗಮನಿಸಿ.

"ಭಾರತೀಯರ ಮೇಲೆ ನಿರಂತರವಾಗಿ ಅಧಿಕಾರ ನಡೆಸಿಕ್ಕೆಂಡು ಹೋಗಬಹುದೆಂಬ ಎಣಿಕೆ ಬ್ರಿಟಿಷರದ್ದಾಗಿದ್ದರೆ ಅದೊಂದು ಬರೀ ಭ್ರಮೆ"

"ಬ್ರಿಟಿಷರು ಆಯ್ಕೆ ಮಾಡಿದ್ದನ್ನು ಭಾರತ ಒಪ್ಪಿಕೊಳ್ಳುವ ಕಾಲ ಮುಗಿಯಿತು"

"ಈ ಹಂತದಲ್ಲಿ ನಿಮ್ನವರ್ಗಗಳು ಬಯಸುವುದು, ತಮ್ಮ ಜನರೂ ಭಾಗವಾಗುವಂಥ ಒಂದು ಸ್ವತಂತ್ರ ಸರ್ಕಾರವನ್ನು. ಆದ್ದರಿಂದ ಬ್ರಿಟಿಷರ ಆಡಳಿತ ಅಂತ್ಯಗೊಳ್ಳಲೇ ಬೇಕು"

ಈ ರೀತಿಯಲ್ಲಿ ಬ್ರಿಟಿಷರ ವಿರುದ್ಧ ಸಿಡಿಲು ಬಡಿದಂತೆ ಮಾತನಾಡಿದ ಮಹಾನ್ ವ್ಯಕ್ತಿಯನ್ನು ಬ್ರಿಟಿಷರ ಏಜೆಂಟು ಎಂದ ಅಸಮಾನತಾವಾದಿಗಳಿಗೆ ಏನು ಹೇಳಬೇಕು? ಎರಡನೇ ದುಂಡು ಮೇಜಿನ ಪರಿಷತ್ತಿಗೆ ಮಹಾತ್ಮ ಗಾಂಧೀಜಿಯವರು ಕೂಡ ಆಗಮಿಸುತ್ತಾರೆ. ಆದ್ದರಿಂದ ಅಂಬೇಡ್ಕರರು ಸಹ ಸ್ವಾತಂತ್ರ್ಯ ಹೋರಾಟದಲ್ಲಿ, ಬ್ರಿಟಿಷರು ಭಾರತ ಬಿಟ್ಟು ತೊಲಗಲು ತಮ್ಮ ಕೈಲಾದ ಕೊಡುಗೆ ನೀಡಿದ್ದರೆ ಎಂಬುದಕ್ಕೆ ಅವರಾಡಿರುವ ಈ ಮೇಲಿನ ಎಲ್ಲಾ ಮಾತುಗಳೇ ಸಾಕ್ಷಿ. ಈ ಮಾಹಿತಿಯನ್ನೂ ಇನ್ನೂ ವಿವರವಾಗಿ ತಿಳಿಯಲು ಧನಂಜಯ ಕೀರ್‌ರವರ ಅಂಬೇಡ್ಕರ್ ಜೀವನ ಮತ್ತು ಸಾಧನೆ ಅಥವಾ ಕನ್ನಡದ ಮಂಗ್ಳೂರ ವಿಜಯ್‌ರವರು ಬರೆದಿರುವ ಸಂಘರ್ಷ ಪುಸ್ತಕ ಓದಿ. □

ಲಂಡನ್ನಿನಲ್ಲಿ ನವೆಂಬರ್ ೧೨-೧೯೩೦ ರಂದು ಒಂದನೇ ದುಂಡು ಮೇಜಿನ ಪರಿಷತ್ತು ಪ್ರಾರಂಭವಾಯಿತು. ಹಲವು ಕಡೆ ಈ ಪರಿಷತ್ತಿನ ಬಗ್ಗೆ ಕುತೂಹಲವಿದ್ದದ್ದಂತು ಸುಳ್ಳಲ್ಲ. ಈ ಸಮಾರಂಭದ ಅಧ್ಯಕ್ಷತೆಯನ್ನು ರ್ಯಾಂಸೆ ಮ್ಯಾಕ್‌ಡೊನಾಲ್ಡ್‌ರವರು ವಹಿಸಿದ್ದರು. ಈ ಅಧಿವೇಶನದಲ್ಲಿ ಅಂಬೇಡ್ಕರರು ಭಾರತದಲ್ಲಿನ ಜಾತಿಪದ್ಧತಿ, ಅಸಮಾನತೆ, ಅಸ್ಪೃಶ್ಯತೆಗಳಂತಹ ಸಮಸ್ಯೆಗಳನ್ನು ತೀವ್ರವಾಗಿ ಖಂಡಿಸುತ್ತಲೇ "ಭಾರತದಲ್ಲಿ ಬ್ರಿಟಿಷರ ಆಡಳಿತ ಕೊನೆಗೊಂಡು ಜನರಿಂದ, ಜನರಿಗಾಗಿ ಜನರ ಆಡಳಿತ ಪ್ರಾರಂಭಗೊಳ್ಳುವ ಕನಸನ್ನು ಭಾರತದ ನಿಮ್ನ ವರ್ಗಗಳು ತಮ್ಮ ಕಣ್ಗಳಲ್ಲಿ ತುಂಬಿಕೊಂಡಿದ್ದಾರೆ" ಎಂದು ಘಂಟಾಘೋಷವಾಗಿ ಹೇಳಿದರು. ಬ್ರಿಟಿಷರ ನೆಲದಲ್ಲೆ ಬ್ರಿಟಿಷರ ವಿರುದ್ಧವೇ ಈ ಮಾತುಗಳನ್ನು ಬಾಬಾಸಾಹೇಬರು ಆಡಿದಾಗ ಆ ಸಭೆಯಲ್ಲಿದ್ದ ಪ್ರತಿಯೊಬ್ಬರು ಕೂಡ ಆಶ್ಚರ್ಯ ಚಕಿತರಾದರು.

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಅಂಬೇಡ್ಕರ್–ಲೋಹಿಯಾ ಸಾಂಸ್ಕೃತಿಕ ಅನುಸಂಧಾನ

ಅಂಬೇಡ್ಕರ್ ಮತ್ತು ಲೋಹಿಯಾ ನಾಡಿನ ಇಬ್ಬರು ಮಹಾನ್ ನಾಯಕರು, ಹಾಗೂ ಶ್ರೇಷ್ಠ ಚಿಂತಕರು. ಇವರಿಬ್ಬರೂ ಬದುಕಿನುದ್ದಕ್ಕೂ ನಂಬಿದ ತತ್ವ ಸಿದ್ಧಾಂತಗಳ ಉಳಿವಿಗಾಗಿ ನವಸಮಾಜದ ನಿರ್ಮಾಣಕ್ಕಾಗಿ ದುಡಿದವರಾಗಿದ್ದಾರೆ. ಇಬ್ಬರ ಚಿಂತನೆಗಳು ಇಲ್ಲಿಯ ಮಾನವೀಯ ನೆಲೆಯನ್ನು ಗಟ್ಟಿಗೊಳಿಸಿದ ಎರಡು ಪ್ರಮುಖ ಚೇತನ ಧಾರೆಗಳಾಗಿವೆ. ಅಲ್ಲದೆ ಆಧುನಿಕ ಭಾರತದ ನಿರ್ಮಾಣದಲ್ಲಿ ಈ ಇಬ್ಬರು ಮಹಾನ್ ಚಿಂತಕರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ನಮ್ಮನ್ನು ತಮ್ಮ ವಿಚಾರಗಳೆಡೆಗೆ ಹೇಗೆ ಪ್ರಭಾವಿತರನ್ನಾಗಿ ಮಾಡುತ್ತಾರೆ ಎನ್ನುವುದು ಅವರಿಬ್ಬರ ಚಿಂತನೆಗಳ ಮೂಲಕ ಅನುಸಂಧಾನಗೊಳಿಸುವ ಕಿರು ಪ್ರಯತ್ನ ಈ ಲೇಖನದ ಮೂಲಕ ಮಾಡಲಾಗಿದೆ.

ಡಾ|| ಎಚ್.ಟಿ. ಪೋತೆ

'ನಂಬಿದ ತತ್ವಗಳನ್ನು ಯಾವ ಮುಲಾಜಿಗೆ ಒಳಗಾಗದೆ ಪ್ರತಿವಾದಿಸುವವ ಮತ್ತು ಅನಿಷ್ಠ ಶಕ್ತಿಗಳನ್ನು ದ್ವೇಷಿಸುವವ; ಇವೆರಡೂ ಉಳ್ಳ ನಾಯಕನು ಮಾತ್ರ ನವಸಮಾಜ ಸೃಷ್ಟಿಸಬಲ್ಲ'– ಎಂದು ಡಾ|| ಅಂಬೇಡ್ಕರ್ ಅವರು ಹೇಳಿದ್ದಾರೆ. ಯಾವುದೇ ಒಬ್ಬ ಸಮಾಜ ಸುಧಾರಕನಾದವನು ನಂಬಿದ ತತ್ವಗಳನ್ನು ಕೈಬಿಡದೆ, ಅನಿಷ್ಟ ಪದ್ಧತಿಗಳನ್ನು ಒಪ್ಪಿಕೊಳ್ಳದೆ ಮುಲಾಜಿಲ್ಲದೆ ವಿರೋಧಿಸುತ್ತಾ ಬದುಕುವವನು ಮಾತ್ರ ಹೊಸ ಸಮಾಜ ನಿರ್ಮಾಣ ಮಾಡಬಲ್ಲ ಎನ್ನುವುದು ಅಂಬೇಡ್ಕರ್ ಅವರ ಈ ಮೇಲಿನ ಮಾತಿನಿಂದ ಪ್ರತಿಪಾದಿತವಾಗಿದೆ.

ಈ ಮಾತು ಅಂಬೇಡ್ಕರ್ ಅವರ ವ್ಯಕ್ತಿತ್ವಕ್ಕೂ ಹಾಗೂ ರಾಮಮನೋಹರ ಲೋಹಿಯಾ ಅವರ ವ್ಯಕ್ತಿತ್ವಕ್ಕೂ ಅನ್ವಯವಾಗುತ್ತದೆ. ಈ ಇಬ್ಬರು ಮಹಾನ್ ನಾಯಕರು, ನಾಯಕರುಗಳಷ್ಟೇ ಅಲ್ಲದೆ ಶ್ರೇಷ್ಟ ಚಿಂತಕರು ಆಗಿದ್ದಂತಹವರು. ಇವರಿಬ್ಬರೂ ಬದುಕಿನುದ್ದಕ್ಕೂ ನಂಬಿದ ತತ್ವಸಿದ್ಧಾಂತಗಳ ಉಳಿವಿಗಾಗಿ ನವಸಮಾಜದ ನಿರ್ಮಾಣಕ್ಕಾಗಿ ದುಡಿದವರಾಗಿದ್ದಾರೆ. ಅದರಂತೆಯೇ ಆದರ್ಶದ ಬದುಕು ಮಾಡುವುದರ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಲೋಹಿಯಾ ಮತ್ತು ಅಂಬೇಡ್ಕರ್ ಇಬ್ಬರ ಚಿಂತನೆಗಳು ಇಲ್ಲಿಯ ಮಾನವೀಯ ನೆಲೆಯನ್ನು ಗಟ್ಟಿಗೊಳಿಸಿದ ಎರಡು ಪ್ರಮುಖ ಚೇತನ ಧಾರೆಗಳಾಗಿವೆ. ಅಲ್ಲದೆ ಆಧುನಿಕ ಭಾರತದ ನಿರ್ಮಾಣದಲ್ಲಿ ಈ ಇಬ್ಬರು ಮಹಾನ್ ಚಿಂತಕರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ನಮ್ಮನ್ನು ತಮ್ಮ ವಿಚಾರಗಳೆಡೆಗೆ ಹೇಗೆ ಪ್ರಭಾವಿತರನ್ನಾಗಿ ಮಾಡುತ್ತಾರೆ ಎನ್ನುವುದು ಅವರಿಬ್ಬರ ಚಿಂತನೆಗಳ ಮೂಲಕ ಅನುಸಂಧಾನಗೊಳಿಸುವ ಕಿರು ಪ್ರಯತ್ನ ಈ ಲೇಖನದ ಮೂಲಕ ಮಾಡಲಾಗಿದೆ.

ಲೋಹಿಯಾ ಮತ್ತು ಅಂಬೇಡ್ಕರ್ ಸಾಮಾಜಿಕವಾಗಿ ಇಬ್ಬರು ಭಿನ್ನಭಿನ್ನ ನೆಲೆಯಿಂದ ಬಂದವರು. ವರ್ಣ ವ್ಯವಸ್ಥೆಯಂತಹ ಪದ್ಧತಿಯನ್ನು ಒಪ್ಪಿಕೊಂಡರು ಮೇಲು, ಕೀಳೆಂಬ ಅಸಮಾನತೆಯ ಆಗರವೇ ಹಿಂದೂ ಧರ್ಮದ ಉಸಿರಾಗಿದೆ. ಬುದ್ಧ, ಬಸವರ ನಾಡಿನಲ್ಲಿ ಜಾತಿ ಪದ್ಧತಿ ನೆಲೆಯೂರಿರುವುದು ವಿಶಾದನೀಯವೆಂದೇ ಹೇಳಬೇಕು. ಆಧುನಿಕ ಯುಗದಲ್ಲೂ ಚಾಲ್ತಿಯಲ್ಲಿರುವ ಜಾತಿ ಪದ್ಧತಿಯ ಕ್ರೂರ ವ್ಯವಸ್ಥೆಗೆ ಬಲಿಯಾದವರು ಅಂಬೇಡ್ಕರ್. ಜಾತಿ ಪದ್ಧತಿಯ ಅವಮಾನ, ಅಪಮಾನ, ಯಾವುದೇ ರೀತಿಯ ಮಾನಸಿಕ ಯಾತನೆಯ ಅನುಭವ ಲೋಹಿಯಾ ಅವರಿಗಿರಲಿಲ್ಲ. 'ರಾಮ ಮನೋಹರ ಲೋಹಿಯಾ ಅವರ ಪೂರ್ವಜರು ಈಗಿನ ಉತ್ತರ ಪ್ರದೇಶದಲ್ಲಿರುವ ಮಿರ್ಜಾಪುರದ ಶ್ರೀಮಂತ ವೈಶ್ಯ ಮನೆತನಕ್ಕೆ ಸೇರಿದವರು. ಆ ಮನೆತನದವರು ಕಬ್ಬಿಣದ (ಲೋಹದ) ವ್ಯಾಪಾರ ಮಾಡುತ್ತಿದ್ದುದರಿಂದ, ಅವರ ಮನೆತನ ಲೋಹಿಯಾ ಮನೆತನ ಎಂದೇ ಹೆಸರಾಗಿತ್ತು. ರಾಮ ಮನೋಹರರ ಮುತ್ತಾತ ಲಾಲಾ ಮನಸುಖಾರಂ ಕುಟುಂಬಕ್ಕೆ ಮಿರ್ಜಾಪುರದಲ್ಲಿ ಮೇಲಿಂದ ಮೇಲೆ ಕಷ್ಟಗಳು ಎದುರಾದಾಗ, ಇಡೀ ಕುಟುಂಬ ಗಂಗಾ ತೀರದ ಆ ಊರನ್ನು ಬಿಟ್ಟು ತಮಸಾನದಿಯ ದಂಡೆಯಲ್ಲಿರುವ ಅಯೋಧ್ಯೆಗೆ ವಲಸೆ ಬಂದಿತು. ನಂತರ ಪಕ್ಕದ ಅಕ್ಬರಪುರದಲ್ಲಿ ವ್ಯಾಪಾರ ಆರಂಭಿಸಿತು. ಆದರೆ ಅಲ್ಲಿ ವ್ಯಾಪಾರ ಫಲ ನೀಡಲಿಲ್ಲ. ರಾಮಮನೋಹರರು ಹುಟ್ಟುವ ಹೊತ್ತಿಗೆ ಕುಟುಂಬ ಆರ್ಥಿಕವಾಗಿ ಶ್ರೀಮಂತಿಕೆಯಿಂದ ಸಾಧಾರಣ ಮಟ್ಟಕ್ಕೆ ಇಳಿದು ಜರ್ಜರಿತವಾಯಿತು. ರಾಮಮನೋಹರರ ತಂದೆ ಹೀರಾಲಾಲರು, ಮನೆತನದ ವ್ಯಾಪಾರ ವೃತ್ತಿಗಿಂತ ಹೆಚ್ಚಾಗಿ ಆಗತಾನೇ ಗಾಂಧೀಜಿ ನಾಯಕತ್ವದಲ್ಲಿ ಗರಿಗೆದರುತ್ತಿದ್ದ ಸ್ವಾತಂತ್ರ್ಯ ಹೋರಾಟದ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸತೊಡಗಿದರು.

ಹೀರಾಲಾಲ್–ಶ್ಯಾಮಾ ದಂಪತಿಗಳಿಗೆ ಒಬ್ಬನೇ ಮಗನಾಗಿ ರಾಮಮನೋಹರ ಲೋಹಿಯಾ ಜನಿಸಿದ್ದು ೧೯೧೦ ಮಾರ್ಚ್ ೨೩ರಂದು. ಹೀರಾಲಾಲ್ ಅಯೋಧ್ಯ ನಾಡಿಗೆ ಸೇರಿದವರಾಗಿದ್ದರೆ, ಶ್ರಯಾಮಾ ಮಿಥಿಲಿಯ ಹೆಣ್ಣು. ಅವರು ನೆಲೆಸಿದ್ದ ಅಕ್ಬರಪುರ ಪುರಾಣದ ಪ್ರಕಾರ ಶ್ರೀರಾಮನು ವನವಾಸಕ್ಕೆ ಹೊರಟ ನಂತರ ಮೊದಲ ರಾತ್ರಿ ಕಳೆದ ಜಾಗವಾಗಿತ್ತು. ಹೀಗೆ ರಾಮಾಯಣದ ದಟ್ಟ ನೆನೆಪುಗಳಿಂದ ತುಂಬಿಹೋಗಿದ್ದ ಆ ಮಣ್ಣಿನಲ್ಲಿ ಬಾಲಕ ರಾಮಮನೋಹರ ಆಡಿ ನಲಿದ. ಆತ ಎರಡುವರೆ ವರ್ಷದ ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ.



ಗಾಂಧೀಜಿಯವರ ಶಿಷ್ಯರಾಗಿದ್ದ ಹೀರಾಲಾಲ್ ಮರು ಮದುವೆ ಮಾಡಿಕೊಳ್ಳಲು ಒಪ್ಪದಿದ್ದುದರಿಂದ, ಮಗು ಲೋಹಿಯಾ ಅಜ್ಜಿಯ ಮಡಿಲಲ್ಲಿ ಬೆಳೆಯ ತೊಡಗಿದ. ನೆರೆಯ ಕ್ಷೌರಿಕ ಕುಟುಂಬಕ್ಕೆ ಸೇರಿದ ಸರಿಯಾ ದೇವಿಯು ಮಗುವಿನ ಪಾಲನೆ ಪೋಷಣೆಯಲ್ಲಿ ತೊಡಗಿದಳು. ಆಕೆಯ ಮಗ ರಾಮನಂದನ ಬಾಲಕ ಲೋಹಿಯಾ ಜೊತೆಗಾರ. ರಾಮಮನೋಹರ ಮತ್ತು ರಾಮನಂದನ ಇಬ್ಬರೂ ತಮ್ಮ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸವನ್ನು ಅಕ್ಬರಪುರದಲ್ಲಿಯೇ ಆರಂಭಿಸಿದರಾದರೂ, ೧೯೧೮ರಲ್ಲಿ ನಡೆದ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನಕ್ಕೆ ಹೀರಾಲಾಲ್ ಹೊರಟಾಗ ಬಾಲಕ ಲೋಹಿಯಾ ಕೂಡ ತಂದೆಯ ಜೊತೆಗೆ ಹೊರಟ. ಈ ಅಧಿವೇಶನದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್ಸಿಗರ ಕಿವಿಗೆ ಬಿದ್ದದ್ದು ಕಾಕತಾಳೀಯವಾದ ಸಂಗತಿಯಾದರೂ, ಕುತೂಹಲದ ಸಂಗತಿಯೂ ಆಗಿದೆ.

ಇದೇ ವೇಳೆಗೆ ಹಿರಾಲಾಲ್ ಮುಂಬೈನಲ್ಲಿ ಮಗನಿಗೆ ಮಾರವಾಡಿ ಶಾಲೆಗೆ ಸೇರಿಸಿದರು. ೧೯೨೦ರಲ್ಲಿ ಬಾಲ ಗಂಗಾಧರ ತಿಲಕರು ನಿಧನರಾದಾಗ ಇಡೀ ಮುಂಬೈ ಶೋಕತಪ್ತವಾಗಿತ್ತು. ಮಳೆಯನ್ನು ಲೆಕ್ಕಿಸದೆ ತಿಲಕರಿಗೆ ಶ್ರದ್ಧಾಂಜಲಿ ಅರ್ಪಿಸಲು ಮೆರವಣಿಗೆ ಹೊರಟಿತು. ಇದು ಬಾಲಕ ಲೋಹಿಯಾನ ಮೇಲೆ ಹೆಚ್ಚಿನ ಪರಿಣಾಮ ಬೀರಿತು. ಇದೇ ಹೊತ್ತಿಗೆ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿ ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಅಣಿಗೊಳಿಸಿ ಅದರ ನೇತೃತ್ವ ವಹಿಸಿಕೊಂಡ ವರ್ಷ. ಖಿಲಾಫತ್ ಚಳವಳಿ, ಚಂಪಾರಣ್ ಚಳವಳಿಗಳ ಮೂಲಕ ಗಾಂಧೀಜಿ ಜನಮೆಚ್ಚುಗೆ ಪಡೆದಿದ್ದರು. ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಮೂಲಕ ಇಡೀ ದೇಶವನ್ನು ಕಂಗೆಡಿಸಿದ್ದ ಬ್ರಿಟಿಷ್ ಸರಕಾರದ ವಿರುದ್ಧ ಪೂರ್ಣ ಪ್ರಮಾಣದ ಅಸಹಕಾರ ಚಳವಳಿಗೆ ಕರೆ ಕೊಟ್ಟ ವರ್ಷವದು. ಅನೇಕ ವಿನೂತನ ಕಾರ್ಯಕ್ರಮಗಳ ಮೂಲಕ ದೇಶದಲ್ಲಿ ಒಂದು ರೀತಿಯ ಸಂಚಲನ ಉಂಟಾಗಿತ್ತು. ಅದೇ ವೇಳೆಗೆ ಶಾಲೆಯನ್ನು ತ್ಯಜಿಸಿದ ಲೋಹಿಯಾ ಬಾಲಕ ಪಡೆಯನ್ನು ಕಟ್ಟಿಕೊಂಡು ಬೀದಿಗಿಳಿದರು. ಹೀಗೆ ಗಾಂಧೀಜಿಯ ಹೋರಾಟ ಮತ್ತು ವ್ಯಕ್ತಿತ್ವಕ್ಕೆ ಮಾರುಹೋದ ತಂದೆ ಮಕ್ಕಳಿಬ್ಬರೂ ಜನಪರ ಚಳವಳಿಯಲ್ಲಿ ಸಕ್ರಿಯರಾಗಿದ್ದರು. ಮುಂಬೈನಿಂದ ತಮ್ಮ ಸ್ವಂತ ಊರಾದ ಅಕ್ಬರ್‌ಪುರಕ್ಕೆ ವಾಪಸ್ಸಾದರು. ಇದಕ್ಕೆ ಮುನ್ನ ಮುಂಬೈನಲ್ಲೇ ಬಾಲಕ ಲೋಹಿಯಾನಿಗೆ ಗಾಂಧೀಜಿಯ ದರ್ಶನವಾಯಿತು. ಗಾಂಧೀಜಿಯ ಪಾದ ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದನು. ಹೀಗೆ ಗಾಂಧೀಜಿಯ ಸಂಪರ್ಕ ಹಾಗೂ ಚಿಂತನೆಯ ನೆಲೆಯಲ್ಲಿಯೇ ತಮ್ಮ ಜೀವಿತದ ಹೋರಾಟಗಳನ್ನು ಕಟ್ಟಿಕೊಂಡರು. ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದಲೇ ನೆಹರು, ಸುಭಾಷ್ಚಂದ್ರ ಭೋಸರ ಪರಿಚಯ ಮಾಡಿಕೊಂಡರು, ಲಂಡನ್‌ನಲ್ಲೇ ವಿದ್ಯಾಭ್ಯಾಸ ಮಾಡಿದರೂ. ವಿದ್ಯಾರ್ಥಿ ಜೀವನದುದ್ದಕ್ಕೂ ಬ್ರಿಟಿಷ್ ಸರಕಾರವನ್ನು ವಿರೋಧಿಸಿದ ಲೋಹಿಯಾ ಬೆಳೆಯುತ್ತಾ ಸಮಾಜವಾದಾದದ ಚಿಂತನೆಯ ಹಿರಿಕಾರರಾಗಿ ಬಾಳಿ ಬದುಕಿದರು.

ಡಾ॥ ಅಂಬೇಡ್ಕರ್ ಅವರು ರಾಮಮನೋಹರ ಲೋಹಿಯಾ ಅವರಿಗಿಂತ ಸುಮಾರು ೨೦ ವರ್ಷಗಳಷ್ಟು ಹಿರಿಯರು. ಏಪ್ರಿಲ್ ೧೪.೧೮೯೧ರಲ್ಲಿ ಭಾರತದ ದಟ್ಟ ದರಿದ್ರ ಜಾತಿ ವ್ಯವಸ್ಥೆಯ ಪದ್ಧತಿಯಿರುವ ಮಹಾರಾಷ್ಟ್ರದ

ಹುಟ್ಟು ಆಕಸ್ಮಿಕವಾದರೂ, ಭಾರತದಲ್ಲಿರುವ ಜಾತಿ ಪದ್ಧತಿಯಿಂದಾಗಿ ಹುಟ್ಟಿನಿಂದಲೇ ಅಂಬೇಡ್ಕರ್ ಅನೇಕ ಅವಮಾನಗಳನ್ನು ಅನುಭವಿಸಬೇಕಾಯಿತು. ಹುಟ್ಟು ಶ್ರೇಷ್ಠ ವಲ್ಲ ಎಂದಾದರೂ ಈ ದೇಶದಲ್ಲಿ ಹುಟ್ಟೇ ಶ್ರೇಷ್ಠವಾದುದು ಎನ್ನಲ್ಲಿಕ್ಕೆ ಇವತ್ತಿನ ಅನೇಕ ಸಂಗತಿಗಳು ಸಾಬೀತು ಪಡಿಸುತ್ತಲಿವೆ. ಲೋಹಿಯಾರಂತೆ ಸಹಜವಾಗಿ ವಿದ್ಯಾಭ್ಯಾಸ ಮಾಡುವುದು ಅಂಬೇಡ್ಕರ್ ಅವರಿಗೆ ಸಾಧ್ಯವಾಗಲಿಲ್ಲ. ಶಾಲೆಯಲ್ಲಿ ಹೊರಗೆ ಕೂಡಬೇಕು. ಕ್ಷೌರಿಕ ಕೂದಲ ಕತ್ತರಿಸುತ್ತಿರಲಿಲ್ಲ. ಸಾರ್ವಜನಿಕ ಕೆರೆ, ಬಾವಿಗಳಲ್ಲಿ ನೀರು ಕುಡಿಯಲು ಬಿಡುತ್ತಿರಲಿಲ್ಲ. ಈ ಎಲ್ಲ ಅವಮಾನ, ಯಾತ ನೆಗಳ ನಡುವೆಯೂ ಅಂಬೇಡ್ಕರ್ ಓದು ನಡೆದೇ ಇತ್ತು.

ಮಹಾರ್ ಎಂಬ ಅಸ್ಪೃಶ್ಯ ಸಮುದಾಯದ ರಾಮಜಿ ಭೀಮಾಬಾಯಿ ದಂಪತಿಗಳ ಉದರದಲ್ಲಿ ಜನಿಸಿದ ಬಾಲಕನೆ ಭೀಮರಾವ್. ಆ ದಂಪತಿಗಳಿಗೆ ಭೀಮರಾವ್ ಹದಿನಾಲ್ಕನೇ ಮಗುವಾಗಿದ್ದರು.

ಹುಟ್ಟು ಆಕಸ್ಮಿಕವಾದರೂ, ಭಾರತದಲ್ಲಿರುವ ಜಾತಿ ಪದ್ಧತಿಯಿಂದಾಗಿ ಹುಟ್ಟಿನಿಂದಲೇ ಅಂಬೇಡ್ಕರ್ ಅನೇಕ ಅವಮಾನಗಳನ್ನು ಅನುಭವಿಸಬೇಕಾಯಿತು. ಹುಟ್ಟು ಶ್ರೇಷ್ಠ ವಲ್ಲ ಎಂದಾದರೂ ಈ ದೇಶದಲ್ಲಿ ಹುಟ್ಟೇ ಶ್ರೇಷ್ಠವಾದುದು ಎನ್ನಲ್ಲಿಕ್ಕೆ ಇವತ್ತಿನ ಅನೇಕ ಸಂಗತಿಗಳು ಸಾಬೀತು ಪಡಿಸುತ್ತಲಿವೆ. ಲೋಹಿಯಾರಂತೆ ಸಹಜವಾಗಿ ವಿದ್ಯಾಭ್ಯಾಸ ಮಾಡುವುದು ಅಂಬೇಡ್ಕರ್ ಅವರಿಗೆ ಸಾಧ್ಯವಾಗಲಿಲ್ಲ. ಶಾಲೆಯಲ್ಲಿ ಹೊರಗೆ ಕೂಡಬೇಕು. ಕ್ಷೌರಿಕ ಕೂದಲ ಕತ್ತರಿಸುತ್ತಿರಲಿಲ್ಲ. ಸಾರ್ವಜನಿಕ ಕೆರೆ, ಬಾವಿಗಳಲ್ಲಿ ನೀರು ಕುಡಿಯಲು ಬಿಡುತ್ತಿರಲಿಲ್ಲ. ಈ ಎಲ್ಲ ಅವಮಾನ, ಯಾತ ನೆಗಳ ನಡುವೆಯೂ ಅಂಬೇಡ್ಕರ್ ಓದು ನಡೆದೇ ಇತ್ತು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ಅಂಬೇಡ್ಕರ್ ಸೋದರತ್ತೆ ಮೀರಾಬಾಯಿಯ ಆಶ್ರಯದಲ್ಲಿ ಬೆಳೆಯ ಬೇಕಾಯಿತು.

ಅಂಬೇಡ್ಕರ್ ಅಸ್ಪೃಶ್ಯತೆಯಂತಹ ಭಯಂಕರ ವ್ಯವಸ್ಥೆಗೆ ಬಲಿಯಾಗಿ ಬಾಳಿನುದ್ದಕ್ಕೂ ಅಪಮಾನ, ಅವಮಾನಗಳನ್ನು ಎದುರಿಸುತ್ತಲೇ ಬದುಕಿದರು. ಅಂಬೇಡ್ಕರ್ ಅವರ ತಂದೆ ರಾಮಜಿ ಸೇನೆಯಲ್ಲಿ ಸುಬೇದಾರರಾಗಿ ಕೆಲಸ ಮಾಡಿದವರಾಗಿದ್ದರು. ಮನೆಯಲ್ಲಿ ತಂದೆ ಕಬೀರ ಪಂಥದ ವಿಚಾರಗಳನ್ನು ಮಗನಿಗೆ ಸದಾ ಹೇಳಿಕೊಡುತ್ತಿದ್ದರು. ಅಂಬೇಡ್ಕರ್ ಅವರಿಗೆ ಓದಲು ಪ್ರತ್ಯೇಕ ಕೋಣೆ ಕೂಡ ಇರಲಿಲ್ಲ. ಬತ್ತಿ ದೀಪದ ಬೆಳಕಿನಲ್ಲಿ ಓದಿ ಹತ್ತನೆ ತರಗತಿ ಪಾಸು ಮಾಡಿದ ಬಾಲಕ ಭೀಮರಾವ್‌ಗೆ ಸಮಾಜದವರು ಸನ್ಮಾನಿಸಿದರು. ಆ ಸಮಾರಂಭದಲ್ಲಿ ಕೃಷ್ಣಕಾಂತ ಕೆಲೂಸ್ಕರ್ ಮತ್ತು ಎಸ್.ಕೆ. ಭೋಲೆ ಅವರು ಆಗಮಿಸಿದ್ದರು. ಸಮಾರಂಭದಲ್ಲಿ ಕೆಲೂಸ್ಕರ್ ಅವರು ಬುದ್ಧನ ಜೀವನ ಚರಿತ್ರೆಗೆ ಸಂಬಂಧಿಸಿದ ಒಂದು ಪುಸ್ತಕವನ್ನು ಕಾಣಿಕೆಯಾಗಿ ನೀಡಿದರು. ಆವಾಗಲೇ ಬಾಲಕ ಭೀಮರಾವ್‌ಗೆ ಬುದ್ಧನ ಪರಿಚಯವಾಯಿತು.

ಕಾಲೇಜು ವಿದ್ಯಾಭ್ಯಾಸಕ್ಕಾಗಿ ಕೆಲೂಸ್ಕರ್ ಅವರ ಮೂಲಕ ಸಯ್ಯಾಜಿರಾವ್ ಗಾಯಕವಾಡ ಅವರ ಸಹಾಯದಿಂದ ಕಾಲೇಜು ವಿದ್ಯಾಭ್ಯಾಸ ಮುಗಿಸಿದರು. ಒಪ್ಪಂದದಂತೆ ಬರೋಡಾ ಸಂಸ್ಥಾನದಲ್ಲಿ ಕೆಲಸ ಮಾಡಬೇಕಾಗಿತ್ತು. ಕೆಲಸ ಮಾಡುವಾಗ ಅಸ್ಪೃಶ್ಯತೆ ಅವರನ್ನು ಕಾಡದೆ ಬಿಡಲಿಲ್ಲ. ಹೀಗಾಗಿ ಕೆಲಸ ತ್ಯಜಿಸಿದರು. ಈ ನಡುವೆ ತಂದೆ ರಾಮಜಿಯ ನಿಧನ ಆಘಾತವನ್ನುಂಟು ಮಾಡಿತು. ಮುಂದೆ ಸ್ನೇಹಿತರ ಮತ್ತು ಸಯ್ಯಾಜಿರಾವ್ ಗಾಯಕವಾಡ ಅವರ ಆರ್ಥಿಕ ಸಹಾಯದಿಂದ ವಿದೇಶಕ್ಕೆ ಓದಲು ಹೋದರು. ಬಡತನದ ಬೇಗೆಯಲ್ಲಿ ಹೆಂಡತಿ ರಮಾಳನ್ನು ಇಲ್ಲಿಯೇ ಬಿಟ್ಟು ವಿದೇಶದಲ್ಲಿ ಹೆಚ್ಚಿನ ವ್ಯಾಸಾಂಗ ಮಾಡಿದರು. ಎರಡನೆ ಬಾರಿಗೆ ವಿದೇಶಕ್ಕೆ ಹೋಗಲು ಇಲ್ಲಿಯ ಸಮಾಜ ಸೇವೆಗಾಗಿ ದುಡಿಯುತ್ತಿದ್ದ ಛತ್ರಪತಿ ಶಾಹು ಮಹಾರಾಜರ ಸಹಾಯ ಪಡೆದರು. ವಿಶೇಷವೆಂದರೆ ಅಂಬೇಡ್ಕರ್ ಅವರಿಗೆ ಸಮಾಜ ಸೇವೆಯೆಡೆಗೆ ಒಲವು ಬರಲು ಮಹಾತ್ಮಾ ಜ್ಯೋತಿಬಾ ಫುಲೆಯ ವರ ಸಾಮಾಜಿಕ ಹೋರಾಟದ ಪ್ರಭಾವ, ಕಬೀರರ ವೈಚಾ ರಿಕ ನೆಲೆ, ಬುದ್ಧನ ಜೀವಪರ ಜನಪರ ಚಿಂತನೆ, ಅಂಬೇ ಡ್ಕರ್ ಅವರಿಗೆ ಪ್ರಿಯವಾಗಿದ್ದವು. ಸಮಾಜ ಮುಖಿ ಚಿಂತ ನೆಗೆ ಹಚ್ಚಿದವು, ಹೀಗಾಗಿ ಅಂಬೇಡ್ಕರ್ ಸಾಮಾಜಿಕ ನೆಲೆ ಯಲ್ಲಿ ಇಂದಿಗೂ ಧ್ರುವತಾರೆಯಾಗಿದ್ದಾರೆ. ಹೀಗೆ ಅಂಬೇ ಡ್ಕರ್ ಲೋಹಿಯಾ ಇಬ್ಬರೂ ಕ್ರಮಿಸಿದ ದಾರಿ ಒಂದೆಯಾದರೂ ಸಾಮಾಜಿಕ ಅಪಮಾನ ಅಡಚಣೆಗಳನ್ನು ಅಂಬೇಡ್ಕರ್ ಎದುರಿಸಿದರೆ, ಲೋಹಿಯಾ ಅವರಿಗೆ ಆ ತರಹದ ಅನುಭವಗಳು ಇರಲಿಲ್ಲ. ಲೋಹಿಯಾ ಅವರಿಗೆ ದೇಶದ ಸ್ವಾತಂತ್ರ್ಯ ಮುಖ್ಯವಾದರೆ, ಅಂಬೇಡ್ಕರ್ ಅವರಿಗೆ ಭಾರತದ ಬಹುಸಂಖ್ಯಾತ ದಲಿತರಿಗೆ, ಮಹಿಳೆಯರಿಗೆ ಸಾಮಾಜಿಕ ಸ್ವಾತಂತ್ರ್ಯ ಅನಿವಾರ್ಯವಾಗಿತ್ತು.

ಅಂಬೇಡ್ಕರ್ ಅವರಿಗೆ ಬುದ್ಧ, ಕಬೀರ, ಫುಲೆ ಅವರ ಆದರ್ಶಗಳ ಪರಿಚಯವಿದ್ದರೆ, ಲೋಹಿಯಾ ಅವರಿಗೆ ವಿದೇಶದ ವರ್ಗ, ಸಂಘರ್ಷ, ಪ್ರಿಯವಾಗುವುದರ ಜೊತೆಗೆ ಗಾಂಧಿವಾದವೇ ಅವರಿಗೆ ಆದರ್ಶವಾಗುತ್ತದೆ. ಹಿಂದೂ ವಾದವನ್ನು ಪ್ರತಿಪಾದಿಸುತ್ತಿದ್ದ ಗಾಂಧೀಜಿಯವರನ್ನು ಅಂಬೇಡ್ಕರ್ ಅವರು ಎಂದೂ ಮೆಚ್ಚಲಿಲ್ಲ. ಮೇಲಾಗಿ ಗಾಂಧಿವಾದವನ್ನು ವಿರೋಧಿಸುತ್ತಲೇ ಬೆಳೆದರು. ಅದಕ್ಕಾಗಿಯೇ ಅಂಬೇಡ್ಕರ್ ಅವರು ದೇಶದ ಸ್ವಾತಂತ್ರ್ಯ ಚಳವಳಿಗಿಂತಲೂ ಸಾಮಾಜಿಕ ಸ್ವಾತಂತ್ರ್ಯ ಚಳವಳಿಗೆ ಹಂಬಲಿಸುತ್ತಿದ್ದರು. ಕಾರಣ ಅಸ್ಪೃಶ್ಯತೆಯಂತಹ ಅಮಾನವೀಯ ಪದ್ಧತಿಯಿಂದ ಅಂಬೇಡ್ಕರ್ ಬೇಸತ್ತಿದ್ದರು. ೧೯೨೦ರ ದಶಕದಲ್ಲಿ ಪ್ರಜ್ಞಾಪೂರ್ವಕವಾಗಿ ಸಂಘಟಿತವಾದ, ಸಾಮಾಜಿಕ ರಾಜಕೀಯ ಚಳವಳಿ ದಕ್ಷಿಣ ಭಾರತದ ವಿದರ್ಭ, ಕೊಲ್ಹಾಪೂರ, ಹೈದ್ರಾಬಾದ್, ಮೈಸೂರು, ಮದ್ರಾಸ್ ಮುಂತಾದ ಪ್ರದೇಶದ ಸಂಸ್ಥಾನಗಳಲ್ಲಿ ದಲಿತ ಪರವಾದ, ಪ್ರಗತಿ ಪರವಾದ ಚಿಂತನೆಯ ಮೂಲಕ ಚಳವಳಿ ರೂಪುಗೊಳ್ಳುತ್ತಿತ್ತು.

ಇದೇ ದಶಕದಲ್ಲಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ವಿಶೇಷವಾಗಿ ಭಾರತದ ಮಟ್ಟದಲ್ಲಿ ದೊಡ್ಡ ಕ್ರಾಂತಿಕಾರಕ ಧಂಗೆಗಳನ್ನು ಕಂಡಕಾಲ ಅದಾಗಿತ್ತು. ರಷ್ಯಾದ ಅಕ್ಟೋ

ಬರ್ ಕ್ರಾಂತಿ ಭಾರತವನ್ನೊಳಗೊಂಡಂತೆ ಪ್ರಪಂಚದಾದ್ಯಂತ ದುಡಿಯುವ ಜನಗಳ ಮೇಲೆ ಗಾಢವಾದ ಪ್ರಭಾವವನ್ನು ಬೀರಿತ್ತು. ಈ ಕಾರಣದಿಂದಾಗಿ ಪ್ರಪಂಚದಾದ್ಯಂತ ಹೊಸ ಚಿಂತನೆಯ ಅಲೆದೊಂದು ಎದ್ದಿದ್ದರೂ ಭಾರತದ ಜಾತಿ ಪದ್ಧತಿ ಮತ್ತು ವರ್ಣ ವ್ಯವಸ್ಥೆಯಲ್ಲಿ ಅಪಾರ ನಂಬಿಕೆ ಮತ್ತು ವಿಶ್ವಾಸ ಇಟ್ಟುಕೊಂಡವರು ಗಾಂಧೀಜಿ. ಇಲ್ಲಿ ಆಚರಣೆಯಲ್ಲಿದ್ದ ಅಸ್ಪೃಶ್ಯತೆಯನ್ನು ತೊಡೆದು ಹಾಕುವುದು ಪ್ರಾಯಶ್ಚಿತ್ತವೆಂದು ಮಾತ್ರ ಭಾವಿಸಿದ್ದರು. ಈ ನಿಟ್ಟಿನಲ್ಲಿ ಆಲೋಚನೆ ಮಾಡುವಾಗ ಅಂಬೇಡ್ಕರ್ ಅವರ ವ್ಯಕ್ತಿತ್ವ ತೀರ ಭಿನ್ನವಾಗಿ ನಮಗೆ ಕಾಣುತ್ತದೆ. ಯಾವ ಗಾಂಧೀಜಿಯವರು ಅಸ್ಪೃಶ್ಯತೆ ಆಚರಣೆ ಪ್ರಾಯಶ್ಚಿತವೆಂದು ಭಾವಿಸಿದ್ದರೋ ಅದೇ ಅಸ್ಪೃಶ್ಯತೆಯ ಧಾರುಣ ಅನುಭವ ಮತ್ತು ತನ್ನ ಜನರ ಆಶೋತ್ತರಗಳನ್ನು ಪ್ರತಿನಿಧಿಸುವ ಸಹಜವಾದ ಹಕ್ಕು ಅಂಬೇಡ್ಕರ್ ಪಡೆದಿದ್ದರು. ನಿಮ್ನ ವರ್ಗಗಳ ಖಾಸಗಿ ಬದುಕು, ಚಿಂತನೆಯ ಧಾಟಿ, ನೋವು ಅವಮಾನ ಅಸಹಾಯಕತೆಗಳ ನೇರ ಪರಿಚಯ ಅಂಬೇಡ್ಕರ್ ಅವರಿಗಿತ್ತು. ಅವರ ದುಃಖ ದಮ್ಮಾನಗಳಿಗೆ ಕಿವಿಗೊಡುತ್ತಿದ್ದ ಅಂಬೇಡ್ಕರ್ ದಲಿತರ ದನಿಯಾಗಿ ರೂಪುಗೊಂಡಿದ್ದರು. ಅಸಮಾನವಾದ ಸಮಾಜ ವ್ಯವಸ್ಥೆಯನ್ನು ಸಮಾನಗೊಳಿಸುವಲ್ಲಿ ಶ್ರಮಿಸಿದ ಅಂಬೇಡ್ಕರ್ ಬಹಿಷ್ಕೃತ ಹಿತಕಾರಣಿ ಸಭಾದಂತಹ ಸಂಘಟನೆಯೊಂದನ್ನು ಪ್ರಾರಂಭಿಸುವುದರ ಮೂಲಕ ಹೊಸ ಚಿಂತನೆಗೆ, ಹೋರಾಟಗಳಿಗೆ ಮುಂದಾದರು.

ಅಂಬೇಡ್ಕರ್ ಅವರು ಹೋರಾಟಕ್ಕೆ ಮಾನಸಿಕವಾಗಿ ಸಜ್ಜಾಗುವ ಹೊತ್ತಿಗೆ ದೇಶದಲ್ಲಿಯೇ ಮೊದಲ ಬಾರಿಗೆ ೧೯೨೭ರ ಮಾರ್ಚ್ ೧೯-೨೦ರಂದು ಈ ದಿನಗಳ ಸಮಾವೇಶದಲ್ಲಿ ನೀರು ಮುಟ್ಟಿದರು. ನೈಸರ್ಗಿಕವಾಗಿ ಸಿಗುತ್ತಿದ್ದ ನೀರನ್ನು ದಲಿತರು ಹೋರಾಟ ಮಾಡುವುದರ ಮೂಲಕ ಮುಟ್ಟಬೇಕಾಯಿತು. ಅಲ್ಲಿಯ ಸವರ್ಣೀಯರು ನೀರು ಮುಟ್ಟಿದ್ದಕ್ಕಾಗಿ ದಲಿತರ ಮೇಲೆ ಮಾರಣಾಂತಿಕವಾದ ಹಲ್ಲೆ ನಡೆಸಿದರು. ನಿಸರ್ಗದತ್ತವಾದ ನೀರು, ಬೆಂಕಿಯನ್ನು ಮುಟ್ಟುವ, ನೀರನ್ನು ಕುಡಿಯುವ ಹಕ್ಕು ನಮಗೂ ಇದೆ. ನಾವು ಈ ದೇಶದ ವಾರಸುದಾರರು, ನಮಗೂ ಇದರಲ್ಲಿ ಪಾಲಿದೆ ಎಂದು ಪ್ರತಿಪಾದಿಸಿದರು.

ಈ ಎಲ್ಲ ಕಾರಣಗಳಿಗಾಗಿ ಅಸ್ಪೃಶ್ಯರು ಹಿಂದೂಗಳಲ್ಲ. ಮುಸ್ಲಿಮರಂತೆ, ಕ್ರೈಸ್ತರಂತೆ ಅವರೊಂದು ಪ್ರತ್ಯೇಕ ಜನಾಂಗ. ಆದ್ದರಿಂದ ಉಳಿದವರಂತೆ ಅಸ್ಪೃಶ್ಯರಿಗೂ ಪ್ರತ್ಯೇಕ ಜನಾಂಗವೆಂದು ಪರಿಗಣಿಸುವಂತೆ ಸೈಮನ್ ಕಮಿಷನ್ ಮುಂದೆ ವಾದಿಸಿದರು. ಈ ಹೋರಾಟ ಆಧುನಿಕ ಭಾರತದ ಹೋರಾಟಗಳಲ್ಲಿಯೇ ಮಹತ್ವದ್ದು. ೨೦ನೇ ಶತಮಾನದಲ್ಲಿ ಅಸ್ಪೃಶ್ಯರು ಬೃಹತ್ ಸಂಖ್ಯೆಯಲ್ಲಿ ಸಾರ್ವಜನಿಕವಾಗಿ ತಮ್ಮೆಲ್ಲ ನಾಗರಿಕ ಹಕ್ಕುಗಳನ್ನು ಪ್ರತಿಪಾದನೆ ಮಾಡಿದ ಪ್ರಥಮ ಪ್ರಸಂಗ ಅದಾಗಿತ್ತು. ದೇಶದ ನಿಮ್ನ ವರ್ಗದಲ್ಲಿ ನವಚೈತನ್ಯಕ್ಕೆ ಕಾರಣವಾಗಿತ್ತು. ಆದರೆ ನಾಗರಿಕ ಸಂಸ್ಕೃತಿಗೆ ಹೆಸರು ತಂದ ಬುದ್ಧ, ಬಸವ, ಮಹಾವೀರ ಈ ಮುಂತಾದ ಮಹನೀಯರು ಜನ್ಮ ತಾಳಿದ ನಾಡಿನಲ್ಲಿ ಮತ್ತೊಂದು ಘೋರವಾದ ಘಟನೆಯು ಜರುಗಿತ್ತು. ಮಹಾಡ್ ಕೆರೆ ಮೈಲಿಗೆಯಾಯಿತೆಂದು ಅಲ್ಲಿಯ ಸವರ್ಣೀಯರು ಗೋಮೂತ್ರ, ಹಾಲು, ತುಪ್ಪ, ಸಗಣಿಯಿಂದ ಕುಡಿಯಲು ಬಳಸುತ್ತಿದ್ದ ಕೆರೆಯ ನೀರನ್ನು ಶುಚಿಗೊಳಿಸಿದರು. ಮನುಷ್ಯರು ಬಳಸುವ ನೀರಿನಲ್ಲಿ ಗೋಮೂತ್ರ ಬೆರೆಸಿ ಕೆರೆಯನ್ನು ಪವಿತ್ರಗೊಳಿಸುವ ಅವರ ಪ್ರಯತ್ನ ಜಗತ್ತು ನಾಚುವಂತಿತ್ತು. ಇದೇ ವರ್ಷ ಅಂದರೆ, ಡಿಸೆಂಬರ್ ೨೦, ೧೯೨೭ರಂದು ಜೀವ ವಿರೋಧಿಯಾದ ಮನುಸ್ಮೃತಿಯನ್ನು ಸುಟ್ಟು ಹಾಕಿದರು.

ಶತಶತಮಾನಗಳಿಂದ ಅಸ್ಪೃಶ್ಯರನ್ನು ಹೀನಾಯವಾಗಿ ಕಂಡಿದ್ದ ಹಿಂದೂ ಧರ್ಮ ಮತ್ತು ಹಿಂದೂವಾದಿಗಳ ವಿರುದ್ಧ ಅಂಬೇಡ್ಕರ್ ಅವರ ವಾಗ್ಝರಿ ಮುಂದುವರೆಯಿತು. ಹಂದಿ, ನಾಯಿಗಳಿಗಿಂತ ನಮ್ಮನ್ನು ಕಡೆಯಾಗಿ ಕಂಡಿದ್ದೀರಿ. ಅವರಿಗೂ ನಾಗರಿಕ ಹಕ್ಕುಗಳು ಸಿಗಬೇಕು ಎಂದು ವಾದಿಸಿದರು. ಮುಂದುವರೆದು ಮಾತನಾಡುತ್ತಾ ಮಾನವತೆಗಾಗಿ ಮಿಡಿಯುವುದು ಕಠೋರವಾದವೇ? ಅಥವಾ ಅಸ್ಪೃಶ್ಯತೆ ಆಚರಣೆ ಕಠೋರವಾದವೇ? ಎಂದು ತಿಲಕರನ್ನು ಗಮನದಲ್ಲಿಟ್ಟುಕೊಂಡು ಅಂಬೇಡ್ಕರ್ ಅವರು ಹೀಗೆ ಹೇಳಿದರು. ತಿಲಕರು 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಎಂಬ ಘೋಷಣೆ ನೀಡಿ ಸ್ವಾತಂತ್ರ್ಯ ಆಂದೋಲನದ ಧೀಮಂತ ನಾಯಕರೆನಿಸಿದ್ದರು. ಆದರೆ ಅವರೇನಾದರು ಅಸ್ಪೃಶ್ಯರಾಗಿ (ಹೊಲೆಯ-ಮಾದಿಗ) ಹುಟ್ಟಿದ್ದರೆ ಈ ಘೋಷಣೆಗಿಂತ ಮುಂಚೆ ಅಸ್ಪೃಶ್ಯತೆ ನಿರ್ಮೂಲನೆಯೇ ನನ್ನ ಜನ್ಮ ಸಿದ್ಧ ಹಕ್ಕು ಎಂದು ಹೇಳುತ್ತಿದ್ದರು. ಅಂಬೇಡ್ಕರ್ ಅವರ ಈ ಮಾತುಗಳಲ್ಲಿ ಸರಳವಾದ ವಿಚಾರವಿದ್ದರೂ ಕಠೋರವಾದ ಸತ್ಯವಿತ್ತು.

ಈ ಎಲ್ಲ ಚಿಂತನೆ ಹೋರಾಟಗಳ ಮಧ್ಯೆ ಅಂಬೇಡ್ಕರ್ ಅವರು ಅಸ್ಪೃಶ್ಯರಿಗೆ ಸಾಮಾಜಿಕ ಸ್ಥಾನಮಾನಗಳನ್ನು ದೊರಕಿಸಿಕೊಡುವುದರ ಜೊತೆಗೆ ಧಾರ್ಮಿಕ ನೆಲೆಯಲ್ಲಿಯೂ ಚಳವಳಿಗಳನ್ನು ಹಮ್ಮಿಕೊಂಡರು.

ಅಂಬೇಡ್ಕರ್ ಅವರು ಹೋರಾಟಕ್ಕೆ ಮಾನಸಿಕವಾಗಿ ಸಜ್ಜಾಗುವ ಹೊತ್ತಿಗೆ ದೇಶದಲ್ಲಿಯೇ ಮೊದಲ ಬಾರಿಗೆ ೧೯೨೭ರ ಮಾರ್ಚ್ ೧೯-೨೦ರಂದು ಈ ದಿನಗಳ ಸಮಾವೇಶದಲ್ಲಿ ನೀರು ಮುಟ್ಟಿದರು. ನೈಸರ್ಗಿಕವಾಗಿ ಸಿಗುತ್ತಿದ್ದ ನೀರನ್ನು ದಲಿತರು ಹೋರಾಟ ಮಾಡುವುದರ ಮೂಲಕ ಮುಟ್ಟಬೇಕಾಯಿತು. ಅಲ್ಲಿಯ ಸವರ್ಣೀಯರು ನೀರು ಮುಟ್ಟಿದ್ದಕ್ಕಾಗಿ ದಲಿತರ ಮೇಲೆ ಮಾರಣಾಂತಿಕವಾದ ಹಲ್ಲೆ ನಡೆಸಿದರು. ನಿಸರ್ಗದತ್ತವಾದ ನೀರು, ಬೆಂಕಿ ಯನ್ನು ಮುಟ್ಟುವ, ನೀರನ್ನು ಕುಡಿಯುವ ಹಕ್ಕು ನಮಗೂ ಇದೆ. ನಾವು ಈ ದೇಶದ ವಾರಸುದಾರರು, ನಮಗೂ ಇದರಲ್ಲಿ ಪಾಲಿದೆ ಎಂದು ಪ್ರತಿಪಾದಿಸಿದರು. ಈ ಎಲ್ಲ ಕಾರಣಗಳಿಗಾಗಿ ಅಸ್ಪೃಶ್ಯರು ಹಿಂದೂಗಳಲ್ಲ. ಮುಸ್ಲಿಮರಂತೆ, ಕ್ರೈಸ್ತರಂತೆ ಅವರೊಂದು ಪ್ರತ್ಯೇಕ ಜನಾಂಗ. ಆದ್ದರಿಂದ ಉಳಿದವರಂತೆ ಅಸ್ಪೃಶ್ಯರಿಗೂ ಪ್ರತ್ಯೇಕ ಜನಾಂಗವೆಂದು ಪರಿಗಣಿಸುವಂತೆ ಸೈಮನ್ ಕಮಿಷನ್ ಮುಂದೆ ವಾದಿಸಿದರು.

ಹಿಂದೂ ಧರ್ಮದ ಮುಖ್ಯ ಕೇಂದ್ರಗಳೆಂದರೆ ದೇವಾಲಯಗಳು. ಆ ಕಾಲದಲ್ಲಿ ದೇವಾಲಯ ಪ್ರವೇಶ ಅಸ್ಪೃಶ್ಯರಿಗೆ ಇರಲಿಲ್ಲ. ಹಾಗೆ ನೋಡಿದರೆ ಈಗಲೂ ದೇವಾಲಯ ಪ್ರವೇಶ, ಅರ್ಚನೆ ಸುಲಭವಾಗಿಲ್ಲ. ಈ ನೆಲೆಯಲ್ಲಿ ಮಾರ್ಚ್ ೨೦, ೧೯೩೦ ರಂದು ೧೯೩೫ರವರೆಗೆ ನಾಸಿಕನಲ್ಲಿರುವ 'ಕಾಳಾರಾಂ' ದೇವಸ್ಥಾನ ಪ್ರವೇಶ ಚಳವಳಿ ನಡೆಸಿದರು. ಪ್ರಾರಂಭದಲ್ಲಿ ಸುಮಾರು ಸಾವಿರದ ಐದುನೂರು ಜನ ನಾನಾ ಭಾಗಗಳಿಂದ ಬಂದು ದೇವಸ್ಥಾನ ಪ್ರವೇಶಕ್ಕೆ ಶಾಂತ ಮೆರವಣಿಗೆಯಲ್ಲಿ ಹೊರಟ ಜನ ದೇವಸ್ಥಾನ ತಲುಪಿದಾಗ ದೇವಾಲಯದ ಬಾಗಿಲು ಮುಚ್ಚಿತ್ತು. ಪ್ರಾರಂಭದಲ್ಲಿ ಸುಮಾರು ಒಂದು ತಿಂಗಳುಗಳ ಕಾಲ ನಡೆದ ಈ ಚಳವಳಿಯುದ್ದಕ್ಕೂ ದೇವಸ್ಥಾನದ ಬಾಗಿಲು ಮುಚ್ಚಿಯೇ ಇತ್ತು. ಅದೇ ಏಪ್ರಿಲ್‌ನಲ್ಲಿ ರಾಮೋತ್ಸವದ ತೇರು ಎಳೆಯುವ ಸಂದರ್ಭದಲ್ಲಿ ನಿಮ್ನ ವರ್ಗದವರಿಗೂ ಮತ್ತು ಸವರ್ಣೀಯರಿಗೂ ಬಲವಾದ ಮಾತಿನ ಚಕಮಕಿ ನಡೆದು ಅಂಬೇಡ್ಕರ್ ಅವರನ್ನೊಳಗೊಂಡಂತೆ ಕಲ್ಲು ತೂರಾಟಗಳಿಂದ ಗಾಯಗಳಾದವು.

ಈ ಹೋರಾಟದಿಂದ ದಲಿತರಲ್ಲಿ ಒಂದು ರೀತಿಯ ನವಚೈತನ್ಯ ಮೂಡಿತಲ್ಲದೆ, ಹೋರಾಟದ ಪ್ರಜ್ಞೆ ಬೆಳೆಯಿತು. ಅದೇ ಸಂದರ್ಭದಲ್ಲಿ ಅಂಬೇಡ್ಕರ್ ಅವರು 'ದಲಿತ ಭೂಹೀನರ, ರೈತರ, ಕೂಲಿ ಕಾರ್ಮಿಕರಿಗಾಗಿ ಎರಡು ಯೋಜನೆಗಳನ್ನು ಮುಂದಿಟ್ಟರು. ಮಹಾರ್ ವತನ್ ಎಂಬ ಬಿಟ್ಟಿ ಚಾಕರಿ ಪದ್ಧತಿಯನ್ನು ನಿರ್ಮೂಲನ ಮಾಡುವುದು. ಗೋಮಾಳ, ಅರಣ್ಯ ಭೂಮಿ ಮುಂತಾದ ಸರಕಾರಿ ಜಮೀನನ್ನು ಭೂಹೀನ ದಲಿತರಿಗೆ, ಬಡವರಿಗೆ ಹಂಚುವಂತೆ ಒತ್ತಾಯಿಸಿ ಹೋರಾಡಿದರು. ದಲಿತರ ಬದುಕಿನಲ್ಲಿ ಕ್ರಾಂತಿಕಾರಕ ಬದಲಾವಣೆ ತರಲೆತ್ನಿಸಿ ಜಾತಿರಹಿತ ಸಮಾಜದ ನಿರ್ಮಾಣದ ಉದ್ದೇಶದಿಂದ ಪ್ರತ್ಯೇಕ ಚುನಾಯಿಕದ ಮಹತ್ವವನ್ನರಿತ ಅಂಬೇಡ್ಕರ್ ಅವರು ದುಂಡು ಮೇಜಿನ ಸಭೆಯಲ್ಲಿ ಹಕ್ಕು ಪ್ರತಿಪಾದನೆ ಮಾಡಿದರು. ತನ್ನವರ ಯಾತನೆ, ನೋವುಗಳನ್ನು ತೆರೆದಿಟ್ಟರು. ಇದನ್ನರಿತ ಬ್ರಿಟಿಷರು ಅಂಬೇಡ್ಕರ್ ಪ್ರತಿಪಾದಿಸಿದ ವಿಚಾರಗಳನ್ನು ಒಪ್ಪಿದರು. ಪ್ರತ್ಯೇಕ ಮತದಾನದ ಹಕ್ಕನ್ನು ನೀಡಿ ಆದೇಶ ಹೊರ ಬೀಳುತ್ತಿದ್ದಂತೆ ದಲಿತರಿಗೆ ಹರಿದು ಬರಬೇಕಾಗಿದ್ದ ಹಕ್ಕಿನ ವಿರುದ್ಧ ಗಾಂಧೀಜಿಯವರು ಪೂನಾದ ಯರವಾಡ ಜೈಲಿನಲ್ಲಿ ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು. ದಲಿತರ ನಿಜವಾದ ನೇತಾರ ನಾನೇ ಎಂದು ಚಕ್ರಾಧಿವೇಶದಲ್ಲಿ ಹೇಳಿದ್ದ ಗಾಂಧೀಜಿ ದಲಿತರಿಗೆ ದೊರೆತ ಹಕ್ಕಿನ ವಿರುದ್ಧ ಉಪವಾಸ ಸತ್ಯಾಗ್ರಹ ಕೈಕೊಂಡಿದ್ದು ನಿಜಕ್ಕೂ ವಿಪರ್ಯಾಸದ ಸಂಗತಿ. ಜಾತಿರಹಿತ, ವರ್ಗರಹಿತ ಸಮಾಜ ಕಟ್ಟುತ್ತೇನೆ ಎಂದು ಹೇಳುತ್ತಲೇ ಗಾಂಧೀಜಿಯವರು ಪಕ್ಕಾ ಮೂಲಭೂತ ವಾದಿಯಾಗಿ ವರ್ತಿಸಿದ್ದೂ ದುರದೃಷ್ಟಕರವಾದುದು. ಬಿ.ಎಸ್.ಪಿಯ ಸರ್ವೋಚ್ಚ ನಾಯಕರಾಗಿದ್ದ ದಿವಂಗತ ಕಾನ್ಸಿರಾಮ್ ಅವರು ಅದೊಂದು ಕರಾಳ ದಿನವೆಂದು ಹೇಳಿದ್ದು ಇಲ್ಲಿ ನೆನಪಿಸಿಕೊಳ್ಳಬಹುದು.

ಗಾಂಧಿಯವರ ಉಪವಾಸ ಸತ್ಯಗ್ರಹವನ್ನು ಅಂತ್ಯಗೊಳಿಸುವಲ್ಲಿ ಅಂಬೇಡ್ಕರ್ ಪ್ರತಿಪಾದಿಸಿದ ದಲಿತರ ಹಕ್ಕನ್ನು ಬಿಟ್ಟು ಕೊಡುವುದರ ಮೂಲಕ ಅಂಬೇಡ್ಕರ್ ಅವರು ರಾಷ್ಟ್ರೀಯ ಪ್ರಜ್ಞೆಯನ್ನು ಮೆರೆದರು. ಆ ಮೂಲಕ

ಪ್ರತ್ಯೇಕ ಚುನಾವಣೆಯ ಬದಲಿಗೆ ಮೀಸಲು ಕ್ಷೇತ್ರಗಳನ್ನು ಪಡೆದರು. ಅಂಬೇಡ್ಕರ್ ಅವರು ಕಟ್ಟಬೇಕೆಂದಿದ್ದ ದಲಿತರ ಸ್ವಾತಂತ್ರ್ಯದ ಬದುಕಿಗೆ ಗಾಂಧೀಜಿಯವರು ಅಡ್ಡಗಾಲು ಹಾಕಿದ್ದರು ಎನ್ನುವುದು ಯಾರು ಮರೆಯುವಂತಿಲ್ಲ. ಮಹಿಳೆಯರಿಗಾಗಿ ಹಿಂದೂಕೋಡ್ ಬಿಲ್, ದಲಿತರಿಗಾಗಿ ಪ್ರತ್ಯೇಕ ಚುನಾಯಕಗಳನ್ನು ಅಂಬೇಡ್ಕರ್ ಅವರು ಕೇಳಿದ್ದು ಅವರು ಬಯಸಿದ ಜಾತಿರಹಿತ ಸಮಾಜ ನಿರ್ಮಾಣಕ್ಕಾಗಿ ಎನ್ನುವುದು ಸಂಘಪರಿವಾರದವರು ಮತ್ತು ಗಾಂಧೀಜಿಯವರು ಅರಿಯಲಿಲ್ಲ. ಅಂಬೇಡ್ಕರ್ ಅವರು ಸಾಮಾಜಿಕ, ಆರ್ಥಿಕ, ರಾಜಕೀಯ ಹೀಗೆ ಎಲ್ಲ ರಂಗಗಳಲ್ಲಿಯೂ ಸಮಾನತೆಗಾಗಿ ಶ್ರಮಿಸಿದ್ದಾರೆ.

ಸ್ವಾತಂತ್ರ್ಯ ನಂತರದಲ್ಲಿದ್ದ ಆರ್ಥಿಕ ವ್ಯವಸ್ಥೆಯನ್ನು ಪುನರ್ ರಚಿಸಲು ಇಲ್ಲಿಯ ಜಮೀನ್ದಾರಿ ಪದ್ಧತಿಯನ್ನು ಅಳಿಸಿಹಾಕಿ ಎಲ್ಲರಿಗೂ ಆರ್ಥಿಕ ನ್ಯಾಯ ಸಿಗಲು ದಲಿತ, ಹಿಂದುಳಿದ, ದುಡಿಯುವ ಜನತೆಯ ಹಿತಕಾಪಾಡಲು ಸಮಾಜವಾದವೊಂದೇ ಉತ್ತಮ ಮಾರ್ಗವೆಂದು ನಂಬಿದ್ದರು. ಅಂಬೇಡ್ಕರ್‌ರು ಸಮಾಜವಾದದ ಮೌಲ್ಯಗಳ ಬಗ್ಗೆ ಈ ಬಗೆಯಾದ ಆಸಕ್ತಿ ಹೊಂದಿದ್ದರೂ ಭಾರತೀಯ ಸಮಾಜವಾದಿಗಳ ಜೊತೆಗೆ ಬೆರೆಯಲಿಲ್ಲ. ಇದಕ್ಕೆ ಹಲವಾರು ಕಾರಣಗಳಿದ್ದವು.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅಂತರ್ಗತವಾಗಿದ್ದ ಸಾಮಾಜಿಕ ಅಸಮಾನತೆಗೆ ಅಂಬೇಡ್ಕರ್‌ರು ಸಮಾಜವಾದಿಗಳ ಗಮನವನ್ನು ಮೇಲಿಂದ ಮೇಲೆ ಸೆಳೆದಿದ್ದರು. ಆ ಬಗ್ಗೆ ಚರ್ಚೆಗೆ, ವಿಚಾರ ವಿನಿಮಯಕ್ಕೆ ಕರೆಕೊಟ್ಟಿದ್ದರು. ಸಮಾಜ ವ್ಯವಸ್ಥೆಯು ಕೇವಲ ಆರ್ಥಿಕ ಸ್ವರೂಪವನ್ನು ಆಧರಿಸಿರಲಿಲ್ಲ. ಅಲ್ಲಿ ಸಾಮಾಜಿಕ ಸ್ವರೂಪ ಕೂಡಾ ಪ್ರಮುಖವಾಗಿರುತ್ತದೆ. ಆರ್ಥಿಕ ಅಸಮಾನತೆ ಬದುಕಿನ ಭೌತಿಕ ಸ್ವರೂಪವನ್ನು ಘಾಸಿಗೊಳಸಿದೆ ಎಂದು ಅವರು ಅದನ್ನು ಮನಗಾಣಿಸಿಕೊಡಲು ಪ್ರಯತ್ನಿಸಿದರು.

ಆದರೆ, ಭಾರತದ ಸಮಾಜವಾದಿಗಳು ಯುರೋಪಿನಲ್ಲಿಯ ಸಮಾಜ ವ್ಯವಸ್ಥೆಯನ್ನು ಕಂಡು ತಪ್ಪಾಗಿ ಪ್ರಭಾವಿತರಾಗಿದ್ದರು. ಆರ್ಥಿಕ ಸ್ಥಿತಿಯೊಂದೇ ಸಮಾಜಕ್ಕೆ ಅಧಿಕಾರವನ್ನು ನೀಡಿ ಅನ್ಯಾಯವನ್ನು, ಅಸಮಾನತೆಯನ್ನು ತೊಡೆದು ಹಾಕಬಹುದೆಂಬ ತಮ್ಮ ಎಣಿಕೆಯನ್ನು ಭಾರತೀಯ ಸಮಾಜಕ್ಕೂ ಅನ್ವಯ ಮಾಡಲು ಹೋಗಿ ಸಮಾಜವಾದಿಗಳು ಎಡವಿದ್ದರು. ಇಲ್ಲಿಯ ಆರ್ಥಿಕ ಸ್ಥಿತಿಯ ಜೊತೆಗೆ ಸಾಮಾಜಿಕ ಸ್ಥಾನ ಮತ್ತು ಧಾರ್ಮಿಕ ಮನ್ನಣೆಯೂ ಅತಿ ಮುಖ್ಯ ಎಂಬುದನ್ನು ಗುರುತಿಸುವಲ್ಲಿ ಅವರು ವಿಫಲರಾದರು. ಇದೇ ಭಾರತೀಯ ಸಮಾಜವಾದಿಗಳ ದೋಷವೆಂದು ಅಂಬೇಡ್ಕರ್ ಎತ್ತಿ ಹೇಳಿದರು.

ಹೀಗೆ ಮಹತ್ವದ ಚಿಂತನೆ, ಹೋರಾಟ, ತ್ಯಾಗಗಳ ಮೂಲಕ ಅಂಬೇಡ್ಕರ್ ಅವರ ಹೋರಾಟ ಒಂದು ಶ್ರೇಷ್ಠ ಮಟ್ಟಕ್ಕೆ ತಲುಪಿತು. ಅನೇಕ ಜನಪರ ಕೆಲಸಗಳಿಂದಾಗಿ ಅಂಬೇಡ್ಕರ್ ದೇಶದಾದ್ಯಂತ ಮನೆಮಾತಾಗಿದ್ದರು. ಇದೇ ವೇಳೆಯಲ್ಲಿ ವಿದ್ಯಾರ್ಥಿದೆಸೆಯಿಂದಲೂ ಗಾಂಧೀಜಿಯವರ ಪ್ರಭಾವದಲ್ಲಿ ಬೆಳೆದ ಲೋಹಿಯಾ ಅವರು ವಿದೇಶದಲ್ಲಿ ಓದಿ ಅನೇಕ ಸಾಧನೆಗಳನ್ನು ಮಾಡಿದ್ದರು. ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ, ಲೋಹಿಯಾ ಗಾಂಧೀಜಿಯ ನೆರಳಲ್ಲಿಯೇ ಸಮಾಜವಾದ ಪ್ರತಿಪಾದಿಸಿದರೆ, ಅಂಬೇಡ್ಕರ್ ಅವರು ಗಾಂಧೀಜಿಯವರ ಹಿಂದೂವಾದದ ಚಿಂತನ ಧಾರೆಯ ವಿರುದ್ಧ ದಿಕ್ಕಿನಲ್ಲಿ ಸಮಾಜವಾದದ ಚಿಂತನೆಗೆ ತೊಡಗಿದವರು. ಎಂದಿಗೂ ಗಾಂಧೀಜಿ



ಯವರರೊಂದಿಗೆ ಹೊಂದಾಣಿಕೆ ಮಾಡಿಕೊಂಡವರಲ್ಲ.

ಲೋಹಿಯಾ ಅವರು ಅಪ್ಪಟ ರಾಷ್ಟ್ರೀಯ ಪ್ರಜ್ಞೆ ಇರತಕ್ಕಂತಹ ವ್ಯಕ್ತಿ. ೧೯೩೧ರಲ್ಲಿ ಜಿನೇವಾದಲ್ಲಿ ನಡೆಯುತ್ತಿದ್ದ ಲೀಗ್ ಆಫ್ ನೇಷನ್ಸ್ ಅಧಿವೇಶನದಲ್ಲಿ ಭಾರತದ ಪ್ರತಿನಿಧಿಯಾಗಿ ಬಿಕಾರ್‌ನ ಮಹಾರಾಜನನ್ನು ಬ್ರಿಟಿಷ್ ಸರಕಾರ ಕಳುಹಿಸಿತ್ತು. ಅದೇ ವೇಳೆಯಲ್ಲಿ ಭಗತ್ ಸಿಂಗ್, ಸುಖದೇವರ ನೇಣು ಹಾಗೂ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ ಮುಂತಾದ ಪ್ರತಿಭಟನೆಗಳ ಮೂಲಕ ಸದಾ ಉದ್ವಿಗ್ನಗೊಂಡು ಅಶಾಂತವಾಗಿದ್ದ ಭಾರತವನ್ನು ಬ್ರಿಟಿಷ್ ಪ್ರಭುತ್ವದಡಿಯ ಕಲ್ಯಾಣ ರಾಜ್ಯವನ್ನಾಗಿ ಬಿಂಬಿಸಲು ಬಿಕಾನೇರ್ ಮಹಾರಾಜನ ಉದ್ದೇಶಗಳನ್ನು ಪತ್ರಿಕೆಗಳ ಮೂಲಕ ಅರಿತ ಲೋಹಿಯಾ ಜಿನೇವಾಗೆ ತೆರಳಿ, ಅಲ್ಲಿಯ ಭಾರತೀಯ ಗೆಳೆಯನ ಸಹಾಯದಿಂದ ಅಧಿವೇಶನ ನಡೆಯುತ್ತಿದ್ದ ಸಭಾಗ್ರಹದ ಪ್ರೇಕ್ಷಕರ ಗ್ಯಾಲರಿಗೆ ಹೋಗಿ ಬಿಕನೇರ್‌ನ ಸರದಿ ಬಂದಾಗ, ಪ್ರತಿಭಟನೆಯ ರೂಪದಲ್ಲಿ ಸಿಳ್ಳೆ ಹೊಡೆದಾಗ ಸಭೆಯಲ್ಲಿ ಕೋಲಾಹಲವುಂಟಾಯಿತು. ಲೋಹಿಯಾ ಸಭೆಯಿಂದ ಹೊರಹಾಕಲ್ಪಟ್ಟರು. ಇದು ಭಾರತದಲ್ಲೆಲ್ಲಾ ಸುದ್ದಿಯಾಯಿತು.

೧೯೩೨ರ ಹೊತ್ತಿಗೆ 'ಉಪ್ಪು ಮತ್ತು ಸತ್ಯಾಗ್ರಹ' ಎಂಬ ಸಂಶೋಧನಾ ಮಹಾ ಪ್ರಬಂಧವನ್ನು ಸಾದರಪಡಿಸಿ ಡಾಕ್ಟರೇಟ್ ಪದವಿಯನ್ನು ಪ್ರೊ॥ ಜೆಂಬಾರ್ಟ ಅವರ ಮಾರ್ಗದರ್ಶನದಲ್ಲಿ ಪಡೆದು ತಾಯಿನಾಡಿಗೆ ಮರಳುವರು. ಭಾರತಕ್ಕೆ ಬಂದಮೇಲೆ ಮಹಾತ್ಮಾ ಗಾಂಧೀಜಿಯವರ ಸಂಪರ್ಕದಿಂದಾಗಿ ಕಾಂಗ್ರೆಸ್ ಪಾರ್ಟಿಗೆ ಸೇರ್ಪಡೆಯಾದರು. ಕ್ರಮೇಣ ಗಾಂಧಿ, ನೆಹರುಜಿಯವರಿಗೆ ಹತ್ತಿರದವರಾದರು. ಕಾಂಗ್ರೆಸ್ ಪಕ್ಷದಲ್ಲಿರುವ ಜಡತ್ವವನ್ನು ಕಡಿಮೆಗೊಳಿಸಲು ಕಾಂಗ್ರೆಸ್ ಸಮಾಜವಾದಿ ಬಳಗವನ್ನು ರೂಪಿಸಿಕೊಂಡು, ಸಮಾಜವಾದಿ ಚಿಂತನೆಗೆ ಮುಂದಾದರು. ಜಯಪ್ರಕಾಶ ನಾರಾಯಣ, ಪೂರ್ಣಾನಂದ ಮುಂತಾದ ಸಮಾಜವಾದಿ ಗೆಳೆಯರ ಸಂಪರ್ಕ ಬಂದಿತು.

ಲೋಹಿಯಾ ಬಳಗದವರು ಗಾಂಧೀಜಿಯ ಜೊತೆಗಿದ್ದುಕೊಂಡೇ ಸಮಾಜವಾದವನ್ನು ಪ್ರತಿಪಾದಿಸಿದರು. ಗಾಂಧೀಜಿಯವರ ಜೊತೆಗೆ ಅನೇಕ ಭಿನ್ನಾಭಿಪ್ರಾಯಗಳಿದ್ದರೂ, ಸ್ವಾತಂತ್ರ್ಯ ಹೋರಾಟವನ್ನು, ಜಾಗತಿಕ ಕಾರ್ಮಿಕ ಕ್ರಾಂತಿಯನ್ನು ಮೈಗೂಡಿಸಿಕೊಂಡು ನೋಡುವ ತಾತ್ವಿಕ ಒತ್ತಾಯಕ್ಕೆ ಒಳಗಾದರು.

ರಾಷ್ಟ್ರೀಯ ಆಂದೋಲನವನ್ನೇ ಒಂದು ದುಡಿಯುವ ವರ್ಗದ ಕ್ರಾಂತಿಯನ್ನಾಗಿ ಪರಿವರ್ತಿಸುವ ಹಂಬಲವುಳ್ಳವರಾಗಿದ್ದರು. ಅವರಿಗೆ ರಷ್ಯಾದ ಕ್ರಾಂತಿ ಸ್ಫೂರ್ತಿಯಾಗಿತ್ತೇ ಹೊರತು, ಅನುಕರಣೀಯ ಮಾದರಿಯಾಗಿರಲಿಲ್ಲ. ಈ ಹಿನ್ನೆಯಲೆಯಲ್ಲಿ ಕಾಂಗ್ರೆಸ್ ಮತ್ತು ಸಮಾಜವಾದಿಗಳ ಗುಂಪಿನಲ್ಲಿ ತಾತ್ವಿಕ ಭಿನ್ನಾಭಿಪ್ರಾಯವಿದ್ದುದು ಕಂಡುಬರುತ್ತದೆ.

ಭಾರತೀಯ ಕಮ್ಯೂನಿಸ್ಟರ ಪಿತೂರಿ, ಕಾಂಗ್ರೆಸ್ಸಲ್ಲಿಯ ತಳಮಳ ಇವೆಲ್ಲವುಗಳಲ್ಲದೆ ಹಿಂದೂವಾದಿಯಾಗಿದ್ದ ಗಾಂಧೀಜಿಯವರ ಚಿಂತನೆಯ ನೆಲೆಯಲ್ಲಿ ಲೋಹಿಯಾ ಅವರು ಸಾಗಿದ್ದರಿಂದ ಅವರ ಪೂರ್ವಾರ್ಧ ಸಮಾಜವಾದಿ ಹೋರಾಟದ ಬದುಕು ನಿಶ್ಚಿತ ನೆಲೆ ಕಾಣಲಿಲ್ಲ. ಗಾಂಧೀಜಿಯವರು ದುಡಿಯುವ ವರ್ಗವನ್ನು ಗೌರವಿಸುತ್ತಿದ್ದರು. ಆದರೆ, ಒಡೆತನದ ಪ್ರಶ್ನೆ ಬಂದಾಗ ಗಾಂಧೀಜಿ ಆ ಸಂದರ್ಭದಿಂದ ನುಣುಚಿಕೊಳ್ಳುತ್ತಿದ್ದರು. ಗಾಂಧೀಜಿಯವರ ಮೇಲಿದ್ದ ಅತಿಯಾದ ನಂಬಿಕೆ, ಗೌರವದಿಂದಲೇ ಸಮಾಜವಾದ ಪ್ರಖರವಾಗಿ ಬೆಳೆಯದೆ ಆರ್ಥಿಕ ನೆಲೆಯಿಂದ ಸಾಮಾಜಿಕ ನೆಲೆಗೆ ಸಂಧಿಸಲಿಲ್ಲವೆಂದು ಹೇಳಬೇಕಾಗುತ್ತದೆ. ಗಾಂಧೀಜಿಯವರ ಮರಣಾನಂತರವೇ ಲೋಹಿಯಾ ಅವರು ನಿಜವಾದ ಸಮಾಜವಾದಿಯಾಗಿ ಹೊರಹೊಮ್ಮಿದರು ಮತ್ತು ಅವರ ಹೋರಾಟಕ್ಕೊಂದು ಅರ್ಥ ಕೂಡ ಬಂದಿತು. ಈ ನಡುವೆ ಗೋವಾ ಹೋರಾಟ, ನೇಪಾಳ ಹೋರಾಟ ಮುಂತಾದ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ದೇಶ ವಿಭಜನೆ ವಿಷಯದಲ್ಲಿ ಲೋಹಿಯಾ ಅವರ ಸಹಮತವಿರಲಿಲ್ಲ. ಹಾಗೆಯೇ ಅಂಬೇಡ್ಕರ್ ಅವರೂ ದೇಶ ವಿಭಜನೆಗೆ ವಿರೋಧ ವ್ಯಕ್ತ ಪಡಿಸಿದ್ದರು.

ಗಾಂಧೀಜಿಯವರು ಸ್ವಜಾತಿಯವರು ಎಂಬ ಕಾರಣಕ್ಕಾಗಿಯೋ ಏನೋ ಅವರು ಬದುಕಿರುವವರೆಗೂ ಅವರೊಂದಿಗಿರಲು ಲೋಹಿಯಾ ಅವರು ನಿರ್ಧರಿಸಿದ್ದರು. ಗಾಂಧೀಜಿ ಹತ್ಯೆ ನಂತರ ಲೋಹಿಯಾ ಅವರು ಜಾತಿ, ವರ್ಣ, ಅಸಮಾನತೆಗಳ ಕುರಿತು ಹೆಚ್ಚು ಮಾತನಾಡಿದರು. ಗಾಂಧೀಜಿಯವರ ನಿಧನದವರೆಗೂ ಯಾವ ಸಮಾಜವಾದಿಯೂ ಅಂಬೇಡ್ಕರ್ ಅವರಂತಹ ಶ್ರೇಷ್ಠ ಸಮಾಜವಾದಿಯ ಗುಣವನ್ನು ಗೌರವಿಸಲಿಲ್ಲ, ಅವರತ್ತ ಗಮನ ಹರಿಸಲಿಲ್ಲ. ಆದರೆ, ಲೋಹಿಯಾ ಅವರು ಅಂಬೇಡ್ಕರ್ ರಲ್ಲಿದ್ದ ಸಮಾಜವಾದ ಚಿಂತನೆಯ ಬಗ್ಗೆ ಅಪಾಯ ಗೌರವವಿಟ್ಟು ಕೊಂಡಿದ್ದರು. ಅಂಬೇಡ್ಕರ್‌ರಂತೆಯೇ ಜಮೀನ್ದಾರಿ ಪದ್ಧತಿ ವಿರೋಧಿಸಿ 'ಉಳುವವನಿಗೇ ಭೂಮಿ' ಎಂಬ ಹೋರಾಟ ಮಾಡಿದರು. ಭೂ ಪರಭಾರೆ ಮೇಲೆ ನಿಯಂತ್ರಣ ತರಲು ಚಿಂತಿಸಿದರು. ಹೆಚ್ಚುವರಿ ಭೂಮಿಯನ್ನು ಬಡವರಿಗೆ ಹಂಚುವುದು, ಈ ತರಹದ ಅನೇಕ ವಿಚಾರಗಳಲ್ಲಿ ಅಂಬೇಡ್ಕರ್- ಲೋಹಿಯಾ ಒಂದೇ ನಿಟ್ಟಿನಲ್ಲಿ ಚಿಂತಿಸಿದವರಾಗಿದ್ದರು.

ಲೋಹಿಯಾ ಅವರು ಸ್ವಾತಂತ್ರ್ಯೋತ್ತರ ನಂತರ ಡಾ॥ ಅಂಬೇಡ್ಕರ್ ಅವರೊಂದಿಗೆ, ಅದರಲ್ಲೂ ಕೊನೆಕೊನೆಗೆ ಆತ್ಮೀಯರಾಗತೊಡಗಿದ್ದರು. ಅವರನ್ನು ಕಂಡು ಅವರೊಂದಿಗೆ ಜಾತಿ ಸಮಸ್ಯೆ ಲಿಂಗಭೇದ ಸಮಸ್ಯೆ, ಮುಂತಾದ ಸಮಕಾಲೀನ ಸಮಸ್ಯೆಗಳನ್ನು ಚರ್ಚಿಸಲು ಆಸಕ್ತರಾಗಿದ್ದರು. ಡಾ॥ ಅಂಬೇಡ್ಕರ್‌ರ ಸಮಾಜವಾದಿ ನೀತಿ, ಲೋಹಿಯಾ ಸಮಾಜವಾದ ಸಾಮ್ಯವಾಗಿರುವುದರಿಂದ; ತಾವೆಲ್ಲ ಸೇರಿ ಕೆಲಸ ಮಾಡುವ ಇಂಗಿತವನ್ನು

...ವರು ಡಾ॥ ಅಂಬೇಡ್ಕರ್‌ರೊಂದಿಗೆ ವ್ಯಕ್ತಪಡಿಸಿದ್ದರು. ಸಮಕಾಲೀನ ಸಮಸ್ಯೆಗಳನ್ನು ಚರ್ಚಿಸುವುದಕ್ಕಾಗಿ "ಮ್ಯಾನ್ ಕೈಂಡ್" ಎಂಬ ಪತ್ರಿಕೆಯನ್ನು ಲೋಹಿಯಾ ಅವರು ತಮ್ಮ ಸಂಪಾದಕತ್ವದಲ್ಲಿ ಹೊರತರುತ್ತಿದ್ದರು. ಆ ಪತ್ರಿಕೆಗೆ ಲೇಖನವನ್ನು ಬರೆಯಲು ಕೇಳಿಕೊಳ್ಳುತ್ತ, ಡಾ॥ ಅಂಬೇಡ್ಕರರಿಗೆ ಬರೆದ ಪತ್ರದಲ್ಲಿ "ದೇಶದಲ್ಲಿ ಪ್ರಚಲಿತವಿರುವ ಜಾತಿ ಪದ್ಧತಿಯ ಯಾವುದಾದರೊಂದು ಮುಖವನ್ನು ನೀವು ಆಯ್ದುಕೊಂಡರೆ ಭಾರತದ ಜನ ಬರಿ ಸಿಟ್ಟಿನಿಂದಷ್ಟೇ ಅಲ್ಲ, ದಂಗು ಬಡಿದು ಕುಳಿತುಕೊಳ್ಳುವಂತೆ ಮಾಡುವಂಥ ದೇನಾದರೂ ಬರೆಯಿರೆಂದು ಮನವಿ ಮಾಡಿಕೊಳ್ಳುತ್ತೇನೆ... ಈಗಲೂ ಕೂಡ ಕೋಪದೊಂದಿಗೆ ಸಹಾನುಭೂತಿ ಬೆರೆಯಬೇಕೆಂದೇ ಆಶಿಸುತ್ತೇನೆ, ಹಾಗೂ ನೀವು ಬರಿ ಅನುಸೂಚಿತ ಜಾತಿಗಳಿಷ್ಟೇ ಅಲ್ಲ, ಇಡೀ ಭಾರತೀಯರ ನಾಯಕರಾಗಬೇಕೆಂದು ಬಯಸುತ್ತೇನೆ."

(ಲೋಹಿಯಾ ಅಂಬೇಡ್ಕರ್‌ರಿಗೆ ಬರೆದ ಪತ್ರ ಪು.೩೭, ೦೧.೧೦.೧೯೫೬) ಈ ಹೇಳಿಕೆಯಲ್ಲಿ ಮೂರು ಅಂಶಗಳು ಕಂಡು ಬರುತ್ತವೆ. ಮೊದಲನೆಯದು, ಜಾತಿ ಪದ್ಧತಿಯನ್ನು ಕುರಿತಾಗಿ ಅಂಬೇಡ್ಕರ್‌ರು ಮಾಡಿರುವ ಕೆಲಸದ ಸಾಮರ್ಥ್ಯ. ಅದಕ್ಕಾಗಿ ಆ ವಿಷಯವನ್ನು ಸಮರ್ಥವಾಗಿ ಬರೆಯಬಲ್ಲರೆಂಬ ವಿಶ್ವಾಸದ ಅಭಿವ್ಯಕ್ತಿ. ಟೀಕಿಸುವ, ದೂಷಿಸುವುದರಿಂದ ಜನ ಸಿಟ್ಟಿಗೇಳಬಹುದು; ಹಾಗಾಗದೆ, ಜನ ದಂಗು ಬಡಿಯಬೇಕೆಂಬ ಸೂಚನೆಯಿದೆ. ದಂಗು ಬಡಿದಾಗ ಜನ ಗಾಬರಿಯಾಗುವುದು ಇಲ್ಲವೆ ತಮಗೆ ಗೊತ್ತಿದ್ದು, ಗೊತ್ತಿಲ್ಲದ ವಿಷಯ ಹೇಗೆ ಹೇಳಿದ್ದಾರಲ್ಲ ಎಂದು ಭಾವನಾತ್ಮಕವಾಗಿ ಅದನ್ನು ಅಪ್ಪಿಕೊಳ್ಳುವಂತಾಗ ಬೇಕೆಂದು ಲೋಹಿಯಾ ಅವರು ಬಯಸುತ್ತಾರೆ. ಕೋಪದೊಂದಿಗೆ ಸಹಾನುಭೂತಿ ಬೆರೆಯುವ ಸೂಚನೆ ಎರಡನೆಯದು. ಕೋಪದಿಂದ ಸಾಧಿಸಲಾಗದ್ದನ್ನು ಸಹಾನುಭೂತಿ ಯಿಂದ ಸಾಧಿಸಬಹುದೆಂಬ ತರ್ಕ ಅವರದು. ಅದಕ್ಕಾಗಿ ಕೋಪದಲ್ಲಿ ಸಹನೆ ತಂದುಕೊಳ್ಳುವುದು ಅವಶ್ಯವಿದೆ. ಅದರಿಂದ ಉಪಯುಕ್ತತೆ ಅಧಿಕವೆಂದು ಮನವರಿಕೆಯಾಗು ತ್ತದೆ.

ಮೂಲತಃ ನೊಂದ ಜನಾಂಗದ ವ್ಯಕ್ತಿ ಡಾ॥ ಅಂಬೇಡ್ಕರ್‌ರಲ್ಲಿ ಕೋಪ ಸಹಜವಾಗಿರುವುದು ಕಂಡುಬರುತ್ತದೆ. ಅವರು ಬಹಿರಂಗ ಸಭೆಗಳಲ್ಲಿ ಆ ತರಹದ ಕೋಪವನ್ನು ಪ್ರಕಟಿಸುತ್ತಿದ್ದರಂತೆ; ಅದಕ್ಕೆ ಲೋಹಿಯಾ ಅವರು ಅದನ್ನು ಬರಹದಲ್ಲಿ ಸಹಾನುಭೂತಿಯಾಗಿ ಪರಿವರ್ತಿಸಿಕೊಳ್ಳಲು ಇಚ್ಛಿಸಿದ್ದರು. ನೀವು ಕೇವಲ ದಲಿತ ನಾಯಕರಲ್ಲ; ಇಡೀ ಭಾರತೀಯರ ನಾಯಕರಾಗಬೇಕೆನ್ನುವ ಅದಮ್ಯ ಪ್ರೀತಿಯ ಬಯಕೆಯನ್ನು ಹೊಂದಿದ್ದರು. ದಲಿತರ ಸಮಸ್ಯೆಗಳನ್ನು ಕೈಗೆತ್ತಿಕೊಂಡಾಗ ದಲಿತೇತರ ವ್ಯಕ್ತಿ ಇಡೀ ಸಮಾಜದ ನಾಯಕನಾಗಬಲ್ಲ. ದಲಿತರಲ್ಲೇ ಬೆಳೆದವನು ದಲಿತಪರ ಹೋರಾಡಿದಾಗ ಅವನನ್ನು ದಲಿತರ ನಾಯಕ ಮಾತ್ರವೆಂದು ಗುರುತಿಸುವ ಸಮಾಜದ ಕಾಮಾಲೆ ಕಣ್ಣಿಗೆ ಕಾಣುವುದು ಸಹಜ. ಅಂತರಾಳದಲ್ಲಿ ಡಾ॥ ಅಂಬೇಡ್ಕರ್ ಅವರು ದಲಿತ ನಾಯಕರಾಗಿದ್ದರೂ; ಜಾಗತಿಕ ದೃಷ್ಟಿಯಲ್ಲಿ ಅವರು ರಾಷ್ಟ್ರವಷ್ಟೇ ಅಲ್ಲ, ಜಾಗತಿಕ ನಾಯಕರೆಂದು ಹೇಳಿದರೆ ತಪ್ಪಾಗಲಾರದರು.

ಅಜ್ಞಾನ, ಅಂಧಕಾರ, ಜಾತಿ, ಮೇಲು ಕೀಳು ಸಮಸ್ಯೆಗಳಿಂದ ತುಂಬಿರುವ ಭಾರತದಲ್ಲಿ ಬೌದ್ಧಿಕತೆಯ ಕೊರತೆ ಸದಾ ಇರುವಂಥದ್ದು; ಆಗಾಗ ಬೌದ್ಧಿಕ ಕೊರತೆಯನ್ನು ತುಂಬಲು ಜ್ಞಾನಿಗಳು ಉದಯಿಸುತ್ತಾರೆ. ಅವರ ದುಡಿಮೆ

ಡಾ॥ ಲೋಹಿಯಾ ಅವರು ತಮ್ಮ ಸ್ನೇಹಿತರಿಗೆ ಬರೆದ ಪತ್ರವೊಂದರಲ್ಲಿ ಭಾರತದ ದಲಿತರಿಗೆ ಒಂದು ಸಂದೇಶವನ್ನು ಕೊಟ್ಟಿದ್ದಾರೆ. ಅದೇನೆಂದರೆ; ಡಾ॥ ಅಂಬೇ ಡ್ಕರ್ ಮತ್ತು ಶ್ರೀಜಗಜೀವನ್ ರಾಮ್ ಇವರಿಬ್ಬರು ಆಧುನಿಕ ಭಾರತದ ಹರಿಜನರ ಎರಡು ಮಾದರಿಗಳೆಂದು ಗುರುತಿಸಿದ್ದಾರೆ. ಈ ಎರಡು ಮಾದರಿಗಳ ಸ್ವರೂಪವನ್ನು ವಿವರಿಸುತ್ತ; "ಡಾ॥ ಅಂಬೇಡ್ಕರ್ ವಿದ್ವಾಂಸರಾಗಿದ್ದರು, ಪ್ರಾಮಾಣಿಕರಾದ, ಸಮಗ್ರತೆಯನ್ನುಳ್ಳ ಹಾಗು ಸ್ವತಂತ್ರರಾದ ವ್ಯಕ್ತಿಯಾಗಿದ್ದರು; ಬಾಹ್ಯ ಜಗತ್ತಿಗೆ ನೇರಭಾರತದ ಪ್ರತೀಕವೆಂದು ಅವರನ್ನು ಹೆಸರಿಸಬಹುದು; ಅವರು ಕಹಿಯಾಗಿದ್ದರು. ಹಾಗೂ ಪ್ರತ್ಯೇಕವಾಗಲು ಬಯಸುತ್ತಿದ್ದರು." (ಪು.೪೨) ಇದುವೆ ಆಧುನಿಕ ದಲಿತರಲ್ಲಿ ಬಂದಿದೆ, ಎಂದು ಜಗಜೀವನ್‌ರಾಮ್ ಅವರು ಭಾರತೀಯ ಹಿಂದೂಗಳೊಂದಿಗೆ ಸದ್ಭಾವನೆ ಬೆಳೆಸಿಕೊಂಡಿದ್ದಾರೆ. ಅವರೊಂದಿಗೆ ಮೃದುವಾಗಿ ನಡೆದುಕೊಳ್ಳುತ್ತಾರೆ. ಆದರೆ ಹರಿಜನರ ಪ್ರತ್ಯೇಕ ಸಭೆ ಸಮಾರಂಭಗಳಲ್ಲಿ ರೋಷದಿಂದ ಕಟು ದನಿಯಲ್ಲಿ ಮಾತಾಡುತ್ತಾರೆಂದು, ಜನರಿಂದ ತಿಳಿದಿರುವುದಾಗಿ, ಲೋಹಿಯಾ ಅವರು ಪ್ರಸ್ತಾಪಿಸಿದ್ದಾರೆ.

ಅವಶ್ಯಕವಾಗಿರುತ್ತದೆ. ಅದನ್ನು ಅರಿತುಕೊಂಡಿದ್ದ ಲೋಹಿಯಾ ಅವರು ತಮ್ಮ ಕಾಲಸಂದರ್ಭದಲ್ಲಿ ದೇಶದಲ್ಲಿ ಆವರಿಸಿದ್ದ ಬೌದ್ಧಿಕ ಕುಸಿತವನ್ನು ಗುರುತಿಸಿದ್ದರು. ಅದನ್ನು ಹೋಗಲಾಡಿಸಲು ಶ್ರಮಿಸಿದರು. ಅದಕ್ಕಾಗಿಯೇ ಮನಬಿಚ್ಚಿ ಮಾತಾಡಿದವರು. "ನಮ್ಮ ದೇಶವನ್ನಾವರಿಸಿದ ಸಂಪೂರ್ಣ ಬೌದ್ಧಿಕ ಕುಸಿತವನ್ನು ಒತ್ತಿ ಹೇಳಬೇಕಾಗಿದೆ. ನಿಮ್ಮಂಥ ವ್ಯಕ್ತಿ ಮುಕ್ತವಾಗಿ ಮಾತನಾಡುವುದು ತೀರ ಅವಶ್ಯಕವಾಗಿದೆ ಎಂದು ನನ್ನ ಅನಿಸಿಕೆ" (ಪು. ೩೭, ಪತ್ರ ೦೧.೧೦.೧೯೫೬) ಎಂದು ಡಾ॥ ಅಂಬೇಡ್ಕರ್‌ರರಿಗೆ ಬರೆದ ಪತ್ರದ ಸಾಲುಗಳು ಲೋಹಿಯಾವರು ದೇಶದಲ್ಲಿ ಕುಸಿದಿರುವ ಬೌದ್ಧಿಕತೆಗೆ ಎಂಥ ವ್ಯಕ್ತಿಗಳಿಂದ, ಅದರ ಕೊರತೆಯನ್ನು ತುಂಬಿಕೊಳ್ಳಲು ಸಾಧ್ಯವೆಂಬುದನ್ನು ಮನಗಂಡಿದ್ದರು. ಅದಕ್ಕಾಗಿಯೇ ಅಂಬೇಡ್ಕರ್ ಅವರಿಗೆ ಆ ಕುರಿತಾಗಿ ಕೆಲಸ ಮಾಡಲು ಪ್ರೇರಣೆಯನ್ನು ನೀಡುವ ಕೆಲಸ ಮಾಡಿದ್ದಾರೆ.

ಲೋಹಿಯಾ ಮತ್ತು ಅಂಬೇಡ್ಕರ್‌ರಲ್ಲಿ ಪರಸ್ಪರ ಪತ್ರಗಳ ಮೂಲಕ ವಿಚಾರ ವಿನಿಮಯಗಳಾಗುತ್ತ; ಒಂದು ಸೈದ್ಧಾಂತಿಕ ಪ್ಲಾಟ್ ಫಾರ್ಮ್‌ಗೆ ಬರುವುದರೊಳಗಾಗಿ ಅಂಬೇಡ್ಕರ್ ಅವರು ನಿಧನರಾದರು. ಲೋಹಿಯಾ ಅವರು ಅಂಬೇಡ್ಕರ್‌ರನ್ನು ಕಾಣಲು ಸದಾ ಕಾತುರರಾಗಿದ್ದರು. ಆ ಅಂಶಗಳನ್ನು ಪತ್ರಗಳಲ್ಲಿ ಕಾಣುತ್ತೇವೆ. ಅವರಷ್ಟೇ ಅಂಬೇಡ್ಕರ್‌ರು ಕೂಡ ಲೋಹಿಯಾ ಅವರನ್ನು ಸ್ವಾಗತಿಸುವ ಬಯಕೆಯುಳ್ಳವರಾಗಿದ್ದರು. ಅಂಬೇಡ್ಕರ್‌ರರಿಗೆ ಅನಾರೋಗ್ಯವಿದ್ದ ಸುದ್ದಿಯನ್ನು ಕೇಳಿ, ಆರೋಗ್ಯದ ಕಾಳಜಿವಹಿಸಿಕೊಳ್ಳಲು ತಮ್ಮ ಕಳಕಳಿಯನ್ನು ತೋಡಿಕೊಂಡಿದ್ದರು. ಡಾ॥ ಅಂಬೇಡ್ಕರ್ ಅವರ ಆಕಸ್ಮಿಕ ಸಾವಿನಿಂದ ನನಗಾಗಿರುವ ವ್ಯಥೇ ವೈಯಕ್ತಿಕವಾದುದೂ ಕೂಡ ಅನ್ನುವುದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲಿರಿ. ಅವರನ್ನು ನಮ್ಮ ಕಕ್ಷೆಯೊಳಗೆ ತರಬೇಕೆನ್ನುವುದು ಸಂಘಟನೆಯ ದೃಷ್ಟಿಯಿಂದಷ್ಟೇ ಅಲ್ಲದೆ ತಾತ್ವಿಕ ದೃಷ್ಟಿಯಿಂದ ಕೂಡ ಮುಖ್ಯವಾಗಿತ್ತು, ಹಾಗೂ ಆ ಕಾಲ ಸಂಪೂರ್ಣ ಹತ್ತಿರವಾಗುತ್ತಿರುವಂತೆ ಕಾಣುತ್ತಿತ್ತು... ನನ್ನ ದೃಷ್ಟಿಯಲ್ಲಿ ಡಾ॥ ಅಂಬೇಡ್ಕರ್ ಭಾರತದ ರಾಜಕೀಯದ ಮಹಾನ್ ನಾಯಕರಾಗಿದ್ದರು. ಹಾಗೂ ಗಾಂಧೀಜಿಯವರೊಬ್ಬರನ್ನು ಬಿಟ್ಟು ಇನ್ನಾವುದೇ ದೊಡ್ಡ ಸವರ್ಣೀಯ ಹಿಂದೂ ನಾಯಕರಷ್ಟೇ ದೊಡ್ಡ ನಾಯಕರಾಗಿದ್ದರು. ಹಿಂದೂ ಧರ್ಮದಲ್ಲಿನ ಜಾತಿಪದ್ಧತಿಯನ್ನು ಒಂದಿಲ್ಲೊಂದು ದಿನ ನಾಶ ಪಡಿಸಬಹುದೆಂಬ ಆತ್ಮವಿಶ್ವಾಸ ಹಾಗೂ ನೆಮ್ಮದಿ ಈ ಅಂಶದಿಂದು ನನಗೆ ದೊರಕಿತ್ತು." (ಪು. ೪೧ ಲೋಹಿಯಾ ಪತ್ರ ೦೧.೦೭.೧೯೫೭) ತಮ್ಮ ಸಂತಾಪದೊಂದಿಗೆ, ತಾವು ಅಂಬೇಡ್ಕರ್‌ರನ್ನು ಹೇಗೆ ಗ್ರಹಿಸಿದ್ದರು ಎಂಬುದನ್ನು ಇಲ್ಲಿ ದಾಖಲಿಸಿದ್ದಾರೆ.

ಸಂಘಟನೆ ಮತ್ತು ತಾತ್ವಿಕ ದೃಷ್ಟಿಯಿಂದ ಅಂಬೇಡ್ಕರ್ ಅವರು ತಮಗೆ ಸಮೀ ಪವಾಗುತ್ತಿದ್ದುದ್ದನ್ನು; ಅದು ಕೈಗೂಡದಿರುವುದಕ್ಕೆ ದುಃಖವನ್ನು ತೋಡಿಕೊಂಡಿದ್ದಾರೆ. ಇನ್ನೊಂದು ಮುಖ್ಯವಾದ ಅಂಶವನ್ನು ದಾಖಲಿಸಿದ್ದಾರೆ. ಅದೇನೆಂದರೆ 'ಡಾ॥ ಅಂಬೇಡ್ಕರ್ ಈ ದೇಶದ ರಾಜಕೀಯ ಮಹಾನ್ ನಾಯಕರೆಂದು; ಇನ್ನೊಂದು ಹೆಜ್ಜೆ ಮುಂದೆ ಹೋಗಿ ಗಾಂಧೀಜಿಯನ್ನು ಬಿಟ್ಟರೆ ಯಾವುದೇ ಸವರ್ಣೀಯ ಹಿಂದು ನಾಯಕರಷ್ಟೇ ದೊಡ್ಡ ನಾಯಕರಾಗಿದ್ದರೆಂಬುದು.' ಜಾತೀಯ ಮನಸ್ಸುಗಳು ಡಾ॥ ಅಂಬೇಡ್ಕರ್‌ರನ್ನು ಮಹತ್ವದ ವ್ಯಕ್ತಿ, ರಾಷ್ಟ್ರ ನಾಯಕರೆಂದು ಒಪ್ಪದೇ ಇರುವಾಗ ಲೋಹಿಯಾ ಅವರಂಥ ವಿಚಾರವಾದಿಗಳು ಅವರ ನಾಯಕತ್ವವನ್ನು ಗುರುತಿಸಿದ್ದು ಸೂಕ್ತವಾದುದ್ದೆ. ಅಲ್ಲದೆ ಡಾ॥ ಅಂಬೇಡ್ಕರ್‌ರಂಥ ನಾಯಕರಿದ್ದಾಗ ಹಿಂದೂ ಧರ್ಮದಲ್ಲಿನ ಜಾತಿ ವ್ಯವಸ್ಥೆಯನ್ನು ನಿರ್ಮೂಲನ ಮಾಡುವ ಆಶಾದಾಯಕತೆ ಅವರಲ್ಲಿ ಅಂಕುರಿಸಿತ್ತು. ಆದರೆ ಅದು ಈಡೇರಲಿಲ್ಲವೆಂದು ನಾವು ಹೇಳಬಹುದು.

ಡಾ॥ ಅಂಬೇಡ್ಕರ್‌ರು ಲೋಹಿಯಾ ಅವರೊಂದಿಗೆ ಸೇರಿ ಕೆಲಸ ಮಾಡಬೇಕೆಂದುಕೊಂಡಿದ್ದರು. ಆ ವಿಷಯ ಚರ್ಚಿಸಲು ಅವರ ಸ್ನೇಹಿತರು ಅಂಬೇಡ್ಕರ್‌ರಲ್ಲಿಗೆ ಹೋಗಿದ್ದಾಗ, ಅವರೊಂದಿಗೆ ಅಭಿವ್ಯಕ್ತಿಸಿದ ಭಾವನೆಗಳು, ಲೋಹಿಯಾ ಅವರಿಗೆ, ಅವರ ಸ್ನೇಹಿತರು ಬರೆದ ಪತ್ರದಲ್ಲಿ ಹೀಗಿವೆ; "ನಮ್ಮ ಜೊತೆಗಿನ ಮಾತುಕತೆಯಲ್ಲಿ ಅವರು ನಮ್ಮ ದೃಷ್ಟಿಕೋನವನ್ನರಿತುಕೊಳ್ಳಲು ತುಂಬ ಕಾತರರಾಗಿದ್ದರು. ಸಹಾನುಭೂತಿ, ಮಮತೆಯ ಮೂರ್ತಿಯಾಗಿದ್ದರು." (ಪು. ೩೫. ಲೋಹಿಯಾ ಸ್ನೇಹಿತರ

ಪತ್ರ) ಎಂದು ಹೇಳಿರುವಲ್ಲಿ ಅಂಬೇಡ್ಕರ್‌ರ ಮನೋಭಿತ್ತಿಯನ್ನು ಕಾಣುತ್ತೇವೆ. ಅಲ್ಲದೆ ಅವರು ಲೋಹಿಯಾ ಅವರಿಗೆ ಹೀಗೆ ಬರೆಯುತ್ತಾರೆ. "ನಾವು ಪರಸ್ಪರ ಒಟ್ಟುಗೂಡಲು ಏನು ಮಾಡಬೇಕೆನ್ನುವುದರ ಬಗ್ಗೆ ಕೊನೆಗೆ ತೀರ್ಮಾನಿಸಬಹುದು. ಆದ್ದರಿಂದ ನನ್ನ ಮನೆಗೆ ೨ನೇ ಅಕ್ಟೋಬರ್‌ರ ೧೯೫೬ರ ಮಂಗಳವಾರ ನೀವು ಬಂದರೆ ಸಂತೋಷವಾಗುತ್ತದೆ." (ಪು. ೩೬. ಅಂಬೇಡ್ಕರ್‌ರ ಪತ್ರ) ಹೀಗೆ ಪರಸ್ಪರ ಒಂದಾಗುವ ಬಯಕೆಗಳು ಇಬ್ಬರಲ್ಲಿಯೂ ಮೂಡಿದ್ದವು; ಎಂಬುದಕ್ಕೆ ಡಾ॥ ಅಂಬೇಡ್ಕರ್‌ರ ಈ ಮೇಲಿನ ಅನಿಸಿಕೆಯೂ ನಿದರ್ಶನವಾಗಿದೆ.

ಡಾ॥ ಲೋಹಿಯಾ ಅವರು ತಮ್ಮ ಸ್ನೇಹಿತರಿಗೆ ಬರೆದ ಪತ್ರವೊಂದರಲ್ಲಿ ಭಾರತದ ದಲಿತರಿಗೆ ಒಂದು ಸಂದೇಶವನ್ನು ಕೊಟ್ಟಿದ್ದಾರೆ. ಅದೇನೆಂದರೆ; ಡಾ॥ ಅಂಬೇಡ್ಕರ್ ಮತ್ತು ಶ್ರೀಜಗಜೀವನ್‌ರಾಮ್ ಇವರಿಬ್ಬರು ಆಧುನಿಕ ಭಾರತದ ಹರಿಜನರ ಎರಡು ಮಾದರಿಗಳೆಂದು ಗುರುತಿಸಿದ್ದಾರೆ. ಈ ಎರಡು ಮಾದರಿಗಳ ಸ್ವರೂಪವನ್ನು ವಿವರಿಸುತ್ತ; "ಡಾ॥ ಅಂಬೇಡ್ಕರ್ ವಿದ್ವಾಂಸರಾಗಿದ್ದರು, ಪ್ರಾಮಾಣಿಕರಾದ, ಸಮಗ್ರತೆಯನ್ನುಳ್ಳ ಹಾಗು ಸ್ವತಂತ್ರರಾದ ವ್ಯಕ್ತಿಯಾಗಿದ್ದರು; ಬಾಹ್ಯ ಜಗತ್ತಿಗೆ ನೇರಭಾರತದ ಪ್ರತೀಕವೆಂದು ಅವರನ್ನು ಹೆಸರಿಸಬಹುದು; ಅವರು ಕಹಿಯಾಗಿದ್ದರು. ಹಾಗೂ ಪ್ರತ್ಯೇಕವಾಗಲು ಬಯಸುತ್ತಿದ್ದರು." (ಪು.೪೨) ಇದುವೆ ಆಧುನಿಕ ದಲಿತರಲ್ಲಿ ಬಂದಿದೆ, ಎಂದು ಜಗಜೀವನ್ ರಾಮ್ ಅವರು ಭಾರತೀಯ ಹಿಂದೂಗಳೊಂದಿಗೆ ಸದ್ಭಾವನೆ ಬೆಳೆಸಿಕೊಂಡಿದ್ದಾರೆ. ಅವರೊಂದಿಗೆ ಮೃದುವಾಗಿ ನಡೆದುಕೊಳ್ಳುತ್ತಾರೆ. ಆದರೆ ಹರಿಜನರ ಪ್ರತ್ಯೇಕ ಸಭೆ ಸಮಾರಂಭಗಳಲ್ಲಿ ರೋಷದಿಂದ ಕಟುದನಿಯಲ್ಲಿ ಮಾತಾಡುತ್ತಾರೆಂದು, ಜನರಿಂದ ತಿಳಿದಿರುವುದಾಗಿ, ಲೋಹಿಯಾ ಅವರು ಪ್ರಸ್ತಾಪಿಸಿದ್ದಾರೆ.

ಇದರಿಂದ ಹರಿಜನರ ಏಳಿಗೆಗೆ ಸಹಾಯಕವಾಗಲಾರ ದೆಂದು ಹೇಳುತ್ತಲೇ ಅಂಬೇಡ್ಕರ್‌ರ ಮಾದರಿ, ಅಂದರೆ ಅತಿಯಾದ ರೋಷ, ಕಟುವಾದ ವಿರೋಧಗಳು ಕೂಡ ಬದಲಾಗಬೇಕೆಂದು ಅವರು ಬಯಸಿದ್ದರು. ಮುಂದು ವರೆದು ಭಾರತದ ದಲಿತರು ಅಂಬೇಡ್ಕರ್‌ರಿಂದ ಏನನ್ನು ಕಲಿಯಬೇಕೆಂಬುದನ್ನು ಹೀಗೆ ಗುರುತಿಸಿದ್ದಾರೆ. "ಅವರು (ದಲಿತರು) ಅಂಬೇಡ್ಕರ್ ಅವರ ಶ್ರದ್ಧೆ ಹಾಗೂ ಕಲಿಕೆ ಯನ್ನು ಒಂದು ಪ್ರತೀಕವನ್ನಾಗಿಸಿಕೊಳ್ಳಬೇಕು ಹಾಗೂ ಅಂಬೇಡ್ಕರ್‌ರಲ್ಲಿದ್ದ ಕಹಿಯನ್ನು ಬಿಟ್ಟು ಅವರ ಸ್ವತಂತ್ರ ಮನೋಭಾವವನ್ನು ಅನುಕರಿಸಬೇಕು. ಬರಿ ಹರಿಜನರ ನಾಯಕರೆಂದಷ್ಟೇ ಅಲ್ಲ; ಅಖಿಲ ಭಾರತದ ನಾಯಕರಾಗಿ ಕಾರ್ಯ ಪ್ರವೃತ್ತರಾಗಬಲ್ಲ ಒಬ್ಬ ಡಾ॥ ಅಂಬೇಡ್ಕರ್‌ರನ್ನು ಅವರು ಅನುಕರಿಸಬೇಕು." (ಪು. ೪೨) ಎಂದು ಹೇಳಿದ್ದು ಸೂಕ್ತವಾಗಿದೆ. (ಲಿಂಗಣ್ಣ ಗೋನಾಳ ಪುಟ ೭೭-೭೮ ಸಂಕ್ರಮಣ)

ಅಂಬೇಡ್ಕರ್ ಅವರಿಗಿರುವುದು ವ್ಯವಸ್ಥೆಯ ವಿರುದ್ಧದ ಸಿಟ್ಟೇ ಹೊರತು ಸೇಡು ಆಗಿರಲಿಲ್ಲ. ಹೆರಿಗೆಯ ಬೇನೆ ಹೆತ್ತವಳಿಗೆ ಗೊತ್ತು ಎನ್ನುವ ಹಾಗೆ ಅಂಬೇಡ್ಕರ್‌ರಿಗಿದ್ದ ನೋವು ಲೋಹಿಯಾ ಅವರಿಗಿರಲಿಲ್ಲವೆನ್ನುವುದು ಈಗಾಗಲೇ ಪ್ರಸ್ತಾಪಿಸಲಾಗಿದೆ. ಲೋಹಿಯಾರಂತೆ ಸಮಾಜ ಸುಧಾರಣೆಯಲ್ಲಿ ಪತ್ರಕರ್ತರಾಗಿಯೂ ಕೆಲಸ ಮಾಡಿದ್ದಾರೆ. ಅನೇಕ ಹಂತಗಳಲ್ಲಿ ಈ ಇಬ್ಬರು ಸಾಧಕರು ಮಾಡಿದ ಕೆಲಸ ಆಧುನಿಕರಾದ ನಮಗೆ ಅನುಕರಣೀಯವಾಗಿದೆ. □

ಜಾಗತೀಕರಣ: ದಲಿತರ ಸ್ಥಿತಿ-ಗತಿ

(೯ನೇ ಪುಟದಿಂದ)

ಹಾಕಿಕೊಂಡು ತಿರುಗುವಂತಿಲ್ಲ ಮದುವೆನಂತರ ಮೇಲ್ಜಾತಿಯವರ ಏರಿಯದಲ್ಲಿ ಮೆರವಣಿಗೆ ಮಾಡುವಂತಿಲ್ಲ ಇತ್ಯಾದಿ, National Crime Records Bureau (NCRB) ೨೦೦೫ರ ವರದಿ ಪ್ರಕಾರ ಪ್ರತಿ ೨೦ ನಿಮಿಷಕ್ಕೊಂದು ದಲಿತರ ಮೇಲೆ ದೌರ್ಜನ್ಯ ನಡೆಯುತ್ತದೆ. NCRB ವರದಿಯಂತೆ ೨೬೧೨೭ ಮೊಕದ್ದಮೆಗಳು ದಾಖಲಾಗಿದ್ದು ಇದರಲ್ಲಿ ೧೧೭೨ ದಲಿತ ಮಹಿಳೆ ಮೇಲೆ ಅತ್ಯಾಚಾರಗಳು, ೬೬೯ ದಲಿತರ ಕೊಲೆಗಳು, ೩೮೪೪೭ ದಲಿತರ ಗಾಯಗಳು. ೨೫೮ ದಲಿತರ ಅಪಹರಣಗಳು ನಡೆದಿವೆ ಈ ಪ್ರಕರಣಗಳಲ್ಲಿ ಕನಿಷ್ಠ ೧೫ ಬಗೆಯ ದೌರ್ಜನ್ಯಗಳಿಗೆ ದಲಿತರ ಆರ್ಥಿಕ ಹಿಂದುಳಿದಿರುವಿಕೆ ಮತ್ತು ಪರಾವಲಂಬನೆಯೇ ಪ್ರಧಾನ ಕಾರಣವೆಂದು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವು ಸ್ಪಷ್ಟಪಡಿಸಿದೆ. ದಲಿತರ ಮೇಲೆ ನಡೆದ ದೌರ್ಜನ್ಯಗಳ ದಾಖಲಾದ ಪ್ರಕಾರಣಗಳಲ್ಲಿ ಶೇ. ೨.೫ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗುತ್ತದೆ. ಇದನ್ನು ಅರ್ಥ ಮಾಡಿಕೊಂಡರೆ ಇಂದು ನ್ಯಾಯಾಂಗ ಕೂಡ ದಲಿತರಿಗೆ ಸಮಾನತೆ ಮತ್ತು ನ್ಯಾಯ ನೀಡುತ್ತಿಲ್ಲ ಎಂದರ್ಥ. ದಲಿತರ ಮೇಲೆ ನಡೆಸಿದ ದೌರ್ಜನ್ಯಗಳಿಂದ ಮೇಲ್ಜಾತಿಯವರು, ಪಟ್ಟಭದ್ರ ಹಿತಾಸಕ್ತಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಇಂದು ನ್ಯಾಯಾಲಯ ಕೂಡ ಮೇಲ್ಜಾತಿಯವರ ಪರವಿದೆ ಇತ್ತೀಚಿನ ವರ್ಷಗಳಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿರುವುದಕ್ಕೆ ದಲಿತರಲ್ಲಿ ಹೆಚ್ಚುತ್ತಿರುವ ಜಾಗೃತಿ, ಹಕ್ಕು ಪ್ರಜ್ಞೆ, ಸ್ವಾವಲಂಬನೆ, ತಿಳಿವಳಿಕೆ, ಸ್ವಾಭಿಮಾನಗಳೇ ಕಾರಣವಾಗಿದೆ.

ನಮ್ಮದು ವಿಶ್ವದಲ್ಲೆದೊಡ್ಡ ಪ್ರಜಾಪ್ರಭುತ್ವದ ದೇಶ ನಮ್ಮ ಸಂವಿಧಾನ ಬಹಳ ಉತ್ತಮವಾದ ಸಂವಿಧಾನ, ನಮ್ಮ ಸಂವಿಧಾನ ನಮಗೆ ಸಮಾನತೆ ಹಕ್ಕು. ಧಾರ್ಮಿಕ ಸ್ವತಂತ್ರ್ಯ, ವಾಕ್‌ಸ್ವತಂತ್ರ್ಯ ಹಕ್ಕು, ಶೋಷಣೆ ವಿರುದ್ಧ ಹಕ್ಕು ಇನ್ನಿತರ ಮೂಲಭೂತ ಹಕ್ಕುಗಳು ಕೊಟ್ಟಿದೆ. ಆದರೆ ಈ ಎಲ್ಲಾ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸುವವರು ಸ್ವಹಿತಸಕ್ತಿದಾಗಿರುವುದರಿಂದ, ಅನುಷ್ಠಾನಗೊಳ್ಳದೇ ಇರುವುದರಿಂದ ದಲಿತರಿಗೆ, ಹಿಂದುಳಿದವರ್ಗದವರಿಗೆ, ಶೋಷಿತ ಜನತೆಗೆ ಸ್ವಾತಂತ್ರ್ಯ ಬಂದು ೬೦ ವರ್ಷ ಕಳೆದರೂ ಸಮಾನತೆ ಬರಲಿಲ್ಲ, ಸಾಮಾಜಿಕ ನ್ಯಾಯ ಸಿಗಲಿಲ್ಲ ಡಾ॥ ಬಿ.ಆರ್. ಅಂಬೇಡ್ಕರವರು ಬರೆದಿರುವ ಸಂವಿಧಾನ ಸಾಮಾಜಿಕ-ಆರ್ಥಿಕ ಅಸಮಾನತೆ ಮೇಲೆ ಇರುವುದರಿಂದ ಸಂವಿಧಾನ ಜಾರಿಗೆ ಬಂದು ೫೮ ವರ್ಷ ಕಳೆದರೂ ಅದು ಯಶಸ್ವಿಯಾಗಲಿಲ್ಲ. ಡಾ॥ ಬಿ.ಆರ್. ಅಂಬೇಡ್ಕರ್‌ರವರೇ ನಾನು ಈ ದೇಶದ ಶೋಷಿತ ಜನತೆಗೆ ರಾಜಕೀಯ ಸಮಾನತೆ ಮಾತ್ರ ತಂದುಕೊಟ್ಟಿದ್ದೇನೆ. ಆದಷ್ಟು ಬೇಗ ಈ ದೇಶದ ಶೋಷಿತ ಜನತೆಗೆ ಆರ್ಥಿಕ-ಸಾಮಾಜಿಕ ಸಮಾನತೆ ತಂದುಕೊಡಬೇಕು. ಇರದೇ ಇದ್ದರೆ ಈ ದೇಶದ ಜನತೆ ನಾನು ಬರೆದಿರುವ ಸಂವಿಧಾನವನ್ನೆ ಧ್ವಂಸ ಮಾಡುತ್ತಾರೆ ಎಂದು ಹೇಳಿದ್ದಾರೆ. ಏಕೆಂದರೆ ಸಾಮಾಜಿಕ ಅಸಮಾನತೆ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತ ಜನತಾಂತ್ರಿಕ ವ್ಯವಸ್ಥೆಯನ್ನು ನಾಶಮಾಡುತ್ತದೆ; ಆಳುವ ದೊರೆಗಳು ಸಂವಿಧಾನ ಸಾರಂಶವಾದ ಸಾಮಾಜಿಕ ನ್ಯಾಯವನ್ನು ಮೂಲೆಗೆ ತಳ್ಳಿ ಈ ದೇಶದ ಅಸ್ಪೃಶ್ಯರನ್ನು ಅದೇ ಗುಲಾಮಗಿರಿಯಲ್ಲಿ ತಳ್ಳಿದರು. ಸಂವಿಧಾನದಿಂದ ನಮಗೆ ರಕ್ಷಣೆ ದೊರೆಯಬಹುದು. ನಮ್ಮ ಬದುಕು ಬದಲಾವಣೆ ಆಗಬಹುದು ಎಂಬ ದಲಿತರ ಕನಸು ನುಚ್ಚು ನೂರಾಗಿದೆ.

ಭಾರತದಲ್ಲಿ ಜಾರಿಗೊಳ್ಳುತ್ತಿರುವ ಆರ್ಥಿಕ ಸುಧಾರಣೆಗಳಿಂದ ಭೂಮಾಲೀಕರಿಗೆ ದೊಡ್ಡ ಹಿಡುವಳಿದಾರರಿಗೆ ಅನುಕೂಲವಾಗಿದೆ. ಇದರಿಂದ ದಲಿತರು, ಹಿಂದುಳಿದ ವರ್ಗದವರು, ಬೀದಿಪಾಲಾಗಿದ್ದಾರೆ. ಏಕೆಂದರೆ ಆರ್ಥಿಕ ಸುಧಾರಣೆಗಳ ಪ್ರಕ್ರಿಯೆಗಳನ್ನು ಜಾರಿ ಮಾಡುತ್ತಿರುವ ಬಂಡವಾಳವಾದ ಭಾರತದ ಗ್ರಾಮೀಣ ಪ್ರದೇಶದಲ್ಲಿರುವ ಊಳಿಗ ಮಾನ್ಯತೆಗೆ ಪೂರಕವಾಗಿದೆ, ಬಂಡವಾಳವಾದವು ಯೂರೋಪಿನಲ್ಲಿ ಉಳಿಗೆಮಾನತೆಯ ಸೊಂಟ ಮುರಿದಂತೆ ಭಾರತದಲ್ಲಿ ಉಳಿಗೆ ಮಾನ್ಯತೆಯನ್ನು ಬಗ್ಗುಬಡಿಯಲಿಲ್ಲ ಬದಲಾಗಿ ಬಂಡವಾಳವಾದವು ಭಾರತದ ಊಳಿಗ ಮಾನ್ಯತೆ ಜೊತೆಗೆ ವಿಲೀನಗೊಂಡಿತು. ಊಳಿಗ ಮಾನ್ಯತೆ ಜೊತೆಗೆ ಬಂಡವಾಳವಾದವು ತಾನು ಬೆಳೆಯಲು ತನಗೆ ಬೇಕಾದ ಅಗತ್ಯಗಳನ್ನು ರೂಢಿಸಿಕೊಂಡಿತು. ಹಾಗಾಗಿ ಆರ್ಥಿಕ ಸುಧಾರಣೆಗಳು ಜಾರಿಗೊಂಡ ಹಾಗೆ ಭಾರತದಲ್ಲಿ ಊಳಿಗಮಾನ್ಯತೆ ಮತ್ತು ಜಾತಿ ವ್ಯವಸ್ಥೆಯು ನಾಶ ಹೊಂದದೇ ತಮ್ಮ ಸ್ವರೂಪವನ್ನು ಬದಲಾಯಿಸಿವೆ.

ಭಾರತದಲ್ಲಿ ಜಾರಿಗೊಂಡಿರುವ ಆರ್ಥಿಕ ಸುಧಾರಣೆಗಳು ದಲಿತರಿಗೆ ಆರ್ಥಿಕ ಸಶಕ್ತಿಯನ್ನು ಒದಗಿಸಲಿಲ್ಲ. ಭೂರಹಿತ ಕೃಷಿ ಕೂಲಿಕಾರರಿಗೆ ಭೂಮಿ ಒದಗಿಸಲಿಲ್ಲ. ಜಾತಿವ್ಯವಸ್ಥೆಯನ್ನು ನಾಶಮಾಡುವ ಸಾಧನವನ್ನು ಆರ್ಥಿಕ ಸುಧಾರಣೆಗಳು ನೀಡಲಿಲ್ಲ. ಆರ್ಥಿಕ ಸುಧಾರಣೆಗಳು. ಜಾಗತಿಕರಣ ದಕ್ಕುವುದು ಉಳ್ಳವರಿಗೆ ನಗರಗಳ ಬಂಡವಾಳಿಗರಿಗೆ ಹಾಗೂ ಗ್ರಾಮೀಣ ಭೂಮಾಲೀಕರಿಗೆ ಈ ಆರ್ಥಿಕ ಸುಧಾರಣೆಗಳು ಜಾಗತಿಕರಣ ದಲಿತರನ್ನು ದುರ್ಬಲರನ್ನು ಶೋಷಿತ ಜನತೆಯನ್ನು ಇನ್ನಷ್ಟು ದುರ್ಬಲರನ್ನಾಗಿ ಮಾಡಿ ಬೀದಿಗೆ ತಳ್ಳಿದೆ

ಜಾರಿಗೊಂಡಿರುವ ಆರ್ಥಿಕ ಸುಧಾರಣೆಗಳಿಂದ, ಜಾಗತಿಕಾರಣದಿಂದ, ದಲಿತರು ಮುಕ್ತರಾಗಬೇಕಾದರೆ ನಮ್ಮ ದೇಶ ಮೊದಲು WTO ನಿಂದ ಹೊರಬರಬೇಕು. ಭೂಸುಧಾರಣೆ ಸಮರ್ಪಕವಾಗಿ ಜಾರಿಯಾಗಬೇಕು. ಕೃಷಿಗೆ ಪೂರಕವಾದ (ಏಕೆಂದರೆ ಶೇ. ೮೦ ದಲಿತರು ಕೃಷಿಯನ್ನು ನಂಬಿದ್ದಾರೆ.) ಯೋಜನೆಗಳು ಜಾರಿಯಾಗಬೇಕು. ಶಿಕ್ಷಣ ಆರೋಗ್ಯ, ಉದ್ಯೋಗ, ಹಾಗೂ ಸಾಮಾಜಿಕ-ಆರ್ಥಿಕ ಕ್ಷೇತ್ರಗಳಲ್ಲಿ ವಂಚಿತರಾಗಿರುವ ದಲಿತರಿಗೆ ಪ್ರತ್ಯೇಕ ಯೋಜನೆಗಳು ಜಾರಿಯಾಗಬೇಕು. ದಲಿತರ ಜನಸಂಖ್ಯೆ ಅನುಗುಣವಾಗಿ ಕೇಂದ್ರ-ರಾಜ್ಯಸರಕಾರಗಳು ತಮ್ಮ ಬಜೆಟ್‌ನಲ್ಲಿ ಹಣವನ್ನು ದಲಿತ ಸಮುದಾಯಗಳಿಗೆ ಮೀಸಲಿಡಬೇಕು. ಹಾಗೂ ವೆಚ್ಚಮಾಡಬೇಕು. ಮತ್ತು ಜಾತಿ ವ್ಯವಸ್ಥೆ ಮತ್ತು ಊಳಿಗಮಾನ್ಯತೆಯ ಪ್ರಭುತ್ವ ನಾಶವಾಗಬೇಕಾದರೆ, ದಲಿತರ ಮೇಲಿನ ದೌರ್ಜನ್ಯಗಳಿಗೆ ಕಾರಣವಾದ ಆರ್ಥಿಕೇಯೇತರ-ಸಾಮಾಜಿಕೇಯೇತರ ಅಂಶಗಳ ವಿರುದ್ಧ ನಿರಂತರ, ವ್ಯವಸ್ಥಿತ, ರಾಜಿರಹಿತ ಹೋರಾಟಗಳು ಮಾಡಬೇಕು. ಆಗ ಮಾತ್ರ ದಲಿತರಿಗೆ ಸಾಮಾಜಿಕ ನ್ಯಾಯ ಸಿಗಲು ಸಾಧ್ಯ. □

ಒಳ ಮೀಸಲಾತಿ

ದಲಿತರಿಂದ ದಲಿತರಿಗೆ ನ್ಯಾಯ!

ಕೆ. ಬಾಲಗೋಪಾಲ್
ಅನು: ಡಿ. ಡೊಮಿನಿಕ್

ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಸಮಾಜದ ಒಂದು ಮುಖ್ಯ ಲಕ್ಷಣವೆಂದರೆ ಜಾತಿ ಆಧಾರಿತ ತಾರತಮ್ಯ. ಇದನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಸಾಮಾಜಿಕ ನ್ಯಾಯ ಎನ್ನೋ ಪರಿಕಲ್ಪನೆಯಡಿ ವಂಚಿತ ಜನಕ್ಕೆ ನ್ಯಾಯ ಒದಗಿಸುವ ಸಲುವಾಗಿ ಕಾನೂನನ್ನು ರಚಿಸಲಾಗಿತ್ತು. ಈ ವಂಚಿತ ವರ್ಗದವರನ್ನೆಲ್ಲಾ ಏಕವರ್ಗ (ದಲಿತ, ಅಲ್ಪಸಂಖ್ಯಾತರು, ಮಹಿಳೆಯರು ಇತ್ಯಾದಿ) ಎಂದು ವರ್ಗೀಕರಿಸಲಾಗಿತ್ತು. ಆದರೆ, ಈ ಜನರ ನಿರ್ದಿಷ್ಟ ದಾರಿದ್ರ್ಯಕ್ಕೆ ಸಮಾಜದ ಗಮನ ಸೆಳೆಯುವ ಬದಲು, ಅದೇ ವರ್ಗೀಕರಣ ಜನರನ್ನು ಮತ್ತಷ್ಟು ತಾರತಮ್ಯಕ್ಕೆ ಗುರಿಯಾಗಿಸಿದೆ. ಹೀಗಿರುವಲ್ಲಿ, ಜನರನ್ನು ಮತ್ತೆ ತಾರತಮ್ಯಕ್ಕೊಳಪಡಿಸದ ಹಾಗೂ ಅದೇ ವರ್ಗೀಕೃತ ಕೋಲಿನಿಂದ ಪೋಷಕ ವರ್ಗವನ್ನು ಸದೆಬಡಿಯದ ಸಂವೇದನಾಶೀಲ ಪ್ರತಿಕ್ರಿಯೆಯನ್ನು ಪ್ರಸ್ತುತ ಸನ್ನಿವೇಶ ಬಯಸುತ್ತದೆ.

ರಾಜ್ಯ ಸರ್ಕಾರಗಳಿಗೆ ಎಸ್.ಸಿ/ಎಸ್.ಟಿ. ಮೀಸಲಾತಿಯಲ್ಲಿ ಗುರುತಿಸಲಾಗುವ ಉಪಪಂಗಡಗಳ ಜನಸಂಖ್ಯೆಗನುಗುಣವಾಗಿ ಒಳ ಮೀಸಲಾತಿ ಕಲ್ಪಿಸುವ ಹಕ್ಕು ಇಲ್ಲವೆಂಬ ಸುಪ್ರೀಂಕೋರ್ಟಿನ ಇತ್ತೀಚಿನ ತೀರ್ಪು ಮೀಸಲಾತಿ ವಿರೋಧಿ ವಾದದಂತೆಯೇ ಆಗುತ್ತದೆ. ಸಂವಿಧಾನದ ಪ್ರಕಾರ ಎಸ್.ಸಿ/ಎಸ್.ಟಿಗಳು ಅವಿಭಾಜ್ಯ-ಏಕರೂಪಿ ಗುಂಪು ಎನ್ನುವುದು, ಪಾರ್ಲಿಮೆಂಟಿಗೂ ಸಹ ಅಂತಹ (ಒಳಮೀಸಲಾತಿ ಕಲ್ಪಿಸುವ) ಅರ್ಹತೆ ಇಲ್ಲ ಎಂಬುದನ್ನು ಸ್ಪಷ್ಟೀಕರಿಸುತ್ತದೆ ಎಂದೇ ಭಾವಿಸಬೇಕಾಗುತ್ತದೆ.

ನ್ಯಾಯಾಧೀಶರು ಸಾಮಾಜಿಕ ವಾಸ್ತವಗಳಿಂದ ಪ್ರತ್ಯೇಕವಾಗಿ ಜೀವಿಸುತ್ತಿರುವುದು ಸರಿಯಷ್ಟೆ. ಆದರೆ, ಆಪತ್ತು ಎರಗುತ್ತಿರುವ ಸಂದರ್ಭದಲ್ಲೂ ಹಲವಾರುಬಾರಿ ಅವರು ತಪ್ಪಾಗಿ ತೀರ್ಪುಗಳನ್ನು ನೀಡಿಬಿಡುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಸಮಾಜದ ಒಂದು ಮುಖ್ಯ ಲಕ್ಷಣವೆಂದರೆ ಜಾತಿ ಆಧಾರಿತ ತಾರತಮ್ಯ. ಇದನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಸಾಮಾಜಿಕ ನ್ಯಾಯ ಎನ್ನೋ ಪರಿಕಲ್ಪನೆಯಡಿ ವಂಚಿತ ಜನಕ್ಕೆ ನ್ಯಾಯ ಒದಗಿಸುವ ಸಲುವಾಗಿ ಕಾನೂನನ್ನು ರಚಿಸಲಾಗಿತ್ತು. ಈ ವಂಚಿತ ವರ್ಗದವರನ್ನೆಲ್ಲಾ ಏಕವರ್ಗ (ದಲಿತ, ಅಲ್ಪಸಂಖ್ಯಾತರು, ಮಹಿಳೆಯರು ಇತ್ಯಾದಿ) ಎಂದು ವರ್ಗೀಕರಿಸಲಾಗಿತ್ತು. ಆದರೆ, ಈ ಜನರ ನಿರ್ದಿಷ್ಟ ದಾರಿದ್ರ್ಯಕ್ಕೆ ಸಮಾಜದ ಗಮನ ಸೆಳೆಯುವ ಬದಲು, ಅದೇ ವರ್ಗೀಕರಣ ಜನರನ್ನು ಮತ್ತಷ್ಟು ತಾರತಮ್ಯಕ್ಕೆ ಗುರಿಯಾಗಿಸಿದೆ. ಹೀಗಿರುವಲ್ಲಿ, ಜನರನ್ನು ಮತ್ತೆ ತಾರತಮ್ಯಕ್ಕೊಳಪಡಿಸದ ಹಾಗೂ ಅದೇ ವರ್ಗೀಕೃತ ಕೋಲಿನಿಂದ ಪೋಷಕ ವರ್ಗವನ್ನು ಸದೆಬಡಿಯದ ಸಂವೇದನಾಶೀಲ ಪ್ರತಿಕ್ರಿಯೆಯನ್ನು ಪ್ರಸ್ತುತ ಸನ್ನಿವೇಶ ಬಯಸುತ್ತದೆ.

ಅಂತಹ ಮಹತ್ವದ ನಿದರ್ಶನವೆಂದರೆ ಆಂಧ್ರಪ್ರದೇಶದಲ್ಲಿ ಪರಿಶಿಷ್ಟಜಾತಿಗೆ ನೀಡಲಾದ ಮೀಸಲಾತಿಯಲ್ಲಿ ಒಳಮೀಸಲಾತಿ ಆಗಬೇಕೆಂದು ನಡೆದ ಮಾದಿಗ ಹೋರಾಟ ಚಳುವಳಿ, ಪರಿಶಿಷ್ಟ ಜಾತಿಗಳೊಳಗೆ ಒಂದು ಸ್ಥಿರೀಕೃತವಾದ ಸಾಮಾಜಿಕ ಅಂತಸ್ತು, ಅರ್ಹತೆ, ಸ್ಥಾನಮಾನ (ಅಸ್ಪೃಶ್ಯತೆಯನ್ನೊಳಗೊಂಡಂತೆ) ಗಳ ಶ್ರೇಣೀಕರಣವಿದೆ ಎಂಬ ಒಳನೋಟವನ್ನು ವಿಷದೀಕರಿಸಿತು. ಅಂದರೆ, ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ತಮ್ಮ ನಿರ್ದಿಷ್ಟ ಸಂಖ್ಯೆಗಿಂತಲೂ ಮಿಗಿಲಾಗಿ ಪಡೆದುಕೊಂಡ ಎರಡು ಮುಖ್ಯ ಜಾತಿಗಳು ಆದಿ ಆಂಧ್ರಾ ಮತ್ತು ಮಾಲಾ ಸಮುದಾಯಗಳೆಂದು ಮಾದಿಗ ಹೋರಾಟವು ಬಹಿರಂಗ ಪಡಿಸಿತು. ಈ ಕಾರಣದಿಂದಲೇ ಮಾದಿಗ ಹೋರಾಟ ಯಶಸ್ವಿಯಾಯಿತಲ್ಲದೆ, ಪರಿಶಿಷ್ಟಜಾತಿಗಳೊಳಗೆ ನಾಲ್ಕು ಒಳಪಂಗಡಗಳನ್ನು ವಿಭಾಗಿಸಿ, ಹೆಚ್ಚು ಸಮಂಜಸವಾದ ಸಮಾನತೆಯನ್ನು ಜನಸಂಖ್ಯೆಗನುಗುಣವಾಗಿ ಮೀಸಲಾತಿ ದೊರೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಲು ಒತ್ತಾಯಿಸಿತು. ಈ ಪರಿಶಿಷ್ಟಜಾತಿಗಳೊಳಗೇ ತಾರತಮ್ಯ ಮುಂದುವರೆದಿದೆ ಎಂಬುದನ್ನು ಎಲ್ಲ ರಾಜಕೀಯ ಪಕ್ಷಗಳು ಮತ್ತು ಪರಿಶಿಷ್ಟ ಜಾತಿಗಳಲ್ಲಿ ಮುಂದುವರೆದ ಒಂದು ಸಮುದಾಯವನ್ನು ಹೊರತುಪಡಿಸಿ, ಉಳಿದೆಲ್ಲಾ ಸಮುದಾಯಗಳು ಅನುಮೋದಿಸಿ, ಹೋರಾಟವನ್ನು ಬೆಂಬಲಿಸಿದವು.

ಆದರೆ ಈ ಕ್ರಿಯೆ ಕಾನೂನನ್ನು ಅತಿಕ್ರಮಿಸಿತ್ತೆಂದು ನ್ಯಾಯಾಲಯಗಳು ಅರ್ಥೈಸಿದವು. ಸರ್ವೋಚ್ಚನ್ಯಾಯಾಲಯದಲ್ಲಿನ ಸಂವಿಧಾನ ಪೀಠದ ೫ ಮಂದಿ ನ್ಯಾಯಾಧೀಶರ ಅಂತಿಮ ತೀರ್ಮಾನ (ವರ್ತಮಾನಕ್ಕಷ್ಟೇ) ವೆಂದರೆ ಮಾದಿಗರ ಬೇಡಿಕೆಯನ್ನು ಸಂವಿಧಾನಾತ್ಮಕವಾಗಿ ಸಮ್ಮತಿಸಲಾಗದು. ಹೀಗೇಕೆ ನ್ಯಾಯಾಲಯ ಹೇಳುತ್ತೆಂಬುದನ್ನು ಈ ಕೆಳಗೆ ಗಮನಿಸೋಣ: ಆದರೆ ಇಲ್ಲಿ ಒಂದು ಸಂಗತಿಯನ್ನು ಗಮನಿಸಲೇ ಬೇಕು. ಯಾರೇ ಸಂವಿಧಾನವನ್ನು ಪರಿಶೀಲಿಸಿದಲ್ಲಿ ಕಂಡು ಬರುವ ಪ್ರಮುಖ ಸಂಗತಿಯೆಂದರೆ ಅದು ಸೂಚಿಸುತ್ತಿರುವ ಪರಿಹಾರೋಪಾಯಗಳು ಹಾಗೂ ಸಾಮಾಜಿಕ/ರಾಜಕೀಯ ನ್ಯಾಯದ ಆಶಯಗಳ ನಡುವೆ ಎದ್ದು ಕಾಣುವ ಕಂದರ. ಆದ್ದರಿಂದ ಸಂವಿಧಾನದಲ್ಲಿ ಅನೇಕ ತಪ್ಪುಗಳಿವೆ ನಿಜ. ಹೀಗಿದ್ದರೂ ಸಂವಿಧಾನಾತ್ಮಕ ಸಾಧ್ಯತೆಗಳನ್ನು ಜಾರಿಯಾಗಿಸುವಲ್ಲಿ ಸಾಮಾಜಿಕ/ರಾಜಕೀಯ ಅಡೆತಡೆಗಳನ್ನು ಹಾಗೆಯೇ ಗಮನಿಸಲೇ ಬೇಕಾಗುತ್ತದೆ. ಆದ್ದರಿಂದಲೇ ಸಂವಿಧಾನದ ಎದುರು ಸ್ವಯಂ ಆಡಳಿತಕ್ಕೆ ವಿರೋಧಿಯಾದಂತಹ ಅಂಶಗಳು ಇನ್ನೂ ಜೀವಂತವಾಗಿರುವುದು 'ರಾಷ್ಟ್ರ'ವೆಂದು ಕರೆಯಲಾಗುತ್ತಿರುವ ಭಾರತದಲ್ಲೇ ಇರುವುದು ಸಹ ಸತ್ಯ.

ಆಂಧ್ರ ಪ್ರದೇಶದ ಆದೇಶ

ತೀವ್ರತರವಾದ ಮಾದಿಗರ ಹೋರಾಟದಿಂದಾಗಿ ಒತ್ತಡಕ್ಕೊಳಗಾದ ಆಂಧ್ರ ಪ್ರದೇಶ ಸರ್ಕಾರ ಒಂದು ಆದೇಶವನ್ನು ಹೊರಡಿಸುತ್ತದೆ. ಇದನ್ನು ಹೈಕೋರ್ಟಿನ ಪೂರ್ಣಪೀಠ ರದ್ದು ಪಡಿಸುತ್ತದೆ. ಕಾರಣ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರಾಷ್ಟ್ರೀಯ ಸಮಿತಿಯನ್ನು ಸಂಪರ್ಕಿಸಿ ಅದರ ಅಭಿಪ್ರಾಯಗಳನ್ನು ತೆಗೆದುಕೊಂಡಿರಲಿಲ್ಲ. ಹೀಗೆ ಆದೇಶದಲ್ಲಿ ಅನೇಕ ಸಂಗತಿಗಳು ಸಂದೇಹಾತ್ಮಕವಾಗಿದ್ದವು. ಆನಂತರದಲ್ಲಿ ಸಮಿತಿಯೊಡನೆ ಸಮಾಲೋಚಿಸಿ, ಅಭಿಪ್ರಾಯವನ್ನು ತೆಗೆದುಕೊಂಡ ಸರ್ಕಾರ ಒಂದು ಅಧಿನಿಯಮ (ACT ೨೦, ೨೦೦೦) ವನ್ನು ಅದೇ ಕಾರಣಕ್ಕಾಗಿ ಹೊರಡಿಸಿತು. ಹಿಂದಿನಂತೆಯೇ ಈ ಕ್ರಮವನ್ನು ಮಾಲಾ ಮತ್ತು ಆದಿದ್ರಾವಿಡ ಸಮುದಾಯಗಳ ಕೆಲವ್ಯಕ್ತಿಗಳು ಪ್ರಶ್ನಿಸಿ, ಕೋರ್ಟಿನಲ್ಲಿ ದಾವೆ ಹೂಡಿದರು. ಆಗ ೫ ಮಂದಿಯ ಹೈಕೋರ್ಟ್ ಪೀಠ ಚರ್ಚಿಸಿ, ಬಹುಮತ (೪ ಮಂದಿಪರ, ೧ ವಿರೋಧ)ದಿಂದ ಹಿಂದಿನ ಪೀಠದ ತೀರ್ಪನ್ನು ಅಸಿಂಧುಗೊಳಿಸಿತು. ಇದರ ವಿರುದ್ಧ ಮನವಿಗಾರರು ಸುಪ್ರೀಂಕೋರ್ಟಿನ ಮೊರೆಹೋಗಲಾಗಿ, ಹೈಕೋರ್ಟಿಗೆ ರಜೆಯನ್ನು

ಘೋಷಿಸಲಾಗುತ್ತದೆ. ಆದರೆ ಅಪೆಕ್ಸ್ ಕೋರ್ಟಿನಲ್ಲಿ ಅವರಿಗೆ ಜಯ ದೊರೆಯುತ್ತದೆ. ಇ. ವಿ. ಚಿನ್ನಯ್ಯ VS. ಆಂಧ್ರಪ್ರದೇಶದ ಸರ್ಕಾರದ ಪ್ರಕರಣದಲ್ಲಿ ಸುಪ್ರೀಂಕೋರ್ಟಿನ ೫ ಮಂದಿ ಪೀಠವು ಆ ಅಧಿನಿಯಮವನ್ನು ಅಸಂವಿಧಾನಾತ್ಮಕವೆಂದು ಒಕ್ಕೊರಲಿನ ತೀರ್ಪಿತ್ತಿತು. ಆದರೆ ಈ ತೀರ್ಪು ತಾರ್ಕಿಕವಾಗಿ ಬಡಕಲಾಗಿತ್ತಲ್ಲದೆ, ನ್ಯಾಯಾಂಗದ ವಿವೇಕವೂ ಕ್ಷೀಣವಾಗಿಯೇ ಇತ್ತು.

ಸುಪ್ರೀಂಕೋರ್ಟ್ ಎರಡು ಸಂಗತಿಗಳನ್ನು ಹೇಳುತ್ತದೆ: ೧. ಮೀಸಲಾತಿಯಲ್ಲಿ ಜನಸಂಖ್ಯೆಗನುಗುಣವಾಗಿ ಎಸ್.ಸಿ/ಎಸ್.ಟಿ ವರ್ಗದೊಳಗಿನ ಒಳಪಂಗಡಗಳಿಗೆ ಒಳಮೀಸಲಾತಿ ಕಲ್ಪಿಸಲು ರಾಜ್ಯ ವಿಧಾನಸಭೆಗಳು ಮಾಡುವಂತಿಲ್ಲ. ಅದನ್ನು ಪಾರ್ಲಿಮೆಂಟ್ ಮಾತ್ರ ಮಾಡಬಹುದು. ೨. ಹಾಗೆಮಾಡಲೂ ಪಾರ್ಲಿಮೆಂಟಿಗೂ ಸಹ ಅಂತಹ ಅರ್ಹತೆ ಇರುವುದಿಲ್ಲ. ಕಾರಣ ಸಂವಿಧಾನದ ಪ್ರಕಾರ ಎಸ್.ಸಿ. ಮತ್ತು ಎಸ್.ಟಿಗಳು ಒಂದು ಅವಿಭಾಜ್ಯ, ಏಕರೂಪಿ ಘಟಕವಾಗಿದೆ. ಹೀಗಾಗಿಯೂ ಎಸ್.ಸಿ./ಎಸ್.ಟಿಗಳು ಆ ರೀತಿ ವಿಭಜಿಸಬಾರದು. ಆದರೆ ಸಂವಿಧಾನದ ಎಲ್ಲಾ ಉದ್ದೇಶಗಳಿಗಾಗಿ ಅವರು ಅವಿಭಾಜ್ಯ ಘಟಕ.

ಇವೆರಡು ವಾದಗಳೂ ಸಹ ಪ್ರತ್ಯಕ್ಷವಾಗಿ ಅಸಮರ್ಥನೀಯವಾದವು. ಆದರೆ ಸುಪ್ರೀಂ ಕೋರ್ಟಿನ ೭ ಮಂದಿಯ ಪೀಠವು. ನಾನೆ ಹೇಳುವ ತನಕ ಅಥವಾ ಸಂವಿಧಾನದ ಸೃಷ್ಟಿಕರ್ತರು ಅಂತಹ ಉದ್ದೇಶವನ್ನೇನೂ ಇಟ್ಟುಕೊಂಡಿಲ್ಲವಾದ್ದರಿಂದ. ಅದರ ಬಗ್ಗೆ ಸ್ಪಷ್ಟೀಕರಣ ದೊರೆಯುವವರೆಗೆ ಸಂವಿಧಾನದ ತಿದ್ದುಪಡಿಯಾಗಬೇಕು. ಅಂದರೆ ಸಂವಿಧಾನದ ಚೌಕಟ್ಟಿನಲ್ಲೇ ಎಲ್ಲಾ ದಲಿತ ಮತ್ತು ಆದಿವಾಸಿ ಜನ ಸಮುದಾಯಗಳಿಗೆ ನ್ಯಾಯ ದೊರಕುವುದಾದರೆ ಹಾಗೆ ಅದರಲ್ಲಿ ಏಳುತ್ತಿರುವ ಧ್ವನಿಯನ್ನು ಅದುಮಿಟ್ಟು, ಮೌನವಾಗಿ ಕಾಯುತ್ತಾ ಕೂರಬೇಕಾಗುತ್ತದೆ. ಇದು ಸಂವಿಧಾನದ ರೀತಿ ಅಲ್ಲದೆ, ಪರಿಶಿಷ್ಟಜಾತಿಗಳಲ್ಲಿ ಅತೀ ಹಿಂದುಳಿದವರನ್ನು ಗುರುತಿಸಲು ಒಂದು ತನಿಖಾ ಸಮಿತಿಯನ್ನು ನೇಮಿಸುವುದಕ್ಕೂ ಸಹ ಸಮ್ಮತಿ ನೀಡದಷ್ಟು ಸುಪ್ರೀಂಕೋರ್ಟ್ ಮುಂದುವರೆದಿದೆ.

ಒಬ್ಬರಿಗೊಬ್ಬರು ತದ್ವಿರುದ್ಧವಾಗಿ, ಮೂರು ಪ್ರತ್ಯೇಕ ಪುನರಾವರ್ತಿತ ತೀರ್ಪುಗಳನ್ನು ೫ ಮಂದಿಯ ಪೀಠ ನೀಡಿದೆ. ಎನ್. ಸಂತೋಷ್ ಹೆಗ್ಡೆ ತನ್ನಷ್ಟಕ್ಕೆ. ಎಸ್.ಎನ್. ವಾರಿಯ ಮತ್ತು ಬಿ.ಪಿ ಸಿಂಗ್. ಹೆಚ್.ಕೆ ಸೇಮ ತಮಗಾಗಿಯಷ್ಟೇ. ಇದು ಏಕೆಂದರೆ ಅವರು ಅನುಸರಿಸಿರುವ ತರ್ಕವನ್ನು ಬಹಿರಂಗಪಡಿಸಿ ಅದರೊಳಗಿನ ಸೂತ್ರವನ್ನು ಅರಿಯಬೇಕಾಗಿದೆ ಅಂದರೆ. ಅದೇನು ಬಹಳ ಗಂಭೀರವಾದುದ್ದೆಂದು ಭಾವಿಸಬೇಕಿಲ್ಲ. ಬದಲು ಅಲ್ಲಿ ತಾರ್ಕಿಕ ಸ್ಪಷ್ಟತೆ ಇಲ್ಲದಿರುವುದು ಹಾಗೂ ಒಂದಕ್ಕೊಂದು ಕೂಡಿ ಇಲ್ಲದಂತಿರುವುದು ಕಂಡುಬರುತ್ತದೆ. ಅತ್ಯುನ್ನತ ಮಟ್ಟದಲ್ಲೂ ಇತ್ತೀಚಿನ ದಿನಗಳಲ್ಲಿ ಕಾಣುವ ಪ್ರಧಾನ ಲಕ್ಷಣವೆಂಬಂತೆ, ಈ ತೀರ್ಪು ಕ್ಲಾಸಿಕ್ ಉದಾಹರಣೆಯಾಗಿ ಎದ್ದು ನಿಲ್ಲುತ್ತದೆ. ಎಸ್.ಸಿ./ಎಸ್.ಟಿ ಪಟ್ಟಿಯ ಬಗ್ಗೆ (ಪ್ರತಿಯೊಂದು ರಾಜ್ಯಕ್ಕೂ ಪ್ರತ್ಯೇಕವಾದ ಪಟ್ಟಿ ಇದೆ) ಸಂವಿಧಾನದ ನಿಲುವು ಸ್ಪಷ್ಟವಿದೆ.

ಪರಿಚ್ಛೇದ ೩೪೧ರ ಪ್ರಕಾರ: (೧) ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ. ಅಲ್ಲಿನ ರಾಜ್ಯಪಾಲರ ಸಮಾಲೋಚನೆಯೊಂದಿಗೆ ಸಾರ್ವಜನಿಕ ಆದೇಶವನ್ನು ಹೊರಡಿಸುವ ಮೂಲಕ, ರಾಷ್ಟ್ರಪತಿಯವರು ಅಲ್ಲಿನ ನಿರ್ದಿಷ್ಟ ಜಾತಿ. ಜನಾಂಗ ಮತ್ತು ಜಾತಿಗಳೊಳಗಿನ ಭಾಗ ಅಥವ ಗುಂಪುಗಳನ್ನು, ಜನಾಂಗವನ್ನು ಅಥವ ಬುಡಕಟ್ಟು ಪಂಗಡವನ್ನು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಿಗೆ ಸಂಬಂಧಿಸಿದಂತೆ, ಸಂವಿಧಾನದ ಮೇರೆಗೆ ಪರಿಶಿಷ್ಟ ಜಾತಿಗಳೆಂದು ಗುರುತಿಸಬಹುದಾಗಿದೆ. (೨) ಸಂಸತ್ತು/ಪಾರ್ಲಿಮೆಂಟು ಕಾನೂನಿನ ಮೂಲಕ ಯಾವುದೇ ಜಾತಿ, ಜನಾಂಗ ಅಥವ ಬುಡಕಟ್ಟನ್ನು ಅಥವ ಯಾವುದೇ ಜಾತಿಯ. ಜನಾಂಗ/ವಂಶದ ಅಥವಾ ಬುಡಕಟ್ಟಿನ ಭಾಗವನ್ನು ಅಥವ ಗುಂಪನ್ನು (೧)ನೇಯ ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅನುಸೂಚಿತ ಜಾತಿಗಳ ಪಟ್ಟಿಯಲ್ಲಿ ಸೇರಿಸಬಹುದು ಅಥವ ಅದರಿಂದ ತೆಗೆದು ಹಾಕಬಹುದು. ಆದರೆ ಹಿಂದೆ ಹೇಳಿದಂತೆಯೆ ಹೊರತು. ಸದರಿ ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯನ್ನು. ಆನಂತರದ ಯಾವುದೇ ಅಧಿಸೂಚನೆಯ ಮೂಲಕ ವ್ಯತ್ಯಾಸಗೊಳಿಸತಕ್ಕುದ್ದಲ್ಲ.

ತೀವ್ರತರವಾದ ಮಾದಿಗರ ಹೋರಾಟದಿಂದಾಗಿ ಒತ್ತಡಕ್ಕೊಳಗಾದ ಆಂಧ್ರ ಪ್ರದೇಶ ಸರ್ಕಾರ ಒಂದು ಆದೇಶವನ್ನು ಹೊರಡಿಸುತ್ತದೆ. ಇದನ್ನು ಹೈಕೋರ್ಟಿನ ಪೂರ್ಣಪೀಠ ರದ್ದು ಪಡಿಸುತ್ತದೆ. ಕಾರಣ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರಾಷ್ಟ್ರೀಯ ಸಮಿತಿಯನ್ನು ಸಂಪರ್ಕಿಸಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡಿರಲಿಲ್ಲ. ಹೀಗೆ ಆದೇಶದಲ್ಲಿ ಅನೇಕ ಸಂಗತಿಗಳು ಸಂದೇಹಾತ್ಮಕವಾಗಿದ್ದವು. ಆನಂತರದಲ್ಲಿ ಸಮಿತಿಯೊಡನೆ ಸಮಾಲೋಚಿಸಿ, ಅಭಿಪ್ರಾಯವನ್ನು ತೆಗೆದುಕೊಂಡ ಸರ್ಕಾರ ಒಂದು ಅಧಿನಿಯಮ (ACT ೨೦, ೨೦೦೦) ವನ್ನು ಅದೇ ಕಾರಣಕ್ಕಾಗಿ ಹೊರಡಿಸಿತು. ಹಿಂದಿನಂತೆಯೇ ಈ ಕ್ರಮವನ್ನು ಮಾಲಾ ಮತ್ತು ಆದಿದ್ರಾವಿಡ ಸಮುದಾಯಗಳ ಕೆಲವ್ಯಕ್ತಿಗಳು ಪ್ರಶ್ನಿಸಿ, ಕೋರ್ಟಿನಲ್ಲಿ ದಾವೆ ಹೂಡಿದರು. ಆಗ ೫ ಮಂದಿಯ ಹೈಕೋರ್ಟ್ ಪೀಠ ಚರ್ಚಿಸಿ, ಬಹುಮತ (೪ ಮಂದಿಪರ, ೧ ವಿರೋಧ)ದಿಂದ ಹಿಂದಿನ ಪೀಠದ ತೀರ್ಪನ್ನು ಅಸಿಂಧುಗೊಳಿಸಿತು.

ಒಳ ಮೀಸಲಾತಿ ಚಿಂತನೆ

ಹೀಗೆ ಆಯಾ ರಾಜ್ಯಗಳ ರಾಜ್ಯಪಾಲರ ಸಮಾಲೋಚನೆಯೊಂದಿಗೆ ರಾಷ್ಟ್ರಪತಿಯವರು ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ಪ್ರಾಥಮಿಕವಾಗಿ ಘೋಷಿಸುತ್ತಾರೆ; ಹಾಗೂ ತದನಂತರದಲ್ಲಿ ಯಾವುದೇ ಸೇರುವಿಕೆ ಅಥವ ತೆಗೆದು ಹಾಕುವಿಕೆ ಸಂಸತ್ತಿನ ಅಧಿನಿಯಮದ ಮೂಲಕ ಮಾಡಲಾಗುತ್ತದೆ. ಈ ಸಂಸತ್ತಿನ ಅಧಿನಿಯಮದ ಹೊರತು. ಒಂದು ಜಾತಿಯನ್ನು ಎಸ್.ಸಿ./ಎಸ್.ಟಿ ಪಟ್ಟಿಯಲ್ಲಿ ಬದಲಾಯಿಸಲು, ಸೇರಿಸಲು ತೆಗೆದು ಹಾಕಲು ಆಗುವುದಿಲ್ಲ. ಈ ಘೋಷಿತ ಅಥವ ತಿದ್ದುಪಡಿಯಾದ ಪಟ್ಟಿಗಳನ್ನು ರಾಜ್ಯ ಅಥವ ಕೇಂದ್ರಾಡಳಿತ ಸರ್ಕಾರಗಳನ್ನು ಒಳಗೊಂಡಂತೆ ಯಾವುದೇ ಪ್ರಾಧಿಕಾರ ಅನುಸರಿಸತಕ್ಕದ್ದು.

ಪ್ರಾಧಿಕಾರಗಳ ವಿವೇಚನೆ :

ಈ ಪಟ್ಟಿಗಳು ಇರುವಂತೆಯೇ ಒಪ್ಪಿಕೊಳ್ಳುವುದಕ್ಕೆ ಬದ್ಧವಾಗಿ. ಮೀಸಲಾತಿಗಳನ್ನು ನೀಡುವ ಅಥವ ಇತರೆ ವಿಶೇಷ ಸವಲತ್ತುಗಳನ್ನು ಒದಗಿಸುವ ವಿವೇಚನೆಯು ಎಲ್ಲ ಹಂತಗಳಲ್ಲಿರುವ ಪ್ರಾಧಿಕಾರಗಳಿಗೆ ಬಿಟ್ಟದ್ದು. ಆದರೆ ಒಂದು ಸಮುದಾಯವನ್ನು ಎಸ್.ಸಿ./ಎಸ್.ಟಿ ಎಂದು ಘೋಷಿಸುವ ಅಧಿಕಾರ ಪ್ರಾಥಮಿಕವಾಗಿ ರಾಷ್ಟ್ರಪತಿಗಳಿಗೆ ಮತ್ತು ತದನಂತರದಲ್ಲಿ ಪಾರ್ಲಿಮೆಂಟಿಗೆ ಮೀಸಲಾಗಿದೆ. ಆದ್ದರಿಂದ ಮೇಲಿನ ವಿವೇಚನೆಯೂ ಇದರೊಡನೆ ಹರಿತವಾದ ವ್ಯತ್ಯಾಸದಲ್ಲಿ ನಿಲ್ಲುತ್ತದೆ. ಮೀಸಲಾತಿಯನ್ನು ಅಥವ ವಿಶೇಷ ಸವಲತ್ತುಗಳನ್ನು ನೀಡುವಲ್ಲಿ ಯಾವುದೇ ವಿಧಾನ ಸಭೆಯ ಅಧಿನಿಯಮದ ಅಗತ್ಯವಿಲ್ಲವೆಂದು ನ್ಯಾಯಾಲಯಗಳು ಪದೇ ಪದೇ ಘೋಷಿಸುತ್ತಲೇ ಬಂದಿವೆ. ಎಲ್ಲಾ ಸರ್ಕಾರಿ ಕ್ರಮಕ್ಕೆ ಅನ್ವಯಿಸಿರುವ ನ್ಯಾಯಯುತ ಕಾರಣಗಳ ಸಾಮಾನ್ಯ ಮಿತಿಯೊಳಗೆ ರಾಜ್ಯ ಮತ್ತು ಪ್ರತಿಯೊಂದು ಸ್ಥಳೀಯಮಂಡಳಿಯು ತನ್ನ ಆಡಳಿತಾತ್ಮಕ ಪ್ರಾಧಿಕಾರದಡಿ ಯಾವುದೇ ಕ್ರಮವನ್ನು ಜಾರಿಗೊಳಿಸುವ ಸ್ವಾತಂತ್ರ್ಯವಿದೆ.

ಈ ವಿವೇಚನೆಯಡಿ ತನ್ನ ಫಲಾನುಭವಿಗಳಿಗೆ ಸಮಾನವಾಗಿ ಪಡೆಯಲು ಸಾಧ್ಯವಾಗದಂತಹ ವಿಶೇಷ ಸವಲತ್ತುಗಳನ್ನು ವಿಭಜಿಸಿ ನೀಡುವ ಅಧಿಕಾರವನ್ನೇಕೆ ನೀಡಲಾಗಿಲ್ಲ? ಇರುವ ಎಸ್.ಸಿ./ಎಸ್.ಟಿ ಪಟ್ಟಿಯಲ್ಲಿರುವ ಯಾವುದೇ ಜಾತಿಯನ್ನು ಹೊಸದಾಗಿ ಸೇರಿಸಿಲ್ಲ ಅಥವ ತೆಗೆದಿಲ್ಲ. ಆ ಪಟ್ಟಿ ಇದ್ದಂತೆಯೇ ಇದೆ. ಪ್ರತಿಯೊಂದು ಅಧಿಕಾರವನ್ನು ಅಲ್ಲದಿದ್ದರೂ ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಏಳಿಗೆಗೆ ಸಂಬಂಧಿಸಿದಂತೆ ಯಾವುದೇ ಕ್ರಮ ಕೈಗೊಳ್ಳುವಂತಹ ಅಧಿಕಾರವನ್ನು ರಾಜ್ಯಾಂಗಕ್ಕೆ ನೀಡಿ, ಕಾನೂನು ಕ್ರಮ ಅನುಸರಿಸುವಂತೆ ಅವಕಾಶವನ್ನು ಕಲ್ಪಿಸಲಾಗಿದೆ.

ಆದರೆ ಸುಪ್ರೀಂಕೋರ್ಟ್ ಇಲ್ಲವೆನ್ನುತ್ತದೆ. ಏಕೆಂದರೆ ಸಂವಿಧಾನದ ಪ್ರಕಾರ ಎಸ್.ಸಿ./ಎಸ್.ಟಿ ಪಟ್ಟಿಯೊಳಗೆ ಸೇರಿಸುವುದು ಇಲ್ಲವೇ ತೆಗೆದು ಹಾಕುವುದು ಪಾರ್ಲಿಮೆಂಟ್ ಕೆಲಸವೆಂದು ಹೇಳಿದರೂ ಸಹ, ಅದು ಹೇಳಿದಂತೇನೂ ಇಲ್ಲ. ಅಂದರೆ ಅದರ ಪ್ರಕಾರ (ಸಂತೋಷ್ ಹೆಗ್ಡೆಯ ಮಾತುಗಳಲ್ಲಿ) 'ಪಟ್ಟಿಯಲ್ಲಿರುವ ವಿವಿಧ ಜಾತಿಗಳಲ್ಲಿ ಮಧ್ಯ ಪ್ರವೇಶ, ಅಡೆತಡೆಯುಂಟು ಮಾಡುವಿಕೆ, ಮರುಹೊಂದಾಣಿಕೆ, ಮರು ಸಂಘಟನೆ, ಅಥವ ಮರುವರ್ಗೀಕರಣ' ಮಾಡುವುದು ಪಾರ್ಲಿಮೆಂಟಿನ ಅಧಿನಿಯಮದಿಂದ ಮಾತ್ರ ಸಾಧ್ಯವೇ ಹೊರತು ಬೇರೆಯವರಿಂದ ಸಾಧ್ಯವಿಲ್ಲ. ಇದನ್ನು ಸಂವಿಧಾನ ಸಮ್ಮತಿಸುವುದಿಲ್ಲ. ಪರಿ

ಛೇದ ೩೪೧ರ ನೇರವಾದ ಸ್ಪಷ್ಟಾರ್ಥವನ್ನು ಕೋರ್ಟು ಹೇಗೆ ಬದಲಾಯಿಸಿದರೂ ಹೇಗೆ? ಪದಗಳನ್ನು ಏನು ಎಂದು ಅರ್ಥೈಸಬೇಕೋ ಅಥವ ಕೋರ್ಟಿಗೆ ಏನು ಬೇಕೋ ಹಾಗೆ ಅರ್ಥೈಸಬೇಕೋ ಎಂದಾಗ, ಸುಪ್ರೀಂ ಕೋರ್ಟು ಕೇವಲ ಬುರುಡೆ(ಹಮ್ಮಿ-ಡಮ್ಮಿ) ಎಂದೇನೂ ಅಲ್ಲ. ಆದರೆ ಪದಗಳು ಏನನ್ನು ಅಭಿವ್ಯಕ್ತ ಪಡಿಸುತ್ತಿವೆಯೋ ಅವನ್ನು ಮಾತ್ರ ಕೋರ್ಟು ವಿಧೇಯವಾಗಿ ಅನುಸರಿಸಬೇಕಾಗುತ್ತದೆ. ಎಲ್ಲಿ ಅಭಿವ್ಯಕ್ತಿ ಸ್ಪಷ್ಟವಿದೆಯೋ ಅದಕ್ಕೆ ಕೋರ್ಟು ಅನಗತ್ಯವಾಗಿ ಸೇರಿಸುವುದಾಗಲೀ, ಕಳೆಯುವುದಾಗಲೀ ಮಾಡುವಂಥದ್ದು ವಿವೇಚನೆಯಲ್ಲ. ಎಲ್ಲಿ ಪದಗಳ ಅರ್ಥ ಅಸ್ಪಷ್ಟ ಅಥವ ಸಂದೇಹಾತ್ಮಕವಾಗಿರುತ್ತದೋ ಅಂತಹ ಕಡೆ ಕೋರ್ಟು ಪ್ರವೇಶಿಸಿ, ಸಂವಿಧಾನ ನಿರೂಪಕರು ಏನನ್ನು ಬಯಸಿದ್ದರೋ ಅದನ್ನು ಮಾತ್ರ ವಿವರಿಸಬೇಕೇ ಹೊರತು ತನಗಿಷ್ಟ ಬಂದ ಅರ್ಥವನ್ನು ಕೊಡುವುದಲ್ಲ. ಪರಿಚ್ಛೇದ ೩೪೧ರಲ್ಲಿ ಅಂತಹ ಅಸ್ಪಷ್ಟ ಅಥವ ಸಂದೇಹಾತ್ಮಕವಾದುದೇನೂ ಇಲ್ಲ.

ಕಾನೂನು ಸಿದ್ಧಾಂತದ ಪ್ರಕಾರ ಸಂವಿಧಾನವನ್ನು ಸಾಮಾನ್ಯವಾದ ಕಾನೂನು ಅರ್ಥೈಸುವುದಕ್ಕಿಂತ ಭಿನ್ನವಾಗಿ ಅರ್ಥೈಸಬೇಕಾಗಿದೆ ನಿಜ. ಅಂದರೆ ಬದಲಾಗುತ್ತಿರುವ ಕಾಲಮಾನ ಮತ್ತು ಸಾಮಾಜಿಕ ಅಗತ್ಯಗಳಿಗೆ ಪೂರಕವಾಗಿರುವಂತೆ ಸಂವಿಧಾನವನ್ನು ಉದಾರವಾಗಿ ಮತ್ತು ವಿಶಾಲವಾಗಿ ಅರ್ಥೈಸಬೇಕಾಗುತ್ತದೆ. ಈ ಆಕರ್ಷಕ ನಿಲುವಿನ ಬಗ್ಗೆ ಚರ್ಚಿಸಲು ಇದು ಸೂಕ್ತ ಜಾಗವೇನಲ್ಲ. ಅಲ್ಲದೇ ನವ ಉದಾರೀಕರಣವಾದ ಆನಂತರದಲ್ಲಿ ಸಂಪ್ರದಾಯವಾದಿ ವಲಯಗಳಲ್ಲಿ ಬದಲಾಗುತ್ತಿರುವ ಕಾಲಮಾನದ ಬಗ್ಗೆ ತಕ್ಷಣದ ಉತ್ಸಾಹ ಚಿಮ್ಮುತ್ತಿರುವುದರ ಬಗ್ಗೆಯೂ ಅನುಮಾನ ವ್ಯಕ್ತಪಡಿಸದೆ ಸುಮ್ಮನಿರಲಾಗದು. ಇಂಥ ನಿಲುವಿನ ಬಗ್ಗೆ ಏನೇ ಅಭಿಪ್ರಾಯವಿದ್ದರೂ ಸಹ ಸುಪ್ರೀಂ ಕೋರ್ಟು ಸಂವಿಧಾನವನ್ನು ಪುನರ್ ರಚಿಸಬೇಕೆಂದೇನೂ ಅರ್ಥೈಸುವಂತಿಲ್ಲ. ಅದೇನೇ ಇರಲಿ, ಸಂವಿಧಾನದಲ್ಲಿ ಬಳಕೆಯಾಗಿರುವಂತಹ ಪದಗಳು ಪರಿಕಲ್ಪನೆಗಳಾಗಿರಲಿ ಅಥವ ಸಾಮಾನ್ಯೀಕರಣವಾಗಿರಲಿ ಅವುಗಳನ್ನು ಬದಲಾದ ಸಂದರ್ಭಗಳು, ಭರವಸೆಗಳು ಮತ್ತು ಆಶಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅರ್ಥೈಸಬೇಕಾಗುತ್ತದೆಂದು ಸಂಕ್ಷಿಪ್ತವಾಗಿ ಹೇಳಬಹುದು.

ಪರಿಚ್ಛೇದ ೨೧ರಲ್ಲಿ ಬಳಸಿರುವ "ಲೈಫ್" ಎಂಬ ಅಮೂರ್ತವಾದ ನಾಮಪದಕ್ಕೆ ಕೋರ್ಟುಗಳು ನೀಡಿರುವ ವಿಸ್ತಾರವಾದ ಅರ್ಥಗಳನ್ನು ಇಲ್ಲಿ ನಿದರ್ಶನವನ್ನಾಗಿ ಗಮನಿಸಬಹುದು. ಆದರೆ ಯಾರು ಏನು ಮಾಡಬೇಕು/ಬೇಡ ಎಂಬುದರ ಬಗ್ಗೆ ಇರುವ ಸರಳವಾದ ನೇರ ಪದಗಳಿಗೆ ಅವುಗಳ ನಿರ್ದಿಷ್ಟವಾದ ಸಾಹಿತ್ಯಿಕ ಅರ್ಥಗಳನ್ನಷ್ಟೇ ನೀಡಬೇಕೆ ವಿನಃ, ನ್ಯಾಯಾಧೀಶರ ದೃಷ್ಟಿಕೋನ ಮತ್ತು ಮೌಲ್ಯಗಳ ಮೇರೆಗೆ ಅಲ್ಲ. ಏಕೆಂದರೆ ನಾವೀಗಾಗಲೇ ಇಚ್ಛಿಸಿದಂತೆ, ಸಂವಿಧಾನವನ್ನು ನ್ಯಾಯಾಧೀಶರ ದೃಷ್ಟಿಕೋನ ಮತ್ತು ಮೌಲ್ಯಗಳಿಗೆ ಪೂರಕವಾಗಿ ಮರು ರಚಿಸಲಾಗದು. ಸಂವಿಧಾನ ಸಭೆಯ ಬಗ್ಗೆ ನಮಗಿರುವ ಒಂದೇ ಒಂದು ಟೀಕೆಯೆಂದರೆ ಅದನ್ನು ಸಾರ್ವತ್ರಿಕ ವಯಸ್ಕಮತದಾನದ ಮೂಲಕ ಆರಿಸುದಂತದ್ದಲ್ಲ. ಹಾಗೆಯೇ ಎರಡನೆಯದ್ದೂ ಸಹ ಚುನಾವಣೆಯಿಲ್ಲದೆ ಆಗುವುದು ನಮಗೆ ಬೇಡ. ಅದೇನೇ ಇರಲಿ ಬದಲಾಗುತ್ತಿರುವ ಕಾಲವನ್ನು ಒಂದು ಮಾಂತ್ರಿಕ ಕೋಲನ್ನಾಗಿ ಬಳಸಿ ಸಂವಿಧಾನವನ್ನು ಈಗ ಇರುವುದಕ್ಕಿಂತಲೂ ಬೇರೆಯಾಗಿ ಓದುವುದಾದರೆ, ಅಂಥ ಸೂಕ್ತ ಬದಲಾವಣೆ ಈ ಸಂದರ್ಭದಲ್ಲಿ ಬೇಕಾಗಿರುವುದು ವಂಚಿತರಲ್ಲೇ ವಂಚಿತರಾಗಿರುವವರ ಆಶಯಗಳನ್ನು ಈಡೇರಿಸುವುದೇ ಆಗಿದೆ. ಅದನ್ನು ಬಿಟ್ಟು ಅನುಕೂಲ ಸ್ಥಿತಿಯಲ್ಲಿರುವವರ ಕೆಳಗೆ ನಿರಂತರವಾಗಿ ಸಂಕಟ ಅನುಭವಿಸುತ್ತಿರುವವರನ್ನು ವಿರೋಧಿಸುವುದು ಅಲ್ಲ.

ಅಂಬೇಡ್ಕರ್‌ರವರ ಗ್ರಹಿಕೆಗಳು

ಪರಿಚ್ಛೇದ ೩೪೧ಕ್ಕೆ ಸಂತೋಷ್ ಹೆಗ್ಡೆ ನೀಡಿರುವ ವಿಶಾಲ ಗ್ರಹಿಕೆಗೆ ಪೂರಕವಾಗಿ ಸಂವಿಧಾನ ಸಭೆಯ ಚರ್ಚೆಗಳಲ್ಲಿ ಅಂಬೇಡ್ಕರ್‌ರವರು ಗಮನಿಸಿದ ಸಂಗತಿಯನ್ನು ಉಲ್ಲೇಖಿಸುತ್ತಾರೆ. ಎಸ್.ಟಿ./ಎಸ್.ಟಿ ಪಟ್ಟಿಯನ್ನು ಘೋಷಿಸುವ ರಾಷ್ಟ್ರಪತಿಯವರಿಗೆ ಆ ಪಟ್ಟಿಯಲ್ಲಿ ಸಮುದಾಯಗಳನ್ನು ಸೇರಿಸುವ ಇಲ್ಲವೇ ತೆಗೆಯುವ ಅಧಿಕಾರವನ್ನು ಸಂಸತ್ತಿಗೆ ಮಾತ್ರ ನೀಡಿದ್ದೇವೆಯೇ ವಿನಃ ಅವರಿಗೆ ಏಕೆ ನೀಡಿಲ್ಲ? ಎನ್ನುವ ಪ್ರಶ್ನೆಗೆ ಉತ್ತರವಾಗಿ ಅಂಬೇಡ್ಕರ್ ಹೇಳಿದ್ದೇನೆಂದರೆ "ರಾಷ್ಟ್ರಪತಿಯವರು ಪ್ರಕಟಪಡಿಸಿದ ಗೊತ್ತುವಳಿಗೆ ಯಾವುದೇ ರಾಜಕೀಯ ಅಡ್ಡಿ ಬಾರದಂತೆ ತಡೆಯುವುದೇ ಆಗಿದೆ". ಅಂಬೇಡ್ಕರ್ ಬಳಸಿದ "DISTRUBANCE" ಪದವನ್ನು ಈ ಸಂದರ್ಭದಲ್ಲಿ ಮಿತಿಮೀರಿ ಬಳಸಿ ಪರಿಚ್ಛೇದ ೩೪೧ (೨)ರಲ್ಲಿ ಬರುವ "ಸೇರಿಸು" ಅಥವಾ "ತೆಗೆ" (Include or exclude) ಎನ್ನುವುದಕ್ಕೆ ಸಮುದಾಯವೊಂದನ್ನು ಸೇರಿಸುವುದು ಅಥವ ಅಳಿಸುವುದು ಎನ್ನುವ ನಿರ್ಣಯಕ್ಕೆ ಬರಲು ಆ ಪದವನ್ನು (Distrubance) ಎಳೆದು ತರಲಾಗಿದೆ. ಆದರೆ ಅಂಬೇಡ್ಕರ್‌ರವರು ಮಾತನಾಡಿದ್ದೇ ಬೇರೆ ಏನನ್ನೋ. ಅವರ ಸ್ಪಷ್ಟವಾದ ಗ್ರಹಿಕೆಯೆಂದರೆ ರಾಷ್ಟ್ರಪತಿ ಅಧಿಕಾರದಲ್ಲಿರುವ ಪಕ್ಷವೊಂದರ ಕೈಗೊಂಬೆಯಾಗಿ ಎಸ್.ಸಿ./ಎಸ್.ಟಿ ಪಟ್ಟಿಯಲ್ಲಿರುವ ಸಮುದಾಯಗಳನ್ನು ತೆಗೆಯುವ ಇಲ್ಲವೇ ಹೊಸದಾಗಿ ಸೇರಿಸುವ ಕ್ರಮವನ್ನು ಕೈಗೊಳ್ಳಬಹುದಾಗಿದೆ.

ಆದ್ದರಿಂದ ಸಂಸತ್ತಿನಲ್ಲಿ ಬಹುಮತವಿರುವ ಒಂದು ರಾಜಕೀಯ ಪಕ್ಷವು ಕಾನೂನು ಮಾಡುವ ಪ್ರಕ್ರಿಯೆಯಲ್ಲಿ ನಡೆಯುವ ವಾದ-ವಿವಾದಗಳು ಅಂಥ ಮೋಸದ ರಾಜಕೀಯವನ್ನು ತಡೆಯುತ್ತದೆ ಎಂಬುವುದೇ ಅಂಬೇಡ್ಕರ್‌ರವರ ಗ್ರಹಿಕೆಯಾಗಿತ್ತು. ಈ ಸಮಸ್ಯೆಯನ್ನಷ್ಟೇ ಅವರು ಗುರುತಿಸಿದ್ದರಲ್ಲದೆ, ಪಟ್ಟಿಯಲ್ಲಿರುವ ಸಮುದಾಯಗಳನ್ನು ತೆಗೆಯುವುದು ಅಥವ ಹೊಸದಾಗಿ ಸೇರಿಸುವುದರ ಬಗ್ಗೆ ಅವರು 'DISTRUBANCE' ಪದವನ್ನು ಬಳಸಿಲ್ಲ. ಒಂದು ವಿಷಯದ ಬಗ್ಗೆ ಮಾತನಾಡುವ ವ್ಯಕ್ತಿ ಬಳಸುವ ಪದಕ್ಕೆ ಅರ್ಥವನ್ನು ನೀಡುವಾಗ ಅದನ್ನು ಬಳಸಿದ ವ್ಯಕ್ತಿಯ ಗ್ರಹಿಕೆಯಲ್ಲಿ ಆ ವಿಷಯ ಇತ್ತೇ ಎಂಬುದು ಮುಖ್ಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಪ್ರಕರಣಗಳನ್ನು ಸ್ಪಷ್ಟವಾಗಿ ಗ್ರಹಿಸುವ ಸಲುವಾಗಿ ಸುಪ್ರೀಂ ಕೋರ್ಟು ಸಂವಿಧಾನ ಸಭೆಯಲ್ಲಿ ನಡೆದ ಚರ್ಚೆಗಳನ್ನು ಗಮನಿಸಲು ಅನುಮತಿಯನ್ನು ನೀಡಿದೆ. ಒಂದು ಪದದ ಗ್ರಹಿತವನ್ನು ಒಂದು ಸಂದರ್ಭದ ಸಂಬಂಧದಿಂದ ತೆಗೆದು ಮತ್ತೊಂದು ಸಂದರ್ಭದಲ್ಲಿಟ್ಟು ಅರ್ಥ ಹೊರಡಿಸಲು ಆ ಚರ್ಚೆಗಳನ್ನು ಬಳಸಬಹುದೆಂದು ಸುಪ್ರೀಂಕೋರ್ಟು ಅನುಮತಿಸಿಲ್ಲ ಎಂಬುದನ್ನು ಗಮನಿಸಬೇಕಾಗುತ್ತದೆ.

ಸುಪ್ರೀಂಕೋರ್ಟಿನ ಮತ್ತೊಂದು ಹಾಗು ವಿಚಿತ್ರ ದೃಷ್ಟಿಕೋನ/ಗ್ರಹಿಕೆ ಎಂದರೆ ಪರಿಶಿಷ್ಟ ಜಾತಿ ಎನ್ನೋದು ಒಂದೇ ವರ್ಗವಾಗಿದ್ದು, ಏಕರೂಪಿ ಅಭಿವ್ಯಕ್ತಿಯಾಗಿರುವುದರಿಂದ ಪರಿಶಿಷ್ಟ ಜಾತಿಯಲ್ಲೇ ಮತ್ತೆ ಉಪಗುಂಪುಗಳಾಗಿಸುವುದನ್ನು ಸಮ್ಮತಿಸಲಾಗದು. ಈ ಆಲೋಚನೆಯ ತರ್ಕದ ಪ್ರಕಾರ ನಿರ್ಣಯ ಮಾಡುವುದಾದರೆ, ಇದೇ ದೃಷ್ಟಿಕೋನವನ್ನು ಪರಿಶಿಷ್ಟ ಪಂಗಡಗಳಿಗೂ ಅನ್ವಯಿಸಬೇಕಾಗುತ್ತದೆ. ಅಲ್ಲದೆ ಇದು ಪರಿಶಿಷ್ಟ ಜಾತಿಗಳ ವರ್ಗೀಕರಣ ಮಾಡುವ ಅಧಿಕಾರ ಸಂಸತ್ತಿನಿಂದ ಕಿತ್ತು ಹಾಕಿ ಕೋರ್ಟಿಗೆ ವಹಿಸಿ ಕೊಟ್ಟಂತಾಗುತ್ತದೆ. ಅಂದರೆ ಗುಂಪುಗಳ ಮರುವಿಂಗಡಣೆಯ ರಾಜ್ಯ ಸರ್ಕಾರ ಅಥವ ಪಾರ್ಲಿಮೆಂಟಿನ ಯಾವುದೇ ಶಾಸನಾತ್ಮಕ ಕ್ರಮವು ಅಸಂವಿಧಾನಾತ್ಮಕವಾಗುತ್ತದೆ.

ಎಸ್.ಬಿ. ಸಿನ್ಹಾರ ಮತ್ತೆ ಮತ್ತೆ ಎಳೆದಾಡುವ ದೀರ್ಘವಾದ ತೀರ್ಪು, ಈ ಅಂಶದತ್ತಲೇ ಸಂಪೂರ್ಣ ಮಗ್ನವಾಗಿ ಬಿಡುತ್ತದೆ. ಹೀಗಿದ್ದರೂ ಅದನ್ನು ಡಜನ್ ಸಲ ಅತ್ತಿಂದಿತ್ತ ಓದಿದರೂ ಸಹ ಅದರಲ್ಲಿ ಯಾವುದೇ ತರ್ಕ ಕಾಣುವುದಿಲ್ಲ. ಇವತ್ತು ದೇಶದ ಈಶನ್ಯ ದಿಕ್ಕಿನಲ್ಲಿರುವ ಪರಿಶಿಷ್ಟ ಪಂಗಡಗಳನ್ನು ದೇಶದ ಇತರ ಬುಡಕಟ್ಟು ಸಮುದಾಯಗಳಿಂದ ಪ್ರತ್ಯೇಕಿಸುವ ಸಂವಿಧಾನದ ಪ್ರಕರಣಗಳನ್ನು ಎಸ್.ಬಿ.ಸಿನ್ಹಾ ಉದಾಹರಿಸುತ್ತಾ ಎಲ್ಲಿ ಎಸ್.ಟಿ./ಎಸ್.ಟಿಗಳನ್ನು ಮರುವಿಂಗಡಣೆ ಮಾಡಬೇಕೋ ಅಲ್ಲಿ ಸಂವಿಧಾನವೇ ಹಾಗೆ ಮಾಡಿದ್ದು, ಎಲ್ಲಿ ಹಾಗೆ ಮಾಡಲಾಗಲಿಲ್ಲವೋ ಅಂಥ ವಿಂಗಡಣೆಯನ್ನು ಸಮ್ಮತಿಸಲಾಗದೆಂದು ಹೇಳುತ್ತಾರೆ. ಇದರೆಲ್ಲದರ ಅಂತಿಮ ತೀರ್ಮಾನವೆಂದರೆ ಎಸ್.ಟಿ./ಎಸ್.ಟಿಗಳಲ್ಲೇ ಸಾಮಾನ್ಯವಾಗಿರುವ ಅಸಮಾನತೆಯು ಹುಟ್ಟಿನಿಂದ ಬಂದದ್ದೇನು ಅಲ್ಲವೆಂದು ಸಂವಿಧಾನ ಪಟುಗಳು, ಅಂದಿನ ಅಸ್ಸಾಂನ ನಿರ್ದಿಷ್ಟ ಬುಡಕಟ್ಟು ಪಂಗಡಗಳ ಚರಿತ್ರೆಯನ್ನು ಗಮನಿಸಿ ನಿರ್ಧರಿಸಿದ್ದರು. ಇದಕ್ಕಿಂತಲೂ ಕಾರಣೀಭೂತವಾದದ್ದೇನು, ಇಲ್ಲಿ ಬೇಕಾಗಿಲ್ಲ. ಅಂದರೆ ಯಾವಾಗ ಕಾನೂನು ಸಿದ್ಧಾಂತ ಸಂವಿಧಾನವನ್ನು ಬೇರೆಯದೇ ರೀತಿಯಲ್ಲಿ ಅರ್ಥೈಸುತ್ತದೋ ಆಗ ಸಂವಿಧಾನಾತ್ಮಕ ಕಾನೂನು ಭಿನ್ನವಾದ ಹೆಜ್ಜೆಯನ್ನಿಡುತ್ತದೆ. ಇದು ಸಾಮಾನ್ಯ ಕಾನೂನನ್ನು ಅರ್ಥೈಸಿದಕ್ಕಿಂತಲೂ ಭಿನ್ನವಾಗಿರುತ್ತದೆ.

ಒಂದು ವಿಷಯದ ಬಗ್ಗೆ ಮಾತನಾಡುವ ವ್ಯಕ್ತಿ ಬಳಸುವ ಪದಕ್ಕೆ ಅರ್ಥವನ್ನು ನೀಡುವಾಗ ಅದನ್ನು ಬಳಸಿದ ವ್ಯಕ್ತಿಯ ಗ್ರಹಿಕೆಯಲ್ಲಿ ಆ ವಿಷಯ ಇತ್ತೇ ಎಂಬುದು ಮುಖ್ಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಪ್ರಕರಣಗಳನ್ನು ಸ್ಪಷ್ಟವಾಗಿ ಗ್ರಹಿಸುವ ಸಲುವಾಗಿ ಸುಪ್ರೀಂ ಕೋರ್ಟು ಸಂವಿಧಾನ ಸಭೆಯಲ್ಲಿ ನಡೆದ ಚರ್ಚೆಗಳನ್ನು ಗಮನಿಸಲು ಅನುಮತಿಯನ್ನು ನೀಡಿದೆ. ಒಂದು ಪದದ ಗ್ರಹಿತವನ್ನು ಒಂದು ಸಂದರ್ಭದ ಸಂಬಂಧದಿಂದ ತೆಗೆದು ಮತ್ತೊಂದು ಸಂದರ್ಭದಲ್ಲಿಟ್ಟು ಅರ್ಥ ಹೊರಡಿಸಲು ಆ ಚರ್ಚೆಗಳನ್ನು ಬಳಸಬಹುದೆಂದು ಸುಪ್ರೀಂ ಕೋರ್ಟು ಅನುಮತಿಸಿಲ್ಲ ಎಂಬುದನ್ನು ಗಮನಿಸಬೇಕಾಗುತ್ತದೆ.

ಇಲ್ಲಿ ಮುಖ್ಯವಾಗಿ ಗಮನ್ನಿಸಬೇಕಾಗಿರುವ ಸಂಗತಿಯೆಂದರೆ ಎಸ್.ಬಿ.ಸಿನ್ಹಾರಾಗಲೀ ಅಥವ ಇತರೇ ನ್ಯಾಯಾಧೀಶರಾಗಲೀ ಯಾರು ಸಹ ರಾಜ್ಯ ಸರ್ಕಾರದ ನಿಲುವಿನ ಬಗ್ಗೆ ಸಂದೇಹವನ್ನು ವ್ಯಕ್ತಪಡಿಸದಿರುವುದು. ಅಂದರೆ ಪರಿಶಿಷ್ಟ ಜಾತಿಗಳಲ್ಲಿರುವ ಅಸಮಾನತೆ ಹಾಗು ಪರಿಶಿಷ್ಟ ಜಾತಿಗಳಿಗೆ ನೀಡಿರುವ ಮೀಸಲಾತಿಯಲ್ಲಿ ವಿಚಿತ್ರವೆಂಬಂತೆ ೫೯ ಜಾತಿಗಳಲ್ಲಿ ಕೆಲವರೇ ಅದರ ಪ್ರಯೋಜನ ಪಡೆದುಕೊಂಡಿದ್ದಾರೆನ್ನುವುದರ ಬಗ್ಗೆ ಯಾವುದೇ ಸಂದೇಹವಿಲ್ಲ. ಎಸ್.ಬಿ.ಸಿನ್ಹಾರವರ ಮಾತುಗಳಲ್ಲೇ ಅದನ್ನು ಆಲಿಸುವುದು ಸೂಕ್ತ, "ಈಗಾಗಲೇ ಜಾರಿಗೊಳಿಸಿರುವ ಶಾಸನವು ೧೯೫೨ರಲ್ಲಿ ನ್ಯಾಯಮೂರ್ತಿ ರಾಜು ವರದಿಯಲ್ಲಿರುವ ಪರಿಶೀಲನಾ ಸಮಿತಿಯ ಅಧಿನಿಯಮ ೩ನೇ ವಿಭಾಗದ ಪ್ರಕಾರ ಪರಿಶೀಲನಾ ನ್ಯಾಯಾಲಯವನ್ನು ನೇಮಿಸಿ, ಅದರ ವರದಿಯ ಮೇರೆಗೆ ಇದೆಯೇ ಎಂಬುದರ ಕುರಿತು ಆಳವಾದ ಪರಿಶೀಲನೆ ಅಗತ್ಯವೆಂದೇನು ಅನಿಸುವುದಿಲ್ಲ. ಅದನ್ನು ಹೊಗಳುವ ಅಥವಾ ತೆಗಳುವ ಅವಶ್ಯಕತೆಯೂ ಇರುವುದಿಲ್ಲ."

ಕಾನೂನಿಣ ಪ್ರಶ್ನೆ

ಇಲ್ಲಿ ಪ್ರಶ್ನೆಯೆನ್ನುವುದನ್ನು ಸಂಪೂರ್ಣವಾಗಿ ಕಾನೂನಿನ ಪ್ರಶ್ನೆಗೆ ಭಟ್ಟಿ ಇಳಿಸಲಾಗುತ್ತದೆ. ಪರಿಶಿಷ್ಟಜಾತಿಗಳ ಮೀಸಲಾತಿಯಿಂದ ಅಲ್ಪವೇ ಪ್ರಯೋಜನ ಪಡೆದಿರುವ ಪರಿಶಿಷ್ಟಜಾತಿಗಳನ್ನು ಉಪಗುಂಪುಗಳನ್ನಾಗಿ ಗುರುತಿಸಿ ಅವುಗಳಿಗೆ ಪ್ರತ್ಯೇಕ ಮೀಸಲಾತಿಯನ್ನು ಕಲ್ಪಿಸಲು ಸಮ್ಮತಿಸಬಹುದೇ? ಹೀಗಾದಾಗ ಮೀಸಲಾತಿಯಲ್ಲಿ ಸಂಖ್ಯಾವಾರು ನೆಲೆಗಿಂತ ಹೆಚ್ಚಾಗಿ ಪ್ರಯೋಜನ ಪಡೆದಿರುವವರನ್ನು ಶೇಷ ಸ್ಥಿತಿಯಲ್ಲೇ ಬಿಟ್ಟು ಬಿಡಬಹುದೇ ಎಂಬುದಾಗಿದೆ. ಇದು ಆಗದು ಎಂದು ಸುಪ್ರೀಂಕೋರ್ಟು ಹೇಳುತ್ತದೆ. ಇದಕ್ಕೆ ಕಾರಣಗಳನ್ನು ನೋಡುವ ಮೊದಲು ಅದೇ ನ್ಯಾಯಾಧೀಶ ಹೇಳುವಂತೆ ಸುಪ್ರೀಂಕೋರ್ಟ್ ಕೆಲಸ ಏನೆಂಬುದನ್ನು ಗಮನಿಸಬೇಕಾಗಿದೆ,

"ಈಗಾಗಲೇ ಹೊರಡಿಸಲಾಗಿರುವ ಶಾಸನವನ್ನು ಅರ್ಥೈಸಿರುವ ವಿಧಾನ ವ್ಯಕ್ತಿನಿಷ್ಠವಾಗಿರದೆ ಅದರ ಅರ್ಥೈಸುವಿಕೆಯು ವಸ್ತುನಿಷ್ಟವಾಗಿರುತ್ತದೆ. ಸಂವಿಧಾನ ಪಟುಗಳು ಉದ್ದೇಶಿಸಿದ ಗುರಿಯನ್ನು ಸಾಧಿಸಲು ಸಂವಿಧಾನ ಬದ್ಧ ನಿಯಮಗಳನ್ನು ಅನ್ವಯಿಸಿ ಒಂದು ಕಾನೂನು ತನ್ನ ಘೋಷಿತ ಅರ್ಥದಲ್ಲಿ ನಿಜವೇ ಎಂಬುದನ್ನು ನ್ಯಾಯಾಲಯಗಳು ಸಾಬೀತು ಮಾಡಿವೆ"

"ಶಾಸನದ ವ್ಯಕ್ತಿನಿಷ್ಠ ಉದ್ದೇಶ"? ಅದು ಅರ್ಥವನ್ನು ಮಾತ್ರ ಸೂಚಿಸಬಹುದಷ್ಟೆ ವಿನಃ ಬೇರೇನೂ ಸಾಧ್ಯವಿಲ್ಲ. ಇದುವೇ ಶಾಸನದ ವಸ್ತುನಿಷ್ಠ ಸಂಗತಿ. ಅಥವ ನ್ಯಾಯಾಧೀಶ ಸೂಚಿಸುತ್ತಿರುವ ವ್ಯಕ್ತಿನಿಷ್ಟ ಉದ್ದೇಶವೇ ಶಾಸನದ್ದಾಗಿದೆಯೋ? ಆದರೆ ಉದ್ದೇಶ ವ್ಯಕ್ತಿನಿಷ್ಟವಾಗಿರದೆ ಮತ್ತೇನಾಗಿರಲು ಸಾಧ್ಯ? ಒಂದು ವಿಷಯದ ವ್ಯಕ್ತಿನಿಷ್ಟ ಮೌಲ್ಯೀಕರಣ, ವ್ಯಕ್ತಿನಿಷ್ಟ ನಿರ್ಧಾರ ಮಾಡುವಿಕೆ, ಅಧಿಕಾರ ಚಲಾಯಿಸುವ ವ್ಯಕ್ತಿನಿಷ್ಟ ವಿವೇಚನೆ ಮುಂತಾದುವುಗಳು ಮಾಮೂಲಿಯಾಗಿಬಿಟ್ಟಿವೆ. ಈ ಸಂಗತಿಗಳಲ್ಲೇ ವ್ಯಕ್ತಿನಿಷ್ಟತೆ ಮತ್ತು ವಸ್ತುನಿಷ್ಟತೆ ಗ್ರಾಹ್ಯವಾಗುವುದು. ಆದರೆ 'ಉದ್ದೇಶ'ವೊಂದರಲ್ಲಿ ವಸ್ತುನಿಷ್ಟತೆ ಇರುವುದು ಸಾಧ್ಯವೇ ಇಲ್ಲವಲ್ಲ. ಹೀಗಿರುವಲ್ಲಿ 'ಶಾಸನದ ವಸ್ತುನಿಷ್ಟ ಅರ್ಥ' ಎನ್ನುವುದರಲ್ಲಿ ಇರುವುದಾದರೂ ಏನು? ಅಂದರೆ ನ್ಯಾಯಾಧೀಶ ಏನು ಹೇಳುತ್ತಿರಬಹುದೆಂದರೆ ಅಂಥ ಶಾಸನದ ಅಗತ್ಯವಾದರೂ ಏನಿದೆ ಎಂಬುದನ್ನು ಸಂವಿಧಾನ ರಚನಾಕಾರರು ಪರಿಶಿಷ್ಟಜಾತಿಗಳನ್ನು ನಿರ್ದಿಷ್ಟಪಡಿಸಿ, ಅವರಿಗೆ ವಿಶೇಷ ಸಲವತ್ತುಗಳನ್ನು ಒದಗಿಸಿರುವ ಉದ್ದೇಶದ ಹಿನ್ನೆಲೆಯಲ್ಲಿ ಪರಿಶೀಲಿಸಿ ಅದರ ಕಾನೂನಾತ್ಮಕ ಅಧಿಕಾರವನ್ನು ಸಂವಿಧಾನದ ಚೌಕಟ್ಟಿನಲ್ಲಿ ಮೌಲ್ಯೀಕರಿಸುವುದೇ ಆಗಿದೆ.

> **ಸಂವಿಧಾನ ಪಟುಗಳು ಉದ್ದೇಶಿಸಿದ ಗುರಿಯನ್ನು ಸಾಧಿಸಲು ಸಂವಿಧಾನ ಬದ್ಧ ನಿಯಮಗಳನ್ನು ಅನ್ವಯಿಸಿ ಒಂದು ಕಾನೂನು ತನ್ನ ಘೋಷಿತ ಅರ್ಥದಲ್ಲಿ ನಿಜವೇ ಎಂಬುದನ್ನು ನ್ಯಾಯಾಲಯಗಳು ಸಾಬೀತು ಮಾಡಿವೆ "ಶಾಸನದ ವ್ಯಕ್ತಿನಿಷ್ಠ ಉದ್ದೇಶ"? ಅದು ಅರ್ಥವನ್ನು ಮಾತ್ರ ಸೂಚಿಸಬಹುದಷ್ಟೆ ವಿನಃ ಬೇರೆನೂ ಸಾಧ್ಯವಿಲ್ಲ. ಇದುವೇ ಶಾಸನದ ವಸ್ತುನಿಷ್ಠ ಸಂಗತಿ. ಅಥವ ನ್ಯಾಯಾಧೀಶ ಸೂಚಿಸುತ್ತಿರುವ ವ್ಯಕ್ತಿನಿಷ್ಟ ಉದ್ದೇಶವೇ ಶಾಸನದ್ದಾಗಿದೆಯೋ?**

'ಅಸಮ್ಮತಿಸಲಾಗದು' ಎನ್ನುವುದರ ಔಚಿತ್ಯ

ಅಂತಹ ಅಧಿಕಾರ ಇಲ್ಲ ಎನ್ನುವುದರ ಬಗ್ಗೆ ಎಸ್.ಬಿ.ಸಿನ್ಹಾ ನೀಡುವ ಕಾರಣಗಳಲ್ಲಿ ಕೆಲವು ಕೆಳಗಿನಂತಿವೆ:

"ಮುಂದುವರೆದ ಇತರ ಜನವರ್ಗದೊಡನೆ ಸಮಾನ ವೇದಿಕೆಗೆ, ವಂಚಿತ ವರ್ಗದವರನ್ನು ತರುವ ಸಲುವಾಗಿ ನಮ್ಮ ಸಂವಿಧಾನವು ಅವರಿಗೆ ಸಮಾನತೆಯ ನೀತಿಯಡಿ ವಿಶೇಷ ಸಂರಕ್ಷಣೆಯನ್ನು ಒದಗಿಸಿದೆ. ಅಂತಹ ವಿಶೇಷ ಸಂರಕ್ಷಣೆಯ ಪ್ರಯೋಜನದ ಅಗತ್ಯವಿರುವ ವಂಚಿತ ವರ್ಗವೊಂದನ್ನು ತನ್ನೊಳಗೇ ತಾರತಮ್ಯಕ್ಕೆ ಒಳಪಡಿಸಲಾಗದು. ಅಂದರೆ ಹಾಗೇ ಹೇಳಿದ ಒಂದು ವರ್ಗವೊಂದರ ಸದಸ್ಯವರ್ಗವನ್ನು ಇನ್ನೊಂದು ಗುಂಪು ಅದಕ್ಕಿಂತಲೂ ಅನುಕೂಲ ಸ್ಥಿಯಲ್ಲಿದೆಯೆಂಬ ಊಹೆಯೊಡನೆ ತಾರತಮ್ಯಗೊಳಿಸಲಾಗದು. ಕಾರಣ ಸಾರ್ವಜನಿಕ ಸೇವೆಯಲ್ಲಿ ಅವುಗಳೆರಡೂ ಸಹ ಕಮ್ಮಿ ಪ್ರಾತಿನಿಧ್ಯ ಹೊಂದಿದೆಯಾದ್ದರಿಂದ ಅತ್ಯಂತ ಹಿಂದುಳಿದಿರುವಿಕೆಯ ಮಾನದಂಡದಲ್ಲಿ ಒಂದೇಯಾಗಿವೆ."

"ಊಹೆ" ಇಲ್ಲಿ ಸೂಕ್ತವಾದುದ್ದಲ್ಲ. ಈ ಹಿಂದೆ ಇದೇ ನ್ಯಾಯಾಧೀಶ, ಜಸ್ಟೀಸ್ ರಾಜು ವರದಿಯನ್ನು ವಿವರಿಸಿದ ಆಧಾರದಲ್ಲೇ ಇದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಈ ವರದಿಯ ನೈಜ ಆಧಾರದ ಮೇಲೆ ಸಮಯ ವ್ಯಯಿಸುವುದು ಅನಗತ್ಯವೆಂದು ಘೋಷಿಸಿದ ಆತನೇ, ಆಗ ಅದೇ ವರದಿಯ ಆಧಾರದಲ್ಲಿ "ಊಹೆ" ಎಂಬ ಪದವನ್ನು ಬಳಸಲಾಗುವುದಿಲ್ಲ. ಆದ್ದರಿಂದ ಅಸಮ್ಮತಿಸಲಾಗದು ಎನ್ನುವುದರ ಔಚಿತ್ಯದ ತರ್ಕವನ್ನು ಗಮನಿಸಿದಲ್ಲಿ, ಮೊದಲನೆಯದಾಗಿ ಒಳವರ್ಗೀಕರಣವೆನ್ನುವುದು ವ್ಯಕ್ತಿಗಳ ಮಧ್ಯೆ ಇರದೆ ಅದು ಸ್ಪಷ್ಟವಾಗಿ ಗುರುತಿಸಲಾಗಿರುವ ಉಪಗುಂಪುಗಳ ನಡುವೆ ಇರುವುದಾಗಿದೆ. ಅವು ಪ್ರತ್ಯೇಕ ಜಾತಿಗಳಾಗಿ, ಪ್ರತ್ಯೇಕ ಹೆಸರು, ಕೆಲವೊಮ್ಮೆ ಪ್ರತ್ಯೇಕ ಕುಲ ಕಸುಬು ಹಾಗೂ ಪ್ರತ್ಯೇಕ ಸಾಂಸ್ಕೃತಿಕ ಆಚರಣೆಗಳನ್ನು ಹೊಂದಿವೆ. ಅವರ ಮಧ್ಯೆ ಅಂತರ್ ವಿವಾಹ ನಡೆಯದು ಮತ್ತು ಸಾಮಾನ್ಯವಾಗಿ ಅವರಲ್ಲೇ ಮೇಲಿನವರು ಕೆಳಗಿನವರೊಡನೆ ಊಟವನ್ನು ಸಹ ಮಾಡುವುದಿಲ್ಲ. ಹೀಗೆ ಅವರೆಲ್ಲಾ ಸ್ಪಷ್ಟವಾಗಿ ಗುರುತಿಸಲ್ಪಡುವ ಗುಂಪುಗಳಾಗಿವೆ. ಉದ್ಯೋಗದಲ್ಲಿ ಮೀಸಲಾತಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನಾಗರೀಕ ಸೇವೆಗಳಲ್ಲಿ ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಅಸಮರ್ಪಕ ಆಗಿರುವುದರಿಂದಲೇ ಪರಿಚ್ಛೇದ ೧೬(೪)ನ್ನು ಉದ್ದೇಶಾತ್ಮಕವಾಗಿಯೇ ತಂದಿರುವುದು.

"ಈ ಅನುಚ್ಛೇದದ ಪ್ರಕಾರ ಯಾವುದೇ ಹಿಂದುಳಿದ ವರ್ಗದ ನಾಗರೀಕರು ರಾಜ್ಯದ ಅಧೀನದಲ್ಲಿರುವ ಸೇವೆಗಳಲ್ಲಿ ಅಸಮರ್ಪಕ ಪ್ರಾತಿನಿಧ್ಯವನ್ನು ಹೊಂದಿದ್ದಾರೆಂದು ರಾಜ್ಯವು ಅಭಿಪ್ರಾಯ ಪಟ್ಟಲ್ಲಿ ಅಂಥವರಿಗಾಗಿ ನೇಮಕಾತಿಗಳನ್ನು ಅಥವಾ ಹುದ್ದೆಗಳನ್ನು ಮೀಸಲಿಡುವುದಕ್ಕಾಗಿ ಯಾವುದೇ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕುದ್ದಲ್ಲ ಎನ್ನುವುದೇನೂ ಅಲ್ಲಿ ಇಲ್ಲ."

ಹೀಗೆ ಪರಿಶಿಷ್ಟಜಾತಿಗಳೆಂದು ೫೯ ಜಾತಿಗಳನ್ನು ಗುರುತಿಸಿದ್ದಲ್ಲದೆ, ನಾಗರೀಕ ಸೇವೆಗಳಲ್ಲಿ ಅವರು ಅಸಮರ್ಪಕ ಪ್ರಾತಿನಿಧ್ಯ ಹೊಂದಿರುವುದನ್ನು ಗಮನಿಸಿ, ಸರ್ಕಾರಿ ಉದ್ಯೋಗಗಳಲ್ಲಿ ಅವರಿಗೆ ಮೀಸಲಾತಿಯನ್ನು ಒದಗಿಸಲಾಗಿದೆ. ಹೀಗಿದ್ದರೂ ತದನಂತರದಲ್ಲಿ ಕಂಡುಕೊಂಡ ಸಂಗತಿಯೆಂದರೆ ಈ ೫೯ ಜಾತಿಗಳಲ್ಲಿ ಕೆಲವು ರಾಜ್ಯದ ಅಧೀನದಲ್ಲಿರುವ ಸೇವೆಗಳಲ್ಲಿ ಅಸಮರ್ಪಕವಾಗಿ ಪ್ರಾತಿನಿಧ್ಯಗೊಂಡಿರುವುದು. ಏಕೆಂದರೆ ಅವುಗಳ ಹೆಸರಿನಲ್ಲಿ ಅವರೆಲ್ಲರಿಗೂ ನೀಡಲಾದ ಮೀಸಲಾತಿಯಲ್ಲಿ, ಕೆಲವರು ತಮ್ಮ ಸಂಖ್ಯೆಗಿಂತ ಮಿಗಿಲಾಗಿ ಪ್ರಯೋಜನವನ್ನು ಪಡೆದುಕೊಂಡಿದ್ದರು. ಹೀಗಿರುವಲ್ಲಿ ಪರಿಚ್ಛೇದ ೧೬(೪)ನ್ನು ಆಚರಣೆಗೆ ತರಬಾರದೇಕೆ? ಅದು ಆಗದು ಎನ್ನುವುದಾದರೆ ಪರಿಚ್ಛೇದ ೧೬(೪)ರಡಿ ನೀಡಲಾಗಿರುವ ಅಧಿಕಾರವನ್ನು, ಅನುಚ್ಛೇದ ೩೪೧ನ್ನು ಬಳಸಿ ನ್ಯಾಯಾಲಯ ತಡೆದಂತಾಗುತ್ತದೆ. ಹೀಗೆ ಸಂವಿಧಾನದಲ್ಲಿ ಅದರಲ್ಲೂ ಮೂಲಭೂತ ಹಕ್ಕುಗಳ ಅಧ್ಯಾಯದದಲ್ಲಿ ಸ್ಪಷ್ಟವಾಗಿ ಮತ್ತು ನೇರವಾಗಿ ವಿವರಿಸಲಾಗಿರುವ ಅಧಿಕಾರವನ್ನು, ನ್ಯಾಯಾಂಗದ ಅರ್ಥೈಸುವಿಕೆಯಲ್ಲಿ, ಸಂವಿಧಾನದ ಮತ್ತೊಂದು ಪ್ರಕರಣವನ್ನು ಅಷ್ಟೇನೂ ಸೂಕ್ತವಾಗಿ ವಿವರಿಸದೆ ಬಳಸಿ ಮಿತಿಗೊಳಪಡಿಸಬಹುದೇ?

"ಸಂವಿಧಾನವು ಪರಿಶಿಷ್ಟಜಾತಿಗಳ ಸದಸ್ಯರನ್ನು ಅತ್ಯಂತ ಹಿಂದುಳಿದ ನಾಗರೀಕರೆಂದು ಪರಿಗಣಿಸಿ ಒಂದೇ ವರ್ಗದಡಿ ಅವರನ್ನೆಲ್ಲಾ ಸೇರಿಸಲಾಗಿದೆ. ಆದ್ದರಿಂದ ರಾಜ್ಯವೊಂದು ಶಾಸನದ ಮೂಲಕ ಅವರನ್ನು ಪ್ರತ್ಯೇಕ ವಿಭಾಗಗಳೊಳಗೆ ಉಪ ವಿಭಾಗೀಕರಿಸಿ, ಮೀಸಲಾತಿಯಲ್ಲಿ ಪ್ರತಿಯೊಂದು ಗುಂಪಿಗೂ ಪ್ರತ್ಯೇಕವಾಗಿ ಶೇಕಡಾವಾರನ್ನು ಕಲ್ಪಿಸಲು ರಾಜ್ಯಕ್ಕೆ ಅರ್ಹತೆಯಿಲ್ಲ. ಹೀಗೇನಾದರೂ ಆದಲ್ಲಿ ಪರಿಚ್ಛೇದ ೫೧ ಎ(೧)ರ ಪ್ರಕಾರ ಮೂಲಭೂತ ಕರ್ತವ್ಯವೇನೆಂದರೆ ಗುಂಪಿನ ಸದಸ್ಯರು ಉನ್ನತಿಯನ್ನು ಸಾಧಿಸುವ ಸಾಮರ್ಥ್ಯ ಮತ್ತು ಅರ್ಹತೆಯನ್ನು ಪ್ರೋತ್ಸಾಹಿಸುವುದನ್ನು ವಿರೋಧಿಸಿದಂತಾಗುತ್ತದೆ"

ಈ ವಾದ ಸರಣಿಯ ಕೊನೇ ಭಾಗದ ನಿಲುವು ಮೀಸಲಾತಿಯ ವಿರೋಧದ ನಿಲುವೇ ಆಗಿದೆ. ಪರಿಶಿಷ್ಟ

ಒಳ ಮೀಸಲಾತಿ ಚಿಂತನೆ

ಜಾತಿಗಳ ಮೀಸಲಾತಿಯನ್ನು ಉಪವಿಭಾ[illegible] ಸಮ್ಮತಿಸಲಾಗದು ಎನ್ನುವ ತೀರ್ಪಿನೊಳಗೆ ಅಡಗಿರುವ ಸತ್ಯವೇನೆಂದರೆ, ನನ್ನ ಪ್ರಕಾರ, ಅದು ಮೀಸಲಾತಿ ವಿರೋಧಿಯೇ ಆಗಿದೆ. ಇದನ್ನೇ ನಾನು ಕೊನೆಯಲ್ಲಿ ವಿವರವಾಗಿ ಮಂಡಿಸಲಿದ್ದೇನೆ. ದಲಿತರಲ್ಲೇ ಜಯಶಾಲಿಗಳೆನಿಸಿರುವ ಬಣಗಳು ಈ ಸಂಗತಿಯನ್ನು ಗಮನಿಸದಿರುವುದು ಮರಂತವೇ ಸರಿ. ಮೀಸಲಾತಿಯನ್ನು ವಿರೋಧಿಸುವ [illegible] ಬಂದಿವೆ. ಹೀಗಿರುವಾಗ ಅದೇ ವಾದವನ್ನು ಬಳಸಿ ಮೀಸಲಾತಿಯಲ್ಲಿ ಉಪವಿಭಾಗ ಮಾಡುವುದನ್ನು ವಿರೋಧಿಸುವುದು ಸಮ್ಮತವಾದುದೇ?

ಸಂವಿಧಾನದ ಪ್ರಕಾರ ಪರಿಶಿಷ್ಟ ಜಾತಿಗಳನ್ನು "ಅತ್ಯಂತ ಹಿಂದುಳಿದ ನಾಗರೀಕರೆಂದು ಪರಿಗಣಿಸಿ ಒಂದೇ ವರ್ಗದಡಿ ಸಮಷ್ಟೀಕರಿಸುವುದನ್ನು ಸಾಧಿಸಿ ಪ್ರದರ್ಶಿಸಬೇಕಾಗಿದೆಯೇ ವಿನಃ, ಅದನ್ನು ಬರೀ ಘೋಷಿಸ ತಕ್ಕದ್ದಲ್ಲ. ಹಾಗೆಂದು ಸಂವಿಧಾನ ಹೇಳಿರುವುದಾದರೂ ಎಲ್ಲಿ? ಸಂತೋಷ್ ಹೆಗ್ಡೆ ಬರೆದಿರುವ ತೀರ್ಪು ಇದೇ ವಾದ ಸರಣಿಯನ್ನು ಅನುಸರಿಸುವುದನ್ನು ಯಾರೂ ಗಮನಿಸಬಹುದಾಗಿದೆ: "ಪರಿಶಿಷ್ಟ ಜಾತಿಗಳು ಸಮಾಜದಲ್ಲಿ ಅತ್ಯಂತ ಹಿಂದುಳಿದಿವೆ. ಅವರಲ್ಲಿ ಕೆಲವರು ಅತ್ಯಂತ ಹಿಂದುಳಿದಿದ್ದಾರೆಂದು ಹೇಳುವುದಾದರೆ, ಅದರರ್ಥ ಅವರಲ್ಲಿ ಕಮ್ಮಿ ಹಿಂದುಳಿದಿರುವವರು ಸಮಾಜದಲ್ಲಿ ಅತ್ಯಂತ ಹಿಂದುಳಿದಿರುವವರೊಡನೆ ಇನ್ನು ಮುಂದೆ ಸೇರಲಾಗದು. ಏಕೆಂದರೆ ಹಲವರು ಅವರಿಗಿಂತಲೂ ಅಧಿಕವಾಗಿ ಹಿಂದುಳಿದಿದ್ದಾರೆ. ಆದ್ದರಿಂದ ಅವರೆಲ್ಲಾ ಅತ್ಯಂತ ಹಿಂದುಳಿದವರೆಂದು ವ್ಯಾಖ್ಯಾನಿತರಾಗಿರುವಾಗ, ಪರಿಶಿಷ್ಟ ಜಾತಿಗಳನ್ನು ಹೆಚ್ಚು-ಕಮ್ಮಿ ಹಿಂದುಳಿದವರೆಂದು ವರ್ಗೀಕರಿಸಲಾಗದು"

ದ್ವಿವಾದ ಸರಣಿಯ ಒಗಟು

ಸಂವಿಧಾನದಲ್ಲಿ ಎಲ್ಲೂ ಪರಿಶಿಷ್ಟಜಾತಿಗಳನ್ನು ಅತ್ಯಂತ ಹಿಂದುಳಿದವರೆಂದು ಹೇಳಿಲ್ಲ ಎನ್ನುವ ನಿಲುವಿನೊಡನೆ ಈ ದ್ವಿವಾದಸರಣಿ ಆರಂಭವಾಗುತ್ತದೆ. ಸಂವಿಧಾನವು ಸಾಮಾಜಶಾಸ್ತ್ರೀಯ ಪರಿಕಲ್ಪನೆಗಳಲ್ಲಿ ಪರಿಶಿಷ್ಟ ಜಾತಿಗಳನ್ನು ವ್ಯಾಖ್ಯಾನಿಸಿಲ್ಲ. ಪರಿಶಿಷ್ಟಜಾತಿಗಳೆಂದರೆ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇರುವವರು ಮಾತ್ರ, ಅದನ್ನು ರಾಷ್ಟ್ರಪತಿಯವರು ಘೋಷಿಸಿದ್ದಾರೆ ಹಾಗೂ ಕಾಲಾನುಕಾಲಕ್ಕೆ ಸಂಸತ್ತು ಅದಕ್ಕೆ ತಿದ್ದುಪಡಿ ತಂದಿದೆ. ಹಾಗೇನಾದರೂ ಒಂದು ಸಾಮಾಜಿಕ ಮಾನದಂಡವನ್ನು ಅನ್ವಯಿಸಿ ಪರಿಶಿಷ್ಟಜಾತಿಗಳನ್ನು ನಿರ್ಧರಿಸುವುದಾದರೆ ಸಂವಿಧಾನ ಸಭೆಯಲ್ಲಿ ನಡೆದಿರುವ ವಾದ-ವಿವಾದಗಳನ್ನು ಗಮನಿಸಲೇಬೇಕಾಗುತ್ತದೆ.

ಸಂವಿಧಾನದಲ್ಲಿ ಬಳಸಲಾಗಿರುವ ಪರಿಕಲ್ಪನೆಗಳ ಅರ್ಥವನ್ನು ನಿರ್ಧರಿಸುವಾಗ ನ್ಯಾಯಾಲಯಗಳು ಪದೇ ಪದೇ ಮಾಡಿರುವುದು ಇದನ್ನೇ; ಅಥವ ಪರಿಶಿಷ್ಟ ಜಾತಿಗಳೆಂದು ಗುರುತಿಸುವಾಗ ಆಡಳಿತಾತ್ಮಕ ಆಚರಣೆ ಏನು ಎನ್ನುವುದನ್ನು ಯಾರೂ ಸಹ ಗಮನಿಸಬಹುದು. ಆಗ ತಿಳಿಯುವ ಸಂಗತಿಯೆಂದರೆ ಪರಿಶಿಷ್ಟ ಜಾತಿಗಳೆಂದರೆ ಹಿಂದೂ ಸಮಾಜದ 'ಪಂಚಮರು', ಅಸ್ಪೃಶ್ಯರು ಮಾತ್ರವೇ

ಹೊರತು [illegible]ರು ಅಲ್ಲ. ಇದು ಎಲ್ಲರಿಗೂ ತಿಳಿದ ಸಂಗತಿಯೇ. ಆದರೆ ಈ ವಿಷಯದ ಬಗ್ಗೆ ನ್ಯಾಯಾಂಗ ಮಾತ್ರ ತನ್ನ ಎಲ್ಲಾ ಚರ್ಚೆಗಳಲ್ಲಿ ಯಾವ ಕಾರಣಕ್ಕೂ ಅದನ್ನು ಗಮನಿಸಲೇ ಇಲ್ಲ.ಸ ಇದಕ್ಕೆ ಅಪವಾದವೆಂಬಂತೆ ಕೇರಳದಲ್ಲಿ ಆ ರಾಜ್ಯ ಮತ್ತು ಎನ್.ಎಂ.ಥಾಮಸ್ ಪ್ರಕರಣದಲ್ಲಿ ವಿ.ಆರ್. ಕೃಷ್ಣಅಯ್ಯರ್ ೧೯೭೬ರಲ್ಲಿ ನೀಡಿದ ತೀರ್ಪಿನಲ್ಲಿ ಪರಿಶಿಷ್ಟಜಾತಿಗಳನ್ನು 'ಹರಿಜನ'ರೆಂದೇ ನಿರಂತರವಾಗಿ ಕರೆದಿದ್ದಾರೆ. (ದಲಿತ ಅನ್ನೋ ಪದ ಅಂದು ಇನ್ನೂ ಚಲಾವಣೆಗೆ ಬಂದಿರಲಿಲ್ಲವಲ್ಲ) ಪರಿಶಿಷ್ಟಜಾತಿಗಳು ಅತ್ಯಂತ ಹಿಂದುಳಿದವು ಎಂಬ ಅವುಗಳ ಮೌಲ್ಯೀಕರಣ ಅವುಗಳ ಸಾಮಾಜಿಕ ಸ್ಥಾನಮಾನವಷ್ಟೇ ಸೂಚಿಸುತ್ತವೆ. ಆದರೆ ಅವುಗಳ ನೈಜ ಸ್ಥಿತಿಯನ್ನು ವಿವರಿಸುವಂಥದ್ದು ಅಸ್ಪೃಶ್ಯತೆಯೇ ಆಗಿದೆ. ಹಲವಾರು ರಾಜ್ಯಗಳಲ್ಲಿ ಕೆಲವು ಸಮುದಾಯಗಳನ್ನು ಒ.ಬಿ.ಸಿ ಪಟ್ಟಿಯಲ್ಲಿ ಗುರುತಿಸಲಾಗಿದೆ. ಇವು ಸಾಮಾಜಿಕವಾಗಿ ಪರಿಶಿಷ್ಟಜಾತಿಗಳಿಗಿಂತ ಹೆಚ್ಚು ಹಿಂದುಳಿದವಾಗಿವೆ. ಉದಾಹರಣೆಗೆ ಆಂಧ್ರಪ್ರದೇಶದ 'ದೊಮ್ಮರ' ಸಮುದಾಯವು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಗುರುತಿಸಲಾಗಿಲ್ಲ. ಏಕೆಂದರೆ ಅದು ಅಸ್ಪೃಶ್ಯ ಸಮುದಾಯ ಅಲ್ಲ.

೧೯೭೬ರ ತೀರ್ಪು

ಮತ್ತೊಂದು ಭಿನ್ನ ಸಂದರ್ಭದಲ್ಲಿ ಪರಿಶಿಷ್ಟಜಾತಿಗಳನ್ನು ಅತ್ಯಂತ ಹಿಂದುಳಿದವು ಎಂದು ಪರಿಗಣಿತವಾದದ್ದು ಕೋರ್ಟಿನಿಂದಲೇ. ಕೇರಳ ರಾಜ್ಯ V/S ಎನ್. ಎಂ. ಥಾಮಸ್ ಪ್ರಕರಣದಲ್ಲಿ ೧೯೭೬ರಲ್ಲಿ ಸಂವಿಧಾನ ಪೀಠದ ೭ ಮಂದಿ ನ್ಯಾಯಾಧೀಶರು ತಮ್ಮ ಪ್ರತ್ಯೇಕ ತೀರ್ಪುಗಳನ್ನು ಬರೆದಿಟ್ಟಿದ್ದಾರೆ. ಅವರೆಲ್ಲರೂ, ಅದರಲ್ಲೂ ವಿ.ಆರ್.ಕೃಷ್ಣಅಯ್ಯರ್, ಪ್ರಜ್ಞಾಪೂರ್ವಕವಾಗಿ ಮೀಸಲಾತಿ ಸುತ್ತಲೂ ಇದ್ದ ಗೊಂದಲವನ್ನು ಬಗೆಹರಿಸಿದ್ದಾರೆ. ಒಂದು ರೀತಿಯಲ್ಲಿ ಕೋರ್ಟುಗಳನ್ನು ಆವರಿಸಿರುವ ಸಂಪ್ರದಾಯನಿಷ್ಠ ಮನಸ್ಸುಗಳೇ ಇದಕ್ಕೆ ಕಾರಣವಾಗಿರುವುದು ವಿಶೇಷವಾಗಿದೆ. ಆ ಪ್ರಯತ್ನದಲ್ಲಿ ವಿ.ಆರ್.ಕೃಷ್ಣಅಯ್ಯರ್ ಅನೇಕ ಪದಗಳನ್ನು ಸಾಹಿತ್ಯಿಕವಾಗಿ ಬಳಸಿ ಪರಿಶಿಷ್ಟಜಾತಿಗಳ ಸ್ಥಾನಮಾನವನ್ನು ಸೂಚಿಸುತ್ತಾರೆ. 'ದೀನ ಮತ್ತು ಕಳೆದು ಹೋದ', 'ಅತ್ಯಂತ ಖಿನ್ನರಾದ', 'ಅತ್ಯಂತ ಹಿಂದುಳಿದ' 'ಬುಡಮಟ್ಟದ', 'ಅತ್ಯಂತ ಹಿಂದುಳಿದ ವರ್ಗಗಳು', 'ಮುಳುಗಿದ ವಿಭಾಗಗಳು' ಅಂತಹ ಹಲವು ಪದಗಳಾಗಿವೆ. ಇದನ್ನೇ ೧೯೮೧ರಲ್ಲಿ ಅಖಿಲ ಭಾರತೀಯ ಶೋಷಿತ್ ಕರ್ಮಚಾರಿ ಸಂಘ VS. ಭಾರತ ಒಕ್ಕೂಟ ಪ್ರಕರಣದಲ್ಲೂ ಅವರು ಮುಂದುವರೆಸುತ್ತಾ 'ಪರಿಶಿಷ್ಟ ಜಾತಿಗಳು ಕೇವಲ ಹಿಂದುಳಿದಿರುವುದಷ್ಟೇ ಅಲ್ಲದೆ, ಅತ್ಯಂತ ಹಿಂದುಳಿದವಾಗಿವೆ' ಎನ್ನುತ್ತಾರೆ.

ಈ ವಿಭಾಗವನ್ನು ಒಂದು ಅಭಿವ್ಯಕ್ತಿ ಶೈಲಿಯ ವಿಧಾನವನ್ನಾಗಿ ಬಳಸಿ ವಿಶೇಷ ಸವಲತ್ತುಗಳನ್ನು ನೀಡಿರುವುದನ್ನು ಸಮರ್ಥಿಸಿಕೊಳ್ಳಲಾಗಿದೆ. ಆದರೆ ಅನಂತರದಲ್ಲಿ ಅದನ್ನು ಪರಿಶಿಷ್ಟಜಾತಿಗಳ ವ್ಯಾಖ್ಯಾನವನ್ನಾಗಿ ಬಳಸಲಾಗಿದೆ. ಈಗ ಅದೇ ವಿಧಾನದ ಮೂಲಕ ಆ ಜಾತಿಗಳಲ್ಲೇ ಮತ್ತಷ್ಟು ವಂಚಿತರಾದವರನ್ನು ಸದೆಬಡಿಯಲು ಉಪಯೋಗಿಸಲಾಗಿದೆ. ಆದರೆ ಅದೇ ನ್ಯಾಯಾಧೀಶ ಕೇರಳ VS. ಥಾಮಸ್ ಪ್ರಕರಣದಲ್ಲಿ ಪರಿಶಿಷ್ಟಜಾತಿಗಳನ್ನು ವಿವರಿಸಲು ನಿರಂತರವಾಗಿ 'ಹರಿಜನ' ಪದವನ್ನು ಬಳಸಿ, ಪರಿಶಿಷ್ಟಜಾತಿಗಳ ವ್ಯಾಖ್ಯಾನವನ್ನಾಗಿಯು ಬಳಸಲಾಗಿದೆ ಇದನ್ನೇ ಬಳಸಿದ್ದರೂ ಸಹ, ಸಂವಿಧಾನ ಶಿಲ್ಪಿಗಳ ಉದ್ದೇಶ ಮತ್ತು ಆಡಳಿತಾತ್ಮಕ ರೂಢಿ ಅದು ಹತ್ತಿರವಾಗುತ್ತಿತ್ತೆನ್ನಬಹುದು. ಆಗ ಎಸ್.ಸಿ. ಮೀಸಲಾತಿಯ ಉಪವರ್ಗೀಕರಣ ಮತ್ತು ಸಂಖ್ಯಾವಾರು ನೆಲೆಯಲ್ಲಿ ವಿಂಗಡಣೆ ಮಾಡುವಾಗ ಅಡ್ಡವಾದ ಮೇಲಿನ 'ದ್ವಿವಾದ ಸರಣಿ ತರ್ಕ' ನಿಷ್ಕ್ರೀಯವಾಗುತ್ತಿತ್ತು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಕೆಲವು ಅಸ್ಪೃಶ್ಯ ಸಮುದಾಯಗಳು ಅಸ್ಪೃಶ್ಯರಲ್ಲೇ ಅಸ್ಪೃಶ್ಯರಾಗಿರುವುದರಿಂದ ಅವುಗಳನ್ನು ಅಸ್ಪೃಶ್ಯರ ಪಟ್ಟಿಯಲ್ಲಿ ಪ್ರತ್ಯೇಕವಾಗಿ ಏಕೆ ವರ್ಗೀಕರಿಸಲಾಗುವುದಿಲ್ಲ? ಅದರಲ್ಲಿ ಅತಾರ್ಕಿಕವಾದುದಾದರೂ ಏನಿದೆ?

ಇಲ್ಲಿರುವ ಮತ್ತೊಂದು ವಾದವೆಂದರೆ, ಪರಿಶಿಷ್ಟ ಜಾತಿಗಳು ಒಂದು 'ಏಕರೂಪಿವರ್ಗ' ಒಂದು 'ಐಕ್ಯರೂಪಿ ವರ್ಗ' 'ಅವುಗಳೆಲ್ಲಾ ತಮ್ಮಷ್ಟಕ್ಕೆ ಒಂದೇ ವರ್ಗ'ವಾದ್ದರಿಂದ ಅದಕ್ಕೆ ಚ್ಯುತಿ ಬರುವಂತೆ ವಿಂಗಡನೆ ಮಾಡಲಾಗದು. ತೀರ್ಪಿನಲ್ಲಿ ಕಂಡು ಬಂದ ನ್ಯಾಯಾಲಯದ ವಿವೇಚನೆಯ ಕೆಲ ಅಂಶಗಳು ಹೀಗಿವೆ:

"ಕಾನೂನಿನಲ್ಲಿ ಬಹುಸ್ಪಷ್ಟವಾಗಿ ನಿರ್ಧಾರವಾಗಿರುವ ನಿಯಮವೆಂದರೆ ಹಿಂದುಳಿದ ವರ್ಗವೊಂದಕ್ಕೆ ಮೀಸಲಾತಿ ನೀಡಲೇ ಬೇಕೆಂಬ ಸಂವಿಧಾನಾತ್ಮಕ ಕಟ್ಟುಪಾಡೇನು ಇಲ್ಲ. ಇದು ರಾಜ್ಯಕ್ಕೆ ಬಿಟ್ಟ ವಿಷಯವಾಗಿದೆ. ಪರಿಚ್ಛೇದ ೧೫(೪)ರಲ್ಲಿ ಪರಿಶಿಷ್ಟ ಜಾತಿಗಳಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶವನ್ನು ಮೀಸಲಿಡುವ ಮತ್ತು ಪರಿಚ್ಛೇದ ೧೬(೪)ರ ಪ್ರಕಾರ ರಾಜ್ಯದಡಿ ಬರುವ ಸಾರ್ವಜನಿಕ ಸೇವೆಗಳಲ್ಲಿ ಉದ್ಯೋಗ ಕಾಯ್ದಿಡುವುದನ್ನು ಒಂದು ರಾಜ್ಯ ನಿರ್ಧರಿಸಬೇಕಾಗುತ್ತದೆ. ಕೆಲವು ಹಿಂದುಳಿದ ವರ್ಗಗಳನ್ನು ಗುರುತಿಸಿ ಅವು ಮುಂದುವರೆಯಲು ಸಾಧ್ಯವಾಗುವಂತೆ ರಾಜ್ಯ ಇಚ್ಛಿಸಿದಲ್ಲಿ ಮಾತ್ರ ಅಂತಹ ಮೀಸಲಾತಿಯನ್ನು ಒದಗಿಸಬಹುದಾಗಿದೆ. ಈ ಮೇಲೆ ಹೇಳಿದಂತೆ ಈ ಸಂವಿಧಾನಾತ್ಮಕ ಕಟ್ಟುಪಾಡನ್ನು ರಾಜ್ಯವು ಈಗಾಗಲೇ ಪೂರೈಸಿಯಾಗಿದೆ. ಹೀಗೆ ಮಾಡಿಯಾದ ಮೇಲೆ, ಸಂವಿಧಾನ ಈಗಾಗಲೇ ಗುರುತಿಸಿರುವ ವರ್ಗವೊಂದನ್ನು ಉಪವರ್ಗೀಕರಿಸಲು ರಾಜ್ಯಕ್ಕೆ ಆಗುವುದಿಲ್ಲ. ಅಲ್ಲದೆ, ಪರಿಶಿಷ್ಟ ಜಾತಿಗಳ ಪಟ್ಟಿಯೊಳಗೆ ರಾಜ್ಯ ಸೃಷ್ಟಿಸಿರುವ ಉಪವರ್ಗಗಳಿಗೆ ಈಗಾಗಲೇ ಒದಗಿಸಿರುವ ಮೀಸಲಾತಿಯಲ್ಲಿ ಒಳಮೀಸಲಾತಿಯನ್ನು ಒದಗಿಸಲು ಸಾಧ್ಯವಿಲ್ಲ." - ಸಂತೋಷ್ ಹೆಗ್ಡೆ

ಮೀಸಲಾತಿ ನೀಡುವುದು ರಾಜ್ಯದ ವಿವೇಚನೆಗೆ ಬಿಟ್ಟ ಸಂಗತಿಯೇ ಹೊರತು ಸಂವಿಧಾನಾತ್ಮಕ ಕಟ್ಟುಪಾಡೇನು ಅಲ್ಲ ಎಂದು ಹೇಳಲಾಗಿದೆ. ಆದರೆ ಯಾವಾಗ ಈ ಅಧಿಕಾರವನ್ನು ಸಂವಿಧಾನ ಗುರುತಿಸುವ ಒಂದು ವರ್ಗಕ್ಕೆ ಸಂಬಂಧಪಟ್ಟಂತೆ ಚಲಾಯಿಸಿದಾಗ, ಆ ವಿಶೇಷ ಅಧಿಕಾರ ಮತ್ತು ವಿವೇಚನೆ ಹೋಗಿಬಿಟ್ಟು, ಒಂದು ವರ್ಗದೊಳಗೆ ಉಪಗುಂಪುಗಳನ್ನು ವಿಂಗಡಿಸಿ ಒಳಮೀಸಲಾತಿ

ಯನ್ನು ನೀಡಲು ಆಗುವುದಿಲ್ಲವೆಂತೆ. ಹೀಗೆ ಏಕೆ? 'ಪರಿಶಿಷ್ಟಜಾತಿಗಳು' ಎನ್ನೋ ವರ್ಗವನ್ನು ಸಂವಿಧಾನ ಗುರುತಿಸುತ್ತದೆ. ಸಮಾಜವೊಂದರಲ್ಲಿ ವಿಶೇಷ ಹಕ್ಕುಗಳು, ಆಡಳಿತಾತ್ಮಕ ವಿಶೇಷ ಕಾಳಜಿ... ಇತ್ಯಾದಿಗಳ ಅಗತ್ಯವಿರುವ ಅತ್ಯಂತ ವಿಶೇಷ ಜನರಿರುವುದನ್ನು ಸಂವಿಧಾನ ಪ್ರಜ್ಞಾಪೂರ್ವಕವಾಗಿ ಗುರುತಿಸುತ್ತದೆ.

ಅಂತಹ ಜನಗಳ ಪಟ್ಟಿಯನ್ನು ಘೋಷಿಸುವುದು ರಾಷ್ಟ್ರಪತಿಯವರಿಗೆ ಬಿಟ್ಟ ಸಂಗತಿಯಾಗಿದ್ದು, ಕಾಲಾನುಕಾಲಕ್ಕೆ ಅದಕ್ಕೆ ತಿದ್ದುಪಡಿ ತರುವುದು ಸಂಸತ್ತಿನ ಕೆಲಸವಾಗಿರುತ್ತದೆ. ಅವರ ಮುಂದುವರಿಕೆ, ರಕ್ಷಣೆಗಾಗಿ ವಿಶೇಷ ಕ್ರಮಗಳನ್ನು ಕೈಗೊಳ್ಳುವುದು ರಾಜ್ಯದ ಅಧಿಕಾರವಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಸಂವಿಧಾನ ಶಿಲ್ಪಿಗಳ ಉದ್ದೇಶಕ್ಕನುಗುಣವಾಗಿ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವುದು ರಾಜ್ಯ ಇಚ್ಛಿಸಿದ್ದಲ್ಲಿ, ಅದರ ವಿವೇಚನೆಗೆ ಸಂಬಂಧಿಸಿದ ಸಂಗತಿಯಾದುದು. ರಾಜ್ಯವು ಒಂದು ವರ್ಗಕ್ಕೆ ಪೂರ್ಣ ಸವಲತ್ತು ಒದಗಿಸಿಯಾದ ಮೇಲೆ ಅದರ ಅಧಿಕಾರಕ್ಕೆ ಸಂವಿಧಾನದ ಪೂರ್ಣವಿರಾಮವಾದರೂ ಎಲ್ಲಿದೆ. ಹಾಗೇನಾದರೂ ಇದ್ದರೆ ಅದು ಪಟ್ಟಿಯಿಂದ ಜಾತಿಗಳನ್ನು ಸೇರಿಸಲು ಅಥವ ತೆಗೆಯಲು ರಾಜ್ಯಕ್ಕೆ ಆಗದೆಂದು ಮಾತ್ರ ಹೇಳುತ್ತದೆಯಷ್ಟೆ. ಆದರೆ ಇಡೀ ವರ್ಗವೊಂದಕ್ಕೆ ನೀಡಿರುವುದನ್ನು ಯಾರು ತೆಗೆದುಕೊಳ್ಳುತ್ತಿದ್ದಾರೆ ಮತ್ತು ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಸರಿಪಡಿಸುವುದನ್ನು ರಾಜ್ಯವೊಂದರಿಂದ ತಡೆದಿರುವುದಾದರೂ ಎಲ್ಲಿದೆ?

"ಪರಿಶಿಷ್ಟಜಾತಿಗಳು ಮತ್ತು ಪಂಗಡಗಳಿಗೆ ಮೀಸಲಾತಿಯ ಮೂಲಕ ಹೆಚ್ಚಿನ ರಕ್ಷಣೆಯನ್ನು ನೀಡಿರುವುದರ ಮೂಲ ಆಧಾರ ಇರುವುದು ಆ ವರ್ಗದ ಸದಸ್ಯರು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ದೀರ್ಘಕಾಲದಿಂದ ತೊಂದರೆಗೆ ಒಳಗಾಗಿದ್ದಾರೆನ್ನುವುದೇ ಆಗಿದೆ. ಈ ರಕ್ಷಣೆ ಮತ್ತು ಮೀಸಲಾತಿಯನ್ನು ಏಕರೂಪಿ ಗುಂಪಿಗೆ ಒದಗಿಸಲಾಗಿದೆ.... ರಾಷ್ಟ್ರಪತಿಯವರ ಅಧಿಸೂಚನೆಯ ಮೇರೆಗೆ ಮೀಸಲಾತಿ ಮತ್ತು ನೇಮಕಾತಿಯ ಉದ್ದೇಶಕ್ಕಾಗಿ ನಿರ್ದಿಷ್ಟಗೊಳಿಸಿದ ಆ ಏಕರೂಪಿ ಗುಂಪನ್ನು ವಿವಾದಕ್ಕೀಡಾದ ಶಾಸನದ ಮೂಲಕ ರಾಜ್ಯ ಮರುವಿಂಗಡಣೆ ಮಾಡಲು ಬಯಸಿದೆ. ಇದು ತಾರತಮ್ಯವನ್ನು ಮರು ಸ್ಥಾಪಿಸುವಂಥದ್ದಾಗಿದ್ದು, ಸಂವಿಧಾನದ ಪರಿಚ್ಛೇದ ೧೪ರ ಕಟ್ಟಿನ ಕ್ರಮವನ್ನು ತೆಗೆದುಕೊಳ್ಳುವಂತೆ ಮಾಡುತ್ತದೆ. ನ್ಯಾಯ ಎನ್ನುವುದು ಸಮಾನತೆಯನ್ನು ಒಳಗೊಂಡಿರುತ್ತದೆ ಎನ್ನುವುದು ಹಳೇ ನಿಯಮವೇ ಆಗಿದೆ. ಒಂದು ಗುಂಪಿಗೆ ನ್ಯಾಯ ಎನ್ನುವುದು ಮತ್ತೊಂದು ಗುಂಪಿಗೆ ಅನ್ಯಾಯವಾಗುವುದಾದರೆ, ಅದು ಅನ್ಯಾಯವನ್ನು ಮತ್ತೊಂದು ರೀತಿಯಲ್ಲಿ ಮುಂದುವರೆಸಿದಂತೆಯೇ ಆಗುತ್ತದೆ" (ಹೆಚ್.ಕೆ. ಸೇಮಾ)

ಸಾಮಾಜಿಕ ನ್ಯಾಯದ ವಿರೋಧಿ ತರ್ಕ

ನ್ಯಾಯ ಎನ್ನುವುದು ಸಾಮಾಜಿಕ ಸಮಾನತೆಯನ್ನೊಳಗೊಂಡಿರಬೇಕೆನ್ನುವುದು ಬಹುಹಿಂದೆಯೇ ಕಂಡುಕೊಂಡ ಸತ್ಯವಾಗಿದೆ ನಿಜ. ಆದರೆ ಯಾವುದೇ ಎರಡು ಗುಂಪುಗಳ ನಡುವೆ ಅಸಮಾನ ಸ್ಥಾನವನ್ನು ಗುರುತಿಸದೆಯೇ (ಈ ಸಂಗತಿಯ ಬಗ್ಗೆ ನ್ಯಾಯಧೀಶರಿಗೆ ಅಪನಂಬಿಕೆ ಇದ್ದಂತಿಲ್ಲ) 'ಒಂದು ಗುಂಪಿಗೆ ನ್ಯಾಯ ಎನ್ನುವುದು ಮತ್ತೊಂದು ಗುಂಪಿಗೆ ಅನ್ಯಾಯವಾಗುವುದಾದರೆ ಅದು ಮತ್ತೊಂದು ರೀತಿಯಲ್ಲಿ ಅನ್ಯಾಯವನ್ನು ಮುಂದುವರೆಸಿದಂತೆಯೇ ಆಗುತ್ತದೆ' ಎನ್ನುವ ವಾದ 'ಸಮಾನ-

ನ್ಯಾಯ ಎನ್ನುವುದು ಸಾಮಾಜಿಕ ಸಮಾನತೆಯನ್ನೊಳಗೊಂಡಿರಬೇಕೆನ್ನುವುದು ಬಹುಹಿಂದೆಯೇ ಕಂಡು ಕೊಂಡ ಸತ್ಯವಾಗಿದೆ ನಿಜ. ಆದರೆ ಯಾವುದೇ ಎರಡು ಗುಂಪುಗಳ ನಡುವೆ ಅಸಮಾನ ಸ್ಥಾನವನ್ನು ಗುರುತಿಸದೆಯೇ (ಈ ಸಂಗತಿಯ ಬಗ್ಗೆ ನ್ಯಾಯಧೀಶರಿಗೆ ಅಪನಂಬಿಕೆ ಇದ್ದಂತಿಲ್ಲ) 'ಒಂದು ಗುಂಪಿಗೆ ನ್ಯಾಯ ಎನ್ನುವುದು ಮತ್ತೊಂದು ಗುಂಪಿಗೆ ಅನ್ಯಾಯವಾಗುವುದಾದರೆ ಅದು ಮತ್ತೊಂದು ರೀತಿಯಲ್ಲಿ ಅನ್ಯಾಯವನ್ನು ಮುಂದು ವರೆಸಿದಂತೆಯೇ ಆಗುತ್ತದೆ' ಎನ್ನುವ ವಾದ 'ಸಮಾನ-ನ್ಯಾಯ'ದ ವಿರೋಧ ತರ್ಕವೇ ಆಗುತ್ತದೆ.

ನ್ಯಾಯ'ದ ವಿರೋಧ ತರ್ಕವೇ ಆಗುತ್ತದೆ. ಅಲ್ಲದೇ, ಅದು ಮೀಸಲಾತಿಯ ವಿರೋಧಿ ವಾದವೂ ಆಗಿಬಿಡುತ್ತದೆ.

ಹೀಗಿರುವಲ್ಲಿ ತಾರತಮ್ಯದ ಕುರಿತು ಮಾತನಾಡುವುದಾದರೆ, ಅದು ಕೋರ್ಟ್‌ನ ವಿರುದ್ಧವೇ ನಿಂತು ಬಿಡುತ್ತದೆ. ಏಕೆಂದರೆ ದಲಿತರಲ್ಲೇ ತಳಮಟ್ಟದಲ್ಲಿರುವವರಿಗೆ ಮೀಸಲಾತಿಯಲ್ಲಿ ಅವರ ಪಾಲು ದಕ್ಕುವಂತೆ ಮಾಡಲು ಪ್ರತ್ಯೇಕ ವಿಂಗಡನೆ ಮಾಡುವುದನ್ನು ಕೋರ್ಟ್‌ನ ತೀರ್ಪು ತಡೆ ಹಿಡಿದಿದೆ. ಹೀಗೆ ಒಳಮೀಸಲಾತಿಗಾಗಿ ವರ್ಗೀಕರಣವಾಗಬೇಕೆನ್ನುವ ಕೂಗು ಕೇಳಿ ಬರುತ್ತಿರುವಾಗ, ಅದರ ವಿರುದ್ಧ ಅದೇ ನ್ಯಾಯಾಲಯಗಳು ಪದೇ ಪದೇ ತೀರ್ಪಿತ್ತಿರುವುದು 'ಅಸಮಾನರನ್ನು ಸಮಾನರನ್ನಾಗಿ ಪರಿಗಣಿಸಿದಂತಾಗಿ, ಸಂವಿಧಾನದ ಪರಿಚ್ಛೇದ ೧೪ರ ಕಠಿಣ ಕ್ರಮವನ್ನು ನಿಜವಾಗಿಯೂ ಅಪೇಕ್ಷಿಸಿದಂತಾಗುತ್ತದೆಯಲ್ಲವೇ? ಇಲ್ಲಿರುವ ವಿಚಿತ್ರವೆಂದರೆ ಅದೇ ನ್ಯಾಯಾಧೀಶರು ಯೋಚಿಸುವ ಪ್ರಕಾರ (ಒಳ)ವರ್ಗೀಕರಣ ಮಾಡುವುದರ ಬಗ್ಗೆಯೇ ಹೊರತು ಅದರ ನೈಜ ಅಂಕಿ-ಅಂಶಗಳ ಕುರಿತಾಗಿ ಅಲ್ಲ. ಇದನ್ನು ನಾನು ಮತ್ತೊಮ್ಮೆ ಒತ್ತಿ ಹೇಳಲೇಬೇಕಾಗಿದೆ. ಕಾರಣ ಈ ನೈಜ ಅಂಕಿ-ಅಂಶಗಳ ಬಗ್ಗೆ ಅವರ ತಕರಾರೇನೂ ಇಲ್ಲ. ಆದರೆ ವರ್ಗೀಕರಣ ಮಾಡುವುದು ಮಾತ್ರ ಶಿಕ್ಷಾರ್ಹವಾಗುತ್ತದೆ.

"ಹಿಂದುಳಿದ ವರ್ಗಗಳಿಗೆ ಉದ್ಯೋಗದಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿಯ ಪ್ರಯೋಜನವನ್ನು ಒದಗಿಸುವ ಕುರಿತು ನಿರ್ಧರಿಸುವಂತಹ ರಾಜ್ಯದ ಶಾಸನ ಸಭೆಯ ಅಧಿಕಾರವನ್ನು ಕುರಿತಾದ ಯಾವುದೇ ವಿವಾದ ಇಲ್ಲ. ಮುಂದುವರೆದು ಪರಿಶಿಷ್ಟಜಾತಿಗಳನ್ನೊಳಗೊಂಡಂತೆ ಬೇರೆ ಬೇರೆ ಹಿಂದುಳಿದ ವರ್ಗಗಳಿಗೆ ಎಷ್ಟು ಮೀಸಲಾತಿ ಸಿಗಬೇಕೆಂದು ನಿರ್ಧರಿಸುವ ರಾಜ್ಯದ ಅಧಿಕಾರದ ಬಗ್ಗೆಯೂ ತಕರಾರನ್ನು ತೆಗೆಯುತ್ತಿಲ್ಲ. ಆದರೆ ಮೇಲೆ

ಒಳ ಮೀಸಲಾತಿ ಚಿಂತನೆ

ಹೇಳಿದ ಪ್ರಯೋಜನವನ್ನು ಪರಿಶಿಷ್ಟ ಜಾತಿಗಳ ಸಮುದಾಯಗಳಲ್ಲಿ ಒಂದು ಅಥವಾ ಇತರೆ ಗುಂಪುಗಳು ಮುಂದುವರೆದಿದೆಯಾದ್ದರಿಂದ ಅವು ಮೀಸಲಾತಿಯ ಎಲ್ಲಾ ಪ್ರಯೋಜನಗಳಿಗೆ ಬಾಧ್ಯಸ್ಥರಲ್ಲ ಎನ್ನುವ ಆಧಾರದ ಮೇಲೆ ರಾಜ್ಯ ಮೀಸಲಾತಿ ಪ್ರಯೋಜನವನ್ನು ತೆಗೆಯುವಂತಿಲ್ಲ" (ಎಸ್.ಬಿ. ಸಿನ್ಹಾ)

ಮೇಲಿನ ಮೊದಲೆರಡು ವಾಕ್ಯಗಳು ಅತ್ಯದ್ಭುತವಾದುವು. ಆಂಧ್ರಪ್ರದೇಶ ಹೊರಡಿಸಿರುವ ಶಾಸನವನ್ನು ಎತ್ತಿಹಿಡಿಯಲು ಅವು ಸಮರ್ಥವಾಗಿರುವುದು ಸತ್ಯ. ಆದರೆ ಅಲ್ಲಿ ಗ್ರಹಿಸಲು ಕಷ್ಟವಾಗಿರುವುದು ಕೊನೇ ವಾಕ್ಯ. ಇದರಿಂದ ನಾವೇನೂ ಚಕಿತಗೊಳ್ಳಬೇಕಿಲ್ಲ. ಕಾರಣ ಈ ಹಿಂದೆ ಅಂತಹ ಹೆಚ್ಚಿನ ಉದಾಹರಣೆಗಳನ್ನು ಕಂಡಿದ್ದೇವೆ. ನ್ಯಾಯಾಲಯದ ಭಾಷೆ ನ್ಯಾಯಾಧೀಶನ ಮೂಲಕ ಮುಕ್ತವಾಗಿ ಹರಿದಿದೆ. ಇದಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ನೀಡುವುದಾದರೆ ಉಪಗುಂಪಾಗಿಸಿರುವ ಶಾಸನದಿಂದ ಯಾರನ್ನೂ ಮೀಸಲಾತಿಯ ಪ್ರಯೋಜನದಿಂದ ದೂರವಾಗಿಸಲು ಸಾಧ್ಯವಿಲ್ಲ. ಈ ಕಾನೂನು ಎಸ್.ಸಿಗಳಲ್ಲಿ ಕೆನೆಪದರವನ್ನು ಗುರುತಿಸಿ ಅವರಿಂದ ಮೀಸಲಾತಿಯ ಹಕ್ಕನ್ನು ಬದಲಿಸಿಲ್ಲ. ಆದರೆ ಪರಿಶಿಷ್ಟಜಾತಿಗಳಲ್ಲಿ ಒಂದು ಗುಂಪು ಎಷ್ಟು ಮುಂದುವರೆದಿದೆಯೆಂದರೆ ಅದು "ಮೀಸಲಾತಿಯ ಎಲ್ಲಾ ಪ್ರಯೋಜನವನ್ನು (ಅಥವಾ ಅದರ ಬಹುಪಾಲು) ತೆಗೆದುಕೊಂಡು ಬಿಡುತ್ತದೆ" ಹಾಗಾದರೆ ಅಂತಹ ಪರಿಸ್ಥಿತಿಯನ್ನು ಪರಿಹರಿಸಲೇ ಬೇಕಾಗುತ್ತದೆ. ಒಂದು ಇಡೀ ವರ್ಗಕ್ಕೆ ನೀಡಲಾಗಿರುವ 'ಮೀಸಲಾತಿ ಪ್ರಯೋಜನದ ಪೂರ್ಣ ಹಕ್ಕನ್ನು' ಆ ವರ್ಗದ ಒಂದು ಗುಂಪು ಮಾತ್ರ ಪಡೆಯುವುದಾದರೂ ಹೇಗೆ? ಅದೂ ಸಹ ಹಕ್ಕಿನ ವಿಷಯವಾಗಿ? ಅಂತಹ ಅವಕಾಶವನ್ನು ತೆಗೆಯಬಾರದು ಏಕೆ?

ಆದರೆ ಎಸ್.ಬಿ.ಸಿನ್ಹಾರವರದ್ದು ಮತ್ತೊಂದು ವಾದವಿದೆ. ಅವರ ಪ್ರಕಾರ ಮೀಸಲಾತಿ ಒದಗಿಸುವಿಕೆಯು ಸಂವಿಧಾನದ ಪರಿಚ್ಛೇದ ೩೩೫ರ ಕಟ್ಟುಪಾಡಿಗೆ ಒಳಗಾಗಿದೆ. ಅದು ಹೇಳುವ ಪ್ರಕಾರ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಸೇವೆಗಳಲ್ಲಿ ಉದ್ಯೋಗ ಪಡೆಯುವಾಗ ಆಡಳಿತಾತ್ಮಕ ದಕ್ಷತೆಗೆ ಯಾವುದೇ ರೀತಿಯ ಧಕ್ಕೆ ಬಾರದಂತೆ ನಿರಂತರವಾಗಿ ಪರಿಗಣಿಸಬೇಕಾಗುತ್ತದೆ (ಕಾಯ್ದುಕೊಳ್ಳಬೇಕಾಗುತ್ತದೆ). ಅವರು ಮತ್ತೂ ಹೇಳುವುದೇನೆಂದರೆ "(ಇದು) ಅಂತಿಮವಾಗಿ ಎಲ್ಲಿಗೆ ಒಯ್ಯುತ್ತದೆಯೆಂದರೆ ಅದನ್ನೇ ಕೆಳವರ್ಗಗಳಿಗೆ ಪೂರಕವಾಗುವಂತೆ ಮಾಡಲಾಗದು. ಅಂದರೆ ಪರಿಶಿಷ್ಟ ಜಾತಿಗಳ ಏಕರೂಪಿ ವರ್ಗದ ಕೆಲವು ಜಾತಿಗಳಿಗೆ ಪೂರಕವಾಗುವಂತೆ ಮಾಡಲಾಗದು" ಮತ್ತೊಮ್ಮೆ ಇದೊಂದು ಕೇವಲ ಗ್ರಹಿಕೆಯಾಗಿದೆಯಷ್ಟೆ. -ಇದನ್ನೇ ನಾನು ಮೂರನೆಯದ್ದು ಎಂದು ಪಟ್ಟಿ ಮಾಡಿರುವುದು. ಅದು ಕೇವಲ ಅವುಗಳ ಉಪವಿಭಾಗೀಕರಣವನ್ನಷ್ಟೇ ಭೇದಿಸದೆ ಇಡೀ ಮೀಸಲಾತಿಯನ್ನೇ ಹೊಡೆದುರುಳಿಸಿ ಬಿಡುತ್ತದೆ. ನ್ಯಾಯಾಲಯಗಳು ಎಂದೂ ಪರಿಚ್ಛೇದ ೩೩೫ನ್ನು ಮೀಸಲಾತಿಯ ಪೂರ್ಣ ನಿಷೇಧವೆಂದು ಒಪ್ಪಿಕೊಂಡಿಲ್ಲ. ಆದರೆ ಎಸ್.ಬಿ. ಸಿನ್ಹಾರವರ ಪ್ರಕಾರ ಪರಿಶಿಷ್ಟಜಾತಿಗಳಲ್ಲಿ ಅತ್ಯಂತ ಹಿಂದುಳಿದವರಿಗೆ ಪ್ರತ್ಯೇಕ ಮೀಸಲಾತಿ ನೀಡುವುದನ್ನು ನಿಷೇಧಿಸಲು ಈ ಕಾರಣವೊಂದೇ ಸಾಕು.

'ಏಕರೂಪಿ' ವರ್ಗ?

ಕೊನೆಯದಾಗಿ, ಪರಿಶಿಷ್ಟ ಜಾತಿಗಳನ್ನು ಸಂವಿಧಾನ ಹೇಗೆ ವಿವರಿಸುತ್ತದೆ ಮತ್ತು ಅದರ ಪ್ರಕಾರ 'ಏಕರೂಪಿ

ವರ್ಗ' ಎಂದರೇನು ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಅನುಚ್ಛೇದ ೩೪೧ನ್ನು ಮೇಲೆ ಉಲ್ಲೇಖಿಸಲಾಗಿದೆ. ಅದು ಹೇಳುವಂತೆ "ಪ್ರತಿಯೊಂದು ರಾಜ್ಯದ ಗೌವರ್ನರೊಡನೆ ಸಮಾಲೋಚಿಸಿ ರಾಷ್ಟ್ರಪತಿಯವರು ಜಾತಿ, ಜನಾಂಗ, ಬುಡಕಟ್ಟು ಅಥವ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳೊಳಗಿನ ಭಾಗಗಳು ಇಲ್ಲವೇ ಗುಂಪುಗಳನ್ನು ಅಧಿಸೂಚನೆಯ ಮೂಲಕ ಸಂವಿಧಾನದ ಉದ್ದೇಶಕ್ಕಾಗಿ ಪರಿಶಿಷ್ಟಜಾತಿಗಳೆಂದು ಗುರುತಿಸುವುದು. 'ಜಾತಿ, ಜನಾಂಗ, ಬುಡಕಟ್ಟುಗಳು ಅಥವಾ ಜಾತಿ, ಜನಾಂಗ, ಬುಡಕಟ್ಟುಗಳೊಳಗಿನ ಭಾಗಗಳು ಇಲ್ಲವೇ ಗುಂಪುಗಳು' ಎನ್ನುವಾಗ ಅವೆಲ್ಲಾ 'ಏಕರೂಪಿ' ಸಂಗತಿಯೆಂದು ನಿಖರಗೊಳಿಸಲಾದೀತೆ? ಒಂದೇ ಒಂದು ಸಂಗತಿ ಅವನ್ನೆಲ್ಲಾ 'ಏಕರೂಪಿ'ಯನ್ನಾಗಿ ಮಾಡುವುದೆಂದರೆ ಅವುಗಳೆಲ್ಲಾ ಅಸ್ಪೃಶ್ಯರಾಗಿರುವುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ ಪರಿಶಿಷ್ಟಜಾತಿಗಳು ಮತ್ತು ಪಂಗಡಗಳೆಲ್ಲಕ್ಕೂ ಸಾರ್ವತ್ರಿಕವಾಗಿ ಒದಗಿಸಿರುವ ಪ್ರಯೋಜನವನ್ನು ಕೆಲವೇ ಜಾತಿಗಳು, ಜನಾಂಗಗಳು ಬುಡಕಟ್ಟುಗಳು ಅಥವ ಅವುಗಳೊಳಗಿನ ಭಾಗಗಳು ಅಥವ ಗುಂಪುಗಳು, ಪೂರ್ಣವಾಗಿ ತೆಗೆದುಕೊಳ್ಳುವ ಸ್ಥಿತಿಯಲ್ಲಿದ್ದಾಗ ಏನಾಗುತ್ತದೆ ಎಂಬುದು. ಅದು ಆಯಿತೆಂದಾದಲ್ಲಿ ಸಂವಿಧಾನ ಸೂಚಿಸಿರುವಂತೆ 'ಅಸ್ಪೃಶ್ಯತೆ' ಎನ್ನುವುದು ವೈವಿಧ್ಯ ಸಾಮಾಜಿಕ ಮೂಲಗಳನ್ನು ಹೊಂದಿದ್ದು ಅವುಗಳೆಲ್ಲಕ್ಕೂ ಮೀಸಲಾತಿಯ ಪ್ರಯೋಜನ ದೊರೆಯುವಂತೆ ಉಪವಿಭಾಗೀಕರಣ ಮಾಡುವುದನ್ನು ಸಂವಿಧಾನ ತಡೆಯುತ್ತದೆ ಎಂದು ಏಕೆ ಊಹಿಸಬೇಕಾಗಿದೆ.

ಇದಕ್ಕೆ ಉತ್ತರವೆಂಬಂತೆ ಮೂರು ಪ್ರತ್ಯೇಕ ತೀರ್ಪು ಮತ್ತು ಅನಂತರದ ತೀರ್ಪುಗಳಲ್ಲಿ 'ಏಕರೂಪತೆ'ಯ ಘೋಷಣೆ ಪದೇ ಪದೇ ನಡೆಯುತ್ತದೆ. ಇದನ್ನು ಒಂದು ನಿಯಮವೆಂಬಂತೆ ಸಂತೋಷ್ ಹೆಗ್ಡೆಯವರು, ಮುರ್ತಾಜ್ ಫಝಲ್ಆಲಿಯವರನ್ನು ಅಪಾರ್ಥ ಮಾಡಿಕೊಂಡು ಓದುತ್ತಾರಲ್ಲದೆ, ವಿ.ಆರ್. ಕೃಷ್ಣಅಯ್ಯರ್‌ರವರ ಪ್ರಕರಣ ಕೇರಳ ರಾಜ್ಯ V/S ಥಾಮಸ್, ೧೯೭೬ನ್ನು ತಪ್ಪಾಗಿ ಉಲ್ಲೇಖಿಸುತ್ತಾ ತಮ್ಮ ವಾದವನ್ನು ಸ್ಥಾಪಿಸುತ್ತಾರೆ. ಸಂವಿಧಾನಕ್ಕೆ ಒಪ್ಪುವಂತೆ ಮೊದಲ ಬಾರಿ ಮೀಸಲಾತಿ ವಿಷಯದ ಬಗ್ಗೆ ಒಂದು ಸಮಗ್ರವಾದ ತೀರ್ಪನ್ನು ಸಂವಿಧಾನ ಪೀಠದ ಬಹುಮಂದಿ ನೀಡುತ್ತಾರೆ. ಪರಿಚ್ಛೇದ ೧೬(೪)ರ ಧರ್ಮ, ಜನಾಂಗ, ಜಾತಿ, ಲಿಂಗ, ವಂಶ, ಹುಟ್ಟಿನ ಸ್ಥಳ ಅಥವ ಕುಟುಂಬದ ಹಿನ್ನೆಲೆಯಲ್ಲಿ ಯಾರಿಗೆ ಸರ್ಕಾರಿ ಸೇವೆಗಳಲ್ಲಿ ಪರಿಚ್ಛೇದ ೧೬(೪)ರ ಮೌಲ್ಯದ ಮೇರೆಗೆ ಮೀಸಲಾತಿ ಇದೆಯೋ ಅದನ್ನು ಮೇಲಿನ ಯಾವುದೇ ವಿಷಯಗಳಡಿ ತಾರತಮ್ಯ ಮಾಡಬಾರದೆನ್ನುವ ಕಾರಣಕ್ಕೆ ಜಾತಿ ಅಥವ ಜಾತಿಗಳನ್ನು ಬಿಟ್ಟು, ಒಂದು ವರ್ಗ ಮಾತ್ರ ಎಂದು ನ್ಯಾಯಾಧೀಶರು ಉತ್ತರ ನೀಡುವ ಬದ್ಧತೆಗೊಳಗಾಗುತ್ತಾರೆ.

ಅಂದರೆ ಇಂದು ಸಾಮಾನ್ಯವಾಗಿ ಒಂದು ಜಾತಿ, ಉದಾಹರಣೆಗೆ ಹೆಂಡ ತೆಗೆಯುವ ಜಾತಿಯನ್ನು ಪರಿಚ್ಛೇದ ೧೬(೪)ರ ಉದ್ದೇಶದ ಪ್ರಕಾರ ಮೀಸಲಾತಿಯನ್ನು ಜಾತಿ ಆಧಾರದಿಂದ ನೀಡಲು ಬರುವುದಿಲ್ಲ. ಅದರರ್ಥ ಹೆಂಡ ತೆಗೆಯುವವರು ಕೆಲವು ತಾರ್ಕಿಕ ಮಾನದಂಡದಿಂದ ಹಿಂದುಳಿದವರೆಂದಾದಾಗ ಅವರು ಹಿಂದುಳಿದ ವರ್ಗವಾಗಿ ಮೀಸಲಾತಿಗೆ ಅರ್ಹರಾಗುತ್ತಾರೆ. ಒಂದು ಜಾತಿಯನ್ನು ಅನುಕೂಲಕ್ಕಾಗಿ ಒಂದು ವರ್ಗ ಎಂದು ವ್ಯಾಖ್ಯಾನಿಸುವಾಗಿ, ಸಮಾಜದಿಂದ ಪ್ರತ್ಯೇಕವಾದ ನಿಶ್ಚಿತ ಗುಂಪಾಗಿ ಅದನ್ನು ಸಾಮಾನ್ಯವಾಗಿ ವಿವರಿಸಲಾಗುತ್ತದೆ. ಹೀಗೆ ಅದು ಒಂದು ಉದ್ದೇಶ ಅಥವ ತಾರ್ಕಿಕ ಮಾನದಂಡದಿಂದಾಗಿ ಹಿಂದುಳಿದಿದೆಯೆಂದಾದರೆ ಜಾತಿಯಿಂದ ತಾರತಮ್ಯಕ್ಕೊಳಗಾಗಿದೆ ಎಂಬ ಅಪವಾದವನ್ನು ಪರಿಗಣಿಸದೆಯೇ ಅದು ಮೀಸಲಾತಿಯ ವಿಶೇಷ ಸವಲತ್ತುಗಳನ್ನು ಪಡೆಯಬಹುದಾಗಿದೆ. ಈ ನಿರ್ಣಯಕ್ಕೆ ಬರಲು ನ್ಯಾಯಾಲಯಗಳಿಗೆ ಕಾಲಾವಕಾಶ ಬೇಕಾಗುತ್ತದಲ್ಲದೆ ಈ ಪ್ರಕ್ರಿಯೆಯಲ್ಲಿ ನ್ಯಾಯಾಲಯಗಳು ಭಾಷೆಯನ್ನು ಅತಿಯಾಗಿ ಹಿಂಸೆಗೆ ಗುರಿಪಡಿಸುವಂತಾಯಿತು.

ಕೇರಳ ರಾಜ್ಯ VS. ಎನ್.ಎಂ.ಥಾಮಸ್ ಪ್ರಕರಣದಲ್ಲಿ ವಿ.ಆರ್.ಕೃಷ್ಣಅಯ್ಯರ್ ಹೀಗೆನ್ನುತ್ತಾರೆ: "(ಸಂವಿಧಾನದ ಪರಿಚ್ಛೇದಗಳಾದ ೩೪೧ ಮತ್ತು ೩೪೨)ರ ನೇರ ಓದು ಒಂದು ಮುಖ್ಯ ಪರಿಭಾಷೆಯನ್ನು ಹೊರಹಾಕುತ್ತದೆ. ಅವರು (ಪರಿಶಿಷ್ಟಜಾತಿ ಮತ್ತು ಪಂಗಡಗಳು) ಹಿಂದೂ ಚೌಕಟ್ಟಿನಲ್ಲಿ ಜಾತಿಗಳಾಗಿರದೆ, ಅವೆಲ್ಲಾ ಜಾತಿಗಳು, ಜನಾಂಗಗಳು, ಗುಂಪುಗಳು, ಬುಡಕಟ್ಟುಗಳು, ಸಮುದಾಯಗಳ ಒಂದು ಒಕ್ಕೂಟವಾಗಿದ್ದು, ಪರಿಶೀಲಿಸಿದ್ದಲ್ಲಿ ಅತ್ಯಂತ ಶೋಚನೀಯವಾಗಿದ್ದು, ರಾಜ್ಯದ ಬಹುದೊಡ್ಡ ಸಹಾಯದ ಅಗತ್ಯವನ್ನು ಹೊಂದಿದ್ದಾವಾಗಿ ರಾಷ್ಟ್ರಪತಿಯವರಿಂದ ಸೂಚಿತವಾಗಿರುವುದು ಕಂಡು ಬರುತ್ತದೆ. ಈ ಅತ್ಯಂತ ಹಿಂದುಳಿದ ಸಾಮಾಜಿಕ ಒಕ್ಕೂಟವನ್ನು ಜಾತಿಗಳೆಂದು ಅಪಾರ್ಥ ಮಾಡಿದ್ದಲ್ಲಿ ಅದೊಂದು ಸಂವಿಧಾನಾತ್ಮಕ ತಪ್ಪಾಗುತ್ತದೆ. ಅಂದರೆ ಅದು ಹಣೆಪಟ್ಟಿ ಹಚ್ಚುವ ಸಂಕ್ಷಿಪ್ತ ರೂಪವಾಗಿ ದಿಕ್ಕು ತಪ್ಪಿದಂತಾಗುತ್ತದೆ. ಆದ್ದರಿಂದ ಹರಿಜನರನ್ನು ಸಂರಕ್ಷಿಸುವುದೆಂದರೆ ಯಾವುದೇ ಜಾತಿಯ ಬಗ್ಗೆ ಪೂರ್ವಗ್ರಹ ತಳೆಯುವಂತೆ ಮಾಡುವುದಲ್ಲ. ಬದಲು ನಾಗರೀಕ ಭಾವೈಕ್ಯತೆಯನ್ನು ಪೋಷಿಸುವುದೇ ಆಗಿದೆ. ಪರಿಚ್ಛೇದ ೧೬(೨) ಇಲ್ಲಿ ಸಂದರ್ಭದಾಚೆಗೆ ನಿಲ್ಲುತ್ತದೆ. ಈ ಬೆರೆತು ಹೋಗಿರುವ ಸಮಾಜದ ಬುಡಕಟ್ಟುಗಳು, ಜಾತಿಗಳು, ಜನಾಂಗಗಳು, ಗುಂಪುಗಳು, ಸಮುದಾಯಗಳು ಮತ್ತು ಹಿಂದೂ ಚೌಕಟ್ಟಿನಿಂದ ಹೊರಗಿರುವ ಜಾತಿಯೇತರರಿಗೆ ಸಕಾರಾತ್ಮಕ ರಕ್ಷಣಾ ತಾರತಮ್ಯವನ್ನು ನೀಡುವುದೆಂದರೆ ಪರಿಚ್ಛೇದ ಉಪಪ್ರಕರಣದಲ್ಲಿನ ಜಾತ್ಯತೀತ ಗುರಿಯತ್ತ ಸಾಗುವುದರೊಡನೆ ರಾಜಿ ಮಾಡಿಕೊಳ್ಳುವುದಲ್ಲ. ಭಾರತೀಯ ನ್ಯಾಯಾಧೀಶರ ಒಕ್ಕೂಟದ ವಿವೇಚನಾ ಗ್ರಹೀತದ ಪ್ರಕಾರ ಪರಿಶಿಷ್ಟಜಾತಿಗಳು ಮತ್ತು ಪಂಗಡಗಳು ಒಂದು ಜಾತಿಯಾಗಿರದೆ ಒಂದು ದೊಡ್ಡ ಹಿಂದುಳಿದ ಗುಂಪಾಗಿದ್ದು ಸಮಾಜದ ಅನುಕಂಪಕ್ಕೆ ಅರ್ಹವಾಗಿದೆ"

> **ಇಂದು ಸಾಮಾನ್ಯವಾಗಿ ಒಂದು ಜಾತಿ, ಉದಾಹರಣೆಗೆ ಹೆಂಡ ತೆಗೆಯುವ ಜಾತಿಯನ್ನು ಪರಿಚ್ಛೇದ ೧೬(೪)ರ ಉದ್ದೇಶದ ಪ್ರಕಾರ ಮೀಸಲಾತಿಯನ್ನು ಜಾತಿ ಆಧಾರದಿಂದ ನೀಡಲು ಬರುವುದಿಲ್ಲ. ಅದರರ್ಥ ಹೆಂಡ ತೆಗೆಯುವವರು ಕೆಲವು ತಾರ್ಕಿಕ ಮಾನದಂಡದಿಂದ ಹಿಂದುಳಿದವರೆಂದಾದಾಗ ಅವರು ಹಿಂದುಳಿದ ವರ್ಗವಾಗಿ ಮೀಸಲಾತಿಗೆ ಅರ್ಹರಾಗುತ್ತಾರೆ.**

ಸಂತೋಷ್ ಹೆಗ್ಡೆಯವರು ಈ ಸಾಲುಗಳನ್ನು ಉಲ್ಲೇಖಿಸುತ್ತಾ ೨ನೇ ಸಾಲಿನಲ್ಲಿನ 'They' ಪದವನ್ನು 'there' ಎಂದು ಕಾರಣವಿಲ್ಲದೆ ತಮ್ಮ ದೃಷ್ಟಿಗೆ ನೇರವಾಗಿ ಬದಲಿಸಿಕೊಂಡು ಹೀಗೆನ್ನುತ್ತಾರೆ:

"ನ್ಯಾಯಮೂರ್ತಿ ಕೃಷ್ಣಅಯ್ಯರ್ ಪ್ರಕಾರ ಹಿಂದೂ ಧರ್ಮದಲ್ಲಿ ಜಾತಿಗಳು, ಜನಾಂಗಗಳು, ಗುಂಪುಗಳು ಬುಡಕಟ್ಟು ಪಂಗಡಗಳು, ಸಮುದಾಯಗಳು ಅಥವ ಅವುಗಳಲ್ಲಿನ ಭಾಗಗಳು ಇಲ್ಲವಾದರೂ ರಾಷ್ಟ್ರಪತಿಯವರ ಪರಿಶೀಲನೆಯಿಂದ ಈ ಸಮುದಾಯಗಳ ಒಕ್ಕೂಟದಲ್ಲಿ ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದು, ರಾಜ್ಯದ ಅಗಾಧವಾದ ಸಹಾಯ ಅಗತ್ಯವಿರುವುದರಿಂದ ಅವನ್ನೆಲ್ಲಾ ಪರಿಶಿಷ್ಟಜಾತಿಗಳೆಂಬ ಒಂದೇ ವರ್ಗಕ್ಕೆ ಸೇರಿಸಲಾಗಿದೆ. ಆದ್ದರಿಂದ ಇಲ್ಲಿರುವ ಸಂಗತಿಯೆಂದರೆ ಸಂವಿಧಾನದ ಉದ್ದೇಶಕ್ಕಾಗಿ ಒಂದೇ ವರ್ಗವೆಂದು ಪರಿಗಣಿಸಲಾಗಿದೆ."

ವಿ.ಆರ್.ಕೃಷ್ಣ ಅಯ್ಯರ್ ಅಥವಾ ಯಾರೇ ಆಗಲಿ, ಹಿಂದೂ ಧರ್ಮದಲ್ಲಿ ಜಾತಿಗಳು, ಜನಾಂಗಗಳು, ಗುಂಪುಗಳು ಬುಡಕಟ್ಟುಗಳು, ಗುಂಪುಗಳು... ಇತ್ಯಾದಿ ಇಲ್ಲವೆನ್ನುವುದು ಅಸಂಬದ್ಧ ವಿಚಾರವಾದೀತು. ಅಂದರೆ ಹಿಂದೂ ಧರ್ಮದ 'ಒಕ್ಕೂಟ' (amalgam) ದಲ್ಲಿ ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವವರನ್ನು ರಾಷ್ಟ್ರಪತಿಯವರು ರಾಜ್ಯದ ಅಭಯಹಸ್ತಕ್ಕಾಗಿ ಆರಿಸಿಕೊಂಡು ಪರಿಶಿಷ್ಟಜಾತಿಗಳೆಂದು ಕರೆಯಲಾಗಿರುವುದನ್ನು ಅಭಿನ್ನ, ಅವಿಭಾಜ್ಯ ವರ್ಗವಾಗಿಸಲಾಗಿದೆ ಎಂಬ ಅಂತಿಮ ತೀರ್ಮಾನಕ್ಕೆ ಬರಲಷ್ಟೇ ಅವರ ವಾದ ಪ್ರಯೋಗಿಸಲಾಗಿದೆಯೇ ವಿನಃ ಮತ್ತೇನು ಅಲ್ಲ. ಇದಕ್ಕಿಂತಲೂ ಕೆಳಗೆ ನ್ಯಾಯ ತೀರ್ಮಾನದ ತರ್ಕ ಮುಳುಗಲು ಸಾಧ್ಯವಿಲ್ಲ.

ಅದೇ ತೀರ್ಪಿನಲ್ಲಿ ಬರುವ ಮುರ್ತಾಜ್ ಫಝಲ್‌ನನ್ನು ಸಂತೋಷ್ ಹೆಗ್ಡೆ ಉಲ್ಲೇಖಿಸುತ್ತಾ ಹೀಗೆನ್ನುತ್ತಾರೆ: "ಆದ್ದರಿಂದ ಈ ಕ್ರಮಗಳ ದೃಷ್ಟಿಯಲ್ಲಿ ಸಂವಿಧಾನದಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸದಸ್ಯರಿಗೆ ನೀಡಲಾಗಿರುವ ವಿಶೇಷ ಸ್ಥಾನದಿಂದಾಗಿ ಅವರೆಲ್ಲಾ ಒಂದೇ ವರ್ಗವಾಗಿ ನಿರೂಪಣೆಗೊಳ್ಳುತ್ತಾರೆ".

ಇದರಿಂದ ಮತ್ತೊಮ್ಮೆ ಸ್ಪಷ್ಟವಾಗುವ ಸಂಗತಿಯೆಂದರೆ ರಾಷ್ಟ್ರಪತಿಯವರ ಪಟ್ಟಿಯಲ್ಲಿ ಒಳಗೊಂಡಿರುವ ಸಮುದಾಯಗಳೆಲ್ಲ ಒಂದೇ ವರ್ಗವಾಗಿ ರೂಪುಗೊಳ್ಳುತ್ತಾರಲ್ಲದೆ, ಅವರನ್ನು ವಿಭಜಿಸುವುದಾಗಲೀ ಅಥವ ಯಾವುದೇ ಪರಿಗಣನೆಗಾಗಿ ಒಳಪಡಿಸುವುದಾಗಲೀ ಮಾಡಿದಲ್ಲಿ ರಾಷ್ಟ್ರಪತಿಯವರ ಪಟ್ಟಿಯಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ. ಒಂದು ಗುಂಪಿನ ವ್ಯಕ್ತಿಗಳು ತಮ್ಮಷ್ಟಕ್ಕೆ ಒಂದು ವರ್ಗವಾಗುತ್ತಾರೆ ಎನ್ನುವುದರ ಮೂಲಕ 'ಅವಿಭಾಜ್ಯತೆ'ಯನ್ನು ನ್ಯಾಯಾಧೀಶರು ಸ್ಥಾಪಿಸುವುದರಲ್ಲಿ ಏನೋ (ಕು)ತಂತ್ರವಿದೆ ಎಂದು ಭಾಸವಾಗುತ್ತದೆ. ಇಂಥ ತೀರ್ಮಾನಗಳು ಸ್ವಯಂಕೃತವಾಗಿಯೇನೂ ಆಗುವುದಿಲ್ಲ. ತಾರ್ಕಿಕ ವಿಲಕ್ಷಣವನ್ನೊಳಗೊಂಡಂತೆ ಒಂದು ಗುಂಪು 'ವರ್ಗ'ವಾಗಬೇಕಾದರೆ ಅದಕ್ಕೆ ಕೇವಲ ಒಂದು ಸೂಕ್ತ ವ್ಯಾಖ್ಯಾನ ನೀಡಿ ಇತರರಿಂದ ಸ್ಪಷ್ಟವಾಗಿ ಪ್ರತ್ಯೇಕಿಸಿಬಿಟ್ಟರೆ ಸಾಕಾಗಿಬಿಡುತ್ತದೆ. ಈ ಪರಿಸ್ಥಿತಿಯಲ್ಲಿ ಇಲ್ಲಿಂದಾಚೆಗೆ ಸಮರ್ಥವಾಗಿ ಉಪಗುಂಪುಗಳಾಗಿ ವರ್ಗೀಕರಿಸಲು ಬೇರೆ

ದಾರಿಗಳಿವೆ ಎಂಬುದನ್ನು ನೋಡಲಾಗುವುದಿಲ್ಲ. ಉಲ್ಲೇಖಿತವಾದ ಮುರ್ತಾಜ್ ಫಝುಲ್ ಅಲಿಯ ತೀರ್ಪನ್ನು ಸರಿಯಾಗಿ ಗಮನಿಸಿದಲ್ಲಿ ಪರಿಚ್ಛೇದ ೧೬(೨)ಕ್ಕೆ ಬಂದ ಟೀಕೆಗೆ ಉತ್ತರವನ್ನಷ್ಟೇ ಕೊಡುತ್ತಿದ್ದಾರೆ. ಅಂದರೆ ಪರಿಶಿಷ್ಟ ಪಂಗಡಗಳಿಗೆ ವಿಶೇಷ ಸವಲತ್ತುಗಳನ್ನು ಒದಗಿಸಿದರೆ ಒಂದು ಜಾತಿಯ ಹೆಸರಿನಲ್ಲಿ ವಿಶೇಷ ಪರಿಗಣನೆಯನ್ನು ನೀಡಿದಂತಾಗುತ್ತದೆ ಎಂದಷ್ಟೇ ಆತ ಹೇಳಿದ್ದು. ಇದಕ್ಕೆ ಸಂಬಂಧಿಸಿದಂತೆ ಮುಂದೆ ವರ್ಗೀಕರಿಸಲಾಗದು ಎಂಬ ತೀರ್ಮಾನಕ್ಕೆ ಬರಲಾಗುವುದಿಲ್ಲ.

ಆದರೆ ಕೊನೆಗೆ ಎಸ್.ಬಿ.ಸಿನ್ಹಾರ ಪ್ರಕಾರ ಪರಿಶಿಷ್ಟಜಾತಿಗಳಲ್ಲಿ ಮಾಲಾ ಮತ್ತು ಮಾದಿಗರಿಗಿಂತ ಹೆಚ್ಚು ವಂಚಿತರಾಗಿರುವವರೆಂದರೆ ರೆಲ್ಲಿಗಳು ಮತ್ತು ಆದಿಆಂಧ್ರ ಜಾತಿಯವರು. ಆದರೆ, ಸರ್ಕಾರದ ಪ್ರಕರಣದಲ್ಲಿ ವ್ಯಕ್ತವಾಗುವ ಸಂಗತಿಯೆಂದರೆ ಮೀಸಲಾತಿಯಿಂದ ಅಸಮಾನ ರೀತಿಯಲ್ಲಿ ವಂಚಿತರಾದವರೆಂದರೆ ರೆಲ್ಲಿ ಮತ್ತು ಮಾದಿಗ ಜಾತಿಯವರಾಗಿದ್ದಾರೆ. ಅಂದರೆ ಮೀಸಲಾತಿಯಿಂದ ತಮ್ಮ ಸಂಖ್ಯೆಗಿಂತ ಅಧಿಕವಾಗಿ ಪ್ರಯೋಜನ ಪಡೆದವರೆಂದರೆ ಮಾಲಾಗಳು ಮತ್ತು ಆದಿ ಆಂಧ್ರಜಾತಿಗಳು. ಹೀಗಿರುವಲ್ಲಿ ಈ ಸಮಸ್ಯೆ ನಿಜವಾದುದೆಂದು ಒಪ್ಪಿಕ್ಕೊಂಡು, ಅದಕ್ಕೆ ಒಳ ಮೀಸಲಾತಿ ಪರಿಹಾರವಾಗುವುದಿಲ್ಲವೆಂದು ಎಸ್.ಬಿ.ಸಿನ್ಹಾರವರು ಹೇಳುತ್ತಾರೆ; ಬದಲು ಅವರಿಗೆ "ವಿದ್ಯಾರ್ಥಿ ವೇತನಗಳು, ಹಾಸ್ಟೆಲ್ ಅನುಕೂಲಗಳು, ವಿಶೇಷತರ ಬೇತಿ... ಇತ್ಯಾದಿಗಳನ್ನು" ನೀಡಬೇಕಂತೆ. ತೀರ್ಪಿನಲ್ಲಿ ಇಂಥ ವಾದ ಮಂಡನೆಯಾಗಿ, ಅದು ಮೀಸಲಾತಿಯ ವಿರುದ್ಧದ ವಾದವೇ ಆಗುತ್ತದೆಂಬುದನ್ನು ನಾವು ೪ನೇ ಬಾರಿ ನೋಡುತ್ತೇವೆ. ಹಾಗಾಗಿ ಈ ವಾದ ಒಳಮೀಸಲಾತಿಯನ್ನು ಮಾತ್ರ ತಿರಸ್ಕರಿಸುವುದಿಲ್ಲ. ಮೀಸಲಾತಿ ವಿರೋಧಿ ಮೇಲ್ಜಾತಿಗಳ ಇಂಥ ವಾದ ನಿರಂತರವಾಗಿದ್ದು, ಕಾಲೇಜುಗಳಲ್ಲಿ ಮತ್ತು ಕಛೇರಿಗಳಲ್ಲಿ ತಮ್ಮ ಏಕಸ್ವಾಮ್ಯಕ್ಕೆ ಧಕ್ಕೆ ಬಾರದಂತೆ ಸರ್ಕಾರ ಹಿಂದುಳಿದ ವರ್ಗಗಳಿಗೆ ವಿದ್ಯಾರ್ಥಿ ವೇತನ, ಹಾಸ್ಟೆಲ್ ಅನುಕೂಲ, ಪುಕ್ಕಟೆ ಪುಸ್ತಕಗಳು ಇತ್ಯಾದಿಗಳನ್ನು ಒದಗಿಸಬಹುದೆನ್ನುತ್ತಿರುತ್ತಾರೆ.

ಮೀಸಲಾತಿಯ ವಿರುದ್ಧ:

ಅಂತಿಮವಾಗಿ, ನಮ್ಮೆದುರಿರುವ ಈ ತೀರ್ಪು ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ವರ್ಗೀಕರಣವನ್ನು ವಿರೋಧಿಸುತ್ತದೆಯಲ್ಲದೆ, ಮೀಸಲಾತಿ ವಿರೋಧಿ ವಾದವೇ ಆಗಿಬಿಡುತ್ತದೆ. ಒಂದು ದಶಕಕ್ಕಿಂತಲೂ ತುಸು ಹೆಚ್ಚಾಗಿರಬಹುದು. ಮಂಡಲ್ ಸಮಿತಿಯ ಪ್ರಕರಣ (ಇಂದಿರ ಸಹನಿ VS. ಭಾರತ ಸರ್ಕಾರ ಒಕ್ಕೂಟ, ೧೯೯೨) ದಲ್ಲಿ ಸುಪ್ರೀಂಕೋರ್ಟಿನ ೯ ಮಂದಿ ನ್ಯಾಯಾಧೀಶರು ಮೀಸಲಾತಿ ಪ್ರಶ್ನೆಯ ಪ್ರತಿಯೊಂದು ಅಂಶವನ್ನು ಪರಿಶೀಲಿಸುತ್ತಾ, ಎಲ್ಲಾ ಸಮಸ್ಯೆಗಳಿಗೆ ಉತ್ತರ ನೀಡಿ, ಹಿಂದಿನ ತೀರ್ಪುಗಳನ್ನು ಸಮರ್ಥಿಸುತ್ತಾ ಕೆಲವನ್ನು ತಿರಸ್ಕರಿಸುತ್ತಾ, ಕಾನೂನನ್ನು ತೃಪ್ತಿಕರವಾಗಿ ಸ್ಥಾಪಿಸುತ್ತದೆ. ಹೀಗೆ, ಹಿಂದೂ ಸಮಾಜದಲ್ಲಿನ ಶೋಷಿತ ಜಾತಿಗಳಿಗೆ ಒದಗಿಸಲಾದ ಮೀಸಲಾತಿ/ವಿಶೇಷ ಸವಲತ್ತು ನೀಡಿದ್ದನ್ನು ಕಾಡುತ್ತಿದ್ದ ದೆವ್ವಗಳು ಕಾಣೆಯಾದವೆಂದೇ ಭಾವಿಸಲಾಗಿತ್ತು.

ಆದರೆ ಹಾಗಾಗಲಿಲ್ಲ. ಏಕೆಂದರೆ ದಲಿತರಲ್ಲೇ ಒಂದು ಗುಂಪು ತಮಗಿಂತ ಕೆಳಗಿನವರ ವಿರುದ್ಧ ನ್ಯಾಯಾಲಕ್ಕೆ ಹೋಗಿ ವಂಚಿತ ಜಾತಿಗಳಿಗೆ ಒದಗಿಸಿದ ಮೀಸಲಾತಿ ಮತ್ತು ವಿಶೇಷ ಸವಲತ್ತುಗಳ ವಿರುದ್ಧ ಬ್ರಾಹ್ಮಣರು ಹೂಡಿದ್ದ ಎಲ್ಲಾ ತರ್ಕಗಳನ್ನು ಪ್ರಯೋಗಿಸಿದ್ದುದಕ್ಕಿಂತ ಮತ್ತೇನನ್ನು ನಿರೀಕ್ಷಿಸಲು ಸಾಧ್ಯ? ಅವರು ಅದನ್ನು ಕೇಳಿಕೊಳ್ಳಲಿಲ್ಲವೇ? "ಈಗಾಗಲೇ ಕಾನೂನಿನ ಮೂಲಕ 'ತುಳಿದ ಹಾದಿಯನ್ನೇ' ಮತ್ತೆ ತುಳಿಯಲು ಅವರು ಮತ್ತೊಮ್ಮೆ ನ್ಯಾಯಾಲಕ್ಕೆ ಹಾದಿಯನ್ನು ಸುಗಮವಾಗಿಸಲಿಲ್ಲವೇ? ಆಂಧ್ರಪ್ರದೇಶದಲ್ಲಿ ಎಲ್ಲರೂ ಗಮನಿಸಿದಂತೆ ಮಾದಿಗರ ಬೇಡಿಕೆಯ ವಿರುದ್ಧ ಮಾಲಾಗಳು ಮಂಡಿಸಿದ ವಾದಗಳನ್ನು ಜಾತಿ ಸಮಾಜ ಖುಷಿಯಿಂದಲೇ ಸ್ವಾಗತಿಸಿತ್ತು. ನಿನ್ನ ಆಕ್ರಮಣಕಾರರ ವಿರುದ್ಧ ನೀನು ಪಡೆದುಕೊಂಡ ಹಕ್ಕನ್ನು ರಕ್ಷಿಸುವ ಹೆಸರಿನಲ್ಲಿ ನಿನ್ನ ವಿರೋಧಿಗಳು ನಿನ್ನ ವಾದಗಳನ್ನೇ ಬಳಸಿ ನಿನ್ನನ್ನು ಸ್ವಾಧೀನ ಪಡಿಸಿಕೊಳ್ಳುವ ಲೆಕ್ಕಾಚಾರ ಮಾನವ ವಿದ್ಯಾಮಾನಗಳಲ್ಲಿ ಸಾಮಾನ್ಯವಾದುದ್ದೆಂದು ಕಾಣುತ್ತದೆ. ಚರಿತ್ರೆಯಲ್ಲಿ ಮೀಸಲಾತಿಯ ಬಗ್ಗೆ ನ್ಯಾಯಾಲಗಳು ಘೋಷಿಸಿರುವುದು ಪ್ರಜಾಪ್ರಭುತ್ವಕ್ಕೆ ಹಿಡಿದ ನೈಜ ಕನ್ನಡಿಯಾಗಿದ್ದು, ಭಾರತ ಒಂದು ಜಾತಿ ಸಮಾಜ ಎನ್ನುವುದನ್ನು ಎಷ್ಟು ಹಿಂಸೆಯಿಂದ ನಿಧಾನಗತಿಯಲ್ಲಿ ಸಮಾಜ, ನ್ಯಾಯಾಧೀಶರು ಒಪ್ಪಿಕೊಂಡರು?

ಎರಡು ದಶಕಗಳ ಹಿಂದೆ ನ್ಯಾಯಾಧೀಶರ ಮುನ್ಸೂಚನೆಯಾಗಿದ್ದ ಒ. ಚಿನ್ನಪ್ಪರೆಡ್ಡಿ ಹೇಳಿದ್ದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಕೆ.ಸಿ. ವಸಂತ್ ಕುಮಾರ್ VS. ಮೈಸೂರು ರಾಜ್ಯ ೧೯೮೫ರ ಪ್ರಕರಣದಲ್ಲಿ ಒ. ಚಿನ್ನಪ್ಪರೆಡ್ಡಿಯವರು ಸಂವಿಧಾನವನ್ನು ಸಕಾರಾತ್ಮಕವಾಗಿ ಓದಿಕೊಳ್ಳಬಹುದು ಎಂಬುದರ ಬಗ್ಗೆ ಹೀಗೆನ್ನುತ್ತಾರೆ, "... ನಾವು ನಿಖರವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿಯೆಂದರೆ, ಸಂವಿಧಾನದ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲಿದ್ದು ಎಲ್ಲರಿಗೂ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯ ದೊರೆಯುವಂತಹ ಒಂದು ಹೊಸ ಜಗತ್ತಿಗಾಗಿ ಎಲ್ಲೆಡೆ ನಡೆದಿರುವ ಎಲ್ಲಾ ಸಂವಿಧಾನಾತ್ಮಕ ಚಟುವಟಿಕೆಗಳು, ಘಟನೆಗಳು ಮತ್ತು ಕ್ರಾಂತಿಗಳನ್ನು ಒಳಗೊಂಡಿದೆ. ಅಂತಹ ಸಂವಿಧಾನಕ್ಕೆ ಉದಾರವಾದ ಅರ್ಥೈಸುವಿಕೆಯನ್ನು ನೀಡಿ ಅದು ಎಲ್ಲಾ ನಾಗರೀಕರಿಗೂ ನಿರೀಕ್ಷಿತ ನ್ಯಾಯ ಸಿಗುವಂತಾಗಬೇಕು"

ಇದು ಬಹುಷಃ ೨೦ನೇ ಶತಮಾನದ ಡಿಸ್ಕೋರ್ಸ್ (ಸಂಕಥನ) ಎಂದು ಕಾಣುತ್ತದಾದರೂ ೨೦ನೇ ಶತಮಾನದ ನಿರೀಕ್ಷೆಗಳು ಭಾರತ ಗಣರಾಜ್ಯವನ್ನು ನಿರೂಪಿಸಿದ್ದವಲ್ಲದೆ ಅಂತಹ ಗಣರಾಜ್ಯ ಸಾವನಪ್ಪಿದೆ ಎಂದು ಘೋಷಿಸಲು ಸಾಕಷ್ಟು ತಾರ್ಕಿಕ ನೆಲೆಗೆ ಅವಕಾಶವಿಲ್ಲ. □

ಎಸ್.ಬಿ.ಸಿನ್ಹಾರ ಪ್ರಕಾರ ಪರಿಶಿಷ್ಟಜಾತಿಗಳಲ್ಲಿ ಮಾಲಾ ಮತ್ತು ಮಾದಿಗರಿಗಿಂತ ಹೆಚ್ಚು ವಂಚಿತರಾಗಿರುವವರೆಂದರೆ ರೆಲ್ಲಿಗಳು ಮತ್ತು ಆದಿಆಂಧ್ರಜಾತಿಯವರು. ಆದರೆ, ಸರ್ಕಾರದ ಪ್ರಕರಣದಲ್ಲಿ ವ್ಯಕ್ತವಾಗುವ ಸಂಗತಿಯೆಂದರೆ ಮೀಸಲಾತಿಯಿಂದ ಅಸಮಾನ ರೀತಿಯಲ್ಲಿ ವಂಚಿತರಾದವರೆಂದರೆ ರೆಲ್ಲಿ ಮತ್ತು ಮಾದಿಗ ಜಾತಿಯವರಾಗಿದ್ದಾರೆ.



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಕರ್ನಾಟಕದ ರಾಜಕೀಯ ಹಿಂದೆಂದೂ ಕಾಣದಷ್ಟು ಅದಃಪತನವನ್ನು ಈಗ ಕಂಡಿದೆ. ಬಹುತೇಕ ಎಲ್ಲ ಪ್ರಮುಖ ಪಕ್ಷಗಳೂ ಯಾವುದೇ ರಾಜಕೀಯ ತತ್ವ–ಸಿದ್ಧಾಂತಗಳಿಗೂ ಬದ್ಧವಾಗದೇ ಅಧಿಕಾರ ಲಾಭಕೋರತನವನ್ನೇ ಗುರಿಯಾಗಿಸಿಕೊಂಡಿವೆ. ಹಾಗಾಗಿ ರಾಜ್ಯದ ರಾಜಕೀಯ ನಗೆಪಾಟಲಿಗೆ ಗುರಿಯಾಗಿದೆ. ಸುಳ್ಳರ ಸಂತೆಯಾಗಿದೆ. ಪ್ರಾಮಾಣಿಕ ಮತ್ತು ಪ್ರಜ್ಞಾವಂತ ರಾಜಕೀಯ ಇಲ್ಲಿ ಸಾಧ್ಯವೇ ಇಲ್ಲ ಎಂಬ ಹತಾಶೆ ಜನರಲ್ಲಿ ಮೂಡಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯ ಸ್ಥಿತಿ–ಗತಿ ಕುರಿತು ಗಂಭೀರ ಚರ್ಚೆಯನ್ನು 'ಸಂವಾದ' ಕೈಗೊಳ್ಳುತ್ತಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರು ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಉಳಿದವುಗಳನ್ನು ಮುಂದೆ ಪ್ರಕಟಿಸಲಾಗುವುದು. ಓದುಗರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು:

೧. ಕರ್ನಾಟಕದ ಸಧ್ಯದ ರಾಜಕೀಯ ಹಿಂದೆಂದೂ ಕಾಣದ ದುಃಸ್ಥಿತಿಗೆ ಇಂದು ಬಂದು ನಿಂತಿದೆ. ಇಂಥ ಅಧಃಪತನಕ್ಕೆ ನೀವು ಕಂಡುಕೊಳ್ಳುವ ಕಾರಣಗಳೇನು?

೨. ಜಾತ್ಯಾತೀತ ತೃತೀಯ ರಾಜಕೀಯ ಶಕ್ತಿಯಂತಿದ್ದ ಜೆಡಿ(ಎಸ್) ಪಕ್ಷದ ನೈತಿಕ ಕುಸಿತ ದ್ವಿಪಕ್ಷ ಪದ್ಧತಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆಯೇ?

೩. ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಬೇಕೆಂಬ ಆಶಯ ನಿರಂತರವಾಗಿದ್ದರೂ ಅದು ಸಾಧ್ಯವಾಗದಿರುವುದಕ್ಕೆ ನೀವು ಗುರುತಿಸುವ ಕಾರಣಗಳೇನು?

೪. ಜನಪರ ಚಳವಳಿಗಳು ಅಧಿಕಾರ ರಾಜಕಾರಣದಲ್ಲಿ ಸಮರ್ಥ (ನಿರ್ಣಾಯಕ) ಪಾತ್ರ ನಿರ್ವಹಿಸುವಲ್ಲಿ ಸೋಲುತ್ತಿರುವುದೇಕೆ?

೫. ತಳಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಇದೆಯಾ? ಬಿ.ಎಸ್.ಪಿ, ಸರ್ವೋದಯ ಕರ್ನಾಟಕ ಪಕ್ಷ, ಆರ್.ಪಿ.ಐ ಇವೇ ಮೊದಲಾದ ಪಕ್ಷಗಳ ಮುಂದಿನ ದಾರಿ ಮತ್ತು ಗುರಿಗಳನ್ನು ನೀವು ಹೇಗೆ ಮುಂಗಾಣುತ್ತೀರಿ?

೬. ಕರ್ನಾಟಕದ ಮುಂದಿನ ರಾಜಕಾರಣ ಹೇಗಿರಬೇಕೆಂದು ನೀವು ಬಯಸುತ್ತೀರಿ?



ರಾಜಕಾರಣ ಚರ್ಚೆ

ಒಕ್ಕೂಟ ರಾಜಕಾರಣದ ಅಗತ್ಯವಿದೆ

ರಾಮಲಿಂಗಪ್ಪ ಟಿ. ಬೇಗೂರು

ಸಾಹಿತಿ, ಚಿಂತಕ

ಇಂದು ಕರ್ನಾಟಕದ ರಾಜಕೀಯ ಹಿಂದೆಂದೂ ಕಾಣದ ದುಃಸ್ಥಿತಿಗೆ ಬರಲು ಜೆ.ಡಿ.ಎಸ್. ಪಕ್ಷದ ಮುಂಗಾಟವೇ ಮುಖ್ಯ ಕಾರಣವಾಗಿದೆ. ಇದರ ಜೊತೆಗೆ,

೧. ತಳಸಮುದಾಯಗಳು, ಜನಪರ ಚಳವಳಿಗಳು, ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಕ್ಕೂಟಗೊಳ್ಳದೆ ಪತ್ರ್ಯೇಕವಾಗಿರುವುದು, ೨. ಕಾಂಗ್ರೆಸ್, ಬಿ.ಜೆ.ಪಿ, ಜೆ.ಡಿ.ಎಸ್. ಈ ಮೂವರಲೂ ಹೇಸಿಗೆ ತಿಂದಾದರೂ ತಾವು ಸರ್ಕಾರ ರಚನೆ ಮಾಡಿಬಿಡಬೇಕು ಎಂಬ ನಿರ್ಲಜ್ಜತನ ಬರುತ್ತಿರುವುದು, ೩. ಕನಿಷ್ಟ, ನೈತಿಕತೆ ಕೂಡ ಬಹು ಪಾಲು ಎಲ್ಲ ಚುನಾಯಿತ ಪ್ರತಿನಿಧಿಗಳಲ್ಲಿ ಇಲ್ಲದಾಗುತ್ತಿರುವುದು, ೪. ಎಲ್ಲ ಕಡೆಯೂ ಅಧಿಕಾರ ದಾಹವೇ, ವ್ಯಕ್ತಿ ಪ್ರತಿಷ್ಠೆಯೇ, ನಾಯಕತ್ವದ ದಾಹವೇ ದೊಡ್ಡದಾಗಿರುವುದು; ಎಲ್ಲರೂ ಲೀಡರುಗಳಾಗಲು ಮಾತ್ರವೇ ಯೋಚಿಸುತ್ತ ಕಾರ್ಯಕರ್ತರಾಗಲು ಬಯಸದಿರುವುದು, ೫. ಚುನಾವಣೆಗಳಲ್ಲಿ ಹಣ, ಹೆಂಡ, ಜಾತಿಗಳೇ ನಿರ್ಣಾಯಕ ಪಾತ್ರ ವಹಿಸುತ್ತಿರುವುದು ೬. ಜನಪರ ಚಳವಳಿಗಳು, ಎಡ ಹಾಗೂ ಪ್ರ.ಸ. ಶಕ್ತಿಗಳು, ತಳಸಮುದಾಯದವರಿಗೆ ಅಧಿಕಾರ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರ ವಹಿಸಲು ತಲೆಮಾರುಗಳ ಕಾಲವನ್ನೇ ತ್ಯಾಗ ಮಾಡಿ ದುಡಿಯುತ್ತಲೇ ಇರಬೇಕಾದ ತಾಳ್ಮೆ ಇಲ್ಲದೆ ಇರುವುದು, ೭. ಅಧಿಕಾರಕ್ಕಾಗಿ ಬಲಿಷ್ಠ, ಸ್ಥಾಪಿತ ಪಕ್ಷಗಳ ತೆಕ್ಕೆಗೆ ಹೋಗಿ ಬೀಳುವುದು, ೮. ಇಂದಿನ ಚುನಾವಣಾ ವಿಧಾನ, ಸರ್ಕಾರ ರಚನಾ ವಿಧಾನ, ರಾಜಕೀಯ ದುಸ್ಥಿತಿಗೆ ಹತ್ತಾರು ಕಾರಣಗಳಿವೆ.

ನಮ್ಮ ಜಾತ್ಯತೀತ (ಕುಟುಂಬಾತೀತ)ದಳದ ನೈತಿಕ ಕುಸಿತ ದ್ವಿಪಕ್ಷ ಪದ್ಧತಿಗೆ ದಾರಿ ಮಾಡಿಕೊಡಬಹುದೆಂದು ಕಾಣುತ್ತಿದೆ. ಆದರೆ ಹೀಗಾಗುವುದಿಲ್ಲ. ಜನಪರರು, ಎಡ ಚಿಂತಕರು, ತಳಸಮುದಾಯದವರು 'ಕುಟುಂಬಾತೀತ' ದಳದಲ್ಲೂ ಇದ್ದಾರೆ. ಇವರೆಲ್ಲ ಖಂಡಿತ ಇಂದಲ್ಲ ನಾಳೆ ಈ ಪಕ್ಷದಿಂದ ಹೊರಬರುತ್ತಾರೆ. ಮಿಕ್ಕುಳಿದವರೂ ಕೂಡ ನಿಷ್ಕ್ರಿಯರಲ್ಲ. ಬಿ.ಎಸ್.ಬಿ. ಆರ್.ಪಿ.ಐಗಳು, ಸರ್ವೋದಯದವರು, ಸ್ವತಂತ್ರರು ಇವರ್ಯಾರು ನಿಷ್ಕ್ರಿಯರಲ್ಲ. ತೃತೀಯ ಶಕ್ತಿಯೊಂದನ್ನು ಕಟ್ಟಲು ಇವರೆಲ್ಲ ಶ್ರಮಿಸಬೇಕು. ಶ್ರಮಿಸುತ್ತಾರೆ.

ಕಾಂಗ್ರೆಸು, ಬಿ.ಜೆ.ಪಿ. ಮತ್ತು ಕುಂಟುಂಬಾತೀತ ದಳ ಈ ಮೂರೂ ಪಕ್ಷಗಳನ್ನು ಹೊರತು ಪಡಿಸಿ ಮಿಕ್ಕ ಎಲ್ಲ ರಾಜಕಾರಣದವರೂ ಒಕ್ಕೂಟಗೊಳ್ಳಬೇಕಾದ ಅವಶ್ಯಕತೆ ಹಿಂದೆಂದಿಗಿಂತ ಇಂದು ಹೆಚ್ಚಾಗಿದೆ. ಈ ಮುಂಚಿನ ಚುನಾವಣೆಗಳಲ್ಲಿ ರೈತರು, ದಲಿತರು, ಬಿ.ಎಸ್.ಪಿ, ಆರ್.ಪಿ.ಐ. ಸಿಪಿಐ ಮೊದಲಾದವರೆಲ್ಲ ಯಾರು, ಎಲ್ಲಿ ಬೆಂಬಲಿಸಬೇಕೆಂಬ ಅನೌಪಚಾರಿಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು, ಕೆಲವು ಕಡೆ ಕೆಲವರು ತಾವೇ ಚುನಾವಣೆಗೆ ನಿಂತು ಗೆದ್ದೂ, ಸೋತು ಇದ್ದಾರೆ. ಆದರೆ ಅಧಿಕಾರ ರಾಜಕಾರಣದಲ್ಲಿ ಇವರ್‍ಯಾರಿಗೂ ನಿರ್ಣಾಯಕ ಪಾತ್ರ ವಹಿಸಲು ಇದುವರೆಗೆ ಆಗಿಲ್ಲ. ಯಾಕೆಂದರೆ ಇವರು ರಾಜ್ಯಾದ್ಯಂತ ಒಂದೋ ಎರಡೋ ಸೀಟು ಗೆಲ್ಲುತ್ತಾರೆ. ಮಿಕ್ಕಂತೆ ಪ್ರಬಲ ಪಕ್ಷಗಳಿಗೆ ಒಳಗೊಳಗೆ ಬೆಂಬಲಿಸುತ್ತಾರೆ. ತಾವೇ ಬೃಹತ್ ಶಕ್ತಿಯಾಗಿ ಬೆಳೆಯುವ ಪ್ರಯತ್ನ ಮಾಡಿಲ್ಲ. ಮೂರನೇ ಶಕ್ತಿಯಾಗಿ ಬೆಳೆಯುವ ಲಕ್ಷಣ ತೋರಿದ್ದ ದಳ ಒಡೆದು ಯುನೈಟೆಡ್ಡಾಗಿ, ಜಾತ್ಯತೀತವಾಗಿ, ಕುಟುಂಬಾತೀತವಾಗಿ ಈಗ ತನ್ನ ಸಾವನ್ನು ತಾನೇ ತಂದುಕೊಳ್ಳುತ್ತಿದೆ. ಈಗ ಮಿಕ್ಕೆಲ್ಲರೂ ಒಕ್ಕೂಟವಾಗಲು ಸಕಾಲ.

ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಇದುವರೆಗೆ ಯಾಕೆ ಒಂದುಗೂಡಿಲ್ಲ? ಇದಕ್ಕೆ ಎಲ್ಲರಲ್ಲಿ ಇರುವ ಭಿನ್ನತೆಗಳು, ಅಸ್ತಿತ್ವದ ಪ್ರಶ್ನೆ ನಮ್ಮ ನಮ್ಮ ನಾಯಕತ್ವಕ್ಕೆ ಎಲ್ಲಿ ಎರಡನೆ ದರ್ಜೆತನ ಬರುತ್ತದೋ ಎಂಬ ಭಯ ವ್ಯಕ್ತಿ ಪ್ರತಿಷ್ಠೆ ಇತ್ಯಾದಿ ಕಾರಣಗಳಿರಬಹುದು. ತಮ್ಮ ಅನನ್ಯತೆ, ಅಸ್ತಿತ್ವ ಉಳಿಸಿಕೊಂಡು ಸರ್ವೋದಯ ಪಕ್ಷದಲ್ಲಿ ದಲಿತ ಸಂಘಟನೆಗಳು ಮತ್ತು ರೈತ ಸಂಘದವರು ಇಲ್ಲವೇ? ಹಾಗೆ ದೊಡ್ಡ ಪ್ರಮಾಣದಲ್ಲಿ ಎಲ್ಲರೂ ಒಂದು ತೃತೀಯ ಶಕ್ತಿ ಆಗಿ ರೂಪುಗೊಳ್ಳುವ ಒಕ್ಕೂಟವೊಂದನ್ನು ರಚಿಸಿಕೊಳ್ಳುವ ಅಗತ್ಯ ಇದೆ. ತಮ್ಮ ಅಸ್ತಿತ್ವ ಅನನ್ಯತೆ ಉಳಿಸಿಕೊಂಡು ಒಕ್ಕೂಟ ರಾಜಕಾರಣವನ್ನು ನಡೆಸಬಹುದಾದ ಸಾಧ್ಯತೆಯನ್ನು ಶೋಧಿಸಬೇಕಾಗಿದೆ.

ತಮ್ಮ ಆದ್ಯತೆಗಳಿಗೆ ಹೋರಾಡುತ್ತಲೆ ಚುನಾವಣೆಯ ಹಣೆಬರಹ ಬರೆಯಬಲ್ಲ ಶಕ್ತಿಯನ್ನು ಗಳಿಸಿಕೊಳ್ಳುವುದು ಜನಪರ ಚಳವಳಿಗಳ ಮುಖ್ಯ ಆದ್ಯತೆಯಾಗಬೇಕು. ಆನಂತರ ಗೆಲ್ಲುವುದು ಮತ್ತು ಅಧಿಕಾರ ಹಿಡಿಯವುದು. ಆದರೆ ನಮ್ಮ ಜನಪರ ಚಳವಳಿಗಳ ನಾಯಕರಿಗೆ ದೀರ್ಘ ಕಾಲದ ತಾಳ್ಮೆಯೇ ಇಲ್ಲ. ಎರಡನೇ ತಲೆಮಾರಿನ ನಾಯಕರನ್ನು ಸಜ್ಜುಗೊಳಿಸುವ ನಾಯಕತ್ವ ದೂರದೃಷ್ಟಿ ಇಲ್ಲ. ವೈಕ್ತಿಕ ಅಹಂ ಹೀರೋಯಿಸಂ ಜಾಸ್ತಿ, ಭಿನ್ನ ಬಂಡವಾಳಶಾಹಿಗಳು ಮತ್ತು ಸರ್ಕಾರಗಳು ಎಸೆಯುವ ಬಿಸ್ಕೇಟುಗಳಿಗೆ ಕೆಲವೊಮ್ಮೆ ಲಾಬಿ ಮಾಡಿ ತೃಪ್ತಿ ಪಡುವುದು ಹಾಗೂ ನಾವೆಲ್ಲ ದಣಿದಿದ್ದೇವೆ ಎಂದು ತಮ್ಮ ಸೋಲುಗಳಿಗೆ ಸಮರ್ಥನೆ ಮಾಡಿಕೊಳ್ಳುವುದು, ಕ್ರಿಯೆಗಿಂತ ಚಿಂತನೆ ಜಾಸ್ತಿ ನಡೆಸುವುದು ವಸೂಲಿ ಮಾರ್ಗಗಳನ್ನು ಹಿಡಿಯುವುದು–ಹೀಗೆ ಜನಪರ ಚಳವಳಿಗಳ ಹಿನ್ನಡೆಗೆ ಹಲವಾರು ಕಾರಣಗಳಿವೆ.

ಜನಪರ ಚಳವಳಿಗಳು ಅಧಿಕಾರ ರಾಜಕಾರಣದಲ್ಲಿ ಸಮರ್ಥ ಪಾತ್ರ ನಿರ್ವಹಿಸಲು ಸೋಲುತ್ತಿವೆ ನಿಜ. ಅಧಿಕಾರ ರಾಜಕಾರಣ ಎಂದರೆ ಬರಿ ರಾಜ್ಯ ಸರ್ಕಾರ ರಚನೆ ಮತ್ತು ಆಳುವಿಕೆ ಅಂತ ಅಲ್ಲ. ಗ್ರಾಮಮಟ್ಟದ ರಾಜಕೀಯ ಕೂಡ ಮುಖ್ಯ. ಹಾಗೇ ಶಾಸಕರಾಗಿ ಗೆಲ್ಲುವುದೂ ಕೂಡ ಮುಖ್ಯ. ಅಲ್ಲದೆ ಇಂದಿನ ಚುನಾವಣೆಗಳಲ್ಲಿ ಗೆಲ್ಲುವುದಕ್ಕೆ ಅನುಸರಿಸಬೇಕಾದ ದಾರಿಗಳಿವೆಯಲ್ಲ; ಅವುಗಳನ್ನು ಬಳಸವ ಕ್ರಮ ಮತ್ತು ಬದಲಿಸುವ ವಿಧಾನಗಳ ಬಗೆಗೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು, ಜನಪರ ಚಳವಳಿಗಳು ಗಂಭೀರವಾಗಿ ಚಿಂತಿಸಬೇಕಿದೆ. ಹಣ, ಹೆಂಡ, ಜಾತಿಗಳ ನಿರ್ಣಾಯಕ ಪಾತ್ರ ಚುನಾವಣೆಯಲ್ಲಿ ಎಲ್ಲಿಯತನಕ ಇರುತ್ತದೋ ಅಲ್ಲಿಯತನಕ ಯಾವ ಎಡವೂ ಯಾವ ಚಳವಳಿಯೂ ನಿರ್ಣಾಯಕ ಪಾತ್ರ ವಹಿಸಲಾರದು. ನಮ್ಮದೇ ದಾರಿಗಳನ್ನು ನಾವು ಹಿಡಿಯದಿದ್ದರೆ ಹಳೇ ದಾರಿಗಳಲ್ಲೇ ನಾವೂ ಸಾಗಬೇಕಾಗುತ್ತದೆ. ಆಗ ನಮಗೂ ಇತರರಿಗೂ ಏನು ವ್ಯತ್ಯಾಸ?

ಶಾಸಕ ಸ್ಥಾನ ಇಂದು ಅಧಿಕಾರ ಸ್ಥಾನ ಎಂದು ಜನಪ್ರತಿನಿಧಿಗಳಿಗೆ ಕಾಣುತ್ತಿಲ್ಲ. ವಿರೋಧ ಪಕ್ಷದಲ್ಲಿರುವುದು ಮತ್ತು ಸ್ವತಂತ್ರ ಶಾಸಕರಾಗಿರುವುದು ಎಂದರೆ ಅಧಿಕಾರಹೀನರಾಗಿ ಇರುವುದು ಎಂಬಂತೆ ಭಾವಿಸುತ್ತಿದ್ದಾರೆ. ಜನಪ್ರತಿನಿಧಿಯಾಗುವುದೆಂದರೆ ಅದೊಂದು ಜವಾಬ್ದಾರಿ ಮತ್ತು ಸಮಷ್ಟಿ ದನಿಯಾಗುವ ಅವಕಾಶ ಎಂಬುದಕ್ಕಿಂತ ಸರ್ಕಾರ ರಚನೆಯಲ್ಲಿ ಪಾಲ್ಗೊಂಡು ಅಧಿಕಾರ ಹಿಡಿಯುವುದಕ್ಕೆ ಇರುವ ಎಲಿಜಬಲಿಟಿ ಎಂಬಂತೆ ಆಡುತ್ತಿದ್ದಾರೆ. ಸರ್ಕಾರ ರಚನೆಗೆ ಮಾನಗೇಡಿ ಸರ್ಕಸ್ಸುಗಳನ್ನು ನಡೆಸುತ್ತಿದ್ದಾರೆ. ಒಟ್ಟಾರೆಯಾಗಿ ನಮ್ಮ ಶಾಸಕಾಂಗದ ಸ್ವರೂಪವನ್ನು ಬದಲಾಯಿಸುವ ಬಗ್ಗೆ ಮರುಚಿಂತಿಸಬೇಕಾಗಿದೆ. ರಾಜಕೀಯ ಒಳಮೀಸಲಾತಿ, ಸರ್ಕಾರ ರಚನೆಯ ವಿಧಾನ, ಮಂತ್ರಿಗಳ ಸಂಖ್ಯೆ, ಕಾಲಾವಧಿ, ಶಾಸಕಾಂಗದ ಆಡಳಿತ ವಿಧಾನಗಳಿಗೆ ಮೇಜರ್ ಸರ್ಜರಿ ಮಾಡುವಂತಹ ಸಂವಿಧಾನ ತಿದ್ದುಪಡಿಗಳ ಬಗ್ಗೆ ಯೋಚಿಸಬೇಕಾಗಿದೆ. ಇದು ದೂರದ ಮಾತು. ಆದರೆ ಸದ್ಯಕ್ಕೆ ಚುನಾವಣಾ ರಾಜಕೀಯವನ್ನು ಅಸ್ಪೃಶ್ಯವೆಂದು ನೋಡುವ ಜನರನ್ನು ಚುನಾವಣಾ ರಾಜಕೀಯಕ್ಕೆ ಕರೆತರಬೇಕಾಗಿದೆ.

ಮೊದಲಿಗೆ ಅಸಂಘಟಿತ ಮತದಾರರನ್ನೆಲ್ಲ ಸಂಘಟಿಸಬೇಕಾಗಿದೆ. ಮೂರನೇ ಲಿಂಗಿಗಳು (ಹಿಜಡಾಗಳು), ಚಿಂದಿ ಆಯುವವರು, ಹಲವಾರು ಪಕ್ಷಗಳಲ್ಲಿ ಹರಿದು ಹಂಚಿಹೋಗಿರುವ ದಲಿತರು, ರೈತರು, ದಲಿತ ಹೆಂಗಸರು, ಕಾಲೇಜು ಹುಡುಗರು ಮೊದಲಾದ ಮತದಾರರನ್ನು ಸಂಘಟಿಸಬೇಕು. ಚುನಾವಣಾ ರಾಜಕಾರಣಕ್ಕೆ ಇವರನ್ನೆಲ್ಲ ಸಜ್ಜುಗೊಳಿಸಬೇಕು. ಆಯಾ ಸಂಘಟನೆಗಳಿಗೆ ಸ್ವತಂತ್ರ ಅಸ್ತಿತ್ವದೊಂದಿಗೆ ತೃತೀಯ ರಾಜಕೀಯ ಒಕ್ಕೂಟದಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸಬೇಕು. ಆ ಮೂಲಕ ಅವರವರೇ ರಾಜಕೀಯ ಮುಖ್ಯವಾಹಿನಿಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಹಾಗೇ ಸಂಘಟಿತರಾಗಿರುವ ಆದರೆ ಚುನಾವಣೆ ನಮಗ್ಯಾಕೆ ಎಂಬ ಧೋರಣೆ ಇರುವ ಎಲ್ಲರನ್ನು ಚುನಾವಣೆಗಾಗಿ ಸಂಘಟಿಸಬೇಕು. ಸಾಹಿತಿ ಕಲಾವಿದರ ಬಳಗ, ಪತ್ರಕರ್ತರ ಬಳಗ, ಮನೆಕೆಲಸದವರ ಸಂಘಟಗಳು, ವಕೀಲರು, ಆಟೋ ಚಾಲಕರು, ಅಧ್ಯಾಪಕರು, ಪೌರಕಾರ್ಮಿಕರು, ಗ್ರಾಮೀಣ ಮಟ್ಟದ ಯುವಕ ಯುವತಿ ಮಂಡಲಗಳು ಹೀಗೆ ಯಾವ ಯಾವ ಸಂಘಟಿತ ವಲಯಗಳಿದ್ದಾವೋ ಇವರನ್ನೆಲ್ಲ ಚುನಾವಣೆಗೆ ಒಗ್ಗೂಡಿಸಿಕೊಳ್ಳಬೇಕು. ಅವರವರೆಲ್ಲ ಅವರವರ ಹಾಗೇ ಇರಲಿ. ಆದರೆ ರಾಜಕೀಯಕ್ಕೆ ಮಾತ್ರ ಒಂದು ಸಹಕಾರಿ ಒಕ್ಕೂಟ ರಚಿಸಿಕೊಳ್ಳಲಿ. ಎಲ್ಲರ ಜೊತೆ ನೆಗೋಶಿಯೇಟು ಮಾಡಿ ಎಲ್ಲರಿಗೂ ಒಂದೊಂದು ಸೀಟು ಕೊಟ್ಟು ಎಲ್ಲರನ್ನೂ ಗೆಲ್ಲಿಸಲು ಪ್ರಯತ್ನಿಸಬೇಕು. ಆಗ ಒಕ್ಕೂಟ ರಾಜಕಾರಣವೇ, ಒಂದು ತೃತೀಯ ಶಕ್ತಿಯಾಗಿ ಬೆಳೆಯಬಹುದು. ಹೀಗೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಸರ್ವೋದಯ ಪಕ್ಷವೇ ಈ ಕೆಲಸಕ್ಕೆ ಯಾಕೆ ಮುಂದಾಗಬಾರದು?

ಹೇಗಾದರೂ ಆಗಲಿ ಮೂರನೇ ಶಕ್ತಿಯೊಂದನ್ನು ರೂಪಿಸುವ ದಾರಿಯನ್ನು ಸದ್ಯಕ್ಕೆ ಸರ್ವೋದಯ ಪಕ್ಷ, ಆರ್.ಪಿ.ಐ., ಬಿ.ಎಸ್.ಪಿ.ಗಳು ತುಳಿಯಬೇಕಾಗಿದೆ. ತತ್ವ ಚಿಂತನೆಗಳನ್ನು ಕಡಿಮೆ ಮಾಡಿ ಕ್ರಿಯೆಗೆ ತೊಡಗಬೇಕಾಗಿದೆ. ನಾಲ್ಕು ಗೋಡೆಯ ನಡುವೆ ಚಿಂತಿಸಿ ತೆಗೆದುಕೊಂಡ ನಿರ್ಣಯಗಳು ಆಚರಣೆಯಲ್ಲಿ ಸೋಲಬಹುದು. ಕಣಕ್ಕೆ ಇಳಿದು ಕೆಲಸಕ್ಕೆ ತೊಡಗಿದಾಗ ಆಗುವ ಅನುಭವಗಳೇ ದಾರಿಗಳನ್ನು ತೋರುತ್ತ ಹೋಗುತ್ತವೆ. ಮುಂದೆ ಕನಿಷ್ಠ ಪಕ್ಷ ಪರ್ಯಾಯ ಶಕ್ತಿಯೊಂದರ ಭಯ ಪ್ರಬಲ ಪಕ್ಷಗಳಿಗೆ ಉಂಟಾಗಬೇಕು. ಆ ಕಡೆಗೆ ಎಲ್ಲರೂ ದುಡಿಯಬೇಕು. □

ಬರೆದ ಭಾಗ್ಯವ ನೆನೆದು...

ಡಾ॥ ಹಿ.ಶಿ. ರಾಮಚಂದ್ರೇಗೌಡ
ಜಾನಪದ ತಜ್ಞ, ಚಿಂತಕ



ದಾಳಿಕೋರರಂತೆ ಜನಗಳ ಮೇಲೆ ದಂಡೆತ್ತಿ ಬರುತ್ತಿರುವ ಬಿಜೆಪಿ, 'ಉಂಡರೆ ಉಬ್ಬಸ ಹೇತರೆ ಸಂಕಟ' ಎಂಬ ಸ್ಥಿತಿಯಲ್ಲಿರುವ ಕಾಂಗ್ರೆಸ್, ಎದುರು ಕಂಡರೆ ಮೂಗು ಮುಚ್ಚಿಕೊಂಡು ಹೋಗಬೇಕು ಎನಿಸುತ್ತಿರುವ ಜೆಡಿಎಸ್

೧. ಸೂಳೆಯ ಮನೆಯಲ್ಲಿ ಶೀಲವಂತರಿದ್ದೇವೆ ಎಂದು ಹೇಳಿಕೊಳ್ಳುವ ರಾಜಕಾರಣಿಗಳೆ ಕಾರಣ. ವ್ಯಕ್ತಿಶೀಲ ಮತ್ತು ಸಮಾಜಶೀಲ–ಎರಡು ಸೇರಿ ಹೋದ ಶನಿ ಸಂತಾನಗಳಿವು.

೨. ಖಂಡಿತ ಇದೆ. ಹಂದಿಯನ್ನು ಕೆಡವಲು ಗುಂಡಿ ಮತ್ತು ಬೇಟೆಗಾರ ಕೈ ಜೋಡಿಸಿದ್ದಾರೆ.

೩. ಗೊಡ್ಡು ಹಸುವಿನಲ್ಲಿ ಹಾಲು ಕರೆಯುತ್ತೇವೆ ಎಂಬ ಎಡಪಂಥೀಯರು, ಪ್ರಜೆಯನ್ನು ಬಿಟ್ಟು 'ಸತ್ತೆ' ನಮ್ಮ ಧರ್ಮ ಎಂದುಕೊಂಡಿರುವ ಪ್ರಜಾಪ್ರಭುತ್ವ ಶಕ್ತಿಗಳು–ಕೊಡುವುದಕ್ಕಿಂತ ವಿಭಜಿಸಿಕೊಳ್ಳುವ ಆತ್ಮರತಿ ಅವರ ಆತ್ಮಹತ್ಯೆ.

೪. ನಮ್ಮ ಸದ್ಯದ ಜನಪರ ಚಳವಳಿಗೆ ನಾಯಕತ್ವ ಇಲ್ಲ; ಅದು ತಾತ್ವಿಕ ಅಥವಾ ಕ್ರಿಯಾಶೀಲನಾಯಕತ್ವ ಆಗಿದ್ದಿರಬಹುದು. ರೈತರಿಗೆ ಸೀಮಿತವಾದ ನ್ಯಾಯಬೆಲೆ ಬೇಡಿಕೆ, ದಲಿತರಿಗೆ ಸೀಮಿತವಾದ ಹಂಚಿಕೆ ನ್ಯಾಯ ಎಂಬುವುದು ನ್ಯಾಯವಾದ ತಾತ್ವಿಕತೆಗಳಲ್ಲ. ಕರ್ತವ್ಯ ಮತ್ತು ಉತ್ಪಾದನೆಯ ಜೊತೆಗಿನ ನ್ಯಾಯವೂ ಬೇಕು.

೫. ತಳಸಮುದಾಯಗಳು ಸಾಮೂಹಿಕ ಜವಾಬ್ದಾರಿಯನ್ನು ಹೊತ್ತು ಅಧಿಕಾರ ರಾಜಕಾರಣದಲ್ಲಿ ಸಕ್ರಿಯ ಪಾತ್ರ ವಹಿಸಲು ಮುಂದಾಗಬೇಕು. ನಮ್ಮ ರಾಜಕೀಯಕ್ಕೆ ಆಗ ಒಂದು ಬಗೆಯ ಸಮತೋಲನ ಉಂಟಾಗುತ್ತದೆ.

ಬಿ.ಎಸ್.ಪಿ ನಮ್ಮ ನಡುವಿನ ಒಂದು ರಾಜಕೀಯ ಅವಾಂತರ. ಗಾಳಿಪಟ ಎಷ್ಟು ದಿನ ಹಾರುತ್ತದೆ ನೋಡಬೇಕು! ಸರ್ವೋದಯ ಪಕ್ಷಕ್ಕೆ ಅಜ್ಞಾತ ವಾಸದಿಂದ ಬಿಡುಗಡೆ ಇದೆಯೆ, ಕಾಯಬೇಕು. ಆರ್.ಪಿ.ಐ ಕರ್ನಾಟಕವನ್ನು ತಟ್ಟುತ್ತದೆಯೇ?

ಈ ಪಕ್ಷಗಳು ಕರ್ನಾಟಕದಲ್ಲಿ ತಮ್ಮ ಪ್ರಾತಿನಿಧ್ಯವನ್ನು ಸ್ಥಾಪಿಸಿಕೊಂಡರೆ ಅದು ದೊಡ್ಡ ಸಾಧನೆ. ಅವಕ್ಕೆ ವಿಚಾರ ಮಾತ್ರ ಸಾಲದು ವಿಶಾಲವಾದ ವಿವೇಕಬೇಕು.

೬. ನನಗೆ ಮುಂದಿನ ರಾಜಕಾರಣದಿಂದ ಬಚಾವಾಗುವುದು ಹೇಗೆ ಎಂಬ ಭಯ ಉಂಟಾಗಿದೆ. ಮುಸ್ಲಿಂ ದಾಳಿಕೋರರಂತೆ ಜನಗಳ ಮೇಲೆ ದಂಡೆತ್ತಿ ಬರುತ್ತಿರುವ ಬಿಜೆಪಿ, 'ಉಂಡರೆ ಉಬ್ಬಸ ಹೇತರೆ ಸಂಕಟ' ಎಂಬ ಸ್ಥಿತಿಯಲ್ಲಿರುವ ಕಾಂಗ್ರೆಸ್, ಎದುರು ಕಂಡರೆ ಮೂಗು ಮುಚ್ಚಿಕೊಂಡು ಹೋಗಬೇಕು ಎನಿಸುತ್ತಿರುವ ಜೆಡಿಎಸ್–ಕರ್ನಾಟಕ ಮತ್ತೆ ಬಸುರಾಗದು ಎಂಬ ಅನುಮಾನ ನನಗೆ.

ಜೆಡಿಎಸ್ ನಿರ್ಗಮನದೊಂದಿಗೆ ಅಥವಾ ಅದು 'ಎಸ್' ಆಗುವ ಮೂಲಕ ಕೂಡಿಕೊಳ್ಳುವ ಶಕ್ತಿಗಳು ಕರ್ನಾಟಕ ರಾಜಕೀಯದಲ್ಲಿ ಸಂಚಲನ ಉಂಟುಮಾಡಬಲ್ಲವು ಎಂಬುದು ನನ್ನ ಅನಿಸಿಕೆ.

ಇಂಥ ದುಸ್ಥಿತಿಯಲ್ಲೂ 'ಸಂವಾದ' ಕರ್ನಾಟಕ ರಾಜಕೀಯ ಪುನರುಜ್ಜೀವನದ ಬಗ್ಗೆ ಆಶಾದಾಯಕವಾಗಿರುವುದು ಸಮಾಧಾನದ ಸಂಗತಿ. ಇಂಥ 'ಅಭಿಪ್ರಾಯ ರಾಜಕೀಯ'ವೆ ನಮಗೆ ಉಳಿದಿರುವ ಭಾಗ್ಯ ಎಂದುಕೊಳ್ಳುವೆ. □

೧. ಕರ್ನಾಟಕದ ಸದ್ಯದ ರಾಜಕೀಯ ಹಿಂದೆಂದೂ ಕಾಣದ ದುಃಸ್ಥಿತಿಗೆ ಇಂದು ಬಂದು ನಿಂತಿದೆ. ಇಂದಿನ ರಾಜಕಾರಣಿಗಳ ಅಧಿಕಾರ ದಾಹ ಮತ್ತು ಧನದಾಹ ಇಂತಹ ಅಧಃಪತನಕ್ಕೆ ಕಾರಣ ವೆಂಬುದು ನನ್ನ ಅಭಿಪ್ರಾಯ. ಅಧಿಕಾರಕ್ಕಾಗಿ ರಾಜಕಾರಣಿಗಳು ಎಷ್ಟೊಂದು ಕೆಳಮಟ್ಟಕ್ಕೆ ಇಳಿಯಬಲ್ಲರೆಂಬುದನ್ನು ಬಿ.ಜೆ.ಪಿ. ಮತ್ತು ಜಾತ್ಯತೀತ ಜನತಾದಳ ಪಕ್ಷಗಳ ಮುಖಂಡರು ಸಾಬೀತು ಪಡಿಸಿದ್ದಾರೆ.

೨. ತೃತೀಯ ರಾಜಕೀಯ ಶಕ್ತಿಯಂತಿದ್ದ ಜೆಡಿ(ಎಸ್) ಪಕ್ಷ ತಾನು ನೈತಿಕವಾಗಿ ಕುಸಿದಿದೆಯೆಂದು ಒಪ್ಪಿಕೊಂಡಿಲ್ಲವಲ್ಲ? ಮುಂದಿನ ಬಾರಿ ತಮ್ಮ ಪಕ್ಷ ಗೆದ್ದು ಬಹುಮತ ಪಡೆದು ಅಧಿಕಾರ ಚಲಾಯಿಸುತ್ತೇವೆಂಬ ಭ್ರಮೆಯಲ್ಲಿ ಕುರುಡಾದಂತೆ ಕಾಣಿಸುತ್ತಿದೆಯಲ್ಲ? ಆದರೆ ಅವರ ಈ ನೈತಿಕ ಅಧಃಪತನ ದ್ವಿಪಕ್ಷ ಪದ್ಧತಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆಯೆಂದು ನನಗನ್ನಿಸುವುದಿಲ್ಲ.

೩. ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಬೇಕೆಂಬ ಆಶಯ ನಿರಂತರವಾಗಿದ್ದರೂ ಈ ಎಲ್ಲರನ್ನು ಒಟ್ಟುಗೂಡಿಸಿ ಒಂದೇ ವೇದಿಕೆಗೆ ತರಲು ಸಮರ್ಥರಾದ ಮತ್ತು ಜನರನ್ನು ಆಕರ್ಷಿಸಬಲ್ಲ ನಾಯಕರೊಬ್ಬರು ಈ ಒಕ್ಕೂಟದಲ್ಲಿ ಇಲ್ಲದಿರುವುದು ಈ ವೈಫಲ್ಯಕ್ಕೆ ಕಾರಣವಾಗಿದೆ. ಅಧಿಕಾರಕ್ಕಾಗಿ ಒಂದುಗೂಡುವ ಪಕ್ಷ ಎಂದಿಗೂ ಉತ್ತಮ ಆಡಳಿತ ನಡೆಸುವ ಪಕ್ಷವಾಗಲಾರದು.

೪. ಜನಪರ ಚಳವಳಿಗಳನ್ನು ಮುನ್ನಡೆಸಲು ಜನಪರ ಕಾಳಜಿಯಿಂದ ದುಡಿಯುವ ಸಮರ್ಥ ನಾಯಕರ ಕೊರತೆಯೇ ಒಂದು ಕಾರಣ. ಜನಪರ ಚಳವಳಿಗಳನ್ನು ಜನಸಾಮಾನ್ಯರು ಅರ್ಥ ಮಾಡಿಕೊಂಡು ಅಧಿಕ ಸಂಖ್ಯೆಯಲ್ಲಿ ಇಂತಹ ಚಳವಳಿಗಳಲ್ಲಿ ಭಾಗವಹಿಸದಿರುವುದು; ಜನಸಾಮಾನ್ಯರ ಮೆದುಳು ತೊಳೆದು ಅವರನ್ನು ನಿಷ್ಕ್ರಿಯರಾಗಿಸಿರುವುದು ಒಂದು ಕಾರಣ. ಈ ದೇಶದ ಕುಟುಂಬ ರಾಜಕಾರಣ, ಜನ ಸಾಮಾನ್ಯರ ಅಜ್ಞಾನ, ಚುನಾವಣೆಯಲ್ಲಿ ಆರ್ಥಿಕವಾಗಿ ಸಬಲರಾಗಿರುವುದು ಮಾತ್ರ ಸ್ಪರ್ಧಿಸಬಹುದಾದಂತಹ ಪರಿಸ್ಥಿತಿ ಇವೆಲ್ಲವೂ ಜನಪರ ಚಳವಳಿ ವಿಫಲತೆಗೆ ಕಾರಣಗಳಾಗಿವೆ.

೫. ತಳಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಸದ್ಯಕ್ಕಂತೂ ಕಾಣುತ್ತಿಲ್ಲ. ಬಿ.ಎಸ್.ಪಿ. ಈಗಾಗಲೇ ಒಳ ಜಗಳವನ್ನಾರಂಭಿಸಿದೆ! ಸರ್ವೋದಯ ಕರ್ನಾಟಕ ಪಕ್ಷ, ಆರ್.ಎಸ್.ಪಿ. ಪಕ್ಷಗಳ ಕುರಿತು ನನಗೆ ತಿಳಿಯದು.

೬. ಕರ್ನಾಟಕದ ಮುಂದಿನ ರಾಜಕಾರಣ ಹೇಗಿರಬೇಕೆಂದರೆ ಇಲ್ಲಿ ಒಂದೇ ಪಕ್ಷ ಅಧಿಕಾರಕ್ಕೆ ಬರಬೇಕು. ಯಾವ ಪಕ್ಷವೇ ಆದರೂ ಓರ್ವನಿಗೆ ಚುನಾವಣೆಗೆ ಟಿಕೆಟ್ ನೀಡುವಾಗ ಆತ ಎಂತಹ ಹಿನ್ನೆಲೆಯಿಂದ ಬಂದಿದ್ದಾನೆಂಬುದನ್ನು ಗಮನಿಸಬೇಕು. ಇಂದು ಎಲ್ಲ ರಾಜಕೀಯ ಪಕ್ಷಗಳೂ ಗೂಂಡಾಗಳಿಗೆ, ಭೂಗತ ಲೋಕದ ಕ್ರಿಮಿನಲ್‌ಗಳಿಗೆ, ಕೊಲೆಯ ಆರೋಪ ಹೊತ್ತು ಜೈಲಿಗೆ ಹೋದವರಿಗೆ, ಆ ಜೈಲಿನಲ್ಲೇ ಇರುವವರಿಗೆ ಕೂಡಾ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡುತ್ತವೆ! ಜೈಲಿನಲ್ಲಿದ್ದುಕೊಂಡೇ ಚುನಾವಣೆಯಲ್ಲಿ ಗೆಲ್ಲುವ ಸಾಮರ್ಥ್ಯವನ್ನೂ ಇವರು ಪಡೆದುಕೊಂಡಿದ್ದಾರೆ! ಚುನಾವಣೆಯಲ್ಲಿ ಸ್ಪರ್ಧಿಸಲು ಆತನ ಶ್ರೀಮಂತಿಕೆಯೇ ಆತನಿಗಿರುವ ಅರ್ಹತೆ ಎಂಬಂತಾಗಿದೆ ಇಂದಿನ ರಾಜಕಾರಣ. ಇಂತಹ ಮೂರ್ಖತನವನ್ನು, ಸಮಯ ಸಾಧಕತನವನ್ನು ರಾಜಕೀಯ ಪಕ್ಷಗಳು ಕೊನೆಗಾಣಿಸಬೇಕು.

ಈ ದೇಶದ ಕುರಿತು, ಇಲ್ಲಿನ ಜನಸಾಮಾನ್ಯರ ಬಡತನ, ನಿರಕ್ಷರತೆ, ಅಜ್ಞಾನ ಈ ಕುರಿತು ನೈಜ ಕಾಳಜಿ ಇರುವವರನ್ನು ಜನರೇ ಆಯ್ಕೆ ಮಾಡಿ, ಅಂತಹವರನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿ ಲೋಕ ಸಭೆ ಮತ್ತು ವಿಧಾನ ಸಭೆಗೆ ಕಳುಹಿಸುವ ವ್ಯವಸ್ಥೆ ಜಾರಿಗೆ ಬರಬೇಕು. ಇಂದಿನ ಚುನಾವಣೆ ಎಂದರೆ ಲಕ್ಷಗಟ್ಟಲೆಯಲ್ಲ ಕೋಟಿಗಟ್ಟಲೆ ಹಣ ಖರ್ಚು ಮಾಡಲು ಸಾಧ್ಯವಿರುವವನು ಮಾತ್ರ ಚುನಾವಣೆಗೆ ಸ್ಪರ್ಧಿಸುವ ಸಾಮರ್ಥ್ಯ ಹೊಂದಿದ್ದಾನೆ. ಜನರ ಚುನಾವಣೆಯ ಖರ್ಚು ವೆಚ್ಚಗಳನ್ನು ಸರಕಾರವೇ ಭರಿಸುವಂತಹ ಪದ್ಧತಿಯೂ ಪ್ರಾರಂಭವಾಗಬೇಕು. ಹೀಗಾದಾಗ ಮಾತ್ರ ಆರ್ಥಿಕವಾಗಿ ಹಿಂದುಳಿದವರೂ ಕೂಡಾ ನಿಯಮ ರೂಪಿಸುವಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಇಂದು ಪ್ರಥಮ ಆದ್ಯತೆ ನೀಡಬೇಕಾದ ಒಂದು ವಿಷಯವಿದೆ. ದೇಶಾದ್ಯಂತ ಏಕರೂಪ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಬೇಕಾದ ಅವಶ್ಯಕತೆ ಇದೆ. ಇಂದಿನ ಶಿಕ್ಷಣ ವ್ಯವಸ್ಥೆಯೇ ನಮ್ಮೆಲ್ಲ ಅಸಮಾನತೆಗೆ ಬಹುಮುಖ್ಯ ಕಾರಣವಾಗಿದೆ. ಐ.ಸಿ.ಎಸ್.ಇ. ಮತ್ತು ಸಿ.ಬಿ.ಎಸ್.ಇ.ಸಿಲೆಬಸ್ ಇರುವ ಕೇಂದ್ರೀಯ ವಿದ್ಯಾಲಯ ಕೇಂದ್ರ ಸರಕಾರದ ಹುದ್ದೆಗಳಲ್ಲಿರುವವರ ಮಕ್ಕಳಿಗಾಗಿ ರೂಪಿಸಲ್ಪಟ್ಟ ಶಿಕ್ಷಣ ವ್ಯವಸ್ಥೆ. ಶ್ರೀಮಂತರು ಇಡೀ ಶಿಕ್ಷಣ ವ್ಯವಸ್ಥೆ ಅಳವಡಿಸಿಕೊಂಡು ತಮಗೆ ಬೇಕಾದಂತೆ ದುಬಾರಿ ವೆಚ್ಚದ ಖಾಸಗಿ ಶಾಲೆಗಳನ್ನು ನಿರ್ಮಿಸಿಕೊಳ್ಳುತ್ತಾರೆ. ರಕ್ಷಣ ಇಲಾಖೆಯಲ್ಲಿರುವವರ ಮಕ್ಕಳಿಗೂ ಪ್ರತ್ಯೇಕ ವಿದ್ಯಾಸಂಸ್ಥೆಗಳಿವೆ. ಜನಸಾಮಾನ್ಯರ ಮಕ್ಕಳಿಗೆ (ನನ್ನ, ನಿಮ್ಮಂತಹವರಿಗೆ) ತೀರಾ ಸಾಮಾನ್ಯವಾದ, ಸಮನಾದ ಶಿಕ್ಷಕರೂ ಇಲ್ಲದೆ ಸ್ಥಳೀಯ ಭಾಷೆಯ ಮಾಧ್ಯಮದಲ್ಲಿ ಕಲಿಸುವ ಸಾಮಾನ್ಯವಾದ ಶಾಲೆಗಳು. ಇಂದು ಈ ಶಾಲೆಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು, ಕೇಂದ್ರೀಯ ವಿದ್ಯಾಲಯ ಮತ್ತಿತರ ಉತ್ತಮ ಪಠ್ಯಕ್ರಮವಿರುವ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳೊಡನೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸ್ಪರ್ಧಿಸಿ ತೇರ್ಗಡೆಯಾಗಲು ಸಾಧ್ಯವೇ ಇಲ್ಲ. ಈ ಅಸಮಾನತೆ ಕೂಡಾ ಹೇಗಿದೆಯೆಂದರೆ ಇಂದು ಈ ಉನ್ನತ ಹುದ್ದೆಗಳಲ್ಲಿರುವವರೆಲ್ಲರೂ (ಹೆಚ್ಚಿನವರು) ಮೇಲ್ಜಾತಿಯವರಾಗಿದ್ದು ಮುಂದಿನ ದಶಮಾನಗಳಲ್ಲಿ ಇವರ ಮಕ್ಕಳು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಬಹಳ ಮುಂದುವರಿದವರಾಗಿದ್ದು ಇವರು ಆಳುವವರಾಗಿದ್ದು, ನಮ್ಮಂತಹ ಜನಸಾಮಾನ್ಯರು ಎಂದಿನಂತೆಯೇ ಆಳಿಸಿಕೊಂಡು ಗುಲಾಮರಂತೆಯೇ ಉಳಿಯಬೇಕಾಗುತ್ತದೆ. ಇಂತಹ ಈ ಅಸಮಾನತೆಯನ್ನು ಸಂಪೂರ್ಣ ನಿರ್ಮೂಲನಗೊಳಿಸಿ, ಈ ದೇಶದ ಎಲ್ಲರೀತಿಯ ಸಂಪತ್ತು ಮತ್ತು ಸೌಲಭ್ಯಗಳಲ್ಲಿ ಎಲ್ಲರಿಗೂ ಸಮಪಾಲು ದೊರಕಿಸಿಕೊಡಲು ಪ್ರಯತ್ನಿಸುವವರೇ ನಿಜವಾದ ಜನಪರ ಕಾಳಜಿಯುಳ್ಳವರೆಂಬುದು ನನ್ನ ತಿಳುವಳಿಕೆ. ಏಕರೂಪದ ಶಿಕ್ಷಣ ವ್ಯವಸ್ಥೆಗೆ ಇಂದಿನಿಂದಲೇ ಹೋರಾಟವನ್ನಾರಂಭಿಸಿದರೆ ದಶಕಗಳ ಬಳಿಕವಾದರೂ ನಮ್ಮ ಈ ಕನಸು ನೆನಸಾಗಬಹುದು. ಈ ದಿಸೆಯಲ್ಲಿ ನಾವು ಚಿಂತಿಸದೆ ಹೋದರೆ ಗೂಂಡಾಗಳು, ಕ್ರಿಮಿನಲ್‌ಗಳು, ಮತ್ತು ಭಯೋತ್ಪಾದಕರ ಕೈಯಲ್ಲಿ ಸರಕಾರವಿರುತ್ತದೆ. ಇಲ್ಲಿ ಪ್ರಜಾಪ್ರಭುತ್ವವೆಂಬುದು ಹೆಸರಿಗೆ ಮಾತ್ರವಿರುತ್ತದೆ.

ಕೈಗಾರಿಕೆಗೆ ಆದ್ಯತೆ ನೀಡಿ, ಕೃಷಿಯನ್ನು ನಿರ್ಲಕ್ಷಿಸಿದುದರ ಪರಿಣಾಮ ಕಾಣಲಾರಂಭಿಸಿದೆ. ಜನಪರವಾದ ಅಥವಾ ಚಿಂತೆಯೇ ಇಲ್ಲದೆ ಬೇಕಾಬಿಟ್ಟಿಯಾಗಿ ಕಾಡನ್ನು ಕಡಿದುದರಿಂದ ಶ್ರೀಮಂತರು ಮತ್ತು ರಾಜಕಾರಣಿಗಳ ಬೊಕ್ಕಸಗಳು ತುಂಬಿ ಹರಿಯುತ್ತಿವೆ. ಮಂಗಳೂರಿನಂತಹ ನಗರದ ಪಕ್ಕದಲ್ಲಿಯೇ ನೇತ್ರಾವತಿ ನದಿ ಹರಿಯುತ್ತಿದ್ದರೂ ಈಗ ಮಂಗಳೂರಿನ ನಾಗರಿಕರಿಗೆ ನಾಲ್ಕು ದಿನಗಳಿಗೊಮ್ಮೆ ಕುಡಿಯುವ ನೀರು ಸರಬರಾಜಾಗುತ್ತಿದೆ. ಕುಡಿಯುವ ನೀರಿಗಾಗಿ ತುಂಬೆಯಲ್ಲಿ ಅಣೆಕಟ್ಟು ಕಟ್ಟಿದಾಗ ಅಲ್ಲಿದ್ದ ಲಕ್ಷಾಧಿಪತಿಗಳ ಅಡಿಕೆ ತೋಟಗಳಿಗೆ ಬೇಕಾಬಿಟ್ಟಿಯಾಗಿ ನೀರು ದೊರೆಯುವಂತಾಯಿತೇ ಹೊರತು ಮಂಗಳೂರಿನ ನಾಗರಿಕರಿಗೆ ನೀರಿನ ಬವಣೆ ತಪ್ಪಲಿಲ್ಲ.

ಜನರ ಅಜ್ಞಾನ ತೊಲಗಿ ಅವರು ಜ್ಞಾನಿಗಳಾದಾಗ ಮಾತ್ರ ಈ ದೇಶದ ರಾಜಕಾರಣದಲ್ಲಿ ಬದಲಾವಣೆ [illegible] ಬಹುದು. ಎಲ್ಲ ರೀತಿಯ ಅನ್ಯಾಯ, ಶೋಷಣೆ ಮತ್ತು ಅಸಮಾನತೆಯನ್ನು ಧೈರ್ಯದಿಂದ ಪ್ರಶ್ನಿಸುವ ಶಕ್ತಿ ಜನಸಾಮಾನ್ಯನಿಗೆ ಬರಬೇಕು. □

ಸಾ.ರಾ. ಅಬೂಬಕ್ಕರ್
ಖ್ಯಾತ ಕಾದಂಬರಿಕಾರರು



ಸಮರ್ಥ ನಾಯಕರಿಲ್ಲ

ದೇಶದ ಕುರಿತು, ಇಲ್ಲಿನ ಜನಸಾಮಾನ್ಯರ ಬಡ ತನ, ನಿರಕ್ಷರತೆ, ಅಜ್ಞಾನ ಕುರಿತು ನೈಜ ಕಾಳಜಿ ಇರುವವರನ್ನು ಜನರೇ ಆಯ್ಕೆ ಮಾಡಿ, ಅಂತಹವರನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿ ಲೋಕ ಸಭೆ ಮತ್ತು ವಿಧಾನ ಸಭೆಗೆ ಕಳುಹಿಸುವ ವ್ಯವಸ್ಥೆ ಜಾರಿಗೆ ಬರಬೇಕು.

ಸಮುದಾಯ ಪ್ರಜ್ಞೆ ಕಳೆದು ಹೋಗಿದೆ

ಬಿ. ಮಹೇಶ್ ಹರವೆ
ಉಪನ್ಯಾಸಕ, ಚಿಂತಕ



ರಾಜಕಾರಣ ಚರ್ಚೆ

೧. ಪ್ರಮುಖ ರಾಜಕೀಯ ಪಕ್ಷಗಳಲ್ಲಿನ ಕೆಲವು ನಾಯಕರು ಗಣಿ ಮಾಲೀಕರಾಗಿ ಇಡೀ ರಾಜಕೀಯ ವ್ಯವಸ್ಥೆಯನ್ನು. ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದಾರೆ. ಆಯಾ ಪಕ್ಷದ ಹಿರಿಯರು, ಸಹಮಿತ್ರರು ಅವರನ್ನು ಪ್ರಶ್ನಿಸೋದಕ್ಕಿಂತ ಪುಸಲಾಯಿಸುತ್ತಿರುವುದರಿಂದ ರಾಜ್ಯದ ರಾಜಕೀಯ ಸ್ಥಿತಿ ಸಮುದಾಯ ಪ್ರಜ್ಞೆಯನ್ನು ಕಳಕೊಂಡು ದುಃಸ್ಥಿತಿಗಿಳಿದಿದೆ.

ಮತ್ತೊಂದು ಕಾರಣ ನೀಡುವುದಾದರೆ ಕರ್ನಾಟಕವನ್ನು 'ಒಂದು ಜನತೆ'ಯಾಗಿ ನೋಡುವ ಕ್ರಮ ನಮ್ಮ ರಾಜಕೀಯ ಪಕ್ಷಗಳಲ್ಲಿ ಮೂಡಿಲ್ಲ. ರಾಜಕೀಯ ಪಕ್ಷವನ್ನು ಜನರ ಚಿಂತನೆಯ ನಡುವೆ ರೂಪಿಸಬೇಕೇ ವಿನಃ, ವ್ಯಕ್ತಿಗತ ಚಿಂತನೆಯಿಂದಲ್ಲ. ಉದಾ: ಸೋಲಿಗರ ಭಾವನೆಗಳಿಗೆ, ಸಂಸ್ಕೃತಿಗಳಿಗೆ, ರಾಜ್ಯದ ಆಡಳಿತಾತ್ಮಕ ನಿಯಮಗಳು ಸ್ಪಂದಿಸುವುದಿಲ್ಲ.

ಹೀಗಾಗಿ ಮುಖ್ಯ ವಾಹಿನಿಯಲ್ಲಿ ಆ ಸಮುದಾಯ ಪಾಲ್ಗೊಳ್ಳಲು ಕಷ್ಟವಾಗುತ್ತದೆ. ಇಂಥ ಸಮುದಾಯಗಳು ಹೊರಗುಳಿಯೋದು ಅಂದ್ರೆ ಅದು ರಾಜಕೀಯದ ಸೋಲೇ. ಇದು ಇಂದಿನದಲ್ಲ ಇಂಡಿಯಾ ಸ್ವತಂತ್ರವಾದಂದಿನಿಂದಲೂ ಈ ಪರಿಸ್ಥಿತಿ ಇದೆ. ೧೯೪೭ ಕೋಟಾ ನಾಗ್ಪುರದ ಆದಿವಾಸಿ ಸಮುದಾಯ ಭಾರತದ ಗಣರಾಜ್ಯಕ್ಕೆ ಸೇರಲು ನಿರಾಕರಿಸಿರುದನ್ನು ನೆನೆಯಬಹುದು. ಅವರು ಭಾರತ ನಿಮ್ಮದು ಸಂವಿಧಾನ ನಿಮ್ಮದು, ಪರಮಾಧಿಕಾರ ನಿಮ್ಮದು, ಗಡಿಗಳು ನಿಮ್ಮವು. ನಮ್ಮದು ಅರ್ಥ ಏನಿದೆ'? ಎಂದು ಪ್ರಶ್ನಿಸಿದ್ದರು. ಅಂದು ಒಂದು ಗುಂಪು ಕೇಳಿದ ಪ್ರಶ್ನೆಯನ್ನು ಇಂದು ಹಲವು ಸಮುದಾಯಗಳು ಕೇಳುತ್ತಿವೆ.

೨. ಇಂಡಿಯಾದಲ್ಲಿ ಅಥವಾ ಕರ್ನಾಟಕದಲ್ಲಿ ದ್ವಿಪಕ್ಷೀಯಾ ಪದ್ಧತಿ ಜಾರಿಯಾಗೋದು ಅನುಮಾನ. ಇಂದು ಹೊಸ ಹೊಸ ಪಕ್ಷಗಳು ಉದಯವಾಗುತ್ತಲೇ ಇವೆ. ಮೊನ್ನೆ ಮೊನ್ನೆ ಪತ್ರಿಕೆಯಲ್ಲಿ ಓದಿದ ನೆನಪು ಚಂಪಾ ಕೂಡಾ ಹೊಸದೊಂದು ಪಕ್ಷವನ್ನು ಕಟ್ಟುತ್ತಾರಂತೆ ನಿಮಗೆ ಇನ್ನೊಂದು ಅಚ್ಚರಿ ಗೊತ್ತ ಹೆಸರಿಗಷ್ಟೆ ಇವು ಹಲವು ಪಕ್ಷಗಳು ಆದರೆ ವಾಸ್ತವದಲ್ಲಿ ಇರೋದು ಎರಡೇ ಪಕ್ಷ.

೩. ರಾಷ್ಟ್ರಕ್ಕೆ ಅಥವಾ ರಾಜ್ಯಕ್ಕೆ ತಮ್ಮ ಅನಿವಾರ್ಯತೆ ಎಷ್ಟಿದೆ ಎಂಬುದನ್ನು ಇವರ ಕೈಲಿ ಸರಿಯಾಗಿ ಪ್ರತಿಪಾದಿಸಲು ಆಗೇ ಇಲ್ಲಾ. ಪ್ರತಿವರ್ಷ ರಾಜ್ಯಗಳಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಆಯವ್ಯಯ ಮಂಡಿತವಾಗುತ್ತದೆ. ಅದಕ್ಕೆ ಪರ್ಯಾಯವಾದ ಪರಿಣಾಮಕಾರಿ ಬಜೆಟ್‌ನ್ನು ಇನ್ನೂ ಇವರುಗಳ ಕೈಲಿ ಮಂಡಿಸಲು ಸಾಧ್ಯವಾಗೇ ಇಲ್ಲ. ಕೇವಲ ಅಧಿಕಾರದ ಹಂಬಲದ ಛಲ ಇದ್ದರೇ ಒಂದಾಗಲು ಸಾಧ್ಯವಿಲ್ಲ. ಪರ್ಯಾಯ ಚಿಂತನೆಗಳನ್ನು ಕೇಂದ್ರವಾಗಿಟ್ಟುಕೊಂಡು 'ಕ್ರಿಯೆ'ಯ ಮೂಲಕ ತೊಡಗಿಸಿಕೊಂಡರೆ ಸಾಧ್ಯ. ಇದು ನಾಯಕ ಅಥವಾ ಗುಂಪುಗಳು ಎನ್ನೋದಕ್ಕಿಂತ ಸಾಮೂಹಿಕ ನಡೆಯಾಗಬೇಕು.

೪. ಬೇರೆ ಬೇರೆ ಆಶಯಗಳ, ಸಿದ್ಧಾಂತಗಳ ಪ್ರೇರಣೆಯಿಂದ ತಮ್ಮನ್ನು ರೂಪಿಸಿಕೊಂಡಿರುವುದರಿಂದ ಸಹಜವಾಗಿ ಉಂಟಾಗುವ ಗೊಂದಲಗಳು, ಅಧಿಕಾರದ ಮೇಲಿನ ಮೋಹದಿಂದ ಚಳವಳಿಯ ಆಶಯಗಳನ್ನು ಮರೆಯುತ್ತಿರುವುದು. ಪ್ರತಿನಿಧಿತ್ವ ಸಿಕ್ಕಿದಾಗ ತನ್ನ ಕಾರ್ಯ ಸರ್ಕಾರ ಬಗೆಗಿನ ನಿರ್ಲಕ್ಷ್ಯ ನಮ್ಮ ಜನಸಂಖ್ಯೆಯಲ್ಲಿ ಸುಮಾರು ಶೇ. ೨೦-೨೫ ರಷ್ಟಿರುವ ಯುವಕರನ್ನು ತಮ್ಮ ಸ್ಫೋಟಕಗಳಾಗಿ ಬಳಸಿಕೊಳ್ಳದೆ ಪ್ರಗತಿಗೆ ಪೂರಕವಾಗಿ ರೂಪಿಸುವಲ್ಲಿನ ವಿಫಲತೆ ರೈತರು, ಯುವಕರು, ಕಾರ್ಮಿಕರು, ದಲಿತರು, ಮಹಿಳೆಯರು, ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರು ಹೀಗೆ ಎಲ್ಲರನ್ನು ಒಳಗೊಳ್ಳುವಂತಹ ಒಂದು ಚಳವಳಿಯ ರೂಪಿಸುವ ನಾಯಕತ್ವದ ಕೊರತೆ.

೫. ಸ್ಪಷ್ಟವಾಗಿ ಹೇಳಬಹುದು. ಅಂಥದೊಂದು ಸಾಧ್ಯತೆ ಇದೆ. ನಿರಾಶೆ ಅಂದ್ರೆ ಕಪ್ಪೇನ ತಕ್ಕಡೀಲಿಟ್ಟು ತೂಗದಂಗಾಗುತ್ತೆ. ಇವರು ಬೇರೆ ಬೇರೆಯಾಗಿ ಹಂಚಿಹೋಗದೆ ಸಮಾನ ಚಿಂತನೆ, ಸಮಾನ ಅವಕಾಶಗಳ ಹಿನ್ನೆಲೆಯಲ್ಲಿ ಒಂದಾಗಬೇಕು. ಹಿಂದಣ ವಚನ ಚಳವಳಿ, ನೆನ್ನೆ ನೆನ್ನೆಯವರೆಗು ನಮ್ಮೆಲ್ಲರಿಗೂ ಭರವಸೆಯಿದ್ದ ಅಹಿಂದ ಚಳವಳಿ ರಚನಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಇವುಗಳ ದೇಹಕ್ಕೆ ಈ ಪಕ್ಷಗಳು ಕೈಕಾಲು, ಪಂಚೇಂದ್ರಿಯಗಳು ಮತ್ತು ಮಿದುಳಾಗಿ ವರ್ತಿಸಬೇಕು.

೬. ಆಧುನಿಕತೆ ಮತ್ತು ಜಾಗತೀಕರಣದಿಂದ ಮನುಷ್ಯ ಮತ್ತು ಆತನ ಚಿಂತನೆಗಳು ಟೊಳ್ಳಾಗಿವೆ. ಇದರಿಂದ ಆತ ತುಂಬಾ ದಣಿದಿದ್ದಾನೆ. ನಗರ ಕೇಂದ್ರಿತ ಸಮಾಜಗಳನ್ನು ರಾಜಕಾರಣ ಬೆಂಬಲಿಸಿದರೆ ನಾಳಿನ ಭವಿಷ್ಯದ ಬಾಗಿಲು ಮುಚ್ಚಿದಂತೆ, ಆದುದರಿಂದ ಗ್ರಾಮ ಕೇಂದ್ರಿತ ನೆಮ್ಮದಿ ಸಮಾಜವನ್ನು ಆಶಯ ವಾಗುಳ್ಳವರೊಡನೆ ಹೆಜ್ಜೆ ಹಾಕಬಹುದು.

ಎಲ್ಲದಕ್ಕೂ ಸರ್ಕಾರವನ್ನು, ಅಧಿಕಾರಿಗಳನ್ನು, ಚಿಂತಕರನ್ನು ಅವಲಂಬಿಸುವ ಕಾಲ ಹೋಯ್ತು. ಏಕೆಂದರೆ ಇಂದಿನ ಮುಖ್ಯಮಂತ್ರಿಗಳು ಅಥವಾ ಪ್ರಧಾನಿ ಬಹುರಾಷ್ಟ್ರೀಯ ಕಂಪನಿಯೊಂದರ ವ್ಯವಸ್ಥಾಪಕರಂತೆ ಲಾಭನಷ್ಟಗಳ ಅಂದಾಜಿನಲ್ಲಿದ್ದಾರೆಯೇ ವಿನಃ ಜನತೆಯ ಸೇವೆಗಾಗಿ ತಾವು ಎಂಬುದು ಮರೆತು ಹೋಗಿವೆ.

ಯಾವುದೇ ಪಕ್ಷವನ್ನು ಎಲ್ಲರೂ ನಮ್ಮದೆಂದುಕೊಳ್ಳುವ ಕಾಲ ಈಗಿಲ್ಲ. ಅವು ಜಾತಿ ಕೇಂದ್ರಿತವಾಗಿವೆ. ಇದು ಕಟ್ಟುವುದಕ್ಕಿಂತ ಒಡೆಯುವುದರಲ್ಲೇ ಆಸಕ್ತಿ ತೋರಿದಂತೆ ಕಾಣಿಸುತ್ತೆ. ಇದು ಸರಿಯಲ್ಲ. ಜಾತಿ ಸಂಘಟನೆಗಳು, ಪಕ್ಷಗಳು ಜಾತಿಯ ಒಳಗಿದ್ದೆ ಜಾತಿವಿನಾಶಕ್ಕೆ ಸಹಕರಿಸಬೇಕು.

ಸ್ತ್ರೀಶಕ್ತಿ ಸಂಘಗಳನ್ನು, ಯುವಕರ ಸಂಘಗಳನ್ನು, ಸಹಕಾರ ಸಂಘಗಳನ್ನು, ಚಳವಳಿ ಕೇಂದ್ರಿತ ಸಂಘಟನೆಗಳನ್ನು ತಮ್ಮ ಶಕ್ತಿ ಪ್ರದರ್ಶನಕ್ಕೆ ಬಳಸಿಕೊಳ್ಳುವುದಕ್ಕಿಂತ ತಮ್ಮ ಅಂಗ ಸಂಸ್ಥೆಯಾಗಿ ಭಾವಿಸಬೇಕು.

ಒಟ್ಟಾರೆ ಎಲ್ಲರೂ ಎಲ್ಲರನ್ನು ಪ್ರೀತಿಸುವಂತಹ ರಾಜಕಾರಣಬೇಕು. □

ಆಧುನಿಕತೆ ಮತ್ತು ಜಾಗತೀಕರಣದಿಂದ ಮನುಷ್ಯ ಮತ್ತು ಆತನ ಚಿಂತನೆಗಳು ಟೊಳ್ಳಾಗಿವೆ. ಇದರಿಂದ ಆತ ತುಂಬಾ ದಣಿದಿದ್ದಾನೆ. ನಗರ ಕೇಂದ್ರಿತ ಸಮಾಜಗಳನ್ನು ರಾಜಕಾರಣ ಬೆಂಬಲಿಸಿದರೆ ನಾಳಿನ ಭವಿಷ್ಯದ ಬಾಗಿಲು ಮುಚ್ಚಿದಂತೆ, ಆದುದರಿಂದ ಗ್ರಾಮಕೇಂದ್ರಿತ ನೆಮ್ಮದಿ ಸಮಾಜವನ್ನು ಆಶಯ ವಾಗುಳ್ಳವರೊಡನೆ ಹೆಜ್ಜೆ ಹಾಕಬಹುದು. ಎಲ್ಲದಕ್ಕೂ ಸರ್ಕಾರವನ್ನು, ಅಧಿಕಾರಿಗಳನ್ನು, ಚಿಂತಕರನ್ನು ಅವಲಂಬಿಸುವ ಕಾಲ ಹೋಯ್ತು. ಏಕೆಂದರೆ ಇಂದಿನ ಮುಖ್ಯಮಂತ್ರಿಗಳು ಅಥವಾ ಪ್ರಧಾನಿ ಬಹುರಾಷ್ಟ್ರೀಯ ಕಂಪನಿಯೊಂದರ ವ್ಯವಸ್ಥಾಪಕರಂತೆ ಲಾಭನಷ್ಟಗಳ ಅಂದಾಜಿನಲ್ಲಿದ್ದಾರೆಯೇ ವಿನಃ ಜನತೆಯ ಸೇವೆಗಾಗಿ ತಾವು ಎಂಬುದು ಮರೆತು ಹೋಗಿವೆ.

ಜಾಗತಿಕ ಬಂಡವಾಳ ಅಧಿಕಾರ ರಾಜಕಾರಣವನ್ನು ನಿಯಂತ್ರಿಸುತ್ತದೆ

ರಾಜಕಾರಣ ಚರ್ಚೆ

ಡಾ॥ ಶ್ರೀನಿವಾಸ ಗಿಳಿಯಾರು

ಉಪನ್ಯಾಸಕ, ಚಿಂತಕ

೧. **ಕ**ರ್ನಾಟಕ ರಾಜಕೀಯದ ಯಾವ ಅಂಶಗಳನ್ನು 'ಅಧಃಪತನ' ಎಂದು ಬಿಂಬಿಸಲಾಗುತ್ತಿದೆ ಎನ್ನುವುದು ಮುಖ್ಯ. ಮಣ್ಣುಕೋಟಿಯ (ಗೋವಿನ ಹಾಡು) ಕಥಾನಕದ ಮೂಲಕವಷ್ಟೆ ಈ ದುಃಸ್ಥಿತಿಯನ್ನು ವಿವರಿಸಲಾಗದು. ಇಂದು ಕರ್ನಾಟಕದ ಸಾಂಸ್ಕೃತಿಕ ರಾಜಕೀಯಥ, ಆರ್ಥಿಕ ಸ್ಥಿತಿಯನ್ನು ಜಾಗತಿಕ ವಿದ್ಯಮಾನದ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ಕರ್ನಾಟಕ ತಳಸ್ತರ ಸಮುದಾಯಗಳ ಹಿತ ದೃಷ್ಟಿಯಿಂದ ಅಧಃಪತನ ಪರಿ ಭಾಷೆಯನ್ನು ಮೌಲ್ಯಾತ್ಮಕವಾಗಿ ವಿವರಿಸಿಕೊಳ್ಳಬೇಕಿದೆ. ಆದರೆ ತತ್ವಬದ್ಧ, ಸಾಮಾಜಿಕ ನ್ಯಾಯ ಆಧರಿಸಿದ ಸಾಮುದಾಯಿಕ ದೃಷ್ಟಿ ಇಂದು ಕ್ಷೀಣಗೊಳ್ಳುತ್ತಿದೆ. ಕಳೆದ ದಶಕದ ಅತಿ ದೊಡ್ಡ ಬೆಳವಣಿಗೆ ಇದು. ಸಾಮಾಜಿಕ ನ್ಯಾಯ ಎಂಬ ಪರಿಕಲ್ಪನೆಗೆ ವಿರುದ್ಧ ಧ್ರುವದಲ್ಲಿ ಸ್ವಯಂ ತಂತ್ರವಾದಿ ವ್ಯಕ್ತಿ (Liberal individual)ಯನ್ನು ನಿಲ್ಲಿಸಲಾಗಿದೆ. ವ್ಯಕ್ತಿ ಸಮುದಾಯದ ಸ್ಥಗಿತ ರೂಪಗಳಿಂದ Liberal ಆಗುತ್ತಲೆ ಏಕಾಕಿತನ/ಪಾಪಪ್ರಜ್ಞೆ ಅನುಭವಿಸುತ್ತಾನೆ/ಳೆ ಇದರಿಂದ ತಪ್ಪಿಸಿಕೊಳ್ಳಲು ಆತ/ಆಕೆಗೊಂದು ಗುರುತು (Identity) ಬೇಕಾಗುತ್ತದೆ. (ಜನಪ್ರಿಯ ಸಂಗೀತ, ಸಂಘಟನೆಗಳ ಸದಸ್ಯತ್ವ ಸಿನಿಮಾ, ಜೋಕ್ಸ್ ಟೆಲಿವಿಜನ್ ಇತ್ಯಾದಿ ಸಾಂಸ್ಕೃತಿಕ ಅಂಶಗಳು). ವ್ಯಕ್ತಿಯನ್ನು ಸಂತೈಸಿ ಆತನಿಗೆ ರಾಜಕೀಯ ಗುರುತು ನೀಡುವಲ್ಲಿ ಜಾತಿ, ವರ್ಗ, ಲಿಂಗತ್ವ, ಐಡೆಂಟಿಟಿಗಳು ಮುಂದೆ ಬಂದವು. ಅಂತಿಮವಾಗಿ ಈ ಐಡೆಂಟಿಟಿಗಳು ಕರ್ನಾಟಕ ರಾಜ್ಯದಲ್ಲಿ ಪ್ರಧಾನ ಪಾತ್ರ ವಹಿಸುತ್ತಿರುವುದು ವ್ಯಕ್ತಿಯ ಸ್ವೇಚ್ಛೆಗೆ, ಭ್ರಷ್ಟಾಚಾರಕ್ಕೆ, ಅನೈತಿಕತೆಗೆ ಹಿಂಸೆಗೆ ಅವಕಾಶ ನೀಡುವ ಮೂಲಕವೆ.

೨. ಜಾತಿ ಐಡೆಂಟಿಟಿಯ ಮೇಲೆ ಭದ್ರವಾಗಿದ್ದುಕೊಂಡು ಜೆಡಿ(ಎಸ್) ಜಾತ್ಯತೀತತೆ ಪ್ರತಿನಿಧಿಸುತ್ತಿರುವುದರಿಂದ ದೊಡ್ಡ ಕುಸಿತವೇನು ಸಂಭವಿಸಲಾರದು ಜೆಡಿ (ಎಸ್) ಒಳಗೊಂಡಂತೆ ಎಲ್ಲಾ ಪಕ್ಷಗಳು ನೈತಿಕವಾಗೇನೂ ಉಳಿದಿಲ್ಲ. ಹೀಗಾಗಿ ಇಂದು ರಾಜಕೀಯವನ್ನು ಬರೆ ನೈತಿಕ ದೃಷ್ಟಿಯಿಂದ ನೋಡಲಾಗದು ತತ್ವ ಬದ್ಧತೆಗೆ ಜೆಡಿ(ಎಸ್) ನೀಡಿರುವ ವಿಧಾಯವೆ ಋಣಾತ್ಮಕವಾಗಿ ಪಕ್ಷವನ್ನು ಇನ್ನೊಂದು ಬಗೆಯಲ್ಲಿ ಮರು ಸಂಘಟಿಸಬಲ್ಲದು. ಸಾಮಾನ್ಯ ಮತದಾರ ಇಂದು ರಾಜಕೀಯದ ಹಣೆಬರಹ ನಿರ್ಧರಿಸುವ ಸ್ಥಿತಿಯಲ್ಲಿಲ್ಲ. ಭ್ರಷ್ಟ ಮಧ್ಯವರ್ತಿ ಗುಂಪುಗಳು ಅವಕಾಶವಾದಿ ರಾಜಕಾರಣದಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದು ತಮಗೆ ಅನುಕೂಲಕರ ನೀತಿಯನ್ನು ಪಕ್ಷದಿಂದಲೂ ಅಪೇಕ್ಷಿಸುತ್ತಿವೆ. ಜನರು ಇವರ ತಂತ್ರಗಳಿ ಬಲಿಯಾಗುತ್ತಿದ್ದಾರೆ. ಹೀಗಾಗಿ ದ್ವಿಪಕ್ಷೀಯಾ ಪದ್ಧತಿಯನ್ನು ನಿರೀಕ್ಷಿಸಬೇಕಾಗಿಲ್ಲ

೩. ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು "ಪಕ್ಷ" ಅಥವಾ 'ಅಧಿಕಾರ' ರಾಜಕಾರಣದಲ್ಲಿ ಪೈಪೋಟಿ ನಡೆಸುವುದನ್ನೇ ಅಂತಿಮ ಗುರಿಯನ್ನಾಗಿಟ್ಟುಕೊಂಡಿವೆ. ಕೇವಲ ಸಿದ್ಧಾಂತವಾಗಲಿ, ನೈತಿಕತೆಯಾಗಲಿ ಇಂದು ಅಧಿಕಾರ ತಂದು ಕೊಡಲಾರವು. ಈ ಶಕ್ತಿಗಳು ಜಾಗತೀಕವಾಗಿ ಬೆಳವಣಿಗೆಯಾಗುತ್ತಿರುವ ಅನುಭೋಗಿ ಸಂಸ್ಕೃತಿಯನ್ನು ಹೇಗೆ ಎದುರಿಸುತ್ತವೆಯೆಂಬುದು ಮುಖ್ಯ. ಬಂಡವಾಳದ ಹರಿವು ಎಲ್ಲಾ ತತ್ವ ಸಿದ್ಧಾಂತಗಳನ್ನು ಅಂಚಿಗೆ ತಳ್ಳಿ ಬಿಟ್ಟಿರುವುದರಿಂದ ವ್ಯಕ್ತಿಯ ಅಪೇಕ್ಷೆ/ಲಾಲಾಸೆಗಳನ್ನು ಪೂರೈಸುವ ತತ್ವ ಸಿದ್ಧಾಂತಗಳು ಮಾತ್ರ ಇಂದು ವಿಜೃಂಭಿಸುತ್ತಿವೆ. ಹೀಗಾಗಿ ಎಡ ಹಾಗೂ ಪ್ರಜಾಸತ್ತಾತ್ಮಕ ಚಳುವಳಿಗಳು ಬಿಕ್ಕಟ್ಟಿನಲ್ಲಿ ಬಂದು ನಿಂತಿವೆ. ಕೇವಲ ಕೂಳಿ/ಕಾರಿಕ/ಸಮಾಜವಾದಿ/ ಪ್ರಜಾಸತ್ತೆ/ ಐಡೆಂಟಿಟಿಗಳು ವ್ಯಕ್ತಿಯನ್ನು ಕಟ್ಟಿಹಾಕಲಾರದಷ್ಟು ಆತ ಗ್ಲೋಬಲ್ ಆಗಿ ಬಹು ಐಡೆಂಟಿಟಿಗಳಲ್ಲಿ ಕಂಡರಿಸಲ್ಪಟ್ಟಿದ್ದಾನೆ/ಳೆ. ಈ ಬದಲಾವಣೆಗಳನ್ನು ಎಡ ಪ್ರಜಾಸತ್ತಾತ್ಮಕ ಚಳುವಳಿಗಳು ಗ್ರಹಿಸಿ ಸೈದ್ಧಾಂತಿಕವಾಗಿ ಪರಿಕಲ್ಪಿಸುವಲ್ಲಿ ಸೋತಿವೆ. ಈ ಬಗೆಯ ಪರಿಕಲ್ಪಿಸುವಿಕೆ ಹಾಗೂ ಕಾರ್ಯ ತಂತ್ರಗಳ ಗೈರು ಹಾಜರಿಯಿಂದಾಗಿ ಒಂದುಗೂಡುವ ಆಶಯಕ್ಕೆ ಯಾವುದೆ ತಳಹದಿ ಇಲ್ಲದೆ ಆಶಯ ಕೈಗೂಡದಾಗಿದೆ.

> **ತಳಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಕಡಿಮೆ. ಹಾಗೆ ನೋಡಿದರೆ ಯಾವುದೇ ಸಾಮುದಾಯ ಕೂಡ ಪೂರ್ಣ ಪ್ರಮಾಣದ ನಿಯಂತ್ರಣ ಪಡೆಯುವುದು ಕಷ್ಟದ ಮಾತು. ಜಾಗತಿಕ ಬಂಡವಾಳ ಕೂಡ ಒಂದು ಬಗೆಯಲ್ಲಿ ಅಧಿಕಾರ ರಾಜಕಾರಣವನ್ನು ನಿಯಂತ್ರಿಸುತ್ತದೆ.**

೪. ಜನಪರ ಚಳುವಳಿಗಳು ಬಹುಮಟ್ಟಿಗೆ ಬಹುರೂಪಿಯಾಗಿವೆ. ಇವು ನಿರ್ದಿಷ್ಟ ಲೇಬಲ್‌ಗಳ ಹಿನ್ನೆಲೆಯಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು 'ಜನಪರ' ಕಾಳಜಿ ಹೊತ್ತ ಮಧ್ಯವರ್ತಿ ಸಂಘ/ಸಂಸ್ಥೆಗಳಿಂದ ಕಾರ್ಯ ಆಚರಿಸಲ್ಪಡುತ್ತಿವೆ. ಅಧಿಕಾರ ರಾಜಕಾರಣದಲ್ಲಿ ತಮ್ಮದೆ ಬಗೆಯಲ್ಲಿ ಪಾಲ್ಗೊಂಡು ಅಧಿಕಾರದ ಸ್ವೇಚ್ಛೆ/ಹಿಂಸೆಗೆ ಕಡಿವಾಣ ಹಾಕಿ ಜನಪರ ಚಿಂತನೆಯನ್ನು ಜೀವಂತವಾಗಿ ಇಟ್ಟಿವೆ. ಈ ಬಹುರೂಪಿ ಐಡೆಂಟಿಟಿಗಳನ್ನು ಒಂದು ವೇದಿಕೆಗೆ ತರುವುದು ಕಷ್ಟದ ಕೆಲಸ. ಜನಪರ ಚಳವಳಿಗಳು ಅಧಿಕಾರ ರಾಜಕಾರಣಕ್ಕೆ ಸಮಾನಂತರವಾಗಿ ಚಲಿಸುತ್ತಿರುವುದರಿಂದ ಅದು ಜನ ಚಳವಳಿಯಾಗಿ ರೂಪುಗೊಂಡಾಗ ಮಾತ್ರ ನಿರ್ಣಾಯಕ ಪಾತ್ರ ವಹಿಸುಬಲ್ಲದು.

೫. ತಳಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಕಡಿಮೆ. ಹಾಗೆ ನೋಡಿದರೆ ಯಾವುದೇ ಸಾಮುದಾಯ ಕೂಡ ಪೂರ್ಣ ಪ್ರಮಾಣದ ನಿಯಂತ್ರಣ ಪಡೆಯುವುದು ಕಷ್ಟದ ಮಾತು. ವಿಭಿನ್ನ ಸಮುದಾಯಿಕ ಹಿತಾಸಕ್ತಿಗಳು/ಜನಪರ ಚಳವಳಿಗಳು/ಚಿಂತನೆಗಳು/ಆರ್ಥಿಕ ಹಿತಾಸಕ್ತಿ ಅಧಿಕಾರದ ಸ್ವರೂಪದ ಮೇಲೆ ನಿರ್ದಿಷ್ಟ ಬಗೆಯಲ್ಲಿ ಪ್ರಭಾವ ಬೀರುತ್ತವೆ. ಜಾಗತಿಕ ಬಂಡವಾಳ ಕೂಡ ಒಂದು ಬಗೆಯಲ್ಲಿ ಅಧಿಕಾರ ರಾಜಕಾರಣವನ್ನು ನಿಯಂತ್ರಿಸುತ್ತದೆ. ಹೀಗಾಗಿ ಅಧಿಕಾರವನ್ನು ಏಕಘನಾಕೃತಿಯಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಹೀಗಾಗಿ ತಳಸಮುದಾಯಗಳು ಎನ್ನುವ ಐಡೆಂಟಿಟಿಯು ಅಧಿಕಾರದ ಈ ಬಹುರೂಪಿ ಆಯಾಮಗಳ ಜೊತೆ ಹೇಗೆ ಅನುಸಂಧಾನ ನಡೆಸುತ್ತವೆ ಎಂಬುದು ಮುಖ್ಯ. ತತ್ವಸಿದ್ಧಾಂತಗಳು ಅನ್ವಯಿಕತೆ ಹಾಗೂ ತಲುಪಬೇಕಾದ ಗುರಿಯಲ್ಲಿ ದೃಷ್ಟಿ ನೆಡುವುದಕ್ಕೆ ಹೊರತಾದ ದಾರಿಗಳು ಇವೆಯೇ ಎಂಬ ಹುಡುಕಾಟ ಸವಾಲಿನದು. ಸರ್ವೋದಯ ಕರ್ನಾಟಕ ಪಕ್ಷ ಈ ಬಗೆಯ ಶೋಧನೆಯಲ್ಲಿ ತೊಡಗುವ ಆಶಯ ಹೊಂದಿದಂತಿದೆ. ಬಿ.ಎಸ್.ಪಿ ಅಧಿಕಾರ ರಾಜಕಾರಣದ ಒಳ ಸುಳಿವುಗಳನ್ನು ವರ್ತಮಾನದ ಸಂಕೀರ್ಣತೆಯನ್ನು ಅರ್ಥಮಾಡಿಕೊಂಡು ಮೇಲುಸ್ತರ ಸಮುದಾಯಗಳಂತೆಯೆ ಸ್ಪರ್ಧಾತ್ಮಕ ರಾಜಕೀಯತೆಯಲ್ಲಿ ಯಶಸ್ವಿಯಾಗಿ ತೊಡಗಿಕೊಂಡಿರುವುದು ಒಂದು ಮುಖ್ಯ ಸಾಧ್ಯತೆ.

೬. ಅಧಿಕಾರ ಬಹುರೂಪಿ ನೆಲೆಯಲ್ಲಿ ಸ್ಪರ್ಧಾತ್ಮಕವಾಗಿರಬೇಕು. ಸಾಮಾಜಿಕ/ಆರ್ಥಿಕ ಅಸಮಾನತೆ ಹಂತ ಹಂತವಾಗಿ ಕೊನೆಗೊಳ್ಳುವ ಕಡಗೆ ಅಧಿಕಾರದ ಬಳಕೆ ಆಗಬೇಕು. ಅಂತಿಮವಾಗಿ ಅಧಿಕಾರ ತಳಸ್ತರ ಸಮುದಾಯಗಳ ಹಿತಾಸಕ್ತಿಯನ್ನು ಆಧರಿಸುವುದು ಅನಿವಾರ್ಯವಾಗಿ ಬಿಡಬೇಕು.

□

ರಾಜಕೀಯದಲ್ಲಿ ನೈತಿಕತೆ ಅಂಬೋದೇ ಅಸಂಬದ್ಧ

ಬಿ.ಟಿ. ಜಾನ್ಹವಿ
ಕಥೆಗಾರರು, ಚಿಂತಕರು

ರಾಜಕಾರಣ ಚರ್ಚೆ

೧. ಅಧಿಕಾರವೇ ಪರಮಮೌಲ್ಯ ಎಂದು ಭಾವಿಸಿರುವ ಚಾರಿತ್ರ್ಯಹೀನ ರಾಜಕಾರಣಿಗಳ ಸ್ವಾರ್ಥ, ದುರಾಸೆ, ಅಧಿಕಾರ ದಾಹ, ಕಬಳಿಕೆ, ಸ್ವಜನ ಪಕ್ಷಪಾತ ಜೊತೆಗೆ ಅಸ್ಥಿರ ತೂಗು ಸರ್ಕಾರ ಸೃಷ್ಟಿಸಿದ ಅಭದ್ರತೆ ಎಲ್ಲವೂ ಇವತ್ತು ರಾಜಕೀಯ ಹೀಗೆ ದಿಕ್ಕೆಟ್ಟು, ದೀನಾವಸ್ಥೆಗೆ ಬರಲು ಕಾರಣ.

೨. ಜನತೆಯ ಆಶೋತ್ತರಗಳನ್ನ ಗಾಳಿಗೆ ತೂರಿ ಸಂಪೂರ್ಣ ಕುಟುಂಬದ ಆಶೋತ್ತರಗಳಿಗೆ ಜೋತು ಬಿದ್ದಿರುವವರ ಕೈಯಲ್ಲಿ ಸಿಕ್ಕು ಜೆಡಿಎಸ್ ಇವತ್ತು ನೈತಿಕವಾಗಿ ಪೂರ ಕುಸಿದಿರುವುದು ನಿಜವೇ. ಆದರೆ ನೈತಿಕ ಕುಸಿತದಿಂದ ಯಾವ ಪಕ್ಷ ಹೊರತಾಗಿದೆ ಎಂದು ಹುಡುಕಿದರೆ ಸಿಗುವ ಉತ್ತರವೂ ಸೊನ್ನೆಯೆಂಬುದೂ ದಿಟ. ರಾಜಕೀಯದಲ್ಲಿ ನೈತಿಕತೆ ಅಂಬೋದೇ ಅಸಂಬದ್ಧ ಅನಿಸುತ್ತದೆ. ಸಧ್ಯದ ಪರಿಸ್ಥಿತಿಯಲ್ಲಿ ಜೆಡಿಎಸ್ ನಿರ್ನಾಮ ಆಗ್ಬೇಕಿದೆ. ಆದರದು ದ್ವಿಪಕ್ಷ ಪದ್ಧತಿಗೆ ದಾರಿ ಮಾಡಿಕೊಡುತ್ತೋ ಇಲ್ವೋ ಕಾದು ನೋಡ್ಬೇಕು. ಹಾಂ, ಹಾಗೊಂದ್ವೇಳೆ ಆಗಿದ್ದೇ ಆದಲ್ಲಿ National waste ಸ್ವಲ್ಪಮಟ್ಟಿಗೆ ಕಡಿಮೆಯಾಗ್ಬಹುದು. ಕಾಲೆಳೆಯೋ, ಎತ್ತಿಹಾರೋ ಕಸರತ್ತು ಕೂಡ. ೫ ವರ್ಷ ಖಾಯಂ ಇರ್ತಿವಿ ಅನ್ನೋ ಭದ್ರತೆ ಒಂಚೂರು ಬದ್ಧತೆ ಉಳಿಸಿ, ಸಮಯ ಮಿಗಿಸ್ಬಹುದು ನಮ್ಮ ಆಳುವ ಪ್ರಭುಗಳಲ್ಲಿ ಜನಜೀವನ, ನಾಡು ನುಡಿಯ ಬಗ್ಗೆ ಚಿಂತಿಸೋಕೆ, ಕಾಳಜಿ ತೋರಲಿಕ್ಕೆ.

೩. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಲು ಈ ಪರಿಸ್ಥಿತಿ ಸಕಾಲವಾಗಿದೆ. ಜಾತಿ, ಪ್ರತಿಷ್ಠೆ, ಸ್ವಾರ್ಥ, ಅಹಂ, ಗುಂಪುಗಾರಿಕೆ ಎಲ್ಲವನ್ನೂ ಮೀರಿ basie values ಇಟ್ಗಂಡು ಒಟ್ಟಾಗಿ, ಒಗ್ಗಟ್ಟಾಗಿ ಕಾರ್ಯೋನ್ಮುಖರಾಗಬೇಕಿದೆ. ಭಾವನಾತ್ಮಕ Theory ಆಗಿಯೇ ಇದೆಲ್ಲವೂ ಉಳಿಯದೆ Practical ಆಗಿ ಆಚರಣೆಯಲ್ಲಿ ತರಲು ಸಾಧ್ಯವಾಗಬೇಕಿದೆ. ಅದಕ್ಕೆ ಅಗತ್ಯವಾದ್ದು ಸಾಕಷ್ಟು manitary Resources ಮತ್ತು ಸಮರ್ಥ, ಬಲವಾದ ಲೀಡರ್‌ಶಿಪ್ಪು.

೪. ಜನಪರ ಚಳವಳಿಗಳು ಇತ್ತೀಚೆಗೆ ಯಾವೂ ವ್ಯಾಪಕವಾಗಿಲ್ಲ. ಮತ್ತವು ಎಲ್ಲೂ ತಲುಪ್ತಾನೂ ಇಲ್ಲ. ಜನಪರ ಚಳವಳಿಗಳ ಬಗ್ಗೇನೆ ಒಂದು ತೆರನ ಗುಮಾನಿಯಿರುವ ಕಾರಣ ಅವು ಅಧಿಕಾರ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುವಂಥ ಸಾಧ್ಯತೆಗಳೇ ಕಾಣಲ್ಲ.

೫. Same again ತಳಸಮುದಾಯಗಳು, ಬಿಎಸ್‌ಪಿ, ಸರ್ವೋದಯ ಪಕ್ಷ ಯಾವುದೇ ಆಗ್ಲಿ ರಾಜಕಾರಣದಲ್ಲಿ ಸಕ್ರಿಯವಾಗುವ, ನಿರ್ಣಾಯಕ ಶಕ್ತಿಗಳಾಗುವ ಸಾಧ್ಯತೆ ಖಂಡಿತ ಇದೆ. ಆದರೆ ಅದಕ್ಕೇ ಬೇಕಾದ ಬದ್ಧತೆ, Principles & values, ಎಲ್ಲವನ್ನೂ ಮೀರಿದ ಒಗ್ಗಟ್ಟು, Monitary resourees, effective Leadership ಇತ್ಯಾದಿ, ಇತ್ಯಾದಿ, ಇತ್ಯಾದಿ...

> **ಜನಪರ ಚಳವಳಿಗಳು ಇತ್ತೀಚಿಗೆ ಯಾವೂ ವ್ಯಾಪಕವಾಗಿಲ್ಲ. ಮತ್ತವು ಎಲ್ಲೂ ತಲುಪ್ತಾನೂ ಇಲ್ಲ. ಜನ ಪರ ಚಳವಳಿಗಳ ಬಗ್ಗೇನೆ ಒಂದು ತೆರನ ಗುಮಾನಿಯಿರುವ ಕಾರಣ ಅವು ಅಧಿಕಾರ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುವಂಥ ಸಾಧ್ಯತೆಗಳೇ ಕಾಣಲ್ಲ.**

೬. ಮಾನವೀಯ ಮೌಲ್ಯಗಳನ್ನ ಇಟ್ಗಂಡು, ಜನಪ್ರತಿನಿಧಿಯಾಗಿ ಜನರ ಬಗ್ಗೆ ಯೋಚಿಸುವಂಥವ್ರನ್ನ, ಎಲೆ ಮರೆಯ ಕಾಯಿಗಳಂತೆ ತುಂಬಾ ಬದ್ಧತೆಯಿಂದ ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುವವರನ್ನಾ ಸಾಮಾಜಿಕ ಕಳಕಳಿ ಇಟ್ಟುಕೊಂಡು ಯಾವ ಫಲಾಪೇಕ್ಷೆಯಿಲ್ಲದೆ ದುಡಿಯುತ್ತಿರುವಂಥವ್ರನ್ನ ಹುಡುಕಿ, ಅವರನ್ನ ಅಭ್ಯರ್ಥಿಯಾಗಿ ನಿಲ್ಲಿಸಿ ಪಕ್ಷಬೇಧ ಮರೆತು ಹಿಂದೆ ನಿಂತು ಅಂತಹವರನ್ನಾ ಗೆಲ್ಲಿಸುವಂತಹ ಪ್ರಯತ್ನಗಳು ಆಗಬೇಕು. ಹೆಚ್ಚಿನ ಹೊಣೆ ಜನರ ಮೇಲಿದೆ. ಮತದಾರ ಎಚ್ಚೆತ್ತು ಪ್ರಜ್ಞಾವಂತನಾಗಬೇಕಿದೆ. ಒಮ್ಮನ ಒಮ್ಮತ ಜಾತಿ, ಬೇಧ ಅಳಿದು ಮನುಷ್ಯ ಜಾತಿಯನ್ನ ಮೀರಿ ಯೋಚಿಸುವಂತಹ, ಪ್ರೀತಿಸುವಂತಹ ಸಮಾಜ ನಿರ್ಮಾಣ ಮಾಡುವ ರಾಜಕಾರಣ...??? □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದ ವರೆಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಭಾರತೀಯ ರಾಜಕಾರಣದಲ್ಲಿ ಕೋಮುವಾದ, ಜಾತಿವಾದ ಹಾಗೂ ದಲಿತ ರಾಜಕಾರಣದ ಸ್ವರೂಪ

ದಲಿತ ರಾಜಕಾರಣ ಈಗಿರುವ ಕೊಳೆ, ಕಸ, ಕಲ್ಮಷಗಳನ್ನೆಲ್ಲಾ ಕೊಚ್ಚಿಕೊಂಡು ಹೋಗುವ ಒಂದು ಮಾನವೀಯತೆಯ ಮಹಾನ್ ಪ್ರವಾಹ. ನಮ್ಮ ದೃಷ್ಟಿ ಸಾಮಾಜಿಕ ನ್ಯಾಯದ ಕಡೆಗೇ ಮುಖ ಮಾಡಬೇಕಾಗಿದೆ. ಇದಕ್ಕಾಗಿ ನಮ್ಮ ವೈಯಕ್ತಿಕ ಸ್ವಾತಂತ್ರ್ಯವನ್ನು ಬೇಕಾದರೆ ಪಕ್ಕಕ್ಕಿಡೋಣ. ಇದು ಯಾವುದೂ ಬೆಳಗಾಗುವ ಹೊತ್ತಿಗೆ ವಾಸ್ತವವಾಗುವುದಲ್ಲ. ಇದಕ್ಕಾಗಿ ನಿರಂತರವಾದ ಕಾರ್ಯಮಗ ಳನ್ನು ಹಮ್ಮಿಕೊಳ್ಳಬೇಕು, ಬೇರೆ ಬೇರೆ ಕಡೆಯಿಂದ ದಲಿತರೆಲ್ಲಾ ಒಂದೇ ಆಶಯಕ್ಕಾಗಿ ಕೈಗೂಡಿಸಿ ಕೆಲಸಮಾಡಬೇಕು. ಇದು ಬಹಳ ನಿಧಾನವಾದ, ದೀರ್ಘವಾದ ಪಯಣ. ಹೀಗಲ್ಲದೆ, ಬೇರೆ ಯಾವುದೇ ರೀತಿಯ ರಾಜಕೀಯವನ್ನು ನಾವು ಮಾಡಲು ಹೋದರೂ, ಅದು ಈ ಹೊತ್ತಿನ ವಿಕಾರವಾದ ಮಾದರಿಗಳನ್ನೇ ತೆಗೆದುಕೊಳ್ಳುತ್ತದೆ. ಪ್ರಜಾಪ್ರಭುತ್ವ ದುರ್ಬಲವಾಯಿತೆಂದರೆ, ದಲಿತರಿಗೆ ಇನ್ನು ಕಾಲವಿಲ್ಲ ಎಂದೇ ಅರ್ಥ.

ಡಾ|| ಬಿ.ಯು. ಸುಮಾ

ವಿಷಯವನ್ನು ಕುರಿತು ಯೋಚಿಸುತ್ತಿದ್ದಾಗ, ಇಲ್ಲಿನ ಎರಡು ಪರಿಭಾಷೆಗಳು ಸಮಸ್ಯಾತ್ಮಕವಾದವು ಎನಿಸಲಾರಂಭಿಸಿತು. ಸಮಸ್ಯೆ ಏಕೆಂದರೆ, ಅವುಗಳ ಸಾಮಾನ್ಯೀಕೃತ ಅರ್ಥಕ್ಕೂ ಪರಿಕಲ್ಪನಾತ್ಮಕ ಹಾಗೂ ಉದ್ದೇಶಿತ ಅರ್ಥಕ್ಕೂ ವ್ಯತ್ಯಾಸಗಳಿರುವುದರಿಂದ. ಈ ಕಾರಣದಿಂದಲೇ ಇವು ನಮ್ಮನ್ನು ಹಾದಿ ತಪ್ಪಿಸುವುದರಿಂದ, ಮೊದಲು ಇವುಗಳ ಅರ್ಥವನ್ನು ಸ್ಪಷ್ಟೀಕರಿಸಿಕೊಂಡು ನಂತರ ಮುಂದುವರೆಯುವುದು ಸೂಕ್ತ ಎನಿಸುತ್ತದೆ.

'ಭಾರತೀಯ' ಎಂದಾಗ, ನಾವು ಸಾಮಾನ್ಯವಾಗಿ 'ಭಾರತ' ಎಂದು ಗುರುತಿಸುವ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವ ಪೌರರಿಗೆ ಅನ್ವಯಿಸಿ ಹೇಳುವ ಮಾತು ಎಂದು ಭಾವಿಸುತ್ತೇವೆ. ಆದ್ದರಿಂದ, ಈ ವ್ಯಾಖ್ಯೆ ಇಲ್ಲಿನ ಅಖಂಡತೆಯನ್ನು ಸಮಗ್ರವಾಗಿ ಪ್ರತಿನಿಧಿಸುತ್ತದೆ ಎಂದೂ ಗ್ರಹಿಸಿಬಿಡುತ್ತೇವೆ. ಆದರೆ, ವಾಸ್ತವವಾಗಿ ವಸಾಹತುಶಾಹಿ ಕಾಲಘಟ್ಟದಲ್ಲಿ, ಭಾರತ 'ರಾಷ್ಟ್ರ',ವಾಗಿ ಪರಿಕಲ್ಪಿತವಾಗಲು ಪ್ರಾರಂಭಿಸಿದಾಗಿನಿಂದಲೂ, ಈ ನಾಡಿನ ಯಾಜಮಾನ್ಯ ವರ್ಗಕ್ಕೆ ಸೇರಿದ ಬ್ರಾಹ್ಮಣೀಯ ಬದುಕಿನ ಕ್ರಮ, ಅವರ ಸಂಸ್ಕೃತಿ, ಅವರು ಮುಂದಿಟ್ಟ ತಾತ್ವಿಕತೆಯನ್ನೇ 'ಭಾರತೀಯ' ಎಂದು ಮಂಡಿಸಲಾಗಿದೆ. ವಸಾಹತುಶಾಹಿ ಕಾಲಘಟ್ಟಕ್ಕಿಂತ ಮುಂಚೆ ಈ ವರ್ಗದ ಅಧಿಕಾರ, ಪ್ರಭುತ್ವದ ನಿಯಂತ್ರಣದಲ್ಲಿತ್ತು ಎನ್ನುವುದು N.B. Disks ನ ವಾದವಾಗಿದೆ. ಆದ್ದರಿಂದಲೇ ಬ್ರಾಹ್ಮಣಶಾಹಿಯ ಪ್ರಾಬಲ್ಯ ಸ್ಥಿರವಾಗಲಾರಂಭಿಸಿದ ವಸಾಹತುಶಾಹಿ ಅವಧಿಯನ್ನು Ronald Inden 'ಪ್ರಭುತ್ವದ ಸಾವು ಮತ್ತು ಬ್ರಾಹ್ಮಣಶಾಹಿಯ ಸ್ಥಾಪನೆ' ಎಂದು ಕರೆಯುತ್ತಾನೆ.

ವಸಾಹತುಶಾಹಿ ಕಾಲಘಟ್ಟದ ನಂತರವೂ ಇದೇ ವರ್ಗದ ಹಿತಾಸಕ್ತಿಗೆ ಪೂರಕವಾಗಿಯೇ, ಈ ರಾಷ್ಟ್ರ ಅಳವಡಿಸಿಕೊಂಡ ಸಮಾಜೋ ರಾಜಕೀಯ ತತ್ವಗಳು ಪ್ರಯೋಗಿಸಲ್ಪಟ್ಟವು. ಇದರಿಂದಾಗಿ, ಭಾರತೀಯ ರಾಜಕಾರಣದಲ್ಲಿ ಈ ಯಾಜಮಾನ್ಯ ವರ್ಗ ಪ್ರಬಲವಾಗುವುದಕ್ಕೆ ಸಾಧ್ಯವಾಯಿತು. ಅದು ಈಗಲೂ ಹಾಗೆಯೇ ಅಬಾಧಿತವಾಗಿ ಮುಂದುವರೆಯುತ್ತಿದೆ.

ಇವರ ಜೊತೆಗೆ, ಬಂಡವಾಳಶಾಹಿ ಹಾಗೂ ಫ್ಯೂಡಲ್ ವರ್ಗಗಳು ತಮ್ಮ ಆರ್ಥಿಕ ಬಲದಿಂದ ಭಾರತೀಯ ರಾಜಕೀಯ ನಕಾಶೆಯಲ್ಲಿ ತಮ್ಮ Spaceಗಳನ್ನು ಸ್ಪಷ್ಟಪಡಿಸಿಕೊಂಡರು. ಇವರು ಆಯಾ ಪ್ರದೇಶದ ಪ್ರಬಲ ಕೋಮಿನವರು. ಈ ವರ್ಗ, ಹಂಚಿಕೆಯ ವಿಷಯದಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ, ಮೊದಲ ವರ್ಗದ ಜೊತೆಗೆ, ಈ ವರ್ಗದ Political equations ಸದಾ, ಸದ್ಯದ ವರ್ತಮಾನದ ಲಾಭವನ್ನು ದೃಷ್ಟಿಯಲ್ಲಿಟ್ಟುಕೊಂಡು ಬದಲಾಗುತ್ತಿರುತ್ತವೆ. ಯಾಜಮಾನ್ಯ ವರ್ಗದ ಎದುರಿಗೆ ಅಧಿಕಾರ ಕೇಂದ್ರವಾಗಿ ರೂಪುಗೊಳ್ಳುವುದು ಕೂಡ, ಈ ವರ್ಗದ ಮುಖ್ಯ ಉದ್ದೇಶವಾಗಿದೆ.

ಈ ಎರಡು Categoryಗಳ ಆಚೆಗೆ, ಈ ದೇಶದ ಬಹುಸಂಖ್ಯಾತರಾದ ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯಗಳಿವೆ. ಇವು, ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆಯ ಉದಾರವಾದಿ ಪಾರ್ಲಿಮೆಂಟರಿ ಮೌಲ್ಯಗಳು ನೀಡಿದ ಅವಕಾಶವನ್ನು ಉಪಯೋಗಿಸಿಕೊಂಡೇ, ಇಲ್ಲಿನ ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸಿದರೂ, ಹಾಗೆ ಒಂದು Power Force ಆಗಿ emerge ಆಗಲು ಸಾಧ್ಯವಾಗಲಿಲ್ಲ. (ಉತ್ತರ ಪ್ರದೇಶವನ್ನು ಹೊರತುಪಡಿಸಿ) ಹಾಗೂ ನಿರ್ಣಾಯಕವಾದ ಘಟ್ಟಗಳಲ್ಲಿ, ರಾಜಕೀಯದಲ್ಲಿರುವ ಯಾಜಮಾನ್ಯ ವರ್ಗದ ಪ್ರಾಬಲ್ಯ, strategy ಮತ್ತು shrewdness ನ ಎದುರಿಗೆ ತಮ್ಮ ಪಾಲಿನ ಅಥವಾ ತಾವು ಪ್ರತಿನಿಧಿಸುವ Politics ಅನ್ನು ಸರಿಯಾಗಿ ಆಡಲಾಗಿಲ್ಲ.

ಇನ್ನು ಇಲ್ಲಿನ ಮುಸ್ಲಿಂ ಹಾಗೂ ಕ್ರೈಸ್ತರು, ಭಾರತೀಯ ರಾಜಕಾರಣದಲ್ಲಿ Instrumental ಆದ ಪಾತ್ರವನ್ನು ಇನ್ನೂ ವಹಿಸಲಾಗಿಲ್ಲ.

ಆದ್ದರಿಂದ 'ಭಾರತೀಯ ರಾಜಕಾರಣ' ಎನ್ನುವುದು

ಕೊನೆಗೂ ಅದು ಅಲ್ಪಸಂಖ್ಯಾತ ವರ್ಗಗಳ ರಾಜಕಾರಣವಾಗಿದೆಯೇ ಹೊರತು, ನಾವು ಭಾವಿಸಿಕೊಳ್ಳುವಂತೆ ಅಥವಾ ಸಾಮಾನ್ಯೀಕರಿಸಿಕೊಳ್ಳುವಂತೆ ಇಲ್ಲಿನ 'ಬಹುತ್ವ'ವನ್ನು ಎಂದಿಗೂ ಸೂಚಿಸಿಲ್ಲ. ಅಥವಾ 'ಭಾರತೀಯತೆ'ಯ ಅರ್ಥವನ್ನು ನಾವು ಹಿಗ್ಗಿಸಿಬಿಟ್ಟಿದ್ದೇವೆ.

ಎರಡನೆಯದು 'ದಲಿತ' ಎನ್ನುವ ಪರಿಭಾಷೆ. ೬೦ರ ದಶಕದಲ್ಲಿ ಮಹಾರಾಷ್ಟ್ರದ ಪ್ಯಾಂಥರ್ಸ್ ಈ ಪರಿಭಾಷೆಯನ್ನು ಬಳಸಿದಾಗ, "ದಲಿತ ಎನ್ನುವುದು ಒಂದು ಜಾತಿ ಅಲ್ಲ, ದಲಿತ ಎಂದರೆ, ತನ್ನದೇ ದೇಶದಲ್ಲಿ ಶೋಷಣೆಗೊಳಗಾದ ವ್ಯಕ್ತಿಯ ಸಂಕೇತ. ಶೋಷಣೆಗೊಳಗಾದ ಎಲ್ಲಾ ಜಾತಿ, ವರ್ಗ, ಲಿಂಗವನ್ನು 'ದಲಿತ' ಎಂಬ ಪದ ಸೂಚಿಸುತ್ತದೆ. ಹೀಗೆ, ದಮನಿತ ಸಮುದಾಯಗಳ ವ್ಯಾಪಕತೆಯನ್ನು ಅದು ಸೂಚಿಸುತ್ತದೆ. ದಲಿತರ ರಾಜಕೀಯ ಅಥವಾ ಹೋರಾಟ ಎಲ್ಲರಿಗೂ ಸಲ್ಲಬೇಕಾದ ಮಾನವ ಹಕ್ಕುಗಳನ್ನು, ಮನುಷ್ಯರ ಘನತೆಯನ್ನು, ಸಾಮಾಜಿಕ ನ್ಯಾಯಕ್ಕಾಗಿ ಹಕ್ಕೊತ್ತಾಯವಾಗಿ ಮುಂದಿಡುತ್ತದೆ. ಆದ್ದರಿಂದಲೇ, ಈ ಪರಿಭಾಷೆಗೆ ಆತ್ಮವಿಶ್ವಾಸ, ಆತ್ಮಾಭಿಮಾನದ ಆಯಾಮ ದೊರೆಯುತ್ತದೆ.

ಹೀಗೆ, ಅನೇಕ ಹೊರಚಾಚುಗಳಿರುವ ಈ ಪರಿಭಾಷೆ, ಇಂದು ಕೇವಲ 'ಅಸ್ಪೃಶ್ಯ'ರನ್ನು ಸೂಚಿಸುವ ಸೀಮಿತ ಅರ್ಥಕ್ಕೆ ಕುಗ್ಗಿ ಬಿಟ್ಟಿದೆ. (ಈಗ ಈ ಪದವನ್ನು ಬಳಸುವ ಹಾಗಿಲ್ಲ). ಆದ್ದರಿಂದ ಮೂಲ ಅರ್ಥದ ದಲಿತ ರಾಜಕಾರಣ ಕೂಡ ಎಲ್ಲೂ ಇಲ್ಲ.

'ಭಾರತೀಯ ರಾಜಕಾರಣದಲ್ಲಿ ಕೋಮುವಾದ ಮತ್ತು ಜಾತಿವಾದ' ಎನ್ನುವ ವಾಕ್ಯ, ಈ ಕೋಮುವಾದ ಮತ್ತು ಜಾತಿವಾದ ಈ ಹಿಂದೆ ಇರಲಿಲ್ಲ, ಇಂದು ಇದೆ ಎಂಬ ಅರ್ಥವನ್ನೂ ತನ್ನೊಳಗೆ ಇಟ್ಟುಕೊಂಡಿದೆ. ಆದರೆ, 'ಭಾರತೀಯತೆ' ಎಂಬ ಪರಿಭಾಷೆಯನ್ನು ವಿವರಿಸಿಕೊಂಡ ನಂತರ, ಕೋಮುವಾದ+ ಜಾತಿವಾದ= ಭಾರತೀಯ ರಾಜಕಾರಣ ಎನ್ನುವುದು ಸ್ಪಷ್ಟವಾಗುತ್ತದೆ. ವ್ಯತ್ಯಾಸ ಏನೆಂದರೆ, ಅದು ಇಂದು ಒಂದು ಹೆಮ್ಮರವಾಗಿ ಬೆಳೆದಿದೆ. ಅಷ್ಟೇ. ಕೋಮುವಾದ ಮತ್ತು ಜಾತಿವಾದ ಭಾರತೀಯ ರಾಜಕಾರಣದ ಸ್ಥಾಯಿಭಾವಗಳು.

ಇನ್ನು ಮುಂದೆ 'ಭಾರತೀಯ ರಾಜಕಾರಣ' ಎಂದರೆ, ನಮ್ಮ ಮನಸ್ಸಿನಲ್ಲಿರುವ ಸಾಮಾನ್ಯೀಕರಿಸಿದ, ಬಹುತ್ವದ ಅರ್ಥದ ಹಿನ್ನೆಲೆಯಲ್ಲಿ ಮತ್ತು ದಲಿತ ಎಂದರೆ, ಅದರ ಬಹುಮುಖ ಆಯಾಮಗಳ ಅರ್ಥದಲ್ಲಿಯೇ ಬಳಸಲಾಗಿದೆ.

*

ಈಗಾಗಲೇ ಪ್ರಸ್ತಾಪಿಸಿದಂತೆ, ವಸಾಹತುಶಾಹಿ ಕಾಲಘಟ್ಟದಲ್ಲಿ ಭಾರತ, 'ರಾಷ್ಟ್ರ'ವಾಗಿ ಪರಿಕಲ್ಪಿತವಾಗಲು ಪ್ರಾರಂಭಿಸಿದಾಗಿನಿಂದಲೂ ಹಿಂದೂ ರಾಜಕಾರಣ ಬೀಜ ರೂಪದಲ್ಲಿದ್ದದ್ದನ್ನು ಗುರುತಿಸಬಹುದು. ಇದಕ್ಕೆ ಪೂರಕವಾಗಿ, ೧೯೪೭ರಿಂದ ೧೯೭೦ರ ಅವಧಿಯಲ್ಲಿ ನೆಹರು ಯುಗದ ಆಧುನಿಕ ಅಭಿವೃದ್ಧಿ ಯೋಜನೆಗಳ ವೈಫಲ್ಯ, ರಾಜಕೀಯವಾಗಿ ಸಮಾಜವಾದಿ ನಿಲುವಿನ ಪ್ರಜಾಪ್ರಭುತ್ವವು, ಅದರ ಆಶಯ ಹಾಗೂ ಆದರ್ಶ–ಎರಡರಲ್ಲೂ ಕಂಡುಕೊಂಡ ಹಿನ್ನೆಡೆ ಮತ್ತು ಕಾಂಗ್ರೆಸ್‌ನ dictatarship, ದೌರ್ಜನ್ಯಗಳು ಹಿಂದೂ ರಾಜಕಾರಣದ ಬೆಳವಣಿಗೆಗೆ ಪ್ರೇರಕವಾಗಿದ್ದವು. ಆರ್.ಎಸ್.ಎಸ್. ೧೯೨೫ ರಿಂದ ಏನು ಹೇಳುತ್ತಾ ಬಂದಿದೆಯೋ ಇಂದಿಗೂ ಅದನ್ನೇ ಹೇಳುತ್ತಿದೆ. ಅದರ ರೀತಿ, ನೀತಿ, ತತ್ವಗಳಲ್ಲಿ ಅಂಥ

ವಸಾಹತುಶಾಹಿ ಕಾಲಘಟ್ಟದಲ್ಲಿ ಭಾರತ, 'ರಾಷ್ಟ್ರ'ವಾಗಿ ಪರಿಕಲ್ಪಿತವಾಗಲು ಪ್ರಾರಂಭಿಸಿದಾಗಿನಿಂದಲೂ ಹಿಂದೂ ರಾಜಕಾರಣ ಬೀಜ ರೂಪದಲ್ಲಿದ್ದದ್ದನ್ನು ಗುರುತಿಸಬಹುದು. ಇದಕ್ಕೆ ಪೂರಕವಾಗಿ, ೧೯೪೭ರಿಂದ ೧೯೭೦ರ ಅವಧಿಯಲ್ಲಿ ನೆಹರು ಯುಗದ ಆಧುನಿಕ ಅಭಿವೃದ್ಧಿ ಯೋಜನೆಗಳ ವೈಫಲ್ಯ, ರಾಜಕೀಯವಾಗಿ ಸಮಾಜವಾದಿ ನಿಲುವಿನ ಪ್ರಜಾಪ್ರಭುತ್ವವು, ಅದರ ಆಶಯ ಹಾಗೂ ಆದರ್ಶ–ಎರಡರಲ್ಲೂ ಕಂಡುಕೊಂಡ ಹಿನ್ನೆಡೆ ಮತ್ತು ಕಾಂಗ್ರೆಸ್‌ನ ದೌರ್ಜನ್ಯಗಳು ಹಿಂದೂ ರಾಜಕಾರಣದ ಬೆಳವಣಿಗೆಗೆ ಪ್ರೇರಕವಾಗಿದ್ದವು.

ಮುಖ್ಯವಾದ ಬದಲಾವಣೆಗಳೇನೂ ಆಗಿಲ್ಲ. ಆದರೆ, ನೆಹರು ಯುಗದ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಗಳಲ್ಲಿನ ಸೋಲಿನಿಂದಾಗಿ, ಹಿಂದೂ ರಾಜಕಾರಣ ಹೆಚ್ಚು ದೃಢೀಕರಣವನ್ನು ಸ್ಥಾಪಿಸಲಾರಂಭಿಸಿತು. ಹಿಂದೂವಾದಿಗಳಿಗೆ ಅನುಕೂಲಕರವಾಗುವಂತೆ, ಇಲ್ಲಿನ ಜನತೆ ಪರ್ಯಾಯವಾಗಿ ಕಂಡುಕೊಂಡ ಜನತಾ ಪಕ್ಷವೂ ಕಾಂಗ್ರೆಸ್‌ಗಿಂತ ಭಿನ್ನವಾಗಿಯೇನೂ ಬೆಳೆಯಲಿಲ್ಲ.

ಭಾರತದ ಒಳಗಿನ ಈ ವಿದ್ಯಮಾನಗಳ ಜೊತೆಗೆ, ಭಾರತದ ಹೊರಗಿನ ವಿದ್ಯಮಾನಗಳೂ ಹಿಂದೂವಾದಿಗಳಿಗೆ ಸಹಾಯಕವಾಗಿ ಒದಗಲಾರಂಭಿಸಿದವು. ಎಂದರೆ, ಭಾರತವನ್ನು ತೊರೆದು ಹೋದ ಅನಿವಾಸಿ ಭಾರತೀಯರು ತಮ್ಮ ಸಂಸ್ಕೃತಿಯ ಬೇರುಗಳನ್ನು ಜೀವಂತವಾಗಿಸಿಕೊಳ್ಳಲು ಯು.ಎಸ್, ಯು.ಕೆ. ಕೆನಡಾ, ಆಸ್ಟ್ರೇಲಿಯಾದಲ್ಲಿ ಹರಡಿದ್ದ ವಿಎಚ್‌ಪಿ ಘಟಕಗಳ ಮೇಲೆ ಹಿಂದೂ ರಾಷ್ಟ್ರದ ತತ್ವವನ್ನು ಸ್ಥಿರೀಕರಿಸಲು ತೀವ್ರವಾದ ಒತ್ತಡವನ್ನು ತರಲಾರಂಭಿಸಿದರು. ಅಷ್ಟೇ ಅಲ್ಲದೆ, ಅದಕ್ಕಾಗಿ ಆರ್ಥಿಕ ಬೆಂಬಲವನ್ನೂ ನೀಡಲಾರಂಭಿಸಿದರು. ಈ ಎಲ್ಲಾ ಪ್ರಕ್ರಿಯೆಗಳಿಂದ ಹಿಂದೂ ರಾಜಕಾರಣ ಅತ್ಯಂತ ಕ್ಷಿಪ್ರವಾಗಿ ವ್ಯಾಪಿಸಲಾರಂಭಿಸಿತು.

ತಮ್ಮ ತಾತ್ವಿಕತೆಯನ್ನು ವಿಸ್ತರಿಸಿಕೊಳ್ಳಲು ಪ್ರಾರಂಭದಿಂದಲೂ ಹಿಂದೂ ವಾದಿಗಳಿಗೆ ಧರ್ಮ ಅತ್ಯಂತ ಸೂಕ್ತವಾದ ನೆಲೆಯಾಗಿಯೇ ಕಂಡಿದೆ. ಧರ್ಮದ ಹೆಸರಿನಲ್ಲಿ ರಾಜಕೀಯವನ್ನು ಮಾಡುವಾಗ, ಧರ್ಮವನ್ನು ಎರಡು ರೀತಿಯಲ್ಲಿ ಬಳಸಿಕೊಳ್ಳಬಹುದು. ೧. ತನ್ನದೇ ಧರ್ಮದ ಒಳಗಿರುವ, ಸತ್ವಯುತವಾದ ದ್ರವ್ಯವನ್ನು ತತ್ವವಾಗಿಸಿ, ಅದರ ಹೆಸರಿನಲ್ಲಿ ಎಲ್ಲರಿಗೂ ಒಂದು umbrella identity ಯನ್ನು ಸೃಷ್ಟಿಸುವುದು. ೨. ಧರ್ಮದಾಚೆಗಿನ ಒಂದು ಆಕೃತಿಯ ವಿರುದ್ಧ ಎಲ್ಲರನ್ನೂ ನಿಲ್ಲಿಸುವುದು.

ಮೊದಲನೆಯ ವಿಧಾನದಿಂದ ಈ ದೇಶದ ಜನರನ್ನು ಒಂದೂಗೂಡಿಸುವುದು ಹಿಂದೂವಾದಿಗಳಿಗೆ ಸಾಧ್ಯವಿರಲಿಲ್ಲ. ಏಕೆಂದರೆ, ಹಿಂದೂ ಧರ್ಮದ ಒಳಹೊರಗಿನ ಜೊಳ್ಳನ್ನು ಆಧುನಿಕ ಯುಗದ ಪ್ರಗತಿಪರ ಚಿಂತಕರೆಲ್ಲಾ ಜಾಲಾಡಿ ಹಾಕಿದ್ದರು. ಸಾಲದ್ದಕ್ಕೆ ಪ್ರಜಾಪ್ರಭುತ್ವದ ತಾತ್ವಿಕತೆ ಹೊಸ ರೀತಿಯ ಸಾಮಾಜಿಕ, ಆರ್ಥಿಕ ಕ್ರಮವೊಂದನ್ನು ಸೃಷ್ಟಿಸುವ ಪ್ರಕ್ರಿಯೆಗೆ ಚಾಲನೆ ನೀಡಿತ್ತು. ಆದ್ದರಿಂದ ಚರಿತ್ರೆಯ ಚಕ್ರವನ್ನು ಅಷ್ಟು ಸುಲಭವಾಗಿ ಹಿಂದಕ್ಕೆ ಉರುಳಿಸಲು ಸಾಧ್ಯವಿಲ್ಲ ಎನ್ನುವುದು ಹಿಂದುವಾದಿಗಳಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ, ಅವರು ಆಯ್ಕೆ ಮಾಡಿಕೊಂಡಿದ್ದು ಎರಡನೇ ವಿಧಾನ.

ಒಂದು ಧರ್ಮಕ್ಕೆ ಯಾವಾಗ ಆಂತರಿಕವಾಗಿ ತನ್ನ ಧರ್ಮೀಯರನ್ನು ಒಗ್ಗೂಡಿಸಬಲ್ಲ ತತ್ವ ದೊರೆಯುವುದಿಲ್ಲವೋ, ಆಗ ಅದು ಒಂದೇ ನೆಲೆಯಡಿ ಅವರನ್ನು ತರಬಲ್ಲ ಯಾವುದಾದರೂ ಹೊರಗಿನ ಸಂಗತಿಯನ್ನು ಹುಡುಕಿಕೊಳ್ಳುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ತನ್ನ ಧರ್ಮದ ಒಳಗೆ ಪ್ರೀತಿಸುವುದಕ್ಕೆ ಸಾಧ್ಯವಾಗುವ ಅವಲಂಬಿಸುವುದಕ್ಕೆ ಸಾಧ್ಯವಾಗುವ ಸಂಗತಿಗಳಲ್ಲಿದಿರುವಾಗ, ಎಲ್ಲರೂ ಸೇರಿ ದ್ವೇಷಿಸಲಿಕ್ಕೆ ಹೊರಗಿನಿಂದ ಒಂದು ಆಕೃತಿಯನ್ನು ಕಲ್ಪಿಸಿಕೊಡುವುದು. ಹೀಗೆ ಹೊರಗಿನವರಾಗಲಾರಂಭಿಸಿದ್ದು ಮೊದಲಿಗೆ ಮುಸ್ಲಿಮರು, ನಂತರ ಕ್ರಿಶ್ಚಿಯನ್ನರು. ಇವರನ್ನು ಸಫಲವಾಗಿ sideline ಮಾಡಿದ ಮೇಲೆ ಅಥವಾ eliminate ಮಾಡಿದ ಮೇಲೆ, ತಳಸ್ತರದವರು ಇವರ targetಗಳಾಗುತ್ತಾರೆ (೧೯೯೦ ರ ನಂತರ, ಅಸ್ಪೃಶ್ಯರ ಮೇಲಿನ ಹಿಂಸೆ ಮತ್ತು ಕ್ರೌರ್ಯಗಳಲ್ಲಿ ತೀವ್ರವಾದ ಹೆಚ್ಚಳ ಉಂಟಾಗಿರುವುದನ್ನು ಪ್ರಕಾಶ್ ಲೂಯಿಸ್ ಗುರುತಿಸುತ್ತಾರೆ.)

ಇದನ್ನು ಸಾಧಿಸುವುದಕ್ಕೆ ಹಿಂದೂವಾದಿಗಳು ಅಳವಡಿಸಿಕೊಂಡ ಮುಖ್ಯ strategyಗಳನ್ನು 'ರಾಜಕೀಯ ಕಾರಣಗಳಿಗಾಗಿ ಸಾಂಸ್ಕೃತಿಕ ನೆನಪುಗಳನ್ನು ಪುನರ್‌ವ್ಯಾಖ್ಯಾನಿಸುವುದು' ಎಂದು ಹೇಳಬಹುದು. ಇಲ್ಲಿ ಚರಿತ್ರೆ ಮತ್ತು ನಂಬಿಕೆಗಳು ಹತ್ಯಾರುಗಳಾಗುತ್ತವೆ. ಈ ಹತ್ಯಾರುಗಳನ್ನು ಅವರು ಹಲವು ರೀತಿಗಳಲ್ಲಿ ಬಳಸಿಕೊಳ್ಳುತ್ತಾರೆ–

೧. ತಮ್ಮ ತತ್ವಕ್ಕೆ ವಿರೋಧವಾಗುವ ನೆನಪುಗಳನ್ನು ಅಳಿಸುವುದು (ಬಾಬಾಬುಡನ್‌ಗಿರಿ)

೨. ತಮ್ಮ ತತ್ವವನ್ನು ಪೋಷಿಸುವಂಥ ನೆನಪುಗಳನ್ನು ಸೃಷ್ಟಿಸುವುದು (ಇಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುವವರು ಮಹಿಳೆಯರು. ೭೦ರ ದಶಕಕ್ಕಿಂತ ಮುಂಚೆ ಇಲ್ಲದ ಎಷ್ಟೋ ವ್ರತಗಳು, ಆಚರಣೆಗಳು ಈಗ ರೂಢಿಯಲ್ಲಿವೆ).

೩. ಅವರ ವ್ಯಾಖ್ಯಾನದ 'ಚಾರಿತ್ರಿಕ ತಪ್ಪು'ಗಳನ್ನು ತಿದ್ದುವ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳುವುದು (ಬಾಬರಿ ಮಸೀದಿ)

೪. ತಮ್ಮ ಚರಿತ್ರೆಗೆ ಒಂದು ಅಧಿಕೃತತೆಯನ್ನು ತಂದುಕೊಡುವ ಕಾರ್ಯಯೋಜನೆಗೆ ನಾಂದಿ ಹಾಡುವುದು (ಪಠ್ಯಪುಸ್ತಕಗಳಲ್ಲಿ ತಿರುಚಿದ ಚರಿತ್ರೆ)

ಈ ರೀತಿಯ ನೀತಿಗಳನ್ನು ಹಿಂಸಾತ್ಮಕವಾಗಿ ಪ್ರತಿಪಾದಿಸುತ್ತ, ಅಲ್ಪಸಂಖ್ಯಾತರ ಸ್ವಾರ್ಥ ಪ್ರೇರಿತ ತತ್ವಗಳನ್ನು ಧಾರ್ಮಿಕ ರಾಜಕಾರಣದ ಸೋಗಿನಲ್ಲಿ ಇಡುವ ಪ್ರಕ್ರಿಯೆ ಕೋಮುವಾದ ಆದ್ದರಿಂದ, ಕೋಮುವಾದ ಎನ್ನುವುದು ವಿಕೃತವಾದ ಮತ್ತು ವಿನಾಶಕಾರಿಯಾದ ಆಯಾಮಗಳನ್ನು ತನ್ನೊಳಗೇ ಇಟ್ಟುಕೊಂಡಿರುತ್ತದೆ. ಗುಜರಾತ್ ನರಮೇಧಕ್ಕಿಂತ ಬೇರೆ ಉದಾಹರಣೆ ಇದಕ್ಕೆ ಬೇಕಿಲ್ಲ.

ಹಿಂದೂ ರಾಜಕಾರಣದ ಆಶಯಗಳನ್ನು ಬಿತ್ತುತ್ತಿರುವವರು ಕೂಡ ಈ ದೇಶದ ಕೆನೆಪದರದ ಶೇಕಡ ೧೫–೨೦% ಜನರು ಮಾತ್ರ. "ಇವರು ಹೆಚ್ಚು ಅತಂತ್ರರೂ

[illegible] ಆದ ಮೇಲುವರ್ಗದ ಜನ. ಇವರು ಈ ದೇಶದ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಮತ್ತು ಮಾಧ್ಯಮಗಳ ಮೇಲೆ ಹಿಡಿತ ಹೊಂದಿರುವವರು. ಇಲ್ಲಿನ ಆಡಳಿತಶಾಹಿ, ವ್ಯಾಪಾರ, ವ್ಯವಹಾರ, ಅಭಿವೃದ್ಧಿ ಎಲ್ಲವನ್ನೂ ನಿಯಂತ್ರಿಸಬಲ್ಲ ಶಕ್ತಿಯೂ ಇವರಿಗಿದೆ. ಆದರೆ, ಒಂದು ವಿಚಾರದಲ್ಲಿ ಮಾತ್ರ ಈ ವರ್ಗಕ್ಕೆ ತನ್ನ ಹಿಡಿತವನ್ನು ಸಾಧಿಸುವುದು ಸಾಧ್ಯವಾಗಲಿಲ್ಲ. ಅದು–ಚುನಾವಣಾ ಪ್ರಕ್ರಿಯೆ. ಇದೇ ಈ ವರ್ಗದ ಮೂಲಭೂತ ಆತಂಕಕ್ಕೆ, ಅಭದ್ರ ಸ್ಥಿತಿಗೆ ಕಾರಣ". ತಲತಲಾಂತರದಿಂದ ಎಲ್ಲರನ್ನೂ ಆಳಿಕೊಂಡು ಬಂದ ಇವರಿಗೆ ಈ ದೇಶದ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಹೊಂದಿಕೊಳ್ಳುವುದು ಬಹಳ ಕಷ್ಟವಾಗತೊಡಗಿತು.

ಸಾಮಾಜಿಕ ಕ್ರಮದಲ್ಲಿನ ಪಲ್ಲಟಗಳು, ಆರ್ಥಿಕ ವಿನ್ಯಾಸದಲ್ಲಿನ ಸ್ಥಿತ್ಯಾಂತರಗಳು ಪ್ರಾರಂಭವಾಗಲಾರಂಭಿಸಿದ್ದೇ ಇವರ ಆತಂಕ, ಅಭದ್ರತೆಗೆ ಮೂಲ ಕಾರಣವಾಗಲಾರಂಭಿಸಿತು. ಇದರಿಂದ ಪಾರಾಗುವುದಕ್ಕಾಗಿಯೇ, ಇವರು ಹಿಂದುತ್ವದ ತತ್ವವನ್ನು ಮುಂದಿಡುತ್ತಾರೆ. ಹೀಗೆ, ಹಿಂದುತ್ವ ಇಲ್ಲಿ ಇವರಿಗೆ ಅಸ್ತ್ರವಾಗಿ ಒದಗುತ್ತದೆ. ಶತಾಯಗತಾಯ ತಮ್ಮ ಪಾರಂಪರಿಕ ಸಾಮಾಜಿಕ ಕ್ರಮವನ್ನು ಸ್ಥಾಪಿಸುವುದಕ್ಕಾಗಿ ಇವರು ಮಾಡುತ್ತಿರುವ ರಾಜಕಾರಣ ತೀರಾ ಅತಿರೇಕಕ್ಕೆ ಹೋಗಿ, ಫ್ಯಾಸಿಸಂನ ಸ್ವರೂಪವನ್ನು ಪಡೆದುಕೊಂಡು ಬಿಟ್ಟಿದೆ. ಅದಕ್ಕಾಗಿ ಮಹಿಳೆಯರನ್ನು ಕೂಡ ಇವರು ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದಾರೆ. ಗೋಧ್ರಾ ಹತ್ಯಾಕಾಂಡದಲ್ಲಿ ಹಿಂಸೆಯನ್ನು ಪ್ರಚೋದಿಸುವಲ್ಲಿ ಮಹಿಳೆಯರು ಮುಖ್ಯವಾದ ಪಾತ್ರವನ್ನು ವಹಿಸಿದ್ದರೆಂಬುದು ವಾಸ್ತವಿಕ ಸಂಗತಿಯಾಗಿದೆ.

ಈಗಾಗಲೇ NDA ಸಹಯೋಗದ ಸರ್ಕಾರಗಳು ಉತ್ತರಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಸ್ತಿತ್ವದಲ್ಲಿವೆ. ಕೋಮುವಾದ ಹೀಗೆಯೇ ನಿರಾತಂಕವಾಗಿ ಮುಂದುವರೆಯುವುದರ ಪರಿಣಾಮಗಳನ್ನು ಹೀಗೆ ಗುರುತಿಸಬಹುದು.–

೧. ಕೋಮುವಾದವನ್ನು ವಿರೋಧಿಸುವುದಕ್ಕೆ ಇಲ್ಲಿನ ಪ್ರತಿಯೊಂದು ಧರ್ಮವೂ ಕೋಮುವಾದಿ ಧರ್ಮವಾಗಲಾರಂಭಿಸುತ್ತದೆ.

೨. ಪ್ರಗತಿಪರ ಶಕ್ತಿಗಳನ್ನು ನಿಷ್ಕ್ರಿಯವಾಗಿಸುವುದು.

೩. ಲಿಂಗೀಯ ಅಸಮಾನತೆಯನ್ನು ಶಾಶ್ವತವಾಗಿಸುವುದು. (ಹಾಗಾದರೆ, ಬಿಜೆಪಿ ಯಾಕೆ ೩೩% ಮೀಸಲಾತಿಗೆ ಒಪ್ಪಿಕೊಂಡಿದೆ ಎಂಬ ಪ್ರಶ್ನೆ ಹುಟ್ಟುತ್ತದೆ. ಸಾಮಾಜಿಕ ಬಂಡವಾಳದಲ್ಲಿ ಈಗ ಹಂಚಿಕೆಯಾಗುತ್ತಿರುವುದರಿಂದ, ತಮಗೆ ದಕ್ಕದಿರುವ ಸ್ಥಾನಗಳು ತಮ್ಮ ಹೆಣ್ಣು ಮಕ್ಕಳಿಗಾದರೂ ದಕ್ಕಲಿ ಎನ್ನುವುದು ಇವರ ತಂತ್ರ. ಆದ್ದರಿಂದ, ಅಲ್ಲಿಯೂ ಮೀಸಲಾತಿಯ ಪ್ರಶ್ನೆ ಬರುತ್ತದೆ)

೪. ಜಾತಿ ಮತ್ತು ಕಸುಬುಗಳ ನಡುವಿನ ಸಂಬಂಧವನ್ನು ಶಾಶ್ವತವಾಗಿ ಉಳಿಸುವುದು (ಅದಕ್ಕಾಗಿಯೇ ಅಸ್ಪೃಶ್ಯರು ಬುಡಕಟ್ಟು ಸಮುದಾಯದವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರವಾಗದಂತೆ ತಡೆಯುತ್ತಿರುವುದು)

೫. ಒಂದಾದ ನಂತರ ಮತ್ತೊಂದರಂತೆ, ಸಮುದಾಯದಲ್ಲಿ 'The other' (ಅನ್ಯ) ಅನ್ನು ಹುಟ್ಟುಹಾಕುವುದು.

೬. ವೈದಿಕ ಜ್ಞಾನದ ಪಾರಮ್ಯವನ್ನು ಸ್ಥಾಪಿಸುತ್ತಲೇ, ಇತರ ಸಮುದಾಯಗಳ ಜ್ಞಾನವನ್ನು ಪರಿಧಿಗೆ ಸರಿಸುವುದು.

೭. ಬಹು ಸಾಂಸ್ಕೃತಿಕ ವಿನ್ಯಾಸವನ್ನು ನಾಮಾವಶೇಷ ಮಾಡುವುದು (ಆ ಮೂಲಕ ಹಲವು ಸಾಮಾಜಿಕ ಬದುಕಿನ ಜ್ಞಾನಗಳನ್ನು [illegible])

೮. ಆರ್ಥಿಕತೆಯನ್ನು ಕೇಂದ್ರೀಕರಿಸುವುದು.

೯. ಎಲ್ಲರಿಗೂ ಸಮಾನ ಅವಕಾಶವನ್ನು ನೀಡುವ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೊಸಕಿ ಹಾಕುವುದು.

೧೦. ಪಾರಂಪರಿಕ ಶ್ರೇಣೀಕೃತ ಸಮಾಜವನ್ನು ಸ್ಥಾಪಿಸುವುದು.

ಇಂಥ ಜೀವ ವಿರೋಧಿ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಸ್ಥಾಪಿಸುವ ಹುನ್ನಾರಗಳ ಜೊತೆಗೇ ತಳುಕು ಹಾಕಿಕೊಂಡಿರುವುದು 'ಜಾತಿವಾದ'. ಅಥವಾ ಅದರ ನೆರವಿಗೆ ಒದಗುವುದು ಜಾತಿವಾದ.

'ಜಾತಿ' ಒಂದು ನಿರ್ದಿಷ್ಟ ಸಮೂಹದ ಚಹರೆಗಳನ್ನು ಸೂಚಿಸುವ ಪದ. ಅದು ಕೆಲವು ಸಾಮಾಜಿಕ, ಸಾಂಸ್ಕೃತಿಕ ಲಕ್ಷಣಗಳ ಮೂಲಕ ಗುರುತಿಸಲ್ಪಡುತ್ತದೆ. ಜಾತಿ ವ್ಯವಸ್ಥೆಯು ಎಲ್ಲಕ್ಕಿಂತಲೂ ಹೆಚ್ಚಾಗಿ ವಿಚಾರಗಳು ಮತ್ತು ಮೌಲ್ಯಗಳ ಒಂದು ವ್ಯವಸ್ಥೆಯಾಗಿದೆ. ಆದರೆ, ಜಾತಿವಾದ ತನ್ನ ಜಾತಿಯನ್ನು ಎಲ್ಲಾ ರೀತಿಯ ಬಂಡವಾಳವನ್ನಾಗಿಸಿಕೊಳ್ಳಲು ತೊಡಗುತ್ತದೆ. ಅದು ತನ್ನ ಸುತ್ತಲಿನ ಇತರ ಜಾತಿ ಸಮುದಾಯಗಳಿಗೆ ಅವಕಾಶವನ್ನು ನೀಡುವುದಿಲ್ಲ. ಆದ್ದರಿಂದ, ಸ್ವಾರ್ಥ, ಅಧಿಕಾರ, ಹಿಂಸೆ ಎಲ್ಲವೂ ಜಾತಿವಾದದಲ್ಲಿ ವ್ಯಕ್ತವಾಗುತ್ತಿರುತ್ತವೆ.

ಜಾತಿವಾದವನ್ನು ಕುರಿತು ಮಾತನಾಡುವುದು ಅತ್ಯಂತ ಸಮಸ್ಯಾತ್ಮಕವಾದುದು, ಕ್ಲಿಷ್ಟವಾದುದು ಏಕೆಂದರೆ, ಸಂಸ್ಕೃತ ಸಂಪ್ರದಾಯದ ಜಾತಿ ವ್ಯವಸ್ಥೆಗೂ ಆಧುನಿಕ ಸಂದರ್ಭದಲ್ಲಿ ವ್ಯಕ್ತವಾಗುವ ಜಾತಿಗಳ ಸ್ವರೂಪಕ್ಕೂ ಅಗಾಧವಾದ ವ್ಯತ್ಯಾಸ [illegible] ಹಿಡಿದಿಟ್ಟುಕೊಂಡಿದ್ದರೆ, ಇಲ್ಲಿ ಅದು ವಿಪ್ಲವ [illegible] ಯಾಗಿ (Closed and Opening ಆಗುತ್ತಿರುವ Structure) ಪ್ರತ್ಯೇಕತೆ ಅದರ ಮುಖ್ಯ ನಿಯಮ. ಆಧುನಿಕ ಸಂದರ್ಭದಲ್ಲಿ ಪ್ರತ್ಯೇಕತೆ ಕೂಡ ವಿಭಿನ್ನವಾಗಿ ವ್ಯಕ್ತವಾಗುತ್ತಿದೆ. ಶ್ರೇಣೀಕರಣ ಎನ್ನುವುದು ಅಳಿಸಲಾರದ ನಿಯಮವಾದರೆ, ಈಗ ಈ ಶ್ರೇಣೀಕರಣದಲ್ಲೂ ಅತ್ಯಂತ ಸೂಕ್ಷ್ಮವಾದ ಭೌತಿಕ ಹಾಗೂ ಮಾನಸಿಕವಾದ ಬದಲಾವಣೆಗಳು ಉಂಟಾಗುತ್ತಿದೆ. ಅಲ್ಲಿ ವಿವಾಹದ ಮೇಲೆ ನಿರ್ಬಂಧ ಇದ್ದರೆ, ಇಲ್ಲಿ ಅದು ಸಡಿಲವಾಗುತ್ತದೆ. ಸಂಸ್ಕೃತ ಸಂಪ್ರದಾಯದ ಜಾತಿ ವ್ಯವಸ್ಥೆಯಲ್ಲಿ ತಾತ್ವಿಕವಾಗಿ ಪ್ರತಿ ಜಾತಿಗೂ ಒಂದು ನಿರ್ದಿಷ್ಟ ವೃತ್ತಿಯೊಡನೆ ಸಂಬಂಧವಿದೆ. ಆದರೆ ಬ್ರಾಹ್ಮಣರಿಗೆ ಪೌರೋಹಿತ್ಯ ಹಾಗು ಅಸ್ಪೃಶ್ಯರಿಗೆ (ಶೂದ್ರರಿಗಿಂತ ಕೆಳಗಿನ ಶ್ರೇಣಿಗೆ ಸೇರಿದವರು) Menial Jobs ಎನ್ನುವುದು ಮಾತ್ರ ಸ್ಥಿರವಾಗಿದೆ. ಆಧುನಿಕ ಸಂದರ್ಭದಲ್ಲಿ ಈ ವಿಷಯದಲ್ಲೂ ಬೇರೆ ರೀತಿಯ ಚಲನೆ ವ್ಯಕ್ತಗುತ್ತಿದ್ದರೂ, ಆಧುನೀಕರಣಗೊಂಡ menial ಗಳನ್ನು ಇನ್ನೂ ಅಸ್ಪೃಶ್ಯರಿಗೇ ಸೀಮಿತವಾಗಿದೆ. ಜಾತಿಯನ್ನು ಆಧರಿಸಿ ಭಿನ್ನ ನಾಗರಿಕ, ಧಾರ್ಮಿಕ ಸೌಲಭ್ಯಗಳು ದಕ್ಕುವುದು ಸಂಸ್ಕೃತ ಪರಂಪರೆಯಲ್ಲಿನ ಮುಖ್ಯ ಲಕ್ಷಣ. ಆಧುನಿಕ ಸಂದರ್ಭದಲ್ಲಿ ಈ ಸ್ಥಿತಿಯಲ್ಲೂ ವ್ಯತ್ಯಾಸವಾಗುತ್ತದೆ. ಈ ಹೊತ್ತು ಜಾತಿ ವ್ಯವಸ್ಥೆಯಲ್ಲಿನ cnverging Space ಹೆಚ್ಚುತ್ತಿರುವುದೂ ಜಾತಿಯ ವ್ಯಕ್ತ ರೂಪವನ್ನು ಅರ್ಥೈಸುವುದಕ್ಕೆ ಸಮಸ್ಯಾತ್ಮಕವಾಗಿದೆ.

ಜಾತಿಯ ಬಗೆಗಿನ ನಮ್ಮ ಗೊಂದಲಗಳು ತೀವ್ರವಾಗಿರುವುದಕ್ಕೆ ಇನ್ನೊಂದು ಮುಖ್ಯ ಕಾರಣವೆಂದರೆ, ತಾತ್ವಿಕವಾಗಿ ಜಾತ್ಯತೀತ ಸಮಾಜದ ಮೌಲ್ಯವನ್ನು ಸಂವಿಧಾನದಲ್ಲಿ ಅಳವಡಿಸಿಕೊಂಡಿದ್ದರೂ, ಭಾರತೀಯ ಸಮಾಜದ ಎಲ್ಲಾ ಸಮಾಜೊ–ರಾಜಕೀಯ ಸಂಕಥನಗಳು ಅನೇಕ ರೀತಿಯ ವೈರುಧ್ಯಗಳು ವ್ಯಕ್ತವಾಗುತ್ತದೆ.

ಜಾತಿವಾದದ ಅಮಾನವೀಯ ಹಾಗೂ ಕ್ರೂರವಾದ ಆಯಾಮಗಳನ್ನು ಗುರುತಿಸುವುದಾದರೆ–

೧. ಜಾತೀಯ ಮನೋಭಾವ ನಿರ್ದಯವಾದ ಸ್ಪರ್ಧೆಯತ್ತ ಮುಖ ಮಾಡಿರುವಂಥದ್ದು

೨. ಅದು ಮತ್ತೊಂದು ಜಾತಿಗೆ ಅವಕಾಶವನ್ನು ನೀಡಲು ನಿರಾಕರಿಸುತ್ತದೆ.

೩. "ಈ ಕಾರಣಕ್ಕಾಗಿ ಅದು ಎಲ್ಲರನ್ನು ಒಟ್ಟಿಗೆ ಎಚ್ಚರಿಸಲು ಬಿಡುವುದಿಲ್ಲ. ಹಂತ ಹಂತವಾಗಿ ಎಚ್ಚರಗೊಂಡಾಗಲೂ, ಒಬ್ಬರ ಎಚ್ಚರ ಮತ್ತೊಬ್ಬರ ಎಚ್ಚರದ ವಿರುದ್ಧವಾಗಿಯೂ ಕೆಲಸ ಮಾಡಬಲ್ಲದು"

೪. ಪ್ರಜಾಪ್ರಭುತ್ವದ ಮಾನವೀಯ ತತ್ವಗಳನ್ನು ಜಾತೀಯ ಮನೋಭಾವ ವಾಸ್ತವವಾಗಿಸಲು ಬಿಡುವುದಿಲ್ಲ.

೫. ಶೋಷಣೆ, ಜಾತೀಯ ಮನೋಭಾವದ ಜೊತೆ ಜೊತೆಗೇ ತಳುಕು ಹಾಕಿಕೊಂಡಿರುವಂಥದ್ದು.

೬. ಜಾತೀಯ ಮನೋಭಾವವನ್ನು ಅಳಿಸುವ ಎಲ್ಲಾ ಪ್ರಯತ್ನಗಳೂ ವಿಫಲವಾಗುತ್ತಿರುತ್ತವೆ.

೭. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ,– ಎಲ್ಲಾ ಕ್ಷೇತ್ರಗಳಲ್ಲೂ ಜಾತಿ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ.

ಇದರಾಚೆಗೆ, ಜಾತಿ ವ್ಯವಸ್ಥೆ ಸಮಾಜದ ಕೆಲವು segmentಗಳಲ್ಲಿ ಇತ್ಯಾತ್ಮಕವಾಗಿಯೂ ಪರಿಣಮಿಸುತ್ತದೆ. ೧. ಪಾರಂಪರಿಕವಾಗಿ ಪರಿಧಿಗೆ ತಳ್ಳಲ್ಪಟ್ಟ ಜಾತಿಗಳಿಗೆ, ಸಾಮಾ

ಕೆನೆ ಪದರದ ಶೇಕಡ ೧೫–೨೦% ಜನರು ಮಾತ್ರ. "ಇವರು ಹೆಚ್ಚು ಅತಂತ್ರರೂ ಆತಂಕದಲ್ಲಿರುವವರೂ, ಸಿನಿಕರೂ ಆದ ಮೇಲುವರ್ಗದ ಜನ. ಇವರು ಈ ದೇಶದ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಮತ್ತು ಮಾಧ್ಯಮಗಳ ಮೇಲೆ ಹಿಡಿತ ಹೊಂದಿರುವವರು. ಇಲ್ಲಿನ ಆಡಳಿತಶಾಹಿ, ವ್ಯಾಪಾರ, ವ್ಯವಹಾರ, ಅಭಿವೃದ್ಧಿ ಎಲ್ಲವನ್ನೂ ನಿಯಂತ್ರಿಸಬಲ್ಲ ಶಕ್ತಿಯೂ ಇವರಿಗಿದೆ. ಆದರೆ, ಒಂದು ವಿಚಾರದಲ್ಲಿ ಮಾತ್ರ ಈ ವರ್ಗಕ್ಕೆ ತನ್ನ ಹಿಡಿತವನ್ನು ಸಾಧಿಸುವುದು ಸಾಧ್ಯವಾಗಲಿಲ್ಲ. ಅದು–ಚುನಾವಣಾ ಪ್ರಕ್ರಿಯೆ. ಇದೇ ಈ ವರ್ಗದ ಮೂಲಭೂತ ಆತಂಕಕ್ಕೆ, ಅಭದ್ರ ಸ್ಥಿತಿಗೆ ಕಾರಣ". ತಲತಲಾಂತರದಿಂದ ಎಲ್ಲರನ್ನೂ ಆಳಿಕೊಂಡು ಬಂದ ಇವರಿಗೆ ಈ ದೇಶದ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಹೊಂದಿಕೊಳ್ಳುವುದು ಬಹಳ ಕಷ್ಟವಾಗತೊಡಗಿತು.

ಜಿಕ ಹಾಗೂ ರಾಜಕೀಯ ಬಂಡವಾಳವನ್ನು ವಿಸ್ತರಿಸಿಕೊಳ್ಳಲು ಜಾತಿ ಒಂದು ಉಪಕರಣವಾಗಿದೆ.

೨. ಅವಕಾಶವನ್ನು ನೀಡುವ ಮತ್ತು ಸೃಷ್ಟಿಸುವ ಸಾಧ್ಯವಾಗಿದೆ.

೩. ಜಾತಿಗಳಿಗೆ ನೀಡಬೇಕಾದ ಪಾಲನ್ನು ಯಾವುದೇ ರಾಜಕೀಯ ಪಕ್ಷವೂ ವಿರೋಧಿಸುವುದಕ್ಕೆ ಅಸಾಧ್ಯವಾಗಿರುವುದರಿಂದ, Identity politics ನ ಮುಖ್ಯ ಆಶಯವೇ ಜಾತಿಯಾಗಿದೆ.

ಹೀಗೆ, ಅನೇಕ ವೈರುಧ್ಯಗಳಲ್ಲಿ ವ್ಯಕ್ತವಾಗುವ ಜಾತಿಯ ವಿಷಯಕ್ಕೆ ಬಂದಾಗ, ಅತ್ಯಂತ ಸಂಕೀರ್ಣವೂ, ಜಟಿಲವೂ, ದಿಕ್ಕೆಟ್ಟಂತ ಒಂದು ಸ್ಥಿತಿಯಲ್ಲಿ ನಾವೆಲ್ಲರೂ ನಿಂತು ಬಿಡುತ್ತೇವೆ.

*

ಒಂದು ಜೀವವಿರೋಧಿಯಾಗಿರುವ ಕೋಮುವಾದ. ಮತ್ತೊಂದು, ಸಮಸ್ಯಾತ್ಮಕವಾಗಿರುವ ಜಾತಿವಾದಗಳು ತಾಂಡವವಾಡುತ್ತಿರುವ ಕಡೆಯಲ್ಲಿ ದಲಿತ ರಾಜಕಾರಣದ ಸ್ವರೂಪವನ್ನು ಕುರಿತು ಚರ್ಚಿಸುವ ಮುನ್ನ, ಈ ಯಾವ ವಿದ್ಯಮಾನಗಳಿಗೂ ತೆರೆದುಕೊಳ್ಳದೆ ಇರುವ, ಆಧುನಿಕತೆಯ ಯಾವ ಸೌಲಭ್ಯ, ಸವಲತ್ತುಗಳು ತಲುಪದೆ ಇರುವ, ಜಾತೀಯತೆಯ ದಮನಕಾರಿ ಧೋರಣೆಯಿಂದ ದಿಕ್ಕೆಟ್ಟು ಬದುಕುತ್ತಿರುವವರ ಒಂದು ದೊಡ್ಡ secvtion ಇನ್ನೂ ನಮ್ಮ ಸಮಾಜದಲ್ಲಿದೆ ವಾಸ್ತವವಾದುದು. ಇಂಥವರ ಜೊತೆಯಲ್ಲಿ, ಇಂಥವರಿಗಾಗಿ, ಇಂಥವರಿಂದಲೇ ಈ ರಾಜಕಾರಣ ಎನ್ನುವುದು ನಮ್ಮ ತಿಳುವಳಿಕೆಯ ಸ್ಥಾಯಿ ಭಾವವಾಗಿರಬೇಕು.

ದಲಿತ ರಾಜಕಾರಣದ ಸ್ವರೂಪವನ್ನು ವಿವರಿಸಿಕೊಳ್ಳುವುದಕ್ಕೆ ಸ್ಥೂಲವಾಗಿ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆರ್ಥಿಕ ನೀತಿಗಳೆಂದು ವಿಭಾಗಿಸಿಕೊಳ್ಳಲಾಗಿದೆ. ಇದು ವಿವರಣೆಯ ಅನುಕೂಲಕ್ಕಾಗಿ ಮಾತ್ರ ಮಾಡಿಕೊಂಡ ವಿಭಾಗ ಕ್ರಮವೆ ಹೊರತು, ವಾಸ್ತವವಾಗಿ, ಒಂದು ವಲಯದೊಳಗೆ ಹಲವಾರು ವಲಯಗಳು ಬೆರೆತು ಹೋಗಿರುತ್ತವೆ.

ರಾಜಕೀಯ : ದಲಿತ ಸಮುದಾಯಗಳ ಮುಂದೆ ಇರುವ ಅತ್ಯಂತ ದೊಡ್ಡ ಸವಾಲು, ಈ ಹೊತ್ತಿನ ರಾಜಕಾರಣದ ಮಾದರಿಗಳನ್ನು ಭಂಜಿಸುವುದು.

ಈ ಹೊತ್ತಿನ ರಾಜಕಾರಣ, ಅಧಿಕಾರ ರಾಜಕಾರಣದತ್ತಲೇ ಮುಖ ಮಾಡಿರುವಂಥದ್ದು. ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಸಂಧಾನಕ್ಕಾಗಿ ಹೋಗುವ ಕೃಷ್ಣನನ್ನು ಭೇಟಿ ಮಾಡಲು ಭೀಮ ಬರುವ ಸಂದರ್ಭದಲ್ಲಿ ಒಂದು ವಿವರ ಬರುತ್ತದೆ. ದಾರಿ ಬದಿಯ ಕೊಳದಲ್ಲಿ ಒಂದು ಸಣ್ಣ ಮೀನನ್ನು ದೊಡ್ಡ ಮೀನು ನುಂಗುತ್ತದೆ. ಈ ದೊಡ್ಡ ಮೀನನ್ನು ಮತ್ತೊಂದು ದೊಡ್ಡ ಮೀನು ನುಂಗುತ್ತದೆ. ಅದನ್ನು ಇನ್ನೊಂದು ದೊಡ್ಡ ಮೀನು... ಹೀಗೆ, ಈ ಎಲ್ಲಾ ಮೀನುಗಳನ್ನು ನುಂಗಿ ನೊಣೆಯಲು ಒಂದು ತಿಮಿಂಗಿಲ ಕಾದಿರುತ್ತದೆ. ಈ ಹೊತ್ತಿನ ಅಧಿಕಾರ ರಾಜಕಾರಣದ ಸ್ವರೂಪವನ್ನು ವಿವರಿಸಲು ಇದಕ್ಕಿಂತ ಒಳ್ಳೆಯ ರೂಪಕ ನಮಗೆ ಸಿಗಲಾರದು. ಅಧಿಕಾರ ರಾಜಕಾರಣ, ಹಿಂಸೆ, ಸ್ವಾರ್ಥ, ದುರಾಸೆ ಕ್ರೌರ್ಯ ಮತ್ತು ಶೋಷಣೆಯನ್ನು ಹುಟ್ಟುಹಾಕುತ್ತದೆ. ಅವಕಾಶವಾದಿತ್ವವೇ ಇದರ ಜೀವಾಳ ಇಲ್ಲಿ, ಒಂದು ಪ್ರಬಲವಾದ ಗುಂಪು ಅಥವಾ ಕುಟುಂಬ ಮಾತ್ರವೇ ಈ ದೇಶದ ರಾಜಕೀಯದ ಅಧಿಕೃತ ವಾರಸುದಾರರೆಂದು ಬಿಂಬಿತವಾಗುತ್ತಿರುತ್ತದೆ. ಆದ್ದರಿಂದ, ಅಧಿಕಾರ ಕೂಡ Centralize ಆಗುತ್ತಿರುತ್ತದೆ. ಹೀಗೆ ಕೇಂದ್ರೀಕರಣಗೊಂಡಾಗ, ಯಾವುದೇ ರೀತಿಯ ಸಮಾನ ಹಂಚಿಕೆಗಳೂ ಸಾಧ್ಯವಾಗುವುದಿಲ್ಲ. ಅದು ಮತ್ತೊಮ್ಮೆ ಹೊಸ ಹೊಸ ರೀತಿಯ ಶ್ರೇಣೀಕರಣವನ್ನೇ ಸ್ಥಾಪಿಸುತ್ತ ಹೋಗುತ್ತದೆ.

De-politics ಯಾಕೆ ಬಹಳ ಮುಖ್ಯವಾದದ್ದು ಎಂದರೆ; ಜನಸಾಮಾನ್ಯರಲ್ಲಿ ರಾಜಕೀಯದ ಬಗ್ಗೆ ಸದುದ್ದೇಶವನ್ನು ಸೃಷ್ಟಿಸುವ ಪ್ರಕ್ರಿಯೆಗೆ ಇದು ಚಾಲನೆಯನ್ನು ನೀಡುತ್ತದೆ.

ಅಧಿಕಾರದ ರಾಜಕಾರಣದಲ್ಲಿ ಎಲ್ಲಾ ರೀತಿಯ ಮೌಲ್ಯಗಳು, ನೈತಿಕತೆಗಳು ಗಾಳಿಗೆ ತೂರಲ್ಪಟ್ಟಿರುತ್ತವೆ. ಆ ಕಾರಣದಿಂದಲೇ ಅತ್ಯಂತ ಅಮಾನವೀಯವಾದ ಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದಾಗಿ, ಜನಸಾಮಾನ್ಯರು ಈ ವಲಯದಲ್ಲಿ ತಮ್ಮನ್ನು ಎಲ್ಲಿಯೂ ಗುರುತಿಸಿಕೊಳ್ಳಲಾರದಂತ ಹಂತ ತಲುಪಿದ್ದಾರೆ. ಜನಸಾಮಾನ್ಯರ ಈ ಧೋರಣೆಯಿಂದ ಅಧಿಕಾರ ರಾಜಕಾರಣ ಪೋಷಿತವಾಗುತ್ತದೆ.

ಈ ಎಲ್ಲಾ ಕಾರಣಗಳಿಂದ ದಲಿತರ ರಾಜಕಾರಣ, ಹೊಸ ರಾಜಕೀಯ ಪಾಠಗಳನ್ನು ಇತರರಿಗೆ ಕಲಿಸುವ, ಇಂದು ಅಸ್ತಿತ್ವದಲ್ಲಿರುವ ರಾಜಕಾರಣ ಮಾದರಿಗಳನ್ನು ನಿಧಾನವಾಗಿ ಬಲದಾಯಿಸುತ್ತ ಹೋಗಿವೆ, ಒಂದು ಅವಿರತ ಪ್ರಯತ್ನದ, ತಾಳ್ಮೆಯ, ಶಾಂತಿಯ ಅಹಿಂಸೆಯ ನಡೆಯಾಗಬೇಕಾಗಿದೆ. ಈ ಪ್ರಕ್ರಿಯೆಯನ್ನು ವಿವರಿಸುವುದಕ್ಕೆ ಇವಾನ್ ಇಲ್ಯಿಚ್‌ನ 'ಡಿಸ್ಕೂಲಿಂಗ್' ಎನ್ನುವ ಪರಿಕಲ್ಪನೆ ನೆರವಿಗೆ ಬರುತ್ತದೆ. ಡಿಸ್ಕೂಲಿಂಗ್, ವರ್ತಮಾನದ ಶೈಕ್ಷಣಿಕ ವಿಧಾನಗಳಾಚೆಗೆ, ಮಕ್ಕಳ ಬಹುಮುಖಿ ಪ್ರತಿಭೆಯನ್ನು ವಿಸ್ತರಿಸುವುದರತ್ತ ಗಮನ ನೀಡುತ್ತದೆ. ಹಾಗೆಯೇ, politics ನ ಎದುರಿಗೆ De politi king ದಲಿತರು ಮಾಡಬೇಕಾಗಿದೆ.

De-politics ಯಾಕೆ ಬಹಳ ಮುಖ್ಯವಾದದ್ದು ಎಂದರೆ; ಜನಸಾಮಾನ್ಯರಲ್ಲಿ ರಾಜಕೀಯದ ಬಗ್ಗೆ ಸದುದ್ದೇಶವನ್ನು ಸೃಷ್ಟಿಸುವ ಪ್ರಕ್ರಿಯೆಗೆ ಇದು ಚಾಲನೆಯನ್ನು ನೀಡುತ್ತದೆ. ನಮ್ಮ ಈ ಹೊತ್ತಿನ ರಾಜಕೀಯವಾದ ಎಲ್ಲಾ ಚಟುವಟಿಕೆಗಳು ಸದ್ಯದ ವರ್ತಮಾನವನ್ನು, ಅದರ ಲಾಭವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯ ಪ್ರವೃತ್ತವಾಗಿವೆ. ಆದರೆ, ನಾವು ಯೋಚಿಸಬೇಕಾಗಿರುವುದು, ಇನ್ನೊಂದು ೫೦-೭೦ ವರ್ಷಗಳಲ್ಲಿ ನಾವು ಎಲ್ಲಿರುತ್ತೇವೆ, ನಮ್ಮ ಮಕ್ಕಳು ಹೇಗಿರುತ್ತಾರೆ ಎಂಬುದನ್ನು. ಒಂದು ಸ್ವಸ್ಥ ಹಾಗೂ ಸಹ್ಯ ಸಮಾಜವನ್ನು ನಮ್ಮ ಮುಂದಿನ ಜನಾಂಗಕ್ಕಾಗಿ ಬಿಟ್ಟು ಹೋಗುವ ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ.

ಅಧಿಕಾರ ರಾಜಕಾರಣದಲ್ಲಿ ಆಗೊಮ್ಮೆ ಈಗೊಮ್ಮೆ ಸಿಗುವ ಅವಕಾಶಗಳು ನಮ್ಮನ್ನು ಎಲ್ಲಿಗೂ ಕರೆದೊಯ್ಯುವುದಿಲ್ಲ. ಇದು ಶಾಶ್ವತವೂ ಅಲ್ಲ. ಅವಕಾಶಗಳು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗುವ ಒಂದು ನಿರಂತರವಾದ ಸ್ಥಿತಿಯನ್ನು ಸೃಷ್ಟಿಸುವುದರತ್ತ ನಮ್ಮ ಗಮನವಿರಬೇಕು. ಅದಕ್ಕಾಗಿ, ಈ ತಲೆಮಾರಿನವರು, ಅಧಿಕಾರ ರಾಜಕಾರಣದ ಆಸೆಯನ್ನು ಬಿಟ್ಟು, ಪರ್ಯಾಯ ಮಾದರಿಯನ್ನು evolve ಮಾಡಿಕೊಳ್ಳುವುದರತ್ತ ಮಾತ್ರ ಯೋಚಿಸಬೇಕು. ಇದು ಹೀಗಾಗದೆ ಹೋದರೆ, ಇಂದಿನ ಜಾಗತೀಕರಣದಿಂದ ಉಂಟಾಗಿರುವ ಅಸಮಾನತೆ, ಕೋಮುವಾದ, ಜಾತಿವಾದಗಳ ಸುಳಿಯಲ್ಲಿ ದಲಿತರೆಂದಿಗೂ survive ಆಗುವುದಕ್ಕೆ ಸಾಧ್ಯವಿಲ್ಲ. ದಲಿತರ ಭವಿಷ್ಯತ್ತಿನ ದೃಷ್ಟಿಯಿಂದ ಈ ಪರಿವರ್ತನೆ ಅನಿವಾರ್ಯ. ಇಲ್ಲಿಯ ತನಕ ದಲಿತರು, BSPಯನ್ನೂ ಒಳಗೊಂಡಂತೆ Manipulative politics ಮತ್ತು Bargaining politics ಅನ್ನು ಮಾಡುತ್ತಾ ಬಂದಿದ್ದಾರೆ. ರಾಜಕೀಯದಲ್ಲಿ ಸಕ್ರಿಯವಾಗಿ ಭಾಗ ವಹಿಸದೆ ಇದ್ದಾಗ, pressure zones ಗಳಾಗಿ ಕಾರ್ಯನಿರ್ವಹಿಸಿದ್ದಾರೆ. Bargaining politics ಆಗಲಿ, Manipulatiue politics ಆಗಲಿ. ನಮಗೆ ಸ್ಥಿರವಾದ ಒಂದು space ಅನ್ನು ಸೃಷ್ಟಿಸುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ನಾವೂ ಇತರ ರಾಜಕಾರಣಿಗಳಷ್ಟೇ corrut ಆಗಿ ಅನೈತಿಕವಾಗಿ ಹೋಗುತ್ತೇವೆ. ಆಗ ನಮ್ಮ ಸಮುದಾಯಗಳನ್ನು ನೋಡುವವರು ಯಾರೂ ಇರುವುದಿಲ್ಲ.

Bargaining politics ನಿಂದ ದಲಿತರಿಗೆ ಎಷ್ಟು ಲಾಭವಾಗಿದೆ ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ, ದಲಿತರಲ್ಲೇ ಇರುವ creamy layer ಮಾತ್ರ ಇದರಿಂದ ಲಾಭ ಪಡೆದುಕೊಂಡಿರುವುದು ಎಂಬ ವಾಸ್ತವಾ ತಿಳಿಯುತ್ತದೆ. ಆಗಲೇ ಸೂಚನೆದಂತೆ, ಇದ್ಯಾವುದರ ಪರಿವೆಯೂ ಇಲ್ಲದ ಒಂದು ದೊಡ್ಡ Section ನಮ್ಮ ನಡುವೆ ಇದೆ. ಅವರಿಗೆ ಇದರಿಂದ ಕಿಂಚಿತ್ ಪ್ರಯೋಜನವೂ ಆಗಿಲ್ಲ. ದಲಿತರ ರಾಜಕಾರಣ ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ರೂಪುಗೊಂಡಂಥದ್ದಾಗಿರಬೇಕು.

ಈ ರೀತಿಯ ರಾಜಕಾರಣವನ್ನು negotiating ಮತ್ತು sharing politics ಎಂದು ಕರೆಯಬಹುದೆನಿಸುತ್ತದೆ. ಈ ಪ್ರಕ್ರಿಯ ಪ್ರಾರಂಭವಾದರೆ, ದಲಿತರ ರಾಜಕಾರಣಕ್ಕೆ ಒಂದು stability ದೊರೆಯುತ್ತದೆ. ಇದು ಅತ್ಯಂತ ಸ್ಪಷ್ಟವಾದ space ಅನ್ನು ಕೂಡ ಸೃಷ್ಟಿಸುತ್ತದೆ. ಸಾಮಾಜಿಕ ನ್ಯಾಯದತ್ತ ಇಡುವ ಅತ್ಯಂತ ದೃಢವಾದ ಹೆಜ್ಜೆ ಇದಾಗುತ್ತದೆ.

ದಲಿತರ ರಾಜಕಾರಣ, ಎಂದಿಗೂ isolationist position ಅನ್ನು ತೆಗೆದುಕೊಳ್ಳಬಾರದು. ಅದು ಮತ್ತೆ ಸಮಾಜದ ವಿಘಟನೆಗೆ ದಾರಿ ಮಾಡಿಕೊಡುತ್ತದೆ. ತೀರಾ ಆದರ್ಶ ಮತ್ತು ಅವಾಸ್ತವಿಕ ಎನಿಸುವ ಈ ಮಾದರಿ, ತತ್ವನಿಷ್ಠ ರಾಜಕಾರಣದಿಂದ ಸಾಧ್ಯವಾಗುವ ಸಾಧ್ಯತೆಗಳನ್ನು ತಳ್ಳಿ ಹಾಕಲಾಗುವುದಿಲ್ಲ. ಮರೆತಿದ್ದ- ಇವಾನ್ ಇಲ್ಯಿಚ್‌ನನ್ನೂ ಅವಾಸ್ತವಿಕ, ಆದರ್ಶ ನೆಲೆಯ ಚಿಂತಕ ಎಂದೇ ಪರಿಗಣಿಸಲಾಗಿತ್ತು. ಈ ಹೊತ್ತು ಇಲ್ಯಿಚನ್ ಮಾದರಿಗಳನ್ನು ನಾವು ಗಂಭೀರವಾಗಿ ಪರಿಗಣಿಸುತ್ತಿದ್ದೇವೆ.

ಸಾಮಾಜಿಕ: ಇಲ್ಲಿ, ಜಾತಿಯನ್ನು ನಿರ್ವಹಿಸುವ ವಿಧಾನದತ್ತ ನಮ್ಮ ಗಮನ ಕೇಂದ್ರೀಕೃತವಾಗಿರಬೇಕು. ದಲಿತ ರಾಜಕಾರಣದ ಮಹತ್ವಾಕಾಂಕ್ಷೆಯ ಕಾರ್ಯಯೋಜನೆ ಜಾತಿ ವಿನಾಶ. ಆದರೆ ಬಹಳ deep rooted ಆಗಿರುವ, chronic ಆಗಿರುವ, ಸಾಮಾಜಿಕವಾದ ಎಲ್ಲಾ ವಲಯಗಳಲ್ಲೂ ವ್ಯಕ್ತವಾಗುವ, ನಾವು ಅದರಿಂದ ದೂರ ಸರಿದರೂ, ಯಾವ ಮಾಯೆಯಿಂದಲೊ ಬಂದು, ಅದೇ ನಿಮ್ಮನ್ನು ಆವರಿಸಿಕೊಂಡು, ಬಿಡುವ ಜಾತಿಯನ್ನು ವಿನಾಶ ಮಾಡುವುದು ಹೇಗೆ? ಜಾತಿ ಆಧಾರಿತ ಮೀಸಲಾತಿಯನ್ನು ಈ ಹೊತ್ತಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ನಿರಾಕರಿಸಿ

...ವಿದೆ (ಹಾಗೆಂದು, ಎಲ್ಲಾ ಜಾತಿಗಳ [illegible] ಗಳವರಿಗೆ [illegible] ಸಾಧ್ಯವಿಲ್ಲ) ಆದ್ದರಿಂದ, ಕೆಲವು ಕಾರಣಕ್ಕೆ ಜಾತಿ ಬೇಕು, ಕೆಲವು ಕಾರಣಕ್ಕೆ ಜಾತಿ ಬೇಡ ಎಂದರೆ, ಜಾತಿಯ ಸಮಸ್ಯೆ ಇರುವುದೆಲ್ಲಿ?

ಆದ್ದರಿಂದ, ಜಾತಿ ಮಾನವೀಯವಾಗುವ ಹಾಗೆ ಮಾಡುವುದರತ್ತ ನಮ್ಮ ಗಮನವನ್ನು ಕೇಂದ್ರೀಕರಿಸಬೇಕು. ಒಂದು ಜಾತಿ, ಇನ್ನೊಂದು ಜಾತಿಯ ಅವಕಾಶಗಳನ್ನು ಕಸಿದುಕೊಳ್ಳದಂಥ ನೀತಿಗಳನ್ನು ರೂಪಿಸಬೇಕು. ಯಾವುದೇ ದೇಶ ಯಾವುದೇ ಸಮಾಜದಲ್ಲಿ differece ಇಲ್ಲದೆ ಇರುವುದಿಲ್ಲ. ಅಂಥ ಒಂದು ideal ಆದ ಸ್ಥಿತಿ ಇಲ್ಲ. ಆದರೆ, ಈ differenceಗಳೇ discriminationಗೆ, ಆ ಮೂಲಕ ಶೋಷಣೆಗೆ ದಾರಿಯಾಗದಂತೆ, ಗುಣಾತ್ಮಕವಾಗಿಸುವ ಸಾಧ್ಯತೆಗಳನ್ನು ಶೋಧಿಸಬೇಕು.

ಇಂದಿಗೂ ಘನತೆಯನ್ನು ಕಸಿದುಕೊಂಡಿರುವುದು, ಅವರ ಜಾತಿಯ ಜೊತೆಗೇ ತಳುಕು ಹಾಕಿಕೊಂಡಿರುವ ಅವರ menial ಆದ ಕಸುಬುಗಳನ್ನು ಇಲ್ಲಿನ ಅಸ್ಪೃಶ್ಯರು ಮಾಡುತ್ತಾರೆ. ಆದ್ದರಿಂದ, ಜಾತಿ ಆಧಾರಿತ mehial ನಿಂದ ಅಸ್ಪೃಶ್ಯರನ್ನು ಬಿಡುಗಡೆ ಮಾಡುವುದಕ್ಕಾಗಿ crusade ಮಾಡುವುದು ಅತ್ಯಂತ ಮುಖ್ಯವಾದ ಕೆಲಸವಾಗಿದೆ.

ಕೋಮುವಾದದಿಂದ ಬಸವಳಿದಿರುವ ಮುಸ್ಲಿಮರು, ಕ್ರೈಸ್ತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಪ್ರಗತಿಪರರು ಮತ್ತು ದಲಿತರನ್ನು ಒಂದು umbrella identityಯ ಅಡಿಯಲ್ಲಿ ತರುವ ಪ್ರಯತ್ನಗಳಿಂದ, ಒಂದು ದೊಡ್ಡ streuoth ಆಗಿ ಈ ಹೊಸ ಸಮು ದಾಯ emerge ಆಗುವ ಸಾಧ್ಯತೆಗಳಿವೆ.

ಇತ್ತೀಚೆಗೆ, popular Front of India ಎಂಬ ಹೊಸ ರಾಜಕೀಯ ಪಕ್ಷವೊಂದು, ದೆಹಲಿಯ ಮಾಜಿ ಎಂ.ಪಿ ಶ್ರೀ ಸೈಯದ್ ಶಹಾಬುದ್ದೀನ್ ಅವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಂಡಿತ್ತು. ಅದರ agenda ಕೂಡ ಕೋಮುವಾದ ಮತ್ತು ಜನವಿರೋಧಿ ರಾಜಕಾರಣದ ವಿರುದ್ಧ ಹೋರಾಡುವುದೇ ಆಗಿತ್ತು. ಇಂಥ ಸಂಘಟನೆಗಳು ಈ ರೀತಿಯ ಕನಸು ಕಾಣುವುದಕ್ಕೆ ಪ್ರೇರೇಪಿಸುತ್ತವೆ.

ಈ ಎಲ್ಲಾ ಸಮುದಾಯದವರನ್ನು ಬೆಸೆಯುವಂಥ ಒಂದು Idiom ಹೀಗಾದಾಗ ಮಾತ್ರ negtioting spaceಗಳು ಹೆಚ್ಚಾಗುತ್ತವೆ.

ದಲಿತ ರಾಜಕಾರಣದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡ್ಡಾಯವಾಗಬೇಕು. ರಾಜಕೀಯದ shrewdnessಗೆ ಒಂದು ಮಾನವೀಯವಾದ, ಪ್ರಾಮಾಣಿಕವಾದ, ನೈತಿಕವಾದ, ಭಾವನಾತ್ಮಕವಾದ ಆಯಾಮ ಇದರಿಂದ ಪ್ರಾಪ್ತವಾಗುತ್ತದೆ. ದಲಿತರ ರಾಜಕಾರಣ stabilize ಆಗಬೇಕಾದರೆ. sustain ಆಗಬೇಕಾದರೆ, ಅದು ಮಹಿಳೆಯರ ಮೂಲಕವೇ ಸಾಧ್ಯವಾಗಬಲ್ಲದು.

ದಲಿತ ರಾಜಕಾರಣದ network ಮೊದಲು, ಛಿದ್ರ ಛಿದ್ರವಾಗಿರುವ ದಲಿತ ಸಮುದಾಯಗಳನ್ನು ಹೆಣೆಯುವುದು, ಆ ಮೂಲಕ Re-orient ಆಗುವ ಪ್ರಕ್ರಿಯೆಯಿಂದ ಪ್ರಾರಂಭವಾಗಬೇಕು. ನಗರ ಮತ್ತು ಹಳ್ಳಿಗಳ ನಡುವಣ ಗೆರೆ ಅಳಿಸಿ ಹೋಗುತ್ತಿರುವ ಸಂದರ್ಭದಲ್ಲಿ, ರಾಜಧಾನಿಯಿಂದ ಹಿಡಿದು, ತೀರಾ ಪರಿಧಿಗೆ ಸೇರಿ ಹೋಗಿರುವ ಸಮೂಹಗಳನ್ನು conect ಮಾಡುವ processಗೆ ಮಹತ್ವವನ್ನು ನೀಡಬೇಕಾಗಿದೆ.

ಆರ್ಥಿಕ: ಆರ್ಥಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ವಿಫಲವಾಗುತ್ತದೆ. ಆದ್ದರಿಂದ ಆರ್ಥಿಕ ವಿಕೇಂದ್ರೀಕರಣ ದಲಿತ ರಾಜಕಾರಣದ ಮುಖ್ಯ ಆರ್ಥಿಕ ನೀತಿಗಳಲ್ಲಿ ಒಂದಾಗುವುದು ಅಗತ್ಯ. ದಲಿತರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿಸುವುದಕ್ಕೆ ಸಾಧ್ಯವಾಗುವಂತ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಅದಕ್ಕಾಗಿ, ಖಾಸಗಿ ಕ್ಷೇತ್ರದಲ್ಲಿನ ಮೀಸಲಾತಿಗಾಗಿ ಒತ್ತಾಯಿಸುವುದು. ಹೀಗೆ ಒತ್ತಾಯಿಸುವುದರಿಂದ ಗಣನೀಯವಾದ ಉದ್ಯೋಗಾವಕಾಶಗಳು ದಲಿತರಿಗೆ ತೆರೆದುಕೊಳ್ಳುತ್ತವೆ. ೨೦೦೬ ರಲ್ಲಿ ಮೀಸಲಾತಿ ನೀತಿಯ ವಿರುದ್ಧ ಮತ್ತೊಮ್ಮೆ ಭಾರತದ ಮೇಲುವರ್ಗ ಭುಗಿಲೆದ್ದಾಗ, ದೆಹಲಿಯ ಎಸ್.ಸಿ/ಎಸ್.ಟಿ ಕಮೀಷನ್ನಿನ ಚೇರ್‌ಮನ್ ಒಂದು ಪ್ರಸ್ತಾಪವನ್ನು ಮುಂದಿಟ್ಟಿದ್ದರು. ಭಾರತದಲ್ಲಿ ಒಟ್ಟು ಉಳಲು ಯೋಗ್ಯವಾದ, ಆದರೆ ಬೀಳು ಬಿದ್ದಿರುವ ಭೂ ಪ್ರದೇಶ ಶೇಕಡಾ ೪.೧ ರಷ್ಟಿದೆ. ಇದನ್ನು ಭೂರಹಿತ ದಲಿತರಿಗೆ ಹಂಚುವುದರ ಮೂಲಕ, ಅವರಿಗೆ ಆರ್ಥಿಕ ಸ್ವಾವಲಂಬನೆಯನ್ನು ಒದಗಿಸಬಹುದು ಎಂದು. ಉತ್ಪಾದನೆ, ಮಾರುಕಟ್ಟೆಯ ತಂತ್ರಗಳು, ದಲಿತರ ಉತ್ಪಾದನೆಗೆ ಬಳಕೆದಾರರ ಸೃಷ್ಟಿ ಬಂಡವಾಳ ಹುಡುಕುವಿಕೆ, ಅದನ್ನು ಲಾಭದಾಯಕವಾಗುವ ಹಾಗೆ ಪರಿವರ್ತಿಸುವ ಬಗ್ಗೆ ಕಿರಿಯ ಜನಾಂಗದ ದಲಿತರಿಗೆ ತರಬೇತಿ ಕಾರ್ಯಶಿಬಿರಗಳನ್ನು ಹಮ್ಮಿಕೊಳ್ಳುವುದು. SC/ST ಗಳಿಗೆ ಕೊಡುವ ಸಾಲದ ಮೂಲಕ ಅವರು ಸ್ವತಂತ್ರ್ಯ ಉದ್ಯಮಿಗಳಾಗುವಂತೆ ತಯಾರು ಮಾಡುವುದು. ಮೂಲತಃ ಉತ್ಪಾದಕ ಸಮುದಾಯಗಳಾದ ದಲಿತ ಸಮುದಾಗಳ ಉತ್ಪಾದನೆಗಳು ಲಾಭದಾಯಕವಾಗುವ ಹಾಗೆ ರೂಪಿಸುವುದು. ಇದ್ಯಾವುದರ ಚಾಕಟ್ಟಿಗೂ ಬಾರದ ಅಲೆಮಾರಿ ಬುಡಕಟ್ಟು ಸಮುದಾಯಗಳನ್ನು re orient ಮಾಡುವ ವಿಧಾನಗಳ ಬಗ್ಗೆ ಯೋಚಿಸಬೇಕಾಗಿದೆ.

ಆರ್ಥಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ವಿಫಲವಾಗುತ್ತದೆ. ಆದ್ದರಿಂದ ಆರ್ಥಿಕ ವಿಕೇಂದ್ರೀಕರಣ ದಲಿತ ರಾಜಕಾರಣದ ಮುಖ್ಯ ಆರ್ಥಿಕ ನೀತಿಗಳಲ್ಲಿ ಒಂದಾಗುವುದು ಅಗತ್ಯ. ದಲಿತರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿಸುವುದಕ್ಕೆ ಸಾಧ್ಯವಾಗುವಂತ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಅದಕ್ಕಾಗಿ, ಖಾಸಗಿ ಕ್ಷೇತ್ರದಲ್ಲಿನ ಮೀಸಲಾತಿಗಾಗಿ ಒತ್ತಾಯಿಸುವುದು ಅಗತ್ಯ. ಉತ್ಪಾದನೆ, ಮಾರುಕಟ್ಟೆಯ ತಂತ್ರಗಳು, ದಲಿತರ ಉತ್ಪಾದನೆಗೆ ಬಳಕೆದಾರರ ಸೃಷ್ಟಿ ಬಂಡವಾಳ ಹೂಡುವಿಕೆ, ಅದನ್ನು ಲಾಭದಾಯಕವಾಗುವ ಹಾಗೆ ಪರಿವರ್ತಿಸುವ ಬಗ್ಗೆ ಕಿರಿಯ ಜನಾಂಗದ ದಲಿತರಿಗೆ ತರಬೇತಿ ಕಾರ್ಯಶಿಬಿರಗಳನ್ನು ಹಮ್ಮಿಕೊಳ್ಳಬೇಕು. ಇದ್ಯಾವುದರ ಚಾಕಟ್ಟಿಗೂ ಬಾರದ ಅಲೆಮಾರಿ ಬುಡಕಟ್ಟು ಸಮುದಾಯಗಳನ್ನು re orient ಮಾಡುವ ವಿಧಾನಗಳ ಬಗ್ಗೆ ಯೋಚಿಸಬೇಕಾಗಿದೆ.

ಸಾಂಸ್ಕೃತಿಕ: ಜಾತಿ ವಿನಾಶವನ್ನು ಮಾಡದೆ, ಅದನ್ನು ಮಾನವೀಯವಾಗಿಸುವುದರ ಮೂಲಕ, ದಲಿತ ರಾಜಕಾರಣ ನಮ್ಮ ದೇಶದ ಸಾಂಸ್ಕೃತಿಕ ಬಹುತ್ವ ಎಂದಾಗ, ಅದರ ಬೇರುಗಳು ದೇಶೀಯತೆಯಲ್ಲಿ ಇರುತ್ತದೆ. ದೇಶೀಯತೆ ಮತ್ತು ಆಧುನಿಕತೆ ಒಟ್ಟೊಟ್ಟಿಗೆ ಹೋಗಲು ಸಾಧ್ಯವಿಲ್ಲ ಎನ್ನುವ ಒಂದು ವಾದವಿದೆ. ಆದರೆ, ಮಾರ್ಟಿನ್ ಲೂಥರ್ ಕಿಂಗ್‌ನ ಜೀವನ, ಆಫ್ರಿಕಾದ ಹೋರಾಟಗಳನ್ನು ಗಮನಿಸಿದರೆ, ಆಧುನಿಕ ಮೌಲ್ಯಗಳನ್ನು ವಾಸ್ತವವಾಗಿಸಿಕೊಳ್ಳಲು ಆಧುನಿಕ ಪೂರ್ವ ನೆನಪುಗಳ ನೆರವನ್ನು ಅವರು ಪಡೆದುಕೊಂಡಿರುವುದು ಸ್ಪಷ್ಟವಾಗುತ್ತದೆ. ಅಷ್ಟೇ ದೂರ ಹೋಗುವುದಕ್ಕಿಂತ ನಾವು ಅಪಾರವಾಗಿ ಗೌರವಿಸುವ ಡಾ॥ ಅಂಬೇಡ್ಕರ್ ಮಾಡಿದ್ದೂ ಅದನ್ನೇ. ಆಧುನಿಕ Identityಯನ್ನು Sustain ಮಾಡಿಕೊಳ್ಳೋದಕ್ಕೆ ಆಧುನಿಕ ಪೂರ್ವ ethnicity ಯನ್ನು ಪುನರ್ ಸೃಷ್ಟಿಸುವುದು ಅಂಬೇಡ್ಕರ್‌ಗೆ ಬಹಳ ಮುಖ್ಯವಾಗುತ್ತದೆ. ಈ ಕಾರಣಕ್ಕೆ, ಆಧುನಿಕ ಮೌಲ್ಯಗಳನ್ನು ಬೌದ್ಧ paradigmಗಳಲ್ಲಿ ಅಂಬೇಡ್ಕರ್ ಘನೀಕರಿಸಿ ಇಡುತ್ತಾರೆ. ಆದ್ದರಿಂದ, ಆಧುನಿಕತೆಯ ಭಾಗವಾಗಿಯೇ ದೇಶೀಯತೆ ವ್ಯಕ್ತವಾಗುತ್ತದೆ.

ಹೀಗಾದಾಗ ಮಾತ್ರವೇ ಜಾತಿ ವ್ಯವಸ್ಥೆಯ ಏಣಿ–ಶ್ರೇಣೀಯ ಎದುರು ಮೀಮಾಂಸೆಯ ಸಮತೋಲನ ಮಾದರಿಯೊಂದನ್ನು ಸೃಷ್ಟಿಸುವ ಸಾಮಾಜಿಕ ಕಾರ್ಯಯೋಜನೆಗೆ ಅರ್ಥ ಬರುತ್ತದೆ. ಹಾಗೂ ಅದಕ್ಕೆ ಇದು ಪೂರಕವಾಗಿರುತ್ತದೆ.

ಹಿಂದೂ ರಾಜಕಾರಣ ನೆನಪು ಮತ್ತು ಚರಿತ್ರೆಯನ್ನು ನಿರ್ವಹಿಸುವ ರೀತಿ ಎದುರಿಗೆ ಮಾನವೀಯ ಮತ್ತು ಸೌಹಾರ್ದತೆಯ ಆತ್ಯಂತಿಕತೆಯನ್ನು ಸಾರುವ ಸಂಸ್ಕೃತಿಯ ಕಥನಗಳನ್ನು ಮುನ್ನೆಲೆಗೆ ತರಬೇಕಾಗುತ್ತದೆ. ಇದರ ಜೊತೆಯಲ್ಲಿ, ವೈದಿಕವಾದ, ಶೋಷಣೆಯನ್ನು, ಕೀಳರಿಮೆಯನ್ನು ಸೃಷ್ಟಿಸುವ ಎಲ್ಲಾ ಮಾದರಿಗಳು ನಿಧಾನವಾಗಿ disfunction ಆಗುವುದರತ್ತ ಕಾರ್ಯನಿರ್ವಹಿಸಬೇಕು.

ಧರ್ಮ: ಧರ್ಮ ಎನ್ನುವುದು ಕೊನೆಗೂ ಯಾಕೆ ಬಹಳ ಮುಖ್ಯವಾಗುತ್ತದೆ ಎಂದರೆ, ಧರ್ಮದಲ್ಲಿ ವಿಶ್ವಾಸ, ನಂಬಿಕೆ, solace, counselling, faith ಎಲ್ಲವೂ ಇರುವುದರಿಂದ, ಯಾವುದೋ ಒಂದು ಕಾರ್ಯಕ್ಕೆ ಧರ್ಮದ ಹೆಸರಿನಲ್ಲಿ ಜನರನ್ನು ಒಗ್ಗೂಡಿಸುವುದು ಸಾಧ್ಯವಿದೆ. ಆದರೆ, ಇಲ್ಲಿನ ಧರ್ಮ, ಧರ್ಮಾತೀತವಾಗುವ ಧರ್ಮಬದ್ಧತೆ, ಸ್ವಾತಂತ್ರ್ಯ, ಸಮಾನತೆ, ಸಾಮುದಾಯಿಕ ಭಾವನೆಗಳಿಗೆ ಆದ್ಯತೆಯನ್ನು ನೀಡುವ ಆಧ್ಯಾತ್ಮಿಕ ಆಯಾಮವನ್ನು ಪಡೆದುಕೊಳ್ಳಬೇಕು, Rituolistic ಆದ ನೆಲೆಗೆ ಸೀಮಿತವಾಗದೆ, social reolity ಯಾಗುವ ಮೌಲ್ಯಗಳನ್ನುಳ್ಳ ಧಾರ್ಮಿಕ ತತ್ವಗಳು ಈ ಹೊತ್ತು ಬಹಳ ಮುಖ್ಯಾವಾದುವು.

ತಮ್ಮ ಧರ್ಮದ ಚೌಕಟ್ಟಿನೊಳಗೆ ಎಲ್ಲಾ ಶ್ರೇಣಿಯ,

ವರ್ಗದ ಜನರನ್ನು ಒಗ್ಗೂಡಿಸಬಲ್ಲ ದ್ರವ್ಯ ಇಲ್ಲದ್ದರಿಂದ, ಹಿಂದೂ ರಾಜಕಾರಣ, ಧರ್ಮದಾಚೆಗಿನ ಒಂದು ಆಕೃತಿಯನ್ನು ಕಟ್ಟಿಕೊಟ್ಟಿತು. ದಲಿತರ ರಾಜಕಾರಣ, ಇದಕ್ಕೆ ವಿರುದ್ಧವಾದ ಸಂಕಥನಗಳನ್ನೇ ಸೃಷ್ಟಿಸಬೇಕು.

ಕನ್ನಡದ ಸಾಂಸ್ಕೃತಿಕ ಸಂಕಥನಗಳಲ್ಲಿ ಕವಿರಾಜ ಮಾರ್ಗಕ್ಕಿಂತ ಹಿಂದಿನಿಂದ, ಈ ಹೊತ್ತಿನ ನಟರಾಜ ಬೂದಾಳರ 'ನಾಗಾರ್ಜುನನ ಮೂಲ ಮಾಧ್ಯಮಿಕ ಕಾರಿಕೆ'ದವರೆಗೆ, ಆಳದಲ್ಲಿ, ಸದ್ದಿಲ್ಲದೆ, ಆದರೆ ನಿರಂತರವಾಗಿ, ಬೌದ್ಧ ತಾತ್ವಿಕತೆಯ ಝರಿಗಳು ಹರಿಯುತ್ತಲೇ ಇವೆ. ದಲಿತ ರಾಜಕಾರಣ, ಈ ಸಾಂಸ್ಕೃತಿಕ ದ್ರವ್ಯವನ್ನೇ ತನ್ನ ಆಧ್ಯಾತ್ಮಕ ತಳಪಾಯವನ್ನಾಗಸಿಕೊಳ್ಳಬೇಕಾಗಿದೆ. ಇದನ್ನು ಆಧುನಿಕ ಮೌಲ್ಯ ಮತ್ತು ಪ್ರಜಾತಾಂತ್ರಿಕ ವ್ಯವಸ್ಥೆಯ ಚೌಕಟ್ಟಿನಲ್ಲಿ ಹೇಗೆ ಇಡಬಹುದೆಂಬುದಕ್ಕೆ ನಮ್ಮಲ್ಲಿ ಉತ್ತಗಳಿವೆ. ಆದರೆ, ಇದನ್ನು ಇಡಿಯಾಗಿ ಈ ದೇಶಕ್ಕೆ ಹೇಗೆ ವಿಸ್ತರಿಸುವುದು ಎಂಬುದನ್ನು ನಾವು ಯೋಚಿಸಬೇಕಾಗಿದೆ. ಒಂದು ಹೊಸ ರೀತಿಯ conditioning of minds ಹೇಗೆ ಸಾಧ್ಯ ಎನ್ನುವುದು ದೊಡ್ಡ ಸವಾಲೂ ಹೌದು.

ದಲಿತ ರಾಜಕಾರಣದ ಸ್ವರೂಪ ಎಂದರೆ, ಅದು ಈಗಿರುವ ಕೊಳೆ, ಕಸ, ಕಲ್ಮಷಗಳನ್ನೆಲ್ಲಾ ಕೊಚ್ಚಿಕೊಡು ಹೋಗುವ ಒಂದು ಮಾನವೀಯತೆಯ ಮಹಾನ್ ಪ್ರವಾಹ ಆಗಬೇಕು. ಕೊನೆಗೂ ನಮ್ಮ ದೃಷ್ಟಿ ಸಾಮಾಜಿಕ ನ್ಯಾಯದ ಕಡೆಗೇ ಮುಖಮಾಡಬೇಕಾಗಿದೆ. ಇದಕ್ಕಾಗಿ ನಮ್ಮ ವೈಯಕ್ತಿಕ ಸ್ವಾತಂತ್ರ್ಯವನ್ನು ಬೇಕಾದರೆ ಪಕ್ಕಕ್ಕಿಡೋಣ. ಇದು ಯಾವುದೂ ಬೆಳಗಾಗುವ ಹೊತ್ತಿಗೆ ವಾಸ್ತವವಾಗುವುದಲ್ಲ. ಇದಕ್ಕಾಗಿ RSSನ ರೀತಿ ನಿರಂತರವಾದ ತರಬೇತಿ ಕಾರ್ಯಮಗಳನ್ನು ಹಮ್ಮಿಕೊಳ್ಳಬೇಕು, ಅದು ಫಲ ನೀಡಲು ಪ್ರಾರಂಭಿಸಬೇಕು. ಬೇರೆ ಬೇರೆ ಕಡೆಯಿಂದ ದಲಿತರೆಲ್ಲಾ ಒಂದೇ ಆಶಯಕ್ಕಾಗಿ ಕೈಗೂಡಿಸಿ ಕೆಲಸಮಾಡಬೇಕು. ಇದು ಬಹಳ ನಿಧಾನವಾದ, ದೀರ್ಘವಾದ ಪಯಣ. ಹೀಗಲ್ಲದೆ, ಬೇರೆ ಯಾವುದೇ ರೀತಿಯ ರಾಜಕೀಯವನ್ನು ನಾವು ಮಾಡಲು ಹೋದರೂ, ಅದು ಈ ಹೊತ್ತಿನ ವಿಕಾರವಾದ ಮಾದರಿಗಳನ್ನೇ ತೆಗೆದುಕೊಳ್ಳುತ್ತದೆ. ಹಾಗಾದಾಗ ಅರಾಜಕತೆ ಉಂಟಾಗಿ, ಸರ್ವಾಧಿಕಾರತ್ವ ಬರಬಹುದು. ಪ್ರಜಾಪ್ರಭುತ್ವ ದುರ್ಬಲವಾಯಿತೆಂದರೆ, ದಲಿತರಿಗೆ ಇನ್ನು ಕಾಲವಿಲ್ಲ ಎಂದೇ ಅರ್ಥ. ಆದ್ದರಿಂದ ನಿಜ ಪ್ರಜಾಪ್ರಭುತ್ವವನ್ನು ಸಾಧಿಸುವತ್ತ ನಾವು ಹೆಜ್ಜೆ ಹಾಕಬೇಕಾಗಿದೆ.

(೦೯.೦೩.೦೮ ರಂದು ಟಿ. ನರಸೀಪುರ ತಾಲೂಕು, ನೆರಗ್ಯಾತನಹಳ್ಳಿಯಲ್ಲಿ ನಡೆದ ಡಿ.ಎಸ್.ಎಸ್. ಕಾರ್ಯಕರ್ತರ ಅಧ್ಯಯನ ಶಿಬಿರದಲ್ಲಿ ಮಂಡಿಸಿದ ಪ್ರಬಂಧ)

ಆಕರ ಪಠ್ಯಗಳು:

1. The Hindu Nationalists in India-V.B. Singh and Yogendra K. Malik
2. Political Sociology of Dalit Assertion-Prakash Louis
3. Imagining India-Ronald inden
4. Communal Harmony in sealor India-Rafiq of Zakaria
5. The Burden of Democracy-Pratap Bhanu Mehta
೬. ದಲಿತರು ಮತ್ತು ಪರ್ಯಾಯ ರಾಜಕಾರಣ– ಸಂ ಡಾ॥ ಪ. ಮಹದೇವಯ್ಯ
೭. ದಲಿತ ಚಿಂತನೆ–ಸಂ. ಡಾ॥ ಮೊಗಳ್ಳಿ ಗಣೇಶ್
೮. ರಾಷ್ಟ್ರೀಯತೆ, ಕೋಮುವಾದ...' ನರೇಂದ್ರ ಪೈ 'ಹೊಸತು'

□

ನಿತಾಂತ ದಾರ್ಶನಿಕನ ಕನ್ನಡಕ



ಓಘು ಪ್ರವಾಹದ ಸೆಳತದಲಿ ಸಿಕ್ಕು ತಲ್ಲಣಿಸುತಿದೆ ಸತ್ವ
ಬದಲಿಸುವ ಬುದ್ಧಿಜೀವಿಯ ಬುದ್ಧಿಮತ್ತೆಗೆಲ್ಲಿದೆ ನೆಲೆ

ಆತನೂ ಅದೇ ಓಘದ ಸೆಳೆತಕ್ಕೆ ಸಿಕ್ಕು ಸಾಗುತಿಹ...
ನಿಜ, ನಿಜ ಸಾಧಿಸಿದಂತಾಯತೇನೆಂದು ಕೊಂಚ ಯೋಚಿಸುವ–
ವ್ಯವಧಾನ ಚಂದುಕೊಂಡಾತ ಮಾತ್ರ ಈ ಲೋಕ ಮೆದುಳಿಗೆ
ಸೃಜನಕ್ರಿಯೆಗೆ ಒಂದಿಷ್ಟು ಸ್ಪಂದಿಸಿ ಸಂಚುಷ್ಟನಾಗುವ

ಒಮ್ಮೆ ಬ್ಯಾ ಸಂಸ್ಕೃತಿಗೆ ವಾಲಿದರೆ ತೀರಿತು: ಅದೇ
ಬಹು ಸಂಸ್ಕೃತಿಯಾಗಿ ಸುಪಠಿತ ಸಂಸ್ಕೃತಿಗೆ
ಕವಡೆ ಕಿಮ್ಮತ್ತೂ ಲಭಿಸದು

ಈ ಗಂಡು ಬುದ್ಧಿ ಜೀವಿಯು ನಪುಂಸಕ ಸಂಸ್ಕೃತಿಯ ಸದಸ್ಯತ್ವದಲ್ಲಿ!
ದುರಾಕ್ರಮಣದ ದರ್ಬಾರದಲಿ ಧರ್ಮದಂತೆ ನೀತಿಯೂ
ಹೊಸ ರೂಪದಲಿ ಹೊಸ ಅರ್ಥ ಪಡೆದುಕೊಂಡು
ಸತ್ಯದ ಸಮಾಧಿ ಸೇರಲು ಸಿದ್ಧಗೊಂಡಿದೆ

ಆ ನಿಶ್ಯಬ್ಧ– ನಿರ್ಬೆಳಕಿನ ಗುಡಿಯೊಳಗಿನ
ಜೀವಂತ ಹೆಣದ ಮುಂದಿನ ನಿತಾಂತ ಜ್ಯೋತಿಯಂತಿದೆ
ನ್ಯಾಯ, ನೀತಿ, ಧರ್ಮ, ಆದರ್ಶ, ಪ್ರಾಮಾಣಿಕತೆ!

○ ಭಾವಜ್ಞ ಜಮಖಂಡಿ

ಪುಸ್ತಕ ಅವಲೋಕನ

ಕನ್ನಡ ಅನನ್ಯತೆಯ ಮೂಲ ಬೇರುಗಳ ಶೋಧ

ಮೇಟಿ ಮಲ್ಲಿಕಾರ್ಜುನ

"ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಳಯವಿಲೀನ ವಿಶದ ವಿಷಯವಿಶೇಷಂ" ಈ ಉಲ್ಲೇಖವು ಪಾರಂಪರಿಕವಾಗಿ ರೂಢಿಗೊಂಡ ಒಂದು ಪರಂಪರೆಯನ್ನು ಪ್ರತಿನಿಧಿಸುವಂತೆ ತೋರುವುದು. ಆದರೆ, ಕವಿರಾಜಮಾರ್ಗದ ಕಾವ್ಯ ಮೀಮಾಂಸೆಗೆ ಸಂಬಂಧಪಟ್ಟ ವಿವರಗಳನ್ನು ಗಮನಿಸಿದಾಗ, ಈ ಪರಂಪರೆಯು ಕನ್ನಡದ ಅಂತ:ಸತ್ವವನ್ನು ಕಸಿಮಾಡಿಕೊಂಡು ರೂಪಗೊಳ್ಳುವದಕ್ಕಿಂತ ಹೆಚ್ಚಾಗಿ ಸಂಸ್ಕೃತ ಕಾವ್ಯ ಮೀಮಾಂಸೆಯೊಳ್ ಅವತರಿಸಿರುವುದು ಒಂದು ಚಾರಿತ್ರಿಕ ವಿಪರ್ಯಾಸವೇ ಸರಿ. ತಮಿಳು ಭಾಷಾ ಸಾಹಿತ್ಯವು ರೂಪಿಸಿಕೊಂಡ ಕಾವ್ಯ ಮೀಮಾಂಸೆಯ ಮಾದರಿಗಳಾದ "ಅಹಂ" ಮತ್ತು "ಪರಂ" ನಂತಹವುಗಳು ಯಾಕೆ ಕನ್ನಡಕ್ಕೆ ಸಾಧ್ಯವಾಗಲಿಲ್ಲ ಎನ್ನು ವುದು ಯಕ್ಷ ಪ್ರಶ್ನೆ. ಈ 'ಅಹಂ' ಮತ್ತು 'ಪರಂ' ಪ್ರಕಾರಗಳು ಒಂದು ಭಾಷಾ ಸಮುದಾಯದ ಸಾಹಿತ್ಯ ತತ್ವಗಳಾಗಿ ರೂಪಗೊಂಡು ಒಂದು ಪರಂಪರೆಯನ್ನು ನಿರ್ಮಿಸಿರುವವು.

ಚರಿತ್ರೆಯನ್ನು ಕಟ್ಟುವ ಮತ್ತು ಮುರಿದು ಕಟ್ಟುವ ಪ್ರಕ್ರಿಯೆಯು ಒಂದು ಹುಡುಕಾಟದ ನೆಲೆಯನ್ನು ಆಧರಿಸಿಕೊಂಡು ರೂಪುಗೊಳ್ಳುವುದು ಸಹಜ. ಈ ಪ್ರಕ್ರಿಯೆಯ ಗುರಿ-ಉದ್ದೇಶಗಳ ಆಶಯವನ್ನರಿತುಕೊಂಡಾಗ ಮಾತ್ರ ಅದರ ಮಹತ್ವ ಮನವರಿಕೆಯಾಗುವುದು. ಇಂತಹ ಒಂದು ಚರಿತ್ರೆಯನ್ನು ಪುನರ್‌ಕಟ್ಟುವ ಮಹತ್ವದ ಪ್ರಕ್ರಿಯೆಯು ಪ್ರೊ. ಷ.ಶೆಟ್ಟರ್ ಅವರ "ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ" ಎಂಬ ಸಂಶೋಧನೆಯ ಫಲವಾಗಿ ನಮಗೆ ದಕ್ಕಿರುವುದು. ಈ ಸಂಶೋಧನೆಯು ಯಾವುದೆ ನಿರ್ಣಾಯಕ ನಿಲುವುಗಳನ್ನು ಪ್ರಕಟಿಸುವ ಇರಾದೆಯನ್ನು ಅಂತಿಮವಾಗಿ ಇಟ್ಟುಕೊಳ್ಳದೇ ಬದಲಾಗಿ ಚಾರಿತ್ರಿಕ ಸತ್ಯದ ಸಾಧ್ಯತೆಗಳ ಸುಳಿವುಗಳನ್ನು ಒದಗಿಸಿಕೊಡುವದರ ಬಗ್ಗೆ ಹೆಚ್ಚು ಒಲವನ್ನು ತೋರಿಸಿರುವುದು. ಸಧ್ಯದ ಪರಿಸ್ಥಿತಿಯಲ್ಲಿ ಕನ್ನಡದ ಪ್ರಾಚೀನತೆ/ಪರಂಪರೆಯ ನೆಲೆಗಳನ್ನು ಮತ್ತು ಅದರ ಚಹರೆಗಳನ್ನು ಗುರುತಿಸುವ ಹಂಬಲ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಈ ಸಂಶೋಧನೆಯು ಬಂದಿರುವುದು ಗಮನಾರ್ಹ. ಇಂತಹ ಹಂಬಲಗಳಿಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನದಂತಹ ಬೇಡಿಕೆಗಳೂ ಕಾರಣವಿರಬಹುದು. ಇದಕ್ಕಿಂತ ಹೆಚ್ಚಾಗಿ ಈ ಸಂಶೋಧನೆಯು ಕನ್ನಡದ ಪ್ರಾಚೀನತೆ ಮತ್ತು ಅದರ ಚಲನಶೀಲತೆಯನ್ನು ವಿವರಿಸಲು ಹೊಸ ಚೌಕಟ್ಟನ್ನು ನಿರ್ಮಿಸಿಕೊಡುತ್ತದೆ.

ಈ ಒಂದು ಚೌಕಟ್ಟು ದ್ರಾವಿಡರ ಆಲೋಚನಕ್ರಮವೂ ಆಗುವ ಸಾಧ್ಯತೆಗಳ ನೆಲೆಗಳನ್ನು ಗುರುತಿಸುವ ಸಂದರ್ಭದ ಕ್ರಮವಾಗಿರಬಹುದು. ಒಂದು ಸಂಸ್ಕೃತಿ, ಭಾಷೆ ಹಾಗೂ ಅವುಗಳು ಗುರುತಿಸಿಕೊಂಡ ಅಧಿಕಾರದ ಸಂಬಂಧ ಮತ್ತು ಪ್ರತಿನಿಧಿಸುವ ಆಲೋಚನ ಕ್ರಮಗಳು ರೂಪುಗೊಂಡ ಬಗೆಯನ್ನು ಹಾಗೂ ಅವುಗಳು ವಿಸ್ತಾರಗೊಂಡ ವಿಧಾನವನ್ನು ಪುನರ್‌ಶೋಧಿಸುವ ಪರಿಕರಗಳು ಇಂತಹ ಅಧ್ಯಯನಗಳಿಂದ ದೊರಕಲು ಸಾಧ್ಯ. ಯಾಕೆಂದರೆ, ಶೆಲ್ಡನ್ ಪೊಲಾಕ್‌ರ ಅಧ್ಯಯನವೂ ಮಾದರಿಗಳು ಪಡೆದುಕೊಂಡಿರುವ ಪ್ರಾಮುಖ್ಯತೆ ಕನ್ನಡದ ಪಾರಂಪರಿಕ ಚಹರೆಗಳನ್ನು ಪ್ರಕಟಿಸುವದರ ಬದಲಾಗಿ ಸಂಸ್ಕೃತದಂತಹ ವಿಶ್ವಾತ್ಮಕ ಭಾಷೆಯ ಆಶ್ರಯದ ಅನುಸಂಧಾನದೊಂದಿಗೆ ಕನ್ನಡದಂತಹ ದೇಶಿ ಭಾಷೆಗಳು ತಮ್ಮ ಪರಂಪರೆಯನ್ನು ರೂಪಿಸಿಕೊಂಡವು ಎನ್ನುವ ಹುಸಿ ಸಾಂಸ್ಕೃತಿಕ ಕಲ್ಪನೆಗಳನ್ನು ಸ್ಥಾಪಿಸಿರುವವು. ಶೆಟ್ಟರ್ ಅವರ ಅಧ್ಯಯನವು ಈ ಮಾದರಿಗಳನ್ನು ನೇರವಾಗಿ ಅಡ್ರೆಸ್ ಮಾಡದಿದ್ದರೂ ಆ ಅಧ್ಯಯನಗಳು ಸೃಷ್ಟಿಸಿರುವ ಕಲ್ಪನೆಗಳನ್ನು ಹುಸಿ ಎಂದು ರುಜುವಾತುಪಡಿಸಲು ಸಹಾಯಕಾರಿ ಎನ್ನುವುದು ಸ್ಪಷ್ಟ. ಆದ್ದರಿಂದ, ಡಿ.ಎನ್.ಎಸ್.ಭಟ್ ಅವರು ಕನ್ನಡ-ಸಂಸ್ಕೃತದ ನಡುವಿನ ಸಂಬಂಧ ಮತ್ತು ಅನುಸಂಧಾನವನ್ನು ಕುರಿತು ಎತ್ತುವ ಪ್ರಶ್ನೆಗಳು ಕೂಡ ಶೆಟ್ಟರ್ ಅವರ ಅಧ್ಯಯನದ ಆಶಯಗಳಿಗೆ ಪೂರಕವಾಗಬಲ್ಲಂತವುಗಳಾಗಿವೆ. ಗತಕಾಲವನ್ನು ಮರುಸಂಪಾದಿಸುವ (Reclaiming the past) ಪ್ರಕ್ರಿಯೆಯು ಮೇಲ್ ನೋಟಕ್ಕೆ ಬಹಳ ಸರಳವಾಗಿ ಪರಿಣಮಿಸಬಹುದು ಆದರೆ, ಅದು ಸೃಷ್ಟಿಸುವ ಚಾರಿತ್ರಿಕ ಸಂಕೀರ್ಣತೆ ಬಹಳ ಜಟಿಲವಾದದ್ದು. ಆದ್ದರಿಂದ,ಇಂತಹ ಆಲೋಚನೆಗಳು ನಮ್ಮ ಚಾರಿತ್ರಿಕ-ಸಾಂಸ್ಕೃತಿಕ ತಿಳುವಳಿಕೆಯನ್ನು ವಿಸ್ತಾರಗೊಳಿಸುವ ಮಾನದಂಡಗಳಾಗುವವು. ಯಾಕೆಂದರೆ, ಶೆಟ್ಟರ್ ಅವರ ವಾದಗಳು ಚರಿತ್ರೆಯ ಸತ್ಯಗಳ ಪುನರ್ ಶೋಧವಾದುದ್ದರಿಂದ ಕನ್ನಡದ ಮೂಲ/ಆದಿಮ ಸ್ವರೂಪವನ್ನು ಅರ್ಥೈಸಿಕೊಳ್ಳಲು ಪೂರಕವಾಗುವವು. ಈ ಆಲೋಚನ ಕ್ರಮದಿಂದ ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿಯನ್ನು ತೋಲ್ಗಾಪ್ಪಿಯರ್ ಮತ್ತು ಶಂಗಂ ಕಾವ್ಯ ಹಾಗೂ ಕವಿರಾಜಮಾರ್ಗಕಾರ ಇವರ ಕೃತಿಗಳನ್ನು ಅನುಸರಿಕೊಂಡು ಕನ್ನಡ-ತಮಿಳು ಭಾಷೆಗಳು ರೂಪಿಸಿಕೊಂಡ ಪಾರಂಪರಿಕ ಅನನ್ಯತೆಯ ನೆಲೆಗಳ ಹಿಂದಿರುವ ಪ್ರೇರಣೆ ಮತ್ತು ಪ್ರಕ್ರಿಯೆಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನವಾಗಿದೆ.

"ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಳಯವಿಲೀನ ವಿಶದ ವಿಷಯವಿಶೇಷಂ" ಈ ಉಲ್ಲೇಖವು ಪಾರಂಪರಿಕವಾಗಿ ರೂಢಿಗೊಂಡ ಒಂದು ಪರಂಪರೆಯನ್ನು ಪ್ರತಿನಿಧಿಸುವಂತೆ ತೋರುವುದು. ಆದರೆ, ಕವಿರಾಜಮಾರ್ಗದ ಕಾವ್ಯಮೀಮಾಂಸೆಗೆ ಸಂಬಂಧಪಟ್ಟ ವಿವರಗಳನ್ನು ಗಮನಿಸಿದಾಗ, ಈ ಪರಂಪರೆಯು ಕನ್ನಡದ ಅಂತ:ಸತ್ವವನ್ನು ಕಸಿಮಾಡಿಕೊಂಡು ರೂಪುಗೊಳ್ಳುವುದಕ್ಕಿಂತ ಹೆಚ್ಚಾಗಿ ಸಂಸ್ಕೃತ ಕಾವ್ಯಮೀಮಾಂಸೆಯೊಳ್ ಅವತರಿಸಿರುವುದು ಒಂದು ಚಾರಿತ್ರಿಕ ವಿಪರ್ಯಾಸವೇ ಸರಿ. ಯಾಕೆಂದರೆ, ತಮಿಳು ಭಾಷಾ ಸಾಹಿತ್ಯವು ರೂಪಿಸಿಕೊಂಡ ಕಾವ್ಯಮೀಮಾಂಸೆಯ ಮಾದರಿಗಳಾದ "ಅಹಂ" ಮತ್ತು "ಪುರಂ" ನಂತಹವುಗಳು ಯಾಕೆ ಕನ್ನಡಕ್ಕೆ ಸಾಧ್ಯವಾಗಲಿಲ್ಲ ಎನ್ನುವುದು ಯಕ್ಷ ಪ್ರಶ್ನೆ. ಈ "ಅಹಂ" ಮತ್ತು "ಪುರಂ" ಪ್ರಕಾರಗಳು ಒಂದು ಭಾಷಾ ಸಮುದಾಯದ ಸಾಹಿತ್ಯ ತತ್ವಗಳಾಗಿ ರೂಪುಗೊಂಡು ಒಂದು ಪರಂಪರೆಯನ್ನು ನಿರ್ಮಿಸಿರುವವು. ಆದರೆ ಈ ಬಗೆಯ ಪ್ರೇರಣೆಯನ್ನು ಕವಿರಾಜಮಾರ್ಗಕಾರ ಒದಗಿಸಲಿಲ್ಲ. ಹಾಗಾಗಿ, ಕನ್ನಡದ ದೇಶಿಯ ಕಾವ್ಯಪ್ರಭೇದಗಳಂದೇ ಚಾಲ್ತಿಯಲ್ಲಿದ್ದ "ಚೆತ್ತಾಣ" ಮತ್ತು "ಬೆದಂಡ"ಗಳು ಎಂದೂ ಕನ್ನಡ ಭಾಷಾ ಸಮುದಾಯದ ಸಾಹಿತ್ಯ ತತ್ವಗಳಾಗಿ ರೂಪಗೊಂಡು ಒಂದು ಪರಂಪರೆಯನ್ನು ನಿರ್ಮಿಸಲಿಲ್ಲ. ಕವಿರಾಜಮಾರ್ಗಕಾರನು ಕಟ್ಟುವ ಕನ್ನಡ ಪ್ರಜ್ಞೆ ಮತ್ತು ಸಾಹಿತ್ಯ ಸಂವೇದನೆಯು ತೋಲ್ಗಾಪ್ಪಿಯರ್‌ನು ಸೃಷ್ಟಿಸಿದ ವಿಧಾನಕ್ಕಿಂತ ಭಿನ್ನವಾಗಿರುವುದಕ್ಕೆ ಯುಗಧರ್ಮವೇ ಮಾತ್ರ ಜವಾಬ್ದಾರಿಯಾಗಲಾರದು ಎನ್ನುವುದು ಪರಿಗಣಿಸಬೇಕಾದ ವಾದ. ಸಂಸ್ಕೃತ ಭಾಷೆಯು ಕನ್ನಡ ಜಗತ್ತನ್ನು ತನ್ನ ಒಡಲಲ್ಲಿರಿಸಿಕೊಂಡು ತನ್ನ ಆಂತರಿಕ ಧೋರಣೆಗಳನ್ನು ಆ ಮುಖೇನ ಪ್ರಕಟಿಸಿರುವುದು ಸ್ಪಷ್ಟವಾಗುವುದು. ಅಂದರೆ ಸಂಸ್ಕೃತದ ಪ್ರಭಾವ ಮತ್ತು ಯಜ



ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ
ಲೇ: ಷ.ಶೆಟ್ಟರ್
ಬೆಲೆ: ರೂ. ೧೫೦/-
ಪ್ರಕಾಶಕರು: ೧೭/೮-೨, ೧ನೇ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು-೪೦

ಮಾನಿಕೆಯು ಕನ್ನಡ ಪರಂಪೆಯನ್ನು ದ್ರಾವಿಡ ಪರಂಪರೆಗೆ ವಿಭಿನ್ನವಾಗಿ ರೂಪಿಸಿರುವುದು. ಇದನ್ನು ಇನ್ನೂ ಸ್ಪಷ್ಟಗೊಳಿಸಬೇಕೆಂದರೆ, ಕನ್ನಡದ ವೈಚಾರಿಕ, ಸಾಹಿತ್ಯಿಕ ನಿಲುವು-ನಿರ್ಧಾರಗಳು ಸಂಸ್ಕೃತದಿಂದಲೇ ನಿರ್ದೇಶನಗೊಂಡಿರುವ್ಹುದೇ ಕಾರಣ. ವಿಚಿತ್ರವೆಂದರೆ, ಶೆಲ್ಡನ್ ಪೊಲಾಕ್‌ರಂತಹ ವಿದ್ವಾಂಸರ ಪ್ರಕಾರ ಕನ್ನಡದಂತಹ ಭಾಷೆಗಳು, "ಸಂಸ್ಕೃತಮೀಮಾಂಸೆಯ ವ್ಯವಸ್ಥೆಯು, ದೇಶೀ ಭಾಷೆಗೆ ಒಂದು ಚೌಕಟ್ಟನ್ನು ಹಾಕಿಕೊಟ್ಟು ಅದರ ಒಳಗೇ ತನ್ನ ಸ್ವೋಪಜ್ಞತೆಯನ್ನು ಪ್ರದರ್ಶಿಸಲಿಕ್ಕೆ ಅದಕ್ಕೆ ಅವಕಾಶ ಮಾಡಿಕೊಟ್ಟಿತು.

ಇಂಥ ಅವಕಾಶವನ್ನು ಬಳಸಿಕೊಂಡು ದೇಶಭಾಷಾ ಸಾಹಿತ್ಯಗಳು ಉದ್ಭವಿಸಿದ ಪ್ರಕ್ರಿಯೆಯನ್ನೇ ನಾನು 'ಸಾಹಿತ್ಯೀಕರಣ' ಎಂದು ಕರೆದಿದ್ದೇನೆ; ಇದು, ಮೇಲ್ಮೆಯನ್ನು ಪಡೆದ ಒಂದು ಸಾಂಸ್ಕೃತಿಕ ಪದ್ಧತಿಯೊಂದಿಗೆ ಪೂರಕವಾದ ಸಂಬಂಧವನ್ನು ಇಟ್ಟುಕೊಂಡೇ ಹೊಸ ಸಾಹಿತ್ಯವೊಂದು ಸೃಷ್ಟಿಯಾಗುವ ಪ್ರಕ್ರಿಯೆ" (ಶಲ್ಡನ್ ಪೊಲಾಕ್:ವಿಶ್ವಾತ್ಮಕ ದೇಶ ಭಾಷೆ:೧೪:೨೦೦೩). ಎನ್ನುವ ಆಲೋಚನ ಕ್ರಮವು ಒಂದು ಹುಸಿವಾದ ಎನ್ನುವುದು ಶೆಟ್ಟರ್ ಅವರ ಈ ಅಧ್ಯಯನದಿಂದ ಪ್ರಕಟಗೊಳ್ಳುವುದು. ಅಂದರೆ," ಯುಗಧರ್ಮವು ಬದಲಾಗಿ, ತನ್ನ ಜೇಷ್ಠತೆಯನ್ನು ಸಂಸ್ಕೃತ ಪ್ರತಿಷ್ಠಾಪಿಸಿಕೊಂಡಿದ್ದ ಮಾರ್ಗಕಾರನ ಕಾಲದಲ್ಲಿ, ಸಂಸ್ಕೃತ ಪದಗಳನ್ನು ದೇಸೀ ಭಾಷೆಗೆ ತಂದುಕೊಳ್ಳುವುದು ಹೆಮ್ಮೆಯ ಹಾಗೂ ಗೌರವಾನ್ವಿತ ಗುಣವಾಗಿ ಪರಿವರ್ತನೆಗೊಂಡಿತ್ತು.

ಸಂಸ್ಕೃತದ ಉಕ್ತಿಮಾರ್ಗವನ್ನು ವಿವೇಚಿಸಿ, ಅವನ್ನು ಕನ್ನಡಕ್ಕೆ ಹೊಂದಿಸಿಕೊಂಡಾಗ ಮಾತ್ರ ಕಾವ್ಯವು ನಿರ್ದುಷ್ಟವೂ ಶೋಭಾಯಮಾನವೂ ಆಗುವುದೆಂಬುದನ್ನು ಮಾರ್ಗಕಾರನು "ನೆಗಳ್ದರ್ದ ಕನ್ನಡಂಗಳೊಳಗಣಿತ-ಗುಣ-ವಿಧಿತ-ಸಂಸ್ಕೃತೋಕ್ತ-ಕ್ರಮಮಂ ಬಗೆದೊಂದು ಮಾಡಿ ಪೇಳ್ದೊಡೆ ಸೊಗಯಿಸುಗಂ ಕಾವ್ಯಬಂಧಂ" ಎಂಬ ಮಾತಿನಲ್ಲಿ ಗಟ್ಟಿಗೊಳಿಸಿದನು (ಪು:೧೨). ತೊಲ್ ಮತ್ತು ಮಾರ್ಗಕಾರನ ನಡುವೆ ಯುಗಧರ್ಮವನ್ನು ಗಮನದಲಿಟ್ಟುಕೊಂಡು ಅವರು ರೂಪಿಸಿಕೊಂಡ ಭಾಷಿಕ ಪ್ರಜ್ಞೆಯನ್ನು ಅರ್ಥೈಸಿಕೊಳ್ಳುವ ಅಗತ್ಯವಿರುವುದು ಸ್ಪಷ್ಟವಾದರೂ ಚರಿತ್ರೆಯ ಪ್ರಕ್ರಿಯೆಯ ಒತ್ತಡದಲ್ಲಿ ಕನ್ನಡ ಭಾಷೆ ರೂಪಗೊಂಡ ಬಗೆಗಳ ವಿವರಗಳು ಇವರ (ಶೆಟ್ಟರ್) ಈ ಸಂಶೋಧನೆಯಿಂದ ಸ್ಪಷ್ಟ. ಈ ಎಲ್ಲ ಕಾರಣಗಳಿಂದ ಕನ್ನಡ ಮತ್ತು ತಮಿಳು ಭಾಷೆಗಳು ಪ್ರತ್ಯೇಕವಾದ ಕಾವ್ಯ ಮೀಮಾಂಸೆಯನ್ನು ರೂಪಿಸಿಕೊಂಡಿರುವುದಕ್ಕೆ ಸಾಧ್ಯ.

ಕ್ರಿ.ಪೂ.೩ನೆಯ ಶತಮಾನದಿಂದ ಕ್ರಿ.ಶ.೩ನೆಯ ಶತಮಾನದ ಮಧ್ಯದ ಅವಧಿಯ ಒಟ್ಟು ಚಾರಿತ್ರಿಕ ದಾಖಲೆಗಳನ್ನು ಪರಿಶೀಲಿಸಿದಾಗ ಸ್ಪಷ್ಟಗೊಳ್ಳುವ ಅಂಶವೆನಂದರೆ, ತಮಿಳ ಭಾಷೆಯು ಪ್ರೌಢ ಹಂತವನ್ನು ಮುಟ್ಟುವುದಕ್ಕೆ ಸುಮಾರು ಮೂರು ಶತಮಾನಗಳ ಮಂಚೆಯೇ ಕನ್ನಡವು 'ಲಿಪಿ' ಮತ್ತು 'ಭಾಷೆಯ ಪರಿಪೂರ್ಣತೆ'ಯನ್ನು ಗಳಿಸಿಕೊಂಡಿದ್ದನ್ನು ಹಲ್ಮಿಡಿ ಶಾಸನಗಳಂತಹ ದಾಖಲೆಗಳಿಂದ ಸಾಕ್ಷಿಕರಿಸಿರುವುದು ಗಮನಾರ್ಹ. ಈ ಸಾಕ್ಷ್ಯಾಧಾರಗಳು ಕನ್ನಡವು, ತಮಿಳಗಂನಕ್ಕಿಂತಲೂ ಮುಂಚೆಯೇ ಅಕ್ಷರಸ್ಥ ಸಮುದಾಯವಾಗಿ ರೂಪಗೊಂಡಿರುವುದನ್ನು ಸ್ಪಷ್ಟಗೊಳಿಸುವವು. ಅಂದರೆ, ಅಶೋಕನು ಶಾಸನಗಳನ್ನು ಕಂಡರಿಸುವುದಕ್ಕಿಂತ ಬಹುಕಾಲ ಮುಂಚೆಯೇ ಪ್ರಾಕೃತ ಭಾಷೆಯು ಕರ್ನಾಟಕ-ಆಂಧ್ರವನ್ನು ಪ್ರವೇಶಿಸಿತ್ತು ಎನ್ನುವುದು ಎರಡು ಐತಿಹ್ಯಗಳಿಂದ ನಿರೂಪಿಸಲ್ಪಟ್ಟಿರುವುದು.

ಕವಿರಾಜಮಾರ್ಗಕಾರನು ಕಟ್ಟುವ ಕನ್ನಡ ಪ್ರಜ್ಞೆ ಮತ್ತು ಸಾಹಿತ್ಯ ಸಂವೇದನೆಯು ತೋಲ್ಕಾಪ್ಪಿಯರ್‌ನು ಸೃಷ್ಟಿಸಿದ ವಿಧಾನಕ್ಕಿಂತ ಭಿನ್ನವಾಗಿರುವುದಕ್ಕೆ ಯುಗ ಧರ್ಮವೇ ಮಾತ್ರ ಜವಾಬ್ದರಿಯಾಗಲಾರದು ಎನ್ನುವುದು ಪರಿಗಣಿಸಬೇಕಾದ ವಾದ. ಅಂದರೆ ಸಂಸ್ಕೃತದ ಪ್ರಭಾವ ಮತ್ತು ಯಜಮಾನಿಕೆಯು ಕನ್ನಡ ಪರಂಪೆಯನ್ನು ದ್ರಾವಿಡ ಪರಂಪರೆಗೆ ವಿಭಿನ್ನವಾಗಿ ರೂಪಿ ಸಿರುವುದು. ಇದನ್ನು ಇನ್ನೂ ಸ್ಪಷ್ಟಗೊಳಿಸ ಬೇಕೆಂದರೆ, ಕನ್ನಡದ ವೈಚಾರಿಕ, ಸಾಹಿತ್ಯಿಕ ನಿಲುವು-ನಿರ್ಧಾರಗಳು ಸಂಸ್ಕೃತ ದಿಂದಲೇ ನಿರ್ದೇಶನಗೊಂಡಿರುವುದೇ ಕಾರಣ. ವಿಚಿತ್ರವೆಂದರೆ, ಶೆಲ್ಡನ್ ಪೊಲಾಕ್ ಪ್ರಕಾರ ಕನ್ನಡ ದಂತಹ ಭಾಷೆಗಳು, "ಸಂಸ್ಕೃತ ಮೀಮಾಂಸೆಯ ವ್ಯವಸ್ಥೆಯು, ದೇಶೀ ಭಾಷೆಗೆ ಒಂದು ಚೌಕಟ್ಟನ್ನು ಹಾಕಿಕೊಟ್ಟು ಅದರ ಒಳಗೇ ತನ್ನ ಸ್ವೋಪಜ್ಞತೆಯನ್ನು ಪ್ರದರ್ಶಿಸಲಕ್ಕೆ ಅದಕ್ಕೆ ಅವಕಾಶ ಮಾಡಿಕೊಟ್ಟಿತು.

ಆ ಎರಡು ಐತಿಹ್ಯಗಳು ಜೈನ ಮತ್ತು ಬೌದ್ಧ ಮತಗಳಿಗೆ ಸೇರಿರುವುದು ವಿಶೇಷ. ಅಪಾರವಾದ ಮೌಖಿಕ ಪರಂಪರೆಯನ್ನು ಹೊಂದಿದ್ದರೂ ವೈದಿಕ ಸಂಸ್ಕೃತಿ ಮತ್ತು ಶಂಗಂ ತಮಿಳ ಪರಂಪರೆಗಳು ಲಿಪಿ ಶೂನ್ಯವಾಗಿದ್ದವು ಅನ್ನುವುದು ಗಮನಾರ್ಹವಾದ ವಿಚಾರ. ಆದರೆ, ಅದೇ ಸಂದರ್ಭದಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳು "ಬ್ರಾಹ್ಮೀ" ಲಿಪಿಯ ವ್ಯವಹಾರವನ್ನು ರೂಢಿಸಿಕೊಂಡಿರುವುದು ಸಾಂಸ್ಕೃತಿಕ-ಚಾರಿತ್ರಿಕವಾಗಿ ಮಾನ್ಯ ಮಾಡಿರುವಂತಹದು. ಈ ಒಂದು ಅಕ್ಷರ ಸಮಾಜದ ನಿರ್ಮಾಣವು ಸಾಧ್ಯವಾದದ್ದು ಮೌರ್ಯ ಸಾಮ್ರಾಜ್ಯದ ಅಶೋಕ ಚಕ್ರವರ್ತಿಯಿಂದ ಎನ್ನುವುದು ಸ್ಪಷ್ಟ. ಅಶೋಕನು ಒಟ್ಟು ಹದಿನೆಂಟು ಕಿಬ್ಬಂಡಿ ಶಾಸನಗಳನ್ನು ಕೊರಸಿರುವನು. ಅವುಗಳಲ್ಲಿ ಒಂಬತ್ತು ಶಾಸನಗಳು ಕರ್ನಾಟಕದಲ್ಲಿ ಮತ್ತೇರಡು ಆಂಧ್ರಪ್ರದೇಶದ ಗಡಿಜಿಲ್ಲೆಗಳಲ್ಲಿ ಲಭ್ಯವಾಗಿರುವವು. 'ಆದರೆ, ಇಂದಿನ ಭಾಷಾ ಮತ್ತು ರಾಜಕೀಯ ಗಡಿರೇಖೆಗಳನ್ನು ಅಳಿಸಿ ನೋಡಿದರೆ, ಈ ಹನ್ನೊಂದು ಶಾಸನಗಳು ಒಂದು ನಿರ್ದಿಷ್ಟ ಪ್ರದೇಶವನ್ನು ಹಂಚಿಕೊಂಡು, ಕೈ ಕೈ ಜೋಡಿಸಿ ನಿಂತಂತೆ ಕಾಣುವವು. ಅಂದರೆ, ಚಾರಿತ್ರಿಕಯುಗದ ಆರಂಭ ಕಾಲದಲ್ಲಿ ಲಿಪಿ-ಭಾಷಾ ಮಾಧ್ಯಮಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಂಡ ಹಿರಿಮೆ ಇಂದಿನ ಕರ್ನಾಟಕದ್ದು ಇತ್ತೆಂದು ಅರ್ಥ (ಪುಟ:೭೨). ಹಾಗಾಗಿ, ಕನ್ನಡ ಮತ್ತು ಆಂಧ್ರ ಭಾಷೆಗಳು ಲಿಪಿ ವ್ಯವಹಾರದಲ್ಲಿ ಭದ್ರ ನೆಲೆಯನ್ನು ಕಂಡುಕೊಂಡಿದ್ದವು ಎನ್ನುವುದು ವಾಸ್ತವ.

ಈ ಕಾರಣದಿಂದಾಗಿ, ಉತ್ತರದ ಸಿಂಧುವಿನಿಂದ ದಕ್ಷಿಣದ ಕುಮಾರಿಯವರೆಗೂ ಏಕೈಕ ಲಿಪಿಯಾಗಿ ಬ್ರಾಹ್ಮೀ ಪ್ರಸಾರಗೊಳ್ಳಲು ಸಾಧ್ಯವಾಯಿತು. ಈ ಲಿಪಿ-ಭಾಷಾ ಮಾಧ್ಯದ ವ್ಯವಹಾರವನ್ನು ತಿರಸ್ಕರಿಸಿದ/ ಪ್ರತಿರೋಧಿಸಿದ ಸಮುದಾಯ-ಜನಾಂಗಳು ಲಿಪರಹಿತವಾಗಿ ಉಳಿದುಕೊಂಡವು. ಈ ಸಮುದಾಯ-ಜನಾಂಗಗಳಲ್ಲಿ ಎದ್ದು ಕಾಣುವವರು ತಮಿಳರು ಎನ್ನುವುದು ಚಾರಿತ್ರಿಕ-ಸಾಂಸ್ಕೃತಿಕವಾಗಿ ಗಮನಾರ್ಹವಾದದ್ದು. ತಮಿಳಿನ ದೇಶಿ ಪ್ರಭೇದವಾದ "ವಟ್ಟೆಳುತು" ಲಿಪಿ ಬಳಕೆಗೆ ಬಂದ ಕಾಲ ಕ್ರಿ.ಶ.೪ನೆಯ ಶತಮಾನ; ಇದೇ ಕಾಲದಲ್ಲಿ ಕನ್ನಡವೂ ಪ್ರಬುದ್ಧ ಲಿಪಿಯಾಗಿ ಬೆಳೆದುನಿಂತು ಪ್ರಬುದ್ಧ ಭಾಷೆಯ ವಾಹನವಾಗಲು ಸನ್ನದ್ಧಗೊಳ್ಳತೊಡಗಿತ್ತು (ಪುಟ:೨೫). ವಿಪರ್ಯಾಸದ ಸಂಗತಿ ಎನೆಂದರೆ ಈ ದೇಶ ಭಾಷೆಗಳಲ್ಲವೂ ಮೊತ್ತಮೊದಲು ಅಕ್ಷರರೂಪಕ್ಕೆ ಇಳಿದದ್ದೆ ಸಂಸ್ಕೃತ ಭಾಷೆಯ ಮಾಧ್ಯಮದ ಮೂಲಕ ಎನ್ನುವ ವಾದಗಳಿಗೇನು ಕಮ್ಮಿಯಿಲ್ಲ.

"ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ......." ಎಂಬ ಉಲ್ಲೇಖವು ಕನ್ನಡ ಅನನ್ಯತೆಯ ರೂಪಕವಾಗಿಯೇ ಚಾರಿತ್ರಿಕ-ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡಿರುವುದು. ಒಂದು ನಾಡಿನ ಗಡಿಗಳನ್ನು ಗುರುತಿಸುವುದು ಕಾಡು, ಬೆಟ್ಟ, ನದಿ, ಸಾಗರಗಳೇ ಸಹಜವಾದ ಮೇರೆಗಳಾಗಿ ರೂಪಗೊಳ್ಳುವ ಕ್ರಿಯೆಯು ಇತಿಹಾಸದುದ್ದಕ್ಕೂ ಬೆಳೆದು ಬಂದಿರುವುದು ಸಹಜ. ಆದ್ದರಿಂದ, ಮಾರ್ಗಕಾರನು 'ಗಂಗಮಂಡಲ'ವೆಂಬ ಗಂಗರ ಆಡಳಿತ ಘಟಕವಾಗಿದ್ದ ತಲಕಾಡಿನ ಗಡಿಭಾಗದ ಮೇರೆಗಳನ್ನು ಹೆಸರಿಸದೆ ಕಾವೇರಿಯನ್ನು ಮೇರೆಮಾಡಿಕೊಂಡು ಕನ್ನಡ ಜನಪದವನ್ನು ಭಾವಿಸಿಕೊಂಡದ್ದು ಗಮನಾರ್ಹ.

ಮಾರ್ಗಕಾರನಿಗಿಂತ ಮುಂಚೆ 'ಕಾವೇರಿ' ನದಿ ಕುರಿತ ಉಲ್ಲೇಖ/ವಿವರಗಳ ಶೋಧ ನಡಸಿದರೆ ಅತ್ಯಲ್ಪ ವಿವರಗಳು ದೊರಕುವವು. ಕುತೂಹಲದ ವಿಷಯವೆನೆಂದರೆ, ಕನ್ನಡದ ಮೊದಲ ಅರಸು ಮನೆತನವೆನ್ನುವ ಹೆಗ್ಗಳಿಕೆಗೆ ಹೆಸರಾಗಿರುವ 'ಗಂಗರ' ಕಾಲದ ಯಾವುದೇ ಶಾಸನ/ಕಾವ್ಯಗಳಲ್ಲಿ ಕಾವೇರಿ ಕುರಿತ ವಿವರಗಳು ಲಭ್ಯವಿಲ್ಲ. ಆದರೆ, ಇವರ ನೆರೆಯಲ್ಲಿದ್ದ 'ಪುನ್ನಾಟ' ವೆಂಬ ಬುಡಕಟ್ಟು ರಾಜ ಮನೆತನದವರು ಕಾವೇರಿಯನ್ನು ದಾಖಲಿಸಿರುವುದು ವಿಶೇಷ. ೫-೬ ನೆ ಶತಮಾನದಲ್ಲಿ ಯಳಂದೂರು ತಾಲ್ಲೂಕಿನ ಮಾಂಬಳ್ಳಿಯಲ್ಲಿ ದೊರೆತ ತಾಮ್ರಪಟ ಶಾಸನವೊಂದರ ಉಲ್ಲೇಖ ಹೀಗಿದೆ "ಕಾವೇರೀಕಪಿನೀಶ್ರೀನದೀಭಿಲಂಕೃತಸ್ಯ" (ಪುಟ:೧೧೦). ಪುನ್ನಾಟ ದೊರೆಗಳಿಗೆ ಕಾವೇರಿ ದಕ್ಷಿಣ ಗಡಿಯಾಗಿರದೆ ಉತ್ತರ ಗಡಿಯಾಗಿರುವುದು ವಿಶೇಷ. ಬದಾಮಿ ಚಾಲುಕ್ಯರ ಕಾಲಾವಧಿಯ ಆರು ಶಾಸನಗಳಲ್ಲಿ ಕಾವೇರಿ (ಕವೇರ, ಕಮೇರ)ಯ ಉಲ್ಲೇಖಗಳು ದೊರಕುವವು. ಆದರೆ, ಈ ಯಾವುದೆ ಉಲ್ಲೇಖವು ಕಾವೇರಿಯನ್ನು ಕನ್ನಡದ ಅನನ್ಯತೆಯನ್ನಾಗಿ ಆನುಷಂಗಿಕವಾಗಿಯಾದರೂ ಉಲ್ಲೇಖಿಸದಿರುವುದು ಗಮನಾರ್ಹ. ಈ ಎಲ್ಲ ಉಲ್ಲೇಖಗಳು ರಾಜಕೀಯ/ ಯುದ್ಧ ಸಂಬಂಧಿ ವಿವರಗಳಿಗೆ ಸಂಬಂಧಿಸಿದವುಗಳಾಗಿವೆ. ಮಾರ್ಗಕಾರನ ನಂತರದ ಶಾಸನ/ ಸಾಹಿತ್ಯದಲ್ಲಿ ಕಾವೇರಿ ನದಿ ಕುರಿತ ಉಲ್ಲೇಖಗಳು ದೊರತದ್ದು ಪೊನ್ನನ ಶಾಂತಿನಾಥ ಪುರಾಣದಲ್ಲಿ "ಕವೇರ ಕನ್ನಿಕೆ" ಮತ್ತು "ಕಾವೆರಿ-ಸ್ರವಂತೀ-ಸಮುತ್ತರಣಾನಂತರಂ" (ಪುಟ:೧೦೮) ಮುಂತಾದವುಗಳಾಗಿವೆ.

ತಮಿಳರು ಕಾವೇರಿಯೊಂದಿಗೆ ಹೊಂದಿರುವ ಭಾವನಾತ್ಮಕ ಸಂಬಂಧವನ್ನು ಪುಷ್ಟೀಕರಿಸುವುದಕ್ಕೆ ಅಪಾರ ಪುರಾವೆಗಳು ಶಂಗಂ ತಮಿಳಿನಿಂದ ದೊರಕುವವು. ಉದಾ: ಕಾವಿರಿ/ಕಾವೇರಿಯನ್ನು ಕುರಿತು ಶಂಗಂ ಕಾಲದ ಎಪಿಕ್ ಮತ್ತು ಕಾವ್ಯಗಳಾದ ಶಿಲಪ್ಪದಿಗಾರಂ, ಮಣಿಮೇಗಲೈ, ಪುರನಾನೂರು, ಅಗನಾನೂರು ಮತ್ತು ಪತ್ತುಪಾಟ್ಟು ಮುಂತಾದವುಗಳು. "ಶಂಗಂ ಚೋಳರಲ್ಲಿ ಕರಿಕಾಲ ಮತ್ತು ಕಿಳ್ಳ ವಿಶೇಷವಾಗಿ ಕಾವಿರಿಯೊಡನೆ ಗುರುತಿಕೊಂಡಿದ್ದರೆನ್ನಬಹುದು. ಶಿಷ್ಟಜನಪರಿಪಾಲಕನಾದ ಚೋಳನ 'ಕನ್ಯೆ' ಯೆಂದೇ ಕಾವಿರಿಯನ್ನು ಮಣಿಮೇಗಲೈ ಕಾವ್ಯವು ಗುರುತಿಸಿದರೆ, ಇವನನ್ನು 'ಕಾವಿರಿನಾಡನ್' ಎಂದು ಶಿಲಪ್ಪದಿಗಾರಂ ಸಂಬೋಧಿಸುವುದು" (ಪುಟ:೧೦೦). ಆದರೆ, ಕಾವೇರಿ (ಕಾವಿರಿ)ಯನ್ನು ಕುರಿತು ಸಾಕಷ್ಟು ಉಲ್ಲೇಖ ಮತ್ತು ೧೩೧ಳ ಸಾಲುಗಳ ಎಂಟು ಕವನಗಳು ಲಭ್ಯವಿದ್ದಾಗಲೂ ಈ ನದಿಯ ಉಗಮ ಸ್ಥಾನವನ್ನು ಕುರಿತು ಯಾವುದೇ ಉಲ್ಲೇಖಗಳು ಈ ಶಂಗಂ ಕಾಲದ ಕಾವ್ಯಗಳಲ್ಲಿ ಲಭ್ಯವಿಲ್ಲ ಎನ್ನುವುದು ಗಮನಾರ್ಹವಾದ ಸಂಗತಿ. ಇದಕ್ಕೆ ಸಾಂಸ್ಕೃತಿಕ-ರಾಜಕೀಯ ಪರಿಣಾಮಗಳು ಬಲವಾಗಿರುವುದೆ ಕಾರಣವಿರಬಹದು.

"ವಡವೇಂಗಡ ತೆನ್‌ಕುಮರಿ ಆಯಿಟ್ಟೈ ತಮಿಳಕೂರಂ ನಲಕತ್ತು ಅಂದರೆ, ಉತ್ತರದ ವೇಂಕಟ ದಕ್ಷಿಣದ ಕುಮಾರಿವರೆಗೆ ವಿಸ್ತರಿಸಿದ್ದ ತಮಿಳ ಭಾಷಿಕರ ಪವಿತ್ರ ಪ್ರದೇಶ" ಗತ ಕಾಲದ ಹಲವು ದಾಖಲೆಗಳನ್ನು ಮರು ಅಧ್ಯಯನ ಮಾಡುವುದರ ಮೂಲಕ ನಾಡು- ನುಡಿಯ ಮೇರೆಗಳನ್ನು ಗುರುತಿಸುವುದರ ಪ್ರಜ್ಞಾ ನೆಲೆಗಳನ್ನು ಆನುಷಂಗಿಕವಲ್ಲದೆ ಚಾರಿತ್ರಿಕ ಮುನ್ನೆಲೆಗೆ ತರುವ ಪ್ರಯತ್ನದ ಶೋಧಗಳನ್ನೆಬಹುದು. ಇವುಗಳು ಚಾರಿತ್ರಿಕ ಪ್ರಕ್ರಿಯೆಯ ಮೊತ್ತವನ್ನು ಪ್ರತಿನಿಧಿಸುವ ಗತಕಾಲದ ಚಾರಿತ್ರಿಕ-ಸಾಂಸ್ಕೃತಿಕ ದಾಖಲೆ/ ಸಾಕ್ಷ್ಯಾಧಾರಗಳನ್ನು ಅನುಸರಿಸಿಕೊಂಡು ವರ್ತಮಾನದ ಸಾಂಸ್ಕೃತಿಕ-ರಾಜಕೀಯ ಪ್ರಜ್ಞೆ ಅಥವಾ ಅನನ್ಯತೆಯ ನೆಲೆಗಳು ರೂಪಗೊಳ್ಳುವವು. ೨೦ನೇ ಶತಮಾನದವರೆಗೆ ಪದಬಂಧದಲ್ಲೆ ಗಡಿನಕಾಶೆಯನ್ನು ಗುರುತಿಸಲು ಪ್ರಯತ್ನಪಟ್ಟವರು, ವೈಜ್ಞಾನಿಕ ಅನ್ವೇಷಣೆಯ ಫಲವಾಗಿ ಜನಾಂಗ, ಪ್ರದೇಶ ಮತ್ತು ಭಾಷೆಯಂತಹ ಚಾರಿತ್ರಿಕ ಸ್ಮೃತಿಗಳಿಗೆ ಗಡಿ-ನಕಾಶೆಯನ್ನು ರೂಪಿಸಿಕೊಳ್ಳುವ ಪ್ರಯತ್ನಗಳು ವಾರಸುದಾರಿಕೆಯ ಪ್ರತಿಪಾದನೆಗಳಾಗಿ ನಡೆದಿರುವವು.

ತಮಿಳರು ಸಿದ್ಧಗೊಳಿಸಿದ ಈ ಕಾಲದ 'ಕುಮರಿಕ್ಕಂಡಂ' ನಕಾಶೆಯಲ್ಲಿ 'ಕುಮರಿ', 'ಪಖ್ರಳಿ', 'ಕಣ್ಣಿ' 'ಪೇರಾಳಿ' ನದಿಗಳು, 'ತೆನ್‌ಕಡಲ್' (ದಕ್ಷಿಣ ಸಾಗರ) 'ತೊಂಡಮುದಲ್ ಕಡಲ್' (ಆದಿ ಸಾಗರ) 'ತೋಡ್ ಕಡಲ್' (ಅಕ್ಕ ಪಕ್ಕದ ಸಾಗರಗಳು) ಮಹತ್ವದ ಸ್ಥಾನಪಡೆದುಕೊಂಡಿರುವವು. ತಮಿಳರು ತಮ್ಮ ಪರಂಪರೆಯ ಚಹರೆಗಳನ್ನು ಗಟ್ಟಿಗೊಳಿಸುವ ಮತ್ತು ಪುನರ್ ಶೋಧಿಸಿಕೊಳ್ಳಲು ಸಾಗರದಾಳದ ಅನ್ವೇಷಣೆ, ಕುಮರಿಕ್ಕಂಡಂ ಅವಶೇಷಗಳು ಮತ್ತು ಕಡಲ್ಕೋಳ ಐತಿಹ್ಯ ಹಾಗೂ ಕ್ಷೇತ್ರ ಚರಿತ್ರೆಗಳಂತಹ ಐತಿಹಾಸಿಕ ಕುರುಹುಗಳನ್ನು ರೇಖಾನಕ್ಷೆಗಳನ್ನು ಗುರುತಿಸುವುದಕ್ಕೆ ಪ್ರಮುಖ ಪರಿಕರಗಳಾಗಿರುವವು.ಈ ಮೇರೆಗಳನ್ನು ಶ್ರೀಲಂಕದ ಕೊರ್ಕೈ (ಕಪಡಾಪುರ) ವರೆಗೆ ಗುರುತಿಸುವ ಹಲವಾರು ಪುರಾವೆ/ ಸಾಕ್ಷ್ಯಾಧಾರಗಳು ಪ್ರಾಚೀನ ಕಾವ್ಯಗಳಾದ ಮಣಿಮೇಗಲೈ, ನಟ್ರಣೈ, ಅಹನಾನೂರು ಮುಂತಾದವುಗಳಿಂದ ಲಭ್ಯ. ಇಂತಹದೇ ಸಾಕ್ಷ್ಯಾಧಾರಗಳನ್ನು ಬಳಸಿಕೊಂಡು ಪಾಶ್ಚಿಮಾತ್ಯ ವಿದ್ವಾಂಸರು ರೂಪಿಸಿದ "ಲೆಮೂರಿನ-ಗೊಂಡ್ವಾನ" ಭೂನಕ್ಷೆಯೊಡನೆ ಪ್ರತಿಸ್ಪರ್ಧಿಸತೊಡಗಿರುವುದಕ್ಕೂ ಸಾಧ್ಯ.

ಶಂಗಂ ಸಾಹಿತ್ಯದಲ್ಲಿ ತಮಿಳೇತರರನ್ನು "ವಡುಗ" ಎಂಬ ಪದದಿಂದ ಗುರುತಿಸಿರುವುದನ್ನು ಗಮನಿಸಬಹುದು. ಈ "ವಡುಗ" ಪ್ರದೇಶವು ಒಂದು ಕಡೆ ವೆಂಟಾದ್ರಿ ಮತ್ತೊಂದು ಕಡೆ ನೀಲಗಿರಿಯ ಉತ್ತರಕ್ಕೆ ಹಬ್ಬಿತ್ತು. ಇಲ್ಲಿ ತಮಿಳ ಮತ್ತು ತಮಿಳೇತರ ಅರಸರ ನಡುವಿನ ಘರ್ಷಣೆ ಮತ್ತು ಸೌಹಾರ್ದಕ್ಕೆ ಸಂಬಂಧಿಸಿದ ವಿವರಗಳನ್ನು "ಪತ್ತುಪಾಟ್ಟು" ಕಾವ್ಯದ ಕವಿ ಕಬೀಲ್ ಆರ್ಯ ಮತ್ತು "ಪುರನಾನೂರಿ" ನ ಕವಿ ಮುರಂಜಿಯೊಲ್ ಮೂಡಿನಾಗನಾರ್ ಅವರು ಉಲ್ಲೇಖಿಸಿರುವರು. ಆದರೆ, ಇವರ ಉತ್ತರದ ಗಡಿಯಾಚೆಗಿನ ತಮಿಳೇತರರನ್ನು "ಆರ್ಯ"ರೆಂದು ಇನ್ನೂ ಕೆಲವು ಸಲ ಮೌರ್ಯ ಮತ್ತು ಶಾತವಾಹನ- ಇಕ್ಷ್ವಾಕುಗಳೊಡನೆ ಹೊಂದಾಣಿಕೆ ಮಾಡಿಕೊಂಡಿದ್ದರು. ಇದಕ್ಕೆ ಕಾರಣ ಪ್ರಾಕೃತ ಭಾಷೆ ಮಾತಾಡುವುದೆ ಕಾರಣ ಆಗಿರಬಹುದು. ಈ ಕುರಿತು ಹೆಚ್ಚಿನ ವಿವರಗಳು ಲಭ್ಯವಾಗದೆ ಇರುವುದಕ್ಕೆ ತಮಿಳೇತರರು (ಕನ್ನಡ, ಕೊಂಕಣಿ, ತುಳು, ಕೊಡಗು ಮುಂತಾದವು ಲಿಪಿ ಮಾಧ್ಯಮವನ್ನು ರೂಢಿಸಿಕೊಂಡಿರಲ್ಲ) ಇವರಾರು ತಮಿಳಿನ ಲಿಪಿಯನ್ನು ಅಂಗೀಕರಿಸಿರಲಿಲ್ಲ.

ಶಂಗಂ ಸಾಹಿತ್ಯದ ಉಲ್ಲೇಖಗಳನ್ನು ಬಲಪಡಿಸಲು ಯಾವುದೆ ಶಾಸನಗಳಾಧಾರ ಲಭ್ಯವಿಲ್ಲ. ಸಮಕಾಲೀನ ಶಾಸನಗಳಲ್ಲಿ ಕನ್ನಡ ಜನಾಂಗಗಳನ್ನು ಕುರಿತು ಉಲ್ಲೇಖಗಳಿರುವವು. ಉದಾ: ಅಗನಾನೂರಿನಲ್ಲಿ "ಕುಡನಾಡಪತಿ"ಯನ್ನು ಕೆಲವು ಬಾರಿ ಹೆಸರಿಸಲಾಗಿದೆ. 'ಕುಡ' ಅಂದರೆ ಪಶ್ಚಿಮ 'ನಾಡು' ಅಂದರೆ ದೇಶ, ಪ್ರದೇಶ, ಆಡಳಿತ ಘಟಕ, ಈ ಅಧಿಪತಿಯನ್ನು 'ಎರುಮೈ ಊರವನೆಂದೂ' ಗುರುತಿಸಲಾಗಿದೆ (ಪುಟ:೧೯೯). ಶಂಗಂ ಕವಿಗಳು ಈ ತಮಿಳೇತರರನ್ನು ಗುರುತಿಸಲು ಎರಡು ವಿಶಿಷ್ಟ ಪದಗಳನ್ನು ಬಳಸಿರುವರು. ಅವುಗಳೆಂದರೆ, 'ವಡುಗರು' ಮತ್ತು 'ವಡಮೊಳಿಯಾಳರ್' ಇವುಗಳ ಪ್ರಸ್ತಾಪವು 'ಪುರನಾನೂರು, ಕುರುಂತೊಗ್ಯೆ, ಮತ್ತು ನಟ್ರಿಣೈ'ಗಳಲ್ಲಿ ಕನಿಷ್ಠ ಒಂದೊಂದು ಬಾರಿ ಹಾಗೂ 'ಅಹನಾನೂರಿ'ನಲ್ಲಿ ಸುಮಾರು ಏಳು ಬಾರಿ ತಮಿಳೇತರಾದ ವಡುಗರನ್ನು ಕುರಿತ ಪ್ರಸ್ತಾಪವಿರುವುದು. ಅಂದರೆ, ಈ ಉಲ್ಲೇಖಗಳ ಪ್ರಕಾರ ವಡುಗರು ತಮಿಳಗಂ ಸಮೃದ್ಧ ಪ್ರದೇಶದಿಂದ ದೂರ, 'ಬಹು-ಶೂಲ'ಗಳ ವೀರನಾದ ಚೇರಕಟ್ಟೀಯ ರಾಜ್ಯದ ಗಡಿಯಾಚೆಗಿದ್ದರು. ಇವರು ತುಳಸೀ ಪುಷ್ಪ ಮಾಲೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರೆಂದೂ ತಮಿಳರಿಗೆ ಅರ್ಥವಾಗದ ಬೇರೊಂದು ಭಾಷೆಯನ್ನಾಡುತ್ತಿದ್ದರೆಂದೂ ಕವಿ ಮಾಮೂಲಣಾರ್ ಹೇಳುವನು (ಪುಟ:೧೩೩). ಈ ಉಲ್ಲೇಖದ ತಾತ್ಪರ್ಯವೆನೆಂದರೆ ನೀಲಗಿರಿಯಾಚೆಯ ಇಂದಿನ ಕನ್ನಡ ಪ್ರದೇಶವನ್ನು ಸೂಚಿಸುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ತಮಿಳರು ಕಾವೇರಿಯೊಂದಿಗೆ ಹೊಂದಿರುವ ಭಾವನಾತ್ಮಕ ಸಂಬಂಧವನ್ನು ಪುಷ್ಟಿಕರಿಸುವುದಕ್ಕೆ ಅಪಾರ ಪುರಾವೆಗಳು ಶಂಗಂ ತಮಿಳಿನಿಂದ ದೊರಕುವವು. ಉದಾ: ಕಾವಿರಿ/ಕಾವೇರಿಯನ್ನು ಕುರಿತು ಶಂಗಂ ಕಾಲದ ಎಪಿಕ್ ಮತ್ತು ಕಾವ್ಯಗಳಾದ ಶಿಲಪ್ಪದಿಗಾರಂ, ಮಣಿಮೇಗಲೈ, ಪುರನಾನೂರು, ಅಗನಾನೂರು ಮತ್ತು ಪತ್ತುಪಾಟ್ಟು ಮುಂತಾದವುಗಳು. "ಶಂಗಂ ಚೋಳರಲ್ಲಿ ಕರಿಕಾಲ ಮತ್ತು ಕಿಳ್ಳ ವಿಶೇಷವಾಗಿ ಕಾವಿರಿಯೊಡನೆ ಗುರುತಿಕೊಂಡಿದ್ದರೆನ್ನ ಬಹುದು. ಶಿಷ್ಟಜನಪರಿಪಾಲಕನಾದ ಚೋಳನ 'ಕನ್ಯೆ' ಯೆಂದೇ ಕಾವಿರಿಯನ್ನು ಮಣಿಮೇಗಲೈ ಕಾವ್ಯವು ಗುರುತಿಸಿದರೆ, ಇವನನ್ನು 'ಕಾವಿರಿನಾಡನ್' ಎಂದು ಶಿಲಪ್ಪದಿಗಾರಂ ಸಂಬೋಧಿಸುವುದು"

ಈ ವಡುಗರು ಮತ್ತು ಎರುಮೈನವರು ತಮ್ಮ ಸ್ಥಳೀಯ/ ಆಂತರಿಕ ವ್ಯವಹಾರಕ್ಕೆ ತಮ್ಮದೆ ಭಾಷೆಯಲ್ಲಿ ಅಭಿವ್ಯಕ್ತಿಸುತ್ತಿದ್ದರು. ಆದರೆ ಅವರ ರಾಜಕೀಯ ಸಾಧನೆಗಳನ್ನು ಶಾಶ್ವತಗೊಳಿಸಲು ತಮಿಳು ಬ್ರಾಹ್ಮಿ ಲಿಪಿಯನ್ನು ಬಳಸುತ್ತಿದ್ದರು ಹಾಗೂ ತಮಿಳನ್ನು ಸಂಪರ್ಕ ಭಾಷೆಯನ್ನಾಗಿ ರೂಢಿಸಿಕೊಂಡಿದ್ದರು ಎನ್ನುವುದು ಗಮನಾರ್ಹ. ಮೈಸಿ, ಪುನ್ನಾಟ, ಕೊಂಗ ಎಂಬ ಪ್ರಾದೇಶಿಕ ಹೆಸರುಗಳ ಮೂಲಕವೇ ಗುರುತಿಸಲ್ಪಟ್ಟಿರುವ ಮಾರ್ಗಕಾರನಿಗಿಂತ ಮೊದಲ ಅರಸು ಮನೆತನಗಳು ಶಂಗಂ ಕಾಲದ ಮತ್ತು ಶಂಗಂ ನಂತರದ ತಮಿಳಿಗರ ಭಾಷಾ ಪ್ರದೇಶವಾದ ಉತ್ತರದಲ್ಲಿ ಆಳುತ್ತಿದ್ದರು. ಇವರು ಕೊಂಕಣಿ, ಕೊಡಗು, ತುಳು ಮತ್ತು ಕನ್ನಡ ಭಾಷೆಯನ್ನು ಹಂಚಿಕೊಂಡಿದ್ದವು. ಉದಾ: ಸಿತ್ತನ್ನವಾಸಲ್ ತಮಿಳು ಬ್ರಾಹ್ಮಿ ಶಾಸನ ಕ್ರಿ.ಪೂ.ಕಾಲದ ಕನ್ನಡಿಗರಿಗೆ ತಮ್ಮದೆ ಆದ ಲಿಪಿ ಇರದೆ, ಅವರಲ್ಲಿ ಕೆಲವು ತುಂಗಭದ್ರಾ ಪ್ರದೇಶದಲ್ಲಿ ಅಶೋಕ ಬ್ರಾಹ್ಮಿ ಲಿಪಿಯನ್ನೂ ಪ್ರಾಕೃತ ಭಾಷೆಯನ್ನು ವ್ಯವಹಾರಕ್ಕೆ ಅಳವಡಿಸಿಕೊಂಡ ಹಾಗೆ, ಕಾವೇರಿಯಾಚೆಯ ಪ್ರದೇಶದಲ್ಲಿ ತಮಿಳು ಬ್ರಾಹ್ಮಿ ಲಿಪಿಯನ್ನು ಹಾಗೂ ತಮಿಳ ಭಾಷೆಯನ್ನು ಬಳಸಿಕೊಂಡ ನಿದರ್ಶನಗಳು ದೊರಕುವವು (ಪುಟ:೧೪೧). ಇದರ ಪರಿಣಾಮವಾಗಿ, ಎರುಮೈನಾಡು, ಕೊಡಗಿನವರು, ಗೌಡ ಕನ್ನಡ, ಜೇನು ಕನ್ನಡದಂತಹ ಹಲವು ಕನ್ನಡ ಪ್ರಭೇದಗಳು ಸೃಷ್ಟಿಗೊಂಡಿರುವುಕ್ಕೂ ಸಾಧ್ಯ. ಈ ಹಿನ್ನಲೆಯಿಂದಲೆ ಮಾರ್ಗಕಾರನು ಕಾವೇರಿಯನ್ನು ಕೇವಲ ಒಂದು ನದಿಯಾಗಿ ಮಾತ್ರವೇ ಗ್ರಹಿಸದೆ ಒಂದು ನದಿ ಸಂಕೇತಿಸುವ ವಿಶಾಲ ಪ್ರದೇಶವನ್ನು (ದಕ್ಷಿಣ ಪ್ರದೇಶ) ರೂಪಕವಾಗಿ ಬಳಸಿಕೊಂಡು 'ಕನ್ನಡದೊಳ್ ಭಾವಿಸಿದ ಜನಪದ' ವೆಂಬ ಅನನ್ಯತೆಯ ಕುರುಹುವಾಗಿಸಿರುವುನು.

ಕನ್ನಡದ ಪ್ರಾಚೀನತೆ/ ಪರಂಪರೆಯ ಆರಂಭವು 'ಇಸಿಲ್' ನಂತಹ ಸಾಕ್ಷ್ಯಾಧಾರಗಳನ್ನು ಆಧರಿಸಿಕೊಂಡು ತೀರ್ಮಾನಿಸಿದ ನಿದರ್ಶನಗಳು ನಮಗೆ ಇತಿಹಾಸದುದ್ದಕ್ಕೂ ಸಿಗುತ್ತವೆ. ಆದರೆ, ಆರಂಭ ಕಾಲದ ತಮಿಳ ಹಾಗೂ ಶಂಗಂ (ಕ್ರಿ.ಪೂ.೧ನೇ ಶತಮಾನ) ಕಾಲದ ತಮಿಳಿನ ಮೇಲೆ ಕನ್ನಡದ ಪ್ರಭಾವನ್ನು ಕುರಿತ ಹಲವಾರು ಉಲ್ಲೇಖಗಳು ಲಭ್ಯ. ಉದಾ: ಕನ್ನಡದ ಪ್ರಭಾವವು ತಮಿಳು ಮೇಲಾಗಿರುವುದಕ್ಕೆ ಡಾ.ಐರಾವತಂ ಮಾಹಾದೇವನ್ ಅವರ ಅಧ್ಯಯನಗಳು ಕೆಲವು ಸಾಕ್ಷ್ಯಾಧಾರಗಳನ್ನು

ಒದಗಿಸುವವು. ಉದಾ: ಕ್ರಿ.ಪೂ ೧ ರಿಂದ ಕ್ರಿ.ಶ.೪ ನೇಯ ಶತಮಾನದ ಕಾಲಾಧಿಯ್ಲು ಶಾಸನಗಳಾದ 'ತಿರುಪ್ಪರಂಕುನ್ರಮ್', 'ಅದಕಲ್-ಅ', ಮತ್ತು 'ನೆಡನೂರ್‌ಪತ್ತಿ'ಗಳು ಮುಖ್ಯ. ಈ ಶಾಸನಗಳ ಪ್ರಕಾರ ಕನ್ನಡದ ಪದಕೋಶ, ವ್ಯಾಕರಣ, ಮುಂತಾದ ವ್ಯಾಕರಣಾತ್ಮಕ ಪ್ರಕ್ರಿಯೆಗಳು ಸಮರ್ಥವಾಗಿ ರೂಪಗೊಂಡಿದ್ದವು ಮತ್ತು ಅವುಗಳು ಜೈನ ವಲಸೆಗಾರರ ಮೂಲಕ ಸಮಕಾಲೀನ ತಮಿಳು ಬ್ರಾಹ್ಮೀಯ ಮೇಲೆ ಹೇಗೆ ಪರಿಣಾಮ ಬೀರಿದ್ದವು ಎನ್ನುವ ವಿವರಗಳನ್ನು ಪ್ರಕಟಿಸುವವು. ಇದನ್ನು 'ಪುನ್ನಾಟ'ರು ಬರೆಸಿದ ಶಾಸನಗಳಿಂದ ಸ್ಪಷ್ಟಪಡಿಸಬಹುದು.

ಅಂದರೆ, ಈ ಕಾಲಕ್ಕಾಗಲೇ ಕನ್ನಡ ಪ್ರಬುದ್ಧಾವಸ್ಥೆಯನ್ನು ತಲುಪಿ ಶತಮಾನಗಳೆ ಗತಿಸಿದ್ದವು ಅನ್ನುವುದು ಸ್ಪಷ್ಟ. ತೊಲ್ಕಾಪ್ಪಿಯನಾರ್ ರಚಿಸಿದ (ಸೆನ್ತತಮಿಳ) ಭಾಷಾನಕ್ಷೆಯ ಹನ್ನೆರಡು ಕೋಟ್ಟಂ- ತಮಿಳ - ನಾಟುಗಳಲ್ಲಿ ಪುಣಣಾಟು (ಪುನ್ನಾಟ) ಒಂದಾಗಿತ್ತು ಎನ್ನುವುದು ಗಮನಾರ್ಹ. ಆದರೆ, ಕಾಲಕ್ರಮೇಣ ಕನ್ನಡದ ಹಲವು ರೂಪಾಂತರಗಳನ್ನು ಗಮನಿಸಿದಾಗ, ಕದಂಬ, ಪುನ್ನಾಟ ಅರಸರು ಬ್ರಾಹ್ಮೀಲಿಪಿ ಮತ್ತು ಪ್ರಾಕೃತ ಭಾಷೆಯನ್ನು ಬಳಸುತ್ತಿದ್ದು ಹಾಗೂ ಆ ಮಾಧ್ಯಮದಲ್ಲೆ ಶಾಸನಗಳನ್ನು ಬರೆಸಿರುವುದು ವಾಸ್ತವ. ಆದರೂ ಪ್ರಾಕೃತದ ಪ್ರಭಾವ ಕುಗ್ಗಿ ಅದರ ಸ್ಥಾನವನ್ನು ಸಂಸ್ಕೃತ ಪಡೆದುಕೊಳ್ಳುವ ಸರಿಸುಮಾರು ಕಾಲದಲ್ಲಿ ಅಂದರೆ, ಕ್ರಿ.ಶ. ೪ನೆಯ ಶತಮಾನದಾರಂಭದಲ್ಲಿ ಕನ್ನಡದ ಲಿಪಿಯು ಬ್ರಾಹ್ಮೀ ಸ್ಥಾನವನ್ನು ಪಡೆದುಕೊಳ್ಳಲು ಮುಂದಾಗಿದ್ದು ಗಮನಾರ್ಹವಾದರೂ ಇದೇ ಸಂದರ್ಭದಲ್ಲಿ 'ಸಂಸ್ಕೃತೀಕರಣ'ಗೊಂಡಿರುವುದನ್ನು ಅಲ್ಲಗಳೆಯುವಂತಿಲ್ಲ. ಈ ಪ್ರಕ್ರಿಯೆಯ ಪರಿಣಾಮವಾಗಿ ಕನ್ನಡವು ವಿಭಿನ್ನ ನೆಲೆಗಳಲ್ಲಿ ರೂಪಗೊಂಡಿದ್ದನ್ನು ಗಮನಿಸಬಹುದು. ಉದಾ: ಕನ್ನಡ ಭಾಷೆಯ ವಾಹನವಾಗಿ ಕನ್ನಡ ಲಿಪಿ ವಿಕಾಸಗೊಂಡಿರುವುದು, ಸಂಸ್ಕೃತ ಭಾಷೆಯನ್ನು ಕನ್ನಡ ಲಿಪಿ ಸಮರ್ಥವಾಗಿ ನಿರ್ವಹಿಸಿರುವುದು ಮತ್ತು ಸಂಸ್ಕೃತ ಪಾಠಗಳಲ್ಲಿ ಕನ್ನಡ ವಾಕ್ಯಗಳನ್ನು ಕೂಡಿಸಿಕೊಂಡು ಸಂಸ್ಕೃತ-ಕನ್ನಡ ಮಿಶ್ರ ಪಾಠಗಳನ್ನು ಸೃಷ್ಟಿಸಿರುವುದು. ವ್ಯತಿರಿಕ್ತವಾಗಿ ಹೇಳುವುದಾದರೆ, ಆರಂಭ ಕಾಲದ ಕರ್ನಾಟಕದ ಇತಿಹಾಸದಲ್ಲಿ ಹೆಜ್ಜೆಯ ಸ್ಪಷ್ಟ ಗುರುತನ್ನು ಮೂಡಿಸಿದವರಲ್ಲಿ ಮೊದಲಿಗರಾದ ಪುನ್ನಾಟರು ಮತ್ತು ಕದಂಬರು ಮೂಲತಃ ಶೂದ್ರರಾಗಿದ್ದರೆಂಬುದನ್ನು ತಮಿಳು ಶಂಗಂ ಸಾಹಿತ್ಯದಿಂದ ಅರಿತುಕೊಳ್ಳಬಹುದು.

ಚರಿತ್ರೆಯನ್ನು ಏಕಮುಖವಾಗಿ ನೋಡುವ ಪರಿಪಾಠವು ಇತಿಹಾಸದುದ್ದಕ್ಕೂ ಬೆಳೆದು ಬಂದಿದ್ದರ ಫಲವಾಗಿ, ಎಷ್ಟೋ ಚಾರಿತ್ರಿಕ ಸಾಕ್ಷ್ಯಾಧಾರಗಳು/ ನಿಲುವು-ನಿರ್ಧಾರಗಳು/ ಘಟನೆಗಳು/ ಸಾಂಸ್ಕೃತಿಕ ಹಿರಿಮೆಗಳು ಯಾವುದೇ ಒಂದು ಜನಾಂಗ- ಸಮೂಹದ ಸ್ವತ್ತಾಗಿ ಆ ಸಮೂಹಗಳಿಗೆ ಸಾಂಸ್ಕೃತಿಕ ಯಜಮಾನಿಕೆ/ ಪ್ರಾಬಲ್ಯವನ್ನು ದಕ್ಕಿಸಿಕೊಟ್ಟಿರುವುದು ನಿಜವಾದರೂ ಅದು ಅಪ್ಪಟ ಸುಳ್ಳು ಎನ್ನುವ ಆಲೋಚನ ಕ್ರಮಗಳು ಪ್ರೊ. ಷ. ಶೆಟ್ಟರ್ ಅವರ ಈ ಸಂಶೋಧನೆಯಿಂದ ನಿರೂಪಿಸಲ್ಪಟ್ಟಿರುವವು. ಅಂದರೆ, ಒಂದು ಚರಿತ್ರೆಯ ನಿರ್ಮಾಣವು ವೈವಿಧ್ಯ ನೆಲೆಗಳಿಂದ ರೂಪುಗೊಂಡಿರುವುದು ಮತ್ತು ಹಲವು ಸಾಂಸ್ಕೃತಿಕ ಸಂದರ್ಭಗಳ ಅಂತರ್ ಚಲನಶೀಲತೆ ಇದಕ್ಕೆ ಸಾಕ್ಷಿ ಎನ್ನುವುದು ಸ್ಪಷ್ಟ. ಚರಿತ್ರೆ ಎನ್ನುವಂತಹದು ನಿರಂತರ ರೂಪಗೊಳ್ಳುವ ಜೀವಂತ ಪ್ರಕ್ರಿಯೆ ಇದರ ವೈಶಿಷ್ಟ್ಯ. □

ಸಂತ ಮತ್ತು ಗಡ್ಡ

ಸಂತನೊಬ್ಬ ತನ್ನ ಕೈಗಳಿಂದ
ಗಡ್ಡ ನೀವಿ ನೀವಿ
ಉರಿವ ಸೂರ್ಯನ ಕಣ್ಣಿಗೆ
ತುಂಬಿಕೊಳ್ಳುತ್ತಾನೆ

ಭಕ್ತರಿಗೆ, ಭಂಟರಿಗೆ ಭಯ ಭೀತಿ
ಉರಿವ ದೃಷ್ಟಿ ಯಾರ ಮೇಲೋ
ಸಂತನ ಗಡ್ಡ ಮೀಸೆಗಳ ಮೇಲೆ
ಹೇನುಗಳು ಮಾತ್ರ
ನಿರ್ಭೀತಿಯಲಿ ಸಂಸಾರ ನಡೆಸುತ್ತಿವೆ

ದಿನ ದಿನ ಬೆವರು
ಗಡ್ಡಕ್ಕೆ ಮಾಲೆಗಟ್ಟುತ್ತಾ
ಮರಿಗಳು ಪುಟಿಯುತ್ತಿವೆ
ಗಡ್ಡವ ದಿಕ್ಕರಿಸಿ.

○ ಆಲೂರು ದೊಡ್ಡನಿಂಗಪ್ಪ

ಆಹಾರದ ಹಲ್ಲೆ

ಒಂದು ಸಮೀಕ್ಷೆಯ ಪ್ರಕಾರ ಕಳೆದ ೨೦ ವರ್ಷಗಳಲ್ಲಿ ಕರ್ನಾಟಕದಲ್ಲಿ ಬಾರು ಮತ್ತು ಮಾಂಸಾಹಾರದ ಹೋಟೆಲುಗಳ ಸಂಖ್ಯೆ ಹೆಚ್ಚಾಗಿದೆ. ಅವು ಕಿರುಪಟ್ಟಣಗಳಲ್ಲೂ ಪಟ್ಟಣಕ್ಕೆ ಸಮೀಪವಿರುವ, ಹೆದ್ದಾರಿ ಪಕ್ಕದ ದೊಡ್ಡ ಗ್ರಾಮಗಳಲ್ಲೂ ಆರಂಭವಾಗಿವೆ. ಮಾಂಸಾಹಾರಿಗಳಲ್ಲಿ ಕೆಲವರು ಆರೋಗ್ಯದ ಕಾರಣಕ್ಕೊ ಸಾಮಾಜಿಕ ಮನ್ನಣೆ ಪಡೆಯುವುದಕ್ಕೊ ಸಸ್ಯಾಹಾರಿಗಳಾಗಿ ಬದಲಾಗುವುದೂ ನಡೆದಿದೆ. ತಿನ್ನುವ ಜಾತಿಗಳೂ ತಿನ್ನದವರ ಎದುರು ತಮ್ಮನ್ನು ಕೀಳಾಗಿಸಿಕೊಂಡು, ಸಲ್ಲದ ಮುಜುಗರವನ್ನೊ ನಮಗೆ ತಿನ್ನುವ ಭಾಗ್ಯವಿದೆ ಎಂದು ಸಲ್ಲದ ಹೆಮ್ಮೆಯನ್ನೊ ಪಡೆದುಕೊಂಡಿವೆ. ಆದರೆ ಇದರಲ್ಲಿ ಕುತೂಹಲಕರ ಬೆಳವಣಿಗೆಯೆಂದರೆ, ಸಸ್ಯಹಾರಿಗಳು, ತಮ್ಮ ಆಹಾರ ಪದ್ಧತಿಯಲ್ಲಿ ಮಾಂಸಾಹಾರದ ನುಡಿಗಟ್ಟನ್ನು ಜೋಡಿಸಿಕೊಳ್ಳುತ್ತ, ಸುಪ್ತ ಆಕರ್ಷಣೆ ಪ್ರಕಟಿಸುತ್ತಿರುವುದು.

ಒಮ್ಮೆ ನಾನೂ ನನ್ನ ಕಿರಿಯಮಿತ್ರ ರಂಗನಾಥ್ ಕಂಟನಕುಂಟೆಯವರೂ ಬೆಂಗಳೂರಿನ ಹೋಟೆಲೊಂದರಲ್ಲಿ ಊಟಕ್ಕೆ ಆರ್ಡರ್ ಕೊಟ್ಟು, ಅದು ಬರುವ ತನಕ ನಮ್ಮ ದೇಶದಲ್ಲಿ ಕ್ರಾಂತಿ ನಡೆಯುವುದು ಎಷ್ಟು ಕಷ್ಟ ಎಂಬ ಘನಗಂಭೀರ ವಿಷಯದ ಬಗ್ಗೆ ಅತಿ ಗೊಂದಲಮಯವಾಗಿ ಗೊಣಗುತ್ತ ಕುಳಿತಿದ್ದೆವು. ಅದು ನಾನ್‌ವೆಜ್ ಊಟದ ಹೋಟೆಲು. ಅಷ್ಟರಲ್ಲಿ ೩೫-೪೦ರ ಪ್ರಾಯದ ಒಬ್ಬರು ಹೋಟೆಲನ್ನು ಪ್ರವೇಶಿಸಿದರು. ಮಾಂಸಾಹಾರ ಮಾಡದ ಉಚ್ಚಜಾತಿಯ ಹಿನ್ನೆಲೆಯವರಿರಬೇಕು. ಆತ ದೈವಭಕ್ತ ಕೂಡ ಇರಬೇಕು. ಹಣೆಯಲ್ಲಿ ಕುಂಕುಮದ ಕೆಂಪು ಬೆವರು ಅಳಿಸಿಹೋಗಿದ್ದರೂ ಮಸುಕಾಗಿ ಕಾಣುತ್ತಿತ್ತು. ಕೈಲ್ಲಿದ್ದ ಆಫೀಸು ಬ್ಯಾಗನ್ನೂ ಜೇಬಲ್ಲಿದ್ದ ಹಲವಾರು ಪೆನ್ನುಗಳನ್ನೂ ಕಂಡರೆ, ಯಾವುದಾದರೂ ಕಛೇರಿಯಲ್ಲಿ ಗುಮಾಸ್ತರ ಕೆಲಸ ಮಾಡುತ್ತಿರಬಹುದು. ಆತ ಅತ್ತಿತ್ತ ನೋಡಿ ಹುಡುಕಿ ಕೊಂಚ ಬೆಳಕಿಲ್ಲದ ಒಂದು ಮೂಲೆ ಆರಿಸಿಕೊಂಡು ಕುಳಿತು, ಸಪ್ಲೆರನಿಗೆ ಪಿಸುದನಿಯಲ್ಲಿ 'ಚಿಕನ್ ಬಿರಿಯಾನಿ' ಎಂದು ಹೇಳಿದರು. ಆತ ಯಾರಾದರೂ ಪರಿಚಿತರು ಬಂದರೇ ಎಂಬಂತೆ ಕಳ್ಳಗಣ್ಣಿನಿಂದ ಅತ್ತಿತ್ತ ನೋಡುವುದು, ಬೆದರಿದ ಹರಿಣದಂತೆ ಚಡಪಡಿಸುವುದು ಕಂಡು ಕುತೂಹಲ ಹುಟ್ಟಿತು. ಆತನ ಮೇಲೊಂದು ಕಣ್ಣಹರೆ ಇಟ್ಟು, ನೋಡದವರಂತೆ ಕುಳಿತೆವು. ಅಷ್ಟರಲ್ಲಿ ಹಬೆಯಾಡುವ ಬಿರಿಯಾನಿ ಬಂದಿತು.

ಆತ ತಿನ್ನಲು ಚಮಚ ಬೇಕೆಂದು ಕೇಳಿದರು. ಇದು ಶಾಲೆಗೆ ಹೊಸ ಅಡ್ಮಿಶನ್ ಎಂದು ಖಾತ್ರಿಯಾಯಿತು. ಬಿರಿಯಾನಿಯನ್ನು ಮಸಾಲೆ ಮತ್ತು ಮಾಂಸದ ತುಣುಕುಗಳ ಜತೆ ತಟ್ಟೆಯಲ್ಲೆ ಮಿದ್ದು, ತುತ್ತುಮಾಡಿ ಕೈಯಿಂದ ತಿಂದರೇನೇ ರುಚಿ; ತುಂಡನ್ನು ಎಲುಬಿನ ಕಡೆ ಹಿಡಿದುಕೊಂಡು ಖಂಡಭಾಗ ಕಚ್ಚಿ ಎಳೆದರೇನೇ ಅದರ ಸವಿ. ಆದರೆ ಆತ ಇಡ್ಲಿಯ ತುಣುಕಿನಂತೆ ಮಾಂಸದ ತುಂಡನ್ನು ಚಮಚದಲ್ಲಿ ತೆಗೆದುಕೊಂಡು ತಿನ್ನಲಾರಂಭಿಸಿದರು. ತುಂಡು ಚಮಚದಲ್ಲಿ ಸರಿ ಕೂರದೆ ಕೆಳಗೆ ಬೀಳುತ್ತಿತ್ತು. ಹೇಗೊ ಪ್ರಯಾಸದಿಂದ ಬಾಯೊಳಗೆ ಹೋದರೂ, ನುರಿಸಲು ಆಗದೆ ದವಡೆ ತುಂಬ ತುಂಬಿಕೊಂಡು ಕಷ್ಟಕೊಡುತ್ತಿತ್ತು. ಆ ವ್ಯಕ್ತಿ ಕೊಂಚ ಗಲಿಬಿಲಿಯಿಂದ ನಮ್ಮ ತಿನ್ನುವಿಕೆಯತ್ತ ನೋಡಿ, ಜ್ಞಾನೋದಯವಾದಂತೆ ಚಮಚ ಕೆಳಗಿಟ್ಟು, ತಟ್ಟೆಗೆ ಕೈಹಾಕಿ ಸಲೀಸಾಗಿ ತಿನ್ನತೊಡಗಿದರು.

ಮಾಂಸಾಹಾರಕ್ಕೆ ತಮ್ಮನ್ನು ಉದ್ಘಾಟಿಸಿಕೊಳ್ಳುವ ಅನೇಕರನ್ನು ನಾನು ಕಂಡಿದ್ದೇನೆ. ಅವರಲ್ಲಿ ಅದಮ್ಯ ಕುತೂಹಲ. ತುಂಡನ್ನು ಹಿಡಿದು ಇದು ಯಾವ ಭಾಗ, ಹೇಗೆ ತಿನ್ನುವುದು ಎಂದು ಮಕ್ಕಳಂತೆ ಕೇಳುವುದು, ಇನ್ನೂ ಬಿಡದ ಮುಜುಗರ, ಯಾವುದೋ ಸಾಹಸ ಮಾಡುತ್ತಿರುವ ಭಾವುಕತೆ, ಎಲ್ಲವೂ ಬೆರೆತಿರುತ್ತವೆ. ಒಮ್ಮೆ ಪ್ರವೇಶ ಪಡೆದ ಮೇಲೆ ಮುಗಿಯಿತು. ಆತನಕ ತಿನ್ನದ ಬಾಕಿಯನ್ನು ತೀರಿಸುವಂತೆ, ಎಲುಬುಗಳನ್ನೆಲ್ಲ ಜಗಿದು ಪುಡಿಗಟ್ಟಿ, ಸಿಕ್ಕರೆ ಕೋಳಿಮುಕ್ಕವನ್ನೂ ಬಿಡರು ಎಂಬಂತೆ ತಿನ್ನುತ್ತಾರೆ. ಈ ದೃಶ್ಯವನ್ನು ಕೋಳಿಗಳೇನಾದರೂ ಕಂಡರೆ, ನಮ್ಮ ಸಂತಾನವೇ ನಾಶವಾಗಿಬಿಡುತ್ತದೆ ಎಂದು ಆತಂಕ ಪಡುವಂತಹ ರಭಸವದು. ಆದರೆ ನಮ್ಮ ಕಥಾನಾಯಕ, ಊಟಮುಗಿಸಿ, ಬಿಲ್ಲಿನ ತಟ್ಟೆಗೆ ದುಡ್ಡಿಟ್ಟು, ಬಾಯೊರೆಸಿಕೊಳ್ಳುತ್ತ, ವೇಶ್ಯೆಯರ ಮನೆಗೆ ಬಂದ ಸಭ್ಯಸ್ಥನು ಯಾರಿಗೂ ಕಾಣಿಸದೆ ಪಾರಾಗಲು ಬಯಸುವಂತೆ ಮೆಳ್ಳಗೆ ಹೊರಬಿದ್ದು, ಗಾಂಧಿನಗರದ ಜನಜಂಗುಳಿ ಯಲ್ಲಿ ಕರಗಿಹೋದನು. ಭಾರತದಲ್ಲಿ ಜಾತಿ-ಧರ್ಮಗಳು ಆಹಾರದ ವಿಷಯದಲ್ಲಿ ಕಟ್ಟಿಕೊಂಡಿರುವ ಕಟ್ಟುನಿಟ್ಟುಗಳು ವಿಚಿತ್ರ ಸನ್ನಿವೇಶಕ್ಕೆ ಕಾರಣವಾಗಿವೆ. ಉಚ್ಚಜಾತಿಗಳು ಕೇವಲ ತಿನ್ನುವವರ ಮೇಲೆ ಹಿಂಸೆ ಯನ್ನು ಸೃಷ್ಟಿಸಿಲ್ಲ, ತಿನ್ನಲು ಬಯಸುವ ತಮ್ಮವರ ಮೇಲೂ ಹಿಂಸೆ ಯನ್ನು ಹೇರಿವೆ. ಅಂದು ಆ ವ್ಯಕ್ತಿ ಮಾಂಸದೂಟ ಮಾಡಿಹೋದ ರೀತಿಯು, ಆಹಾರದ ವಿಷಯದಲ್ಲಿ ನಮ್ಮ ಸಮಾಜ ಸೃಷ್ಟಿಮಾಡಿ ಕೊಂಡಿರುವ ಸ್ವಹಿಂಸೆ, ಮುಜುಗರಗಳ ಚರಿತ್ರೆ ಮತ್ತು ವರ್ತಮಾನವ ನ್ನೆಲ್ಲ ಪಾತ್ರವೊಂದು ಬಂದು ಅಭಿನಯಿಸಿ ಹೋದಂತ್ತಿತ್ತು.

ಎಲ್ಲರಿಗೂ ಗೊತ್ತಿರುವಂತೆ ಮಾಂಸಾಹಾರವನ್ನು ನಿಷೇಧಿಸಿಕೊಂಡಿರುವ ಅನೇಕ ಸಮುದಾಯಗಳ ಜನ, ಅದರಲ್ಲೂ ನಗರ ಮಧ್ಯಮ ವರ್ಗಕ್ಕೆ ಸೇರಿದ ಆಧುನಿಕ ತಲೆಮಾರಿನವರು, ಸಂಕೋಚವಿಲ್ಲದೆ ಹೋಟೆಲುಗಳಲ್ಲಿ ತಿನ್ನಲಾರಂಭಿಸಿದ್ದಾರೆ. ಯಾವುದೇ ಬಾರ್ ಇಲ್ಲವೇ ನಾನ್‌ವೆಜ್ ಹೋಟೆಲಿಗೆ ಬರುವವರ ಹಿನ್ನೆಲೆಯನ್ನು ತಿಳಿದರೆ ಇದು ಸ್ಪಷ್ಟವಾಗುತ್ತದೆ. ಕೆಲವರು ತಮ್ಮ ಮನೆಗಳಲ್ಲೂ ಮಾಂಸವನ್ನು ಸಿದ್ಧಪಡಿಸುವಷ್ಟು ಮುಂದುವರೆದಿದ್ದಾರೆ. ಹಳ್ಳಿಗಳಲ್ಲೂ ಈ ಪರಿವರ್ತನೆ ನಡೆದಿದ್ದು, ಅಲ್ಲಿ ವ್ಯವಹಾರ ಕೊಂಚ ಕದ್ದುಮುಚ್ಚಿ ನಡೆಯುತ್ತದೆ. ಹಳ್ಳಿಯ ಸಸ್ಯಾಹಾರಿ ಜಾತಿಯವರು 'ತಿನ್ನುವ' 'ಕುಡಿಯುವ' ಕಾರ್ಯವನ್ನು (ಈ ಕ್ರಿಯಾಪದಗಳು ಮದ್ಯಪಾನ ಮತ್ತು ಮಾಂಸಾಹಾರವನ್ನು ಸೂಚಿಸುವ ವಿಶೇಷ ಪರಿಭಾಷೆಗಳು.) ಪೇಟೆಗೆ ಬಂದಾಗ ಸಾಂಗವಾಗಿ ನೆರವೇರಿಸುತ್ತಾರೆ. ಊರಲ್ಲೇ ಅದನ್ನು ಮಾಡುವುದಾದರೆ ಎಲ್ಲೋ ತೋಟದ ಮನೆಯಲ್ಲಿ ಗುಪ್ತವಾಗಿ ಮುಗಿಸುವುದುಂಟು.

ನಾನು ಕಂಡ ಎಷ್ಟೊ ಹಳ್ಳಿಗಳಲ್ಲಿ ಲಿಂಗಾಯತರು ವೈಯಕ್ತಿ

ವಾಗಿ ತಿನ್ನದಿದ್ದರೂ ಕೃಷಿಯ ಜತೆ ಕೋಳಿಫಾರಂ ಇಟ್ಟು ಕೊಂಡಿರುವುದುಂಟು; ತಮ್ಮ ಊರುಗಳ ಊರದೇವತೆಗಳ ಜಾತ್ರೆಯಲ್ಲಿ ಬಲಿಕೊಡಲು ಕೋಣ ಕುರಿಯನ್ನು ಕೊಡಿಸುವುದುಂಟು. ಇನ್ನು ಉದ್ಯೋಗಕ್ಕೆ ಅಮೆರಿಕ ಯೂರೋಪು ದೇಶಗಳಿಗೆ ಹೋದ ಬಹಳಷ್ಟು ಜನ ಮಾಂಸಾಹಾರಕ್ಕೆ ಒಗ್ಗಿಕೊಂಡಿದ್ದಾರೆ. ತಮ್ಮ ಮಕ್ಕಳಿಗೆ ಹಣ್ಣುತರಕಾರಿಯ ಹಾಗೆಯೇ ಮೊಟ್ಟೆಯನ್ನು ಬಹುತೇಕ ತಾಯಂದಿರು ಕೊಡುವುದಕ್ಕೆ ಆರಂಭಿಸಿದ್ದಾರೆ. ಬಹುಶಃ ನಾನ್‌ವೆಜಿಟೇರಿಯನ್ ಆಗುವುದು, ಈಗ ಒಂದು ತಲೆಹೋಗುವ ವಿಷಯವೇ ಅಲ್ಲ. ಸ್ವತಃ ಸಂಘಪರಿವಾರದ ಹಿರಿತಲೆ ವಾಜಪೇಯಿಯವರು ತಿನ್ನುವುದು ಮತ್ತು ಕುಡಿಯುವುದು ಎಲ್ಲರಿಗೂ ಗೊತ್ತಿದೆ. ಒಮ್ಮೆ ಅವರು ವಿದೇಶದಲ್ಲಿ ಇದ್ದಾಗ ಕರುವಿನ ಮಾಂಸವನ್ನು ತಿಂದ ಪ್ರಕರಣವೂ ಜರುಗಿ, ನಾನು ತಿಂದದ್ದು ಭಾರತದ ದನದ್ದಲ್ಲ ಎಂದು ಅವರು ಸಮಜಾಯಿಶಿಯನ್ನೂ ಕೊಟ್ಟರು.

ಒಂದು ಸಮೀಕ್ಷೆಯ ಪ್ರಕಾರ ಕಳೆದ ೨೦ ವರ್ಷಗಳಲ್ಲಿ ಕರ್ನಾಟಕದಲ್ಲಿ ಬಾರು ಮತ್ತು ಮಾಂಸಾಹಾರದ ಹೋಟೆಲುಗಳ ಸಂಖ್ಯೆ ಹೆಚ್ಚಾಗಿದೆ. ಅವು ಕಿರುಪಟ್ಟಣಗಳಲ್ಲೂ ಪಟ್ಟಣಕ್ಕೆ ಸಮೀಪವಿರುವ, ಹೆದ್ದಾರಿ ಪಕ್ಕದ ದೊಡ್ಡ ಗ್ರಾಮಗಳಲ್ಲೂ ಆರಂಭವಾಗಿವೆ. ಮಾಂಸಾಹಾರಿಗಳಲ್ಲಿ ಕೆಲವರು ಆರೋಗ್ಯದ ಕಾರಣಕ್ಕೊ ಸಾಮಾಜಿಕ ಮನ್ನಣೆ ಪಡೆಯುವುದಕ್ಕೊ ಸಸ್ಯಾಹಾರಿಗಳಾಗಿ ಬದಲಾಗುವುದೂ ನಡೆದಿದೆ. ತಿನ್ನುವ ಜಾತಿಗಳೂ ತಿನ್ನದವರ ಎದುರು ತಮ್ಮನ್ನು ಕೀಳಾಗಿಸಿಕೊಂಡು, ಸಲ್ಲದ ಮುಜುಗರವನ್ನೊ ನಮಗೆ ತಿನ್ನುವ ಭಾಗ್ಯವಿದೆ ಎಂದು ಸಲ್ಲದ ಹೆಮ್ಮೆಯನ್ನೊ ಪಡೆದುಕೊಂಡಿವೆ. ಆದರೆ ಇದರಲ್ಲಿ ಕುತೂಹಲಕರ ಬೆಳವಣಿಗೆಯೆಂದರೆ, ಸಸ್ಯಹಾರಿಗಳು, ತಮ್ಮ ಆಹಾರ ಪದ್ಧತಿಯಲ್ಲಿ ಮಾಂಸಾಹಾರದ ನುಡಿಗಟ್ಟನ್ನು ಜೋಡಿಸಿಕೊಳ್ಳುತ್ತ, ಸುಪ್ತ ಆಕರ್ಷಣೆಯನ್ನು ಪ್ರಕಟಿಸುತ್ತಿರುವುದು. ಬ್ರಾಹ್ಮಣರ ಹೋಟೆಲುಗಳಲ್ಲಿ ಸಸ್ಯಾಹಾರದ ತಿಂಡಿಗಳಿಗೆ ಪಲಾವ್, ವೆಜಿಟಬಲ್ ಬಿರಿಯಾನಿ, ಕುರ್ಮ ಎಂಬ ಫಾರಸಿ ಭಾಷೆಯ ಮಾಂಸಾಹಾರದ ಶಬ್ದಗಳು ಸೇರಿಕೊಂಡಿರುವುದನ್ನು ಗಮನಿಸಬೇಕು.

ತಿನ್ನುವಾಗ ಮಾಂಸದ ಅನುಭವ ಕೊಡುವ ಒಂದು ವಸ್ತುವನ್ನೂ ಕೃತಕವಾಗಿ ತಯಾರಿಸಿದ್ದು, ಅದನ್ನು ಪಲಾವಿನಲ್ಲಿ ಹಾಕಲಾಗುತ್ತಿದೆ. ಹೀಗೆ ನಾನಾ ಬಗೆಯಲ್ಲಿ ಮಾಂಸಾಹಾರದ ಆಕರ್ಷಣೆ ಹೆಚ್ಚಾಗುತ್ತಿರುವ ಹೊತ್ತಲ್ಲೇ ಅದರ ಮೇಲಿನ ಸಾಮಾಜಿಕ ನಿಷೇಧ ಮತ್ತು ಹಲ್ಲೆಗಳು ಕೂಡ ಹೆಚ್ಚಾಗುತ್ತಿರುವುದು ಒಂದು ವೈರುಧ್ಯ. ಮಾಂಸಾಹಾರ ಪಡೆಯುತ್ತಿರುವ ಜನಪ್ರಿಯತೆ ಸೃಷ್ಟಿಸಿದ ಹತಾಶೆಯಿಂದಲೊ, ಜನ ತಮ್ಮ ಸಹಜ ಆಹಾರವನ್ನು ಸ್ವೀಕರಿಸುವುದನ್ನು ಸಹಿಸಲಾಗದ ಅಸೂಯೆಯಿಂದಲೊ, ಅಥವಾ ಬ್ರಾಹ್ಮಣವಾದವು ತನ್ನ ಆಹಾರ ಪದ್ಧತಿಯನ್ನು ನಾಡಿನ ಬಹುಸಂಖ್ಯಾತರ ಮೇಲೆ ಹೇರಿ, ಆ ಮೂಲಕ ಸಾಂಸ್ಕೃತಿಕವಾಗಿ ಹಿಡಿತಕ್ಕೆ ತೆಗೆದುಕೊಳ್ಳುವ ಹುನ್ನಾರ ಭಾಗವಾಗಿಯೋ ಈ ಹಲ್ಲೆಗಳು ಹುಟ್ಟುತ್ತಿರಬಹುದು.

ಆದರೆ ತಿನ್ನುವ ಕುಡಿಯುವ ಜನರಲ್ಲಿ ಬಾಡಿನೂಟವು ಅವರ ಬದುಕಿನಲ್ಲಿ ಒಂದು ಸಂಭ್ರಮದ ಗಳಿಗೆ. ಹಬ್ಬ ಜಾತ್ರೆಗಳಲ್ಲಿ ಮಾಂಸಾಹಾರ ಇದ್ದೇ ಇರುತ್ತದೆ. ತಮಗೆ ಪ್ರಿಯವಾದ ಗೆಳೆಯರು ನಂಟರು ಇಷ್ಟರು ಬಂದಾಗ ಹೆಚ್ಚುಗಟ್ಟಲೆ ಮಾಡುವುದು ಎಂದರೆ, ಅವರನ್ನು ಗೌರವಿಸುವುದು ಎಂದರ್ಥ. ಈ ಹಿನ್ನೆಲೆಯಲ್ಲಿ ಹಿಂದೆ ಆಶ್ರಮಕ್ಕೆ ಬಂದವರಿಗೆ ಎಳೆಗರುವಿನ ಮಾಂಸವನ್ನು ಬಡಿಸಿ ಗೌರವಿಸುವ ಸಂಪ್ರದಾಯವಿದ್ದು, ಅತಿಥಿಯನ್ನು ಗೋಘ್ನ ಎಂದು ಕರೆಯಲಾಗುತ್ತಿತ್ತು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಮಾಂಸದಡಿಗೆ ದಿನ ಮನೆಯವರೆಲ್ಲ ಊಟಕ್ಕೆ ಕುಳಿತಾಗ ಏರ್ಪಡುವ ನಾಟಕೀಯ ಸಂಭ್ರಮವು ಅದ್ಭುತವಾಗಿರುತ್ತದೆ. ಮೆತ್ತನೆಯ ತುಂಡನ್ನು ಹುಡುಕಿ ಹಲ್ಲಿಲ್ಲದವರಿಗೆ ಕೊಡುವುದು, ಅಳಿಯಂದಿರಿಗೆ ಕೋಳಿಯ ತೊಡೆಯ ಭಾಗವನ್ನು ಬಡಿಸುವುದು, ಮುಳ್ಳಿಲ್ಲದ ಮೀನು ಭಾಗವನ್ನು ಮಕ್ಕಳಿಗೆ ಬಿಡಿಸಿಕೊಡುವುದು, ಮೊಟ್ಟೆಯಲ್ಲಿರುವ ಹಳದಿ ಭಾಗವನ್ನು ನನಗೆ ನನಗೆ ಎಂದು ಮಕ್ಕಳು ಬೇಡಿ ಪಡೆಯುವುದು,

ಮಾತಿನ ಹಂಗು

ರಹಮತ್ ತರೀಕೆರೆ

ಮಾಂಸ ಕಡಿಮೆಯಿರುವ ಕೋಳಿರೆಕ್ಕೆಯ ತುದಿಭಾಗ ಬಿದ್ದವರು ಮುಖವನ್ನು ಊದಿಸಿಕೊಂಡು ಊಟಮಾಡುವುದು, ಅದನ್ನು ಪತ್ತೆಹಚ್ಚಿದ ಬಡಿಸುವವರು ಆ ಬಾಬತ್ತಿನ ನಷ್ಟವನ್ನು ತುಂಬಿಕೊಡುವಂತೆ ಇನ್ನೊಂದು ತುಂಡು ಬಡಿಸುವುದು, ನಲ್ಲಿಕೊಳವೆ ಬಿದ್ದವರು, ಟ್ರಾಫಿಕ್ ಪೋಲಿಸರಂತೆ ಅದನ್ನು ಬಾಯಿಗಿಟ್ಟು ಅದರೊಳಗಿನ ಮಜ್ಜೆಯನ್ನು ಎಳೆಯುವುದು, ಒಣಗಿದ ಮಾಂಸ ಹುರಿದಾಗ ಅದನ್ನು ನಡುನಡುವೆ ಕಟಕ್ಕೆಂದು ಕಡಿದು ಮುದ್ದೆ ನುಂಗುವುದು–ಇತ್ಯಾದಿ ವರ್ಣರಂಜಿತ ಘಟನೆಗಳು ಅಲ್ಲಿ ಜರುಗುತ್ತವೆ.

ಪಂಕ್ತಿಯಲ್ಲಿ ಕುಳಿತಾಗ ತಮಗೆ ಪ್ರಿಯರಾದವರಿಗೆ ನಿರ್ದಿಷ್ಟ ತುಂಡುಗಳನ್ನು ಹುಡುಕಿಹಾಕುವ ಪಕ್ಷಪಾತ ನಡೆದು, ಅದು ದೊಡ್ಡ ಕಲಹಕ್ಕೆ ಕಾರಣವಾಗಿರುವುದುಂಟು. ಒಮ್ಮೆ ನಮ್ಮ ನಂಟರಲ್ಲೊಬ್ಬರು– ಕುವೆಂಪು ಕಾದಂಬರಿಯ ಬಾಡುಗಳ್ಳ ಸೋಮನ ಜಾತಿಯವರು– ಮಗನಿಗೆ ಹೆಣ್ಣು ನೋಡಲು ಹೋಗಿ, ತಮಗೆ ಸರಿಯಾದ ತುಂಡು ಬಡಿಸಲಿಲ್ಲವೆಂದು, ಆ ಹೆಣ್ಣೇಬೇಡ ಎಂದು ಸಂಬಂಧ ಹರಿದುಕೊಂಡು ಬಂದಿದ್ದರು. ಆದ್ದರಿಂದ ಮಾಂಸದಡಿಗೆಯನ್ನು ಉತ್ಸಾಹದಿಂದ ಮಾಡುವ ಹೆಂಗಸರು, ಬಡಿಸುವುದಕ್ಕೆ ಹಿಂಜರಿಯುತ್ತಾರೆ. ಇವೆಲ್ಲವೂ ಪರೋಕ್ಷವಾಗಿ ಮಾಂಸಾಹಾರದ ಜತೆಗಿರುವ ನಮ್ಮ ಜನರ ಸಂತೋಷವನ್ನೂ ಉತ್ಸಾಹವನ್ನೂ ಸೂಚಿಸುತ್ತವೆ. ಒಳ್ಳೇ ಮಾಂಸದಡಿಗೆಯ ಔತಣ ಮಾಡಿಕೊಂಡು ಬಂದವರು ಆ ಮನೆಯ ಕಾರ್ಯವನ್ನೊ ಮದುವೆಯನ್ನೊ ಇಡೀ ವರ್ಷ ಹೊಗಳುತ್ತ ಇರುವುದುಂಟು. ಹೀಗಾಗಿ ನಿತ್ಯ ಹಸಿವಿಗೆ ಮಾಡುವ ಊಟವು ಮಾಂಸದ ವಿಷಯ ಬಂದಾಗ ಒಂದು ಅಪೂರ್ವ ಸಾಂಸ್ಕೃತಿಕ ವಿದ್ಯಮಾನವಾಗಿ ಬಿಡುವ ಜೀವನಕ್ರಮ ತಿನ್ನುವವರ ಮನೆಗಳಲ್ಲಿದೆ.

ಆದರೆ ತಿನ್ನುವ ಸಮುದಾಯದ ಕೆಲವು ಕುಟುಂಬ ಮತ್ತು ವ್ಯಕ್ತಿಗಳು ಬ್ರಾಹ್ಮಣೀಕರಣಗೊಂಡ ಪರಿಣಾಮವಾಗಿ, 'ಶುಭ' ಎನ್ನಲಾಗುವ ಸಂದರ್ಭಗಳಲ್ಲಿ ಮಾಂಸದೂಟವನ್ನು ನಿವಾರಿಸಿಕೊಂಡಿರುವುದುಂಟು. ಆದರೆ 'ಶುಭ' ಸಂದರ್ಭ ಮುಗಿದ ಕೂಡಲೆ ಅದರ ಸಪ್ಪೆತನವನ್ನು ಕಳೆಯಲು ಬಾಡಿನೂಟ ಹೇಗೊ ನುಗ್ಗಿ ಬಂದು ವಿಜೃಂಭಿಸುತ್ತದೆ. ಆ ಕಾರ್ಯಕ್ರಮ ಮುಗಿಸಿಕೊಂಡೇ ಬಂದ ನಂಟರು ತಳಕೀಳುವುದು. ನಮ್ಮಲ್ಲಿ ಯುಗಾದಿಯ ಮಾರನೆಯ ದಿನ, ಬೇಟೆಯಾಡುವ ಮತ್ತು ಮಾಂಸದೂಟ ಮಾಡುವ ಸಂಪ್ರದಾಯವಿದೆ. ಮಂಡ್ಯ ಹಾಸನ ಭಾಗದಲ್ಲಿ ಹರಿಸ್ವಾವೆ ಮಾಡುವವರು, ಕೊನೆಯ ದಿನ ಮಾಂಸದೂಟ ಇಟ್ಟುಕೊಳ್ಳುತ್ತಾರೆ. ವೈಷ್ಣವ ಸಂಪ್ರದಾಯದ ಮುತ್ತತ್ತಿಯಲ್ಲಿ ಆಂಜನೇಯನಿಗೂ ಮಾಂಸದ ಸೇವೆಯಿದೆ. ಮಂಟೆಸ್ವಾಮಿ ಜಾತ್ರೆಯಲ್ಲಿ ಬಂದ ಎಲ್ಲರಿಗೂ ಮಾಂಸದ ಸಾರು ಮುದ್ದೆ ಬಡಿಸುವ ಸಂಪ್ರದಾಯವಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಎಷ್ಟು ಮರಿಗಳು ಬಿದ್ದವು ಎಂಬುದರ ಮೇಲೆ ಆಯಾ ಊರಿನ ಮೊಹರಂ ವೈಭವವನ್ನು ಅಳೆಯಲಾಗುತ್ತದೆ. ತಿಥಿಗಳಲ್ಲಿ ಮಾಂಸದಡಿಗೆ ಕಡ್ಡಾಯ.

ಸತ್ತವರ ನೆನಪಿನ ದು:ಖಸೂಚಕ ಆಚರಣೆಯಲ್ಲಿ ಮಾಂಸಾಹಾರ ಸೇರಿರುವುದು ಬಹುಶಃ ಸಾವಿನ ದುಗುಡವನ್ನು ಊಟದ ಸಂಭ್ರಮದ ಮೂಲಕ ಜೀವಂತವಿದ್ದವರು ಮರೆಯುವ ಪರಿಯೂ ಇದ್ದೀತು. (ಈಗಲೂ ವೈದಿಕರ ತಿಥಿಯಲ್ಲಿ ಇಡುವ ಮಾಷ(ಉದ್ದು)ದ ವಡೆಯು ಪ್ರಾಣಿಯ ವಪೆಯ ಸಂಕೇತವಾಗಿದೆ.) ಮುಸ್ಲಿಮರ ಬಕ್ರೀದ್, ಸತ್ತವರ ಹೆಸರಲ್ಲಿ ಬಲಿಕೊಡುವ (ಖುರ್ಬಾನಿ) ಹಬ್ಬವಾಗಿದ್ದು ಮಾಂಸದಾನ ಮಾಡುವುದು ಇಲ್ಲಿನ ಮುಖ್ಯ ಆಚರಣೆ. ಇಡೀ ದಿನ ಬೇರೆಬೇರೆ ಮನೆಗಳಿಂದ ಮಾಂಸದ ಸಣ್ಣಪೊಟ್ಟಣಗಳೂ ಮನೆಗೆ ಬಂದು ಬೀಳುತ್ತಿರುತ್ತವೆ. ಮನೆಯಲ್ಲಿ ಕುರ್ಬಾನಿ ನಡೆದರೆ ಮನೆಮನೆಗೆಲ್ಲ ಮಾಂಸ ಹಂಚಿಕೊಂಡು ತಿರುಗುವುದು ಬಾಲ್ಯದಲ್ಲಿ ನಮಗೆಲ್ಲ ಸಂತೋಷದ ವಿಷಯವಾಗಿತ್ತು. ಅಂದು ಹೆಂಗಸರು ಹೆಚ್ಚಿನ ಮಾಂಸವನ್ನು ಉದ್ದಕ್ಕೆ ಕುಯ್ದು ಉಪ್ಪು ಕರಿಮೆಣಸು ಹಚ್ಚಿ, ಸರವಾಗಿ ಪೋಣಿಸಿ, ಬೆಕ್ಕುಕಾಗೆ ತಿನ್ನದಂತೆ ಎರಡು ದಿನ ಹುಶಾರಾಗಿ ಒಣಗಿಸಿ, ಇಡೀ ವರ್ಷಕ್ಕೆ ಆಗುವಂತೆ ಸಂಗ್ರಹಿಸುವ ಕೆಲಸವನ್ನು–ಉಪಗ್ರಹವನ್ನು ಅಂತರಿಕ್ಷಕ್ಕೆ ಕಳಿಸುವ ವಿಜ್ಞಾನಿಗಳ ಶ್ರದ್ಧೆಯಲ್ಲಿ–ಮಾಡುತ್ತಾರೆ. ಮಾಂಸದೂಟದ ಆಚರಣೆಗಳು ಜನರ ದುಡಿಮೆಯ ಲೋಕಕ್ಕೂ ಕಸುಬಿನ ಜಗತ್ತಿಗೂ ಸಂಬಂಧಪಟ್ಟಿವೆ. ಚರಗ ಚೆಲ್ಲುವ ಕೃಷಿ ಆಚರಣೆಯಲ್ಲಿ ಬಲಿಪ್ರಾಣಿಯ ರಕ್ತವನ್ನು ಬೆರೆಸಲೇಬೇಕು. ಆಯುಧಪೂಜೆಯ ದಿನ ವರ್ಷವಿಡೀ ಕೆಲಸಕ್ಕೆ ಒದಗುವ ಸಲಕರಣೆಗಳ ಪೂಜೆಯನ್ನು ಬಲಿಕೊಟ್ಟು ಮಾಡಬೇಕು.

ಹೀಗೆ ಆಹಾರವು ಸಂಸ್ಕೃತಿಯಲ್ಲಿ ಬಹಳ ಸೆನ್ಸಿಟಿವಾದ ಸಂಗತಿಯಾಗಿದ್ದು, ಅದಕ್ಕೂ ಜನರ ದೈವಗಳಿಗೂ ಧಾರ್ಮಿಕ ಆಚರಣೆಗಳಿಗೂ ವ್ಯಕ್ತಿಗಳಿಗೂ ಆಹಾರಕ್ಕೂ ಒಂದು ಆಂತರಿಕ ಸಂಬಂಧಗಳಿವೆ. ಈ ಸಂಬಂಧಗಳು ಪರಸ್ಪರ ಬೆಸೆದುಕೊಂಡಿವೆ. ಬಲಿಕೊಟ್ಟ ಪ್ರಾಣಿಯ ಮಾಂಸವನ್ನು ತಿನ್ನುವುದು ಎಲ್ಲ ಜನಾಂಗಗಳ ಸಂಸ್ಕೃತಿಯಲ್ಲಿ ಪವಿತ್ರವಾದ ಧಾರ್ಮಿಕ ಕ್ರಿಯೆ. ವೇದಗಳಲ್ಲಿ ದೇವತೆಗಳಿಗೆ ಹವಿಸ್ಸು ಕೊಡುವಾಗ ಪ್ರಾಣಿಯ ಬಲಿಯಾಗಲೇಬೇಕಿತ್ತು. ಅಜಯಾಗ (ಆಡನ್ನು ಬಲಿಕೊಡುವುದು) ಅಶ್ವಮೇಧಯಾಗ (ಕುದುರೆಯಬಲಿ)– ಹೆಸರುಗಳಲ್ಲೇ ಇದರ

ಸ್ಪಷ್ಟ ಸೂಚನೆಯಿದೆ. ಯಾಗಕ್ಕೆ ಪ್ರಾಣಿಗಳನ್ನು ವಿವೇಚನೆಯಿಲ್ಲದೆ ಕಡಿಯುವುದರ ವಿರುದ್ಧ ಬುದ್ಧನಂತೆ ೧೨ನೇ ಶತಮಾನದ ಶರಣರು ಪ್ರತಿಭಟಿಸಿದರು. 'ವೇದಘನವೆಂಬನೆ ಪ್ರಾಣಿವಧೆಯ ಹೇಳುತ್ತಿದೆ'-ಎಂಬ ಬಸವಣ್ಣನ ಮಾತು ಇದಕ್ಕೆ ಸಾಕ್ಷಿ. ಈ ಯಾಗದ ಬಲಿಪ್ರಕರಣಗಳು ೨೦ನೇ ಶತಮಾನದಲ್ಲೂ ನಡೆದವು. ಶಿವರಾಮ ಕಾರಂತರು ತಮ್ಮ ಆತ್ಮಚರಿತ್ರೆಯಲ್ಲಿ ಕೋಟದ ಬ್ರಾಹ್ಮಣರು ಅಜಯಾಗ ಮಾಡಿ ಹೋತ ಬಲಿಕೊಟ್ಟ ಪ್ರಕರಣವನ್ನು ದಾಖಲಿಸುತ್ತಾರೆ. ಗೋಚಳುವಳಿ ಮಾಡುವ ರಾಮಚಂದ್ರಾಪುರದ ಮಠದಲ್ಲೂ ಅಜಯಾಗವನ್ನು ಗುಟ್ಟಾಗಿ ಮಾಡಲಾಯಿತೆಂದು ಶಿವಮೊಗ್ಗೆ ಕಡೆಯ ಪತ್ರಿಕೆಗಳು ವರದಿಮಾಡಿವೆ; ಈಗಲೂ ಮನೆಕಟ್ಟುವ ಭೂಮಿಪೂಜೆ ಮಾಡುವ ಹೊತ್ತಲ್ಲಿ, ಭಟ್ಟರು ಎಡಅಂಗೈಯ ಮೇಲೆ ಬಲ ಅಂಗೈಯನ್ನು ಕತ್ತಿಯಂತೆ ಲಂಬವಾಗಿ ಹಿಡಿದು ಹೊಡೆಯುವ ಮೂಲಕ ಬಲಿಕೊಡುವ ಅಭಿನಯ ಮಾಡುವುದನ್ನು ನೋಡಬಹುದು.

ದ್ರಾವಿಡ ದೇವತೆಯೆನ್ನಲಾಗುವ ಶಿವನಿಗೂ ಬಲಿಯುಂಟು. ಭಾರತದ ೧೨ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಶ್ರೀಶೈಲದ ಮಲ್ಲಿಕಾರ್ಜುನನ ಗುಡಿಯ ಹೊರಗೋಡೆಯ ಲಿಂಗದ ಮುಂದೆ ಪ್ರಾಣಿಗಳನ್ನು ಬಲಿಗೊಡುತ್ತಿರುವ ಶಿಲ್ಪಗಳಿಂದ ತುಂಬಿಹೋಗಿದೆ. ಗುಡಿಯಲ್ಲಿರುವ ಬಲಿಪೀಠ, ರುಧಿಕಕುಂಡಗಳು ಒಂದು ಕಾಲಕ್ಕೆ ಅಲ್ಲಿದ್ದ ಬಲಿಪದ್ಧತಿಯನ್ನು ಹೇಳುತ್ತವೆ. ಕರಾವಳಿ ಜಿಲ್ಲೆಯ ಬಹುತೇಕ ಗುಡಿಗಳಲ್ಲಿ ಬಲಿಪೀಠಗಳಿವೆ. ಶಿವನ ರೂಪವಾದ ಭೈರವನ ಆಚರಣೆಗಳು ಮಾಂಸಾಹಾರದಿಂದ ಕೂಡಿವೆ. ಆದಿಚುಂಚನಗಿರಿ ಜಾತ್ರೆಯಲ್ಲಿ ಇದನ್ನು ನೋಡಬಹುದು. ಇನ್ನು ಶಿವನ ಮಡದಿ ರೂಪಗಳಾದ ದುರ್ಗಮ್ಮ ಕಾಳಮ್ಮ ಮಾರಮ್ಮ ಮುಂತಾದ ಸ್ತ್ರೀದೇವತೆಗಳ ಆಚರಣೆಗಳನ್ನು ಬಲಿ, ರಕ್ತ ಮಾಂಸದಡಿಗೆಯಿಲ್ಲದೆ ಕಲ್ಪಿಸಿಕೊಳ್ಳುವಂತೆಯೆ ಇಲ್ಲ. ಅದರಲ್ಲೂ ಪ್ರಸಿದ್ಧ ಶಕ್ತಿಪೀಠಗಳಲ್ಲಿ ಒಂದಾದ ಅಸ್ಸಾಮಿನ ಕಾಮಾಖ್ಯದಲ್ಲಿ ಬಲಿಕೊಡುವ ಪ್ರಾಣಿಪಕ್ಷಿಗಳ ಪಟ್ಟಿಯು ಇನ್ನೂ ವಿಶಿಷ್ಟವಾಗಿದೆ. ಕುರಿಕೋಣವಲ್ಲದೆ, ಮೊಲ, ಜಿಂಕೆ, ಪಾರಿವಾಳ ಇತ್ಯಾದಿಗಳನ್ನೂ ಅಲ್ಲಿ ಬಲಿಗೊಡಲಾಗುತ್ತದೆ. ವೈದಿಕರು ಅವೈದಿಕರು, ಆರ್ಯರು ದ್ರಾವಿಡರು ಎಂದು ಕರೆಯಲಾಗುವ ಎಲ್ಲ ಜನವರ್ಗಗಳಲ್ಲಿ, ದಲಿತರಲ್ಲಿ, ಮುಸ್ಲಿಮರಲ್ಲಿ, ದೇವರ ಹೆಸರಲ್ಲಿ ಪ್ರಾಣಿಬಲಿ ಕೊಡುವ ಪದ್ಧತಿ ಸಾವಿರಾರು ವರ್ಷಗಳಿಂದ ನಡೆಯುತ್ತ ಬಂದಿದೆ. ಇದು ಧರ್ಮ ದೈವ ಕಸುಬು ತಿಥಿ ಹಬ್ಬ ಮದುವೆಗಳ ಭಾಗವಾಗಿದ್ದು, ಇದರ ತಾರ್ಕಿಕ ಮುಂದುವರಿಕೆಯೆಂಬಂತೆ, ಮಾಂಸಾಹಾರವು ರೂಪುತಳೆದಿದೆ. ಆದರೆ ಪ್ರಾಣಿಬಲಿಯು ಉಳುಮೆಗೆ ಎತ್ತುಗಳೂ ಹಯನಕ್ಕೆ ಹಸುಗಳೂ ಕೊರತೆ ಯಾಗುವಷ್ಟು ತೀವ್ರವಾದಾಗ, ಬುದ್ಧ ಇದಕ್ಕೆ ತಡೆಯೊಡ್ಡಿದನು. (ಹಾಗೆ ಒಡ್ಡಿದರೂ ಭಿಕ್ಕುಗಳಿಗೆ ಮಾಂಸಾಹಾರವನ್ನೇನು ನಿಷೇಧಿಸಲಿಲ್ಲ.)ಇದು ಬೌದ್ಧಧರ್ಮವು ವೈದಿಕ ಧರ್ಮವನ್ನು ಹಿಂದಿಕ್ಕಲು ಕಾರಣವಾಯಿತು. ಈ ಕಾಲಘಟ್ಟದಲ್ಲಿ ಉಚ್ಚಜಾತಿಗಳು ಸಸ್ಯಾಹಾರಿಗಳಾಗಿ, ಮಾಂಸಾಹಾರದ ಮೇಲಿನ ನಿಷೇಧ ಮತ್ತು ತಿರಸ್ಕಾರವನ್ನು ಆರಂಭಿಸಿದರೆಂದು ಅಂಬೇಡ್ಕರ್ ತಮ್ಮ 'ಅಸ್ಪೃಶ್ಯರು' (೧೯೪೬) ಗ್ರಂಥದಲ್ಲಿ ವಿಶ್ಲೇಷಣೆ ಮಾಡುತ್ತಾರೆ.

ಮಾಂಸಾಹಾರವನ್ನು ಒಂದು ಸಮುದಾಯ ಅಥವಾ ಕೆಲವು ವ್ಯಕ್ತಿಗಳು ನಿಷೇಧಿಸಿಕೊಳ್ಳುವುದು, ಒಂದು ದೊಡ್ಡ ಸಮಸ್ಯೆಯಲ್ಲ; ಆದರೆ ಅದು ತಿರುಗಿ ತಿನ್ನುವವರ ಮೇಲೆ ಹಲ್ಲೆಯಾಗಿ ಪರಿಣಮಿಸಿರುವುದು ಸಮಸ್ಯೆ. ತಿನ್ನುವ ಜನ ತಮ್ಮ ದೇವತೆಗಳಿಗೆ ಪ್ರಾಣಿಬಲಿ ಕೊಡುವುದನ್ನು 'ಬರ್ಬರ ಹತ್ಯೆ' ಎಂದು ಬಣ್ಣಿಸುವ ಮನೋಭಾವವು ಒಂದು ಸಮಸ್ಯೆ; ನಮ್ಮ ಕೆಲವು ಪತ್ರಕರ್ತರು ಗ್ರಾಮದೇವತೆಗಳ ಜಾತ್ರೆಗಳ ಮೇಲೆ ಮಾಡುವ ವರದಿಯಲ್ಲಿ ಈ ಮನೋಭಾವವನ್ನು ಕಾಣಬಹುದು. "ಪೋಲಿಸರ ಸಮ್ಮುಖದಲ್ಲಿ ಹಾಡುಹಗಲೇ ಪ್ರಾಣಿಬಲಿ" "ಜಾತ್ರೆಯಲ್ಲಿ ಸಾವಿರಾರು ಪ್ರಾಣಿಗಳ ಬರ್ಬರ ಹತ್ಯೆ" ಎಂಬ ಶೀರ್ಷಿಕೆಯಡಿ ವರದಿಗಳಿರುತ್ತವೆ. ಮೆಕ್ಕಾದಲ್ಲಿ ಬಕ್ರೀದ್‌ದಿನ ನಡೆದ ಬಲಿ ಆಚರಣೆಯ ಬಗ್ಗೆ ಕೂಡ 'ಲಕ್ಷಾಂತರ ಮುಗ್ಧ ಪ್ರಾಣಿಗಳ ವಧೆ' ಎಂದು ಒಂದು ಪತ್ರಿಕೆ ಬರೆದಿತ್ತು. ಬಲಿಯು ಜೈವಿಕವಾಗಿ ಹತ್ಯೆ ನಿಜ. ಆದರೆ ಅದನ್ನು ಕೊಲೆಯೆಂದು ತಿಳಿಯುವುದು ಅಸಾಂಸ್ಕೃತಿಕ ದೃಷ್ಟಿಕೋನ. ಹೀಗೆ ದಯಾಳುಗಳಾಗಿ ಬರೆಯುವವರಲ್ಲಿ ಬಹಳ ಜನ, ಧರ್ಮದ ಹೆಸರಿನಲ್ಲಿ ಮಕ್ಕಳು ಮರಿಗಳನ್ನು ಕೊಲ್ಲುವ ಕೋಮು ಹಿಂಸೆಯನ್ನು ಸಹಿಸಿಕೊಳ್ಳುವವರು ಎಂಬುದು ಇನ್ನೊಂದು ವ್ಯಂಗ್ಯ. ಬಾಬಾಬುಡನಗಿರಿಯನ್ನು 'ವಿಮೋಚನೆ' ಮಾಡಲು ಹೊರಟಿರುವ ಸಂಘಪರಿವಾರವು, ಕೊಟ್ಟಿರುವ ಕಾರಣಗಳಲ್ಲಿ ಅಲ್ಲಿ ಹಿಂದುಗಳ ಭಾವನೆಗಳಿಗೆ ಘಾಸಿಯಾಗುವಂತೆ ಮಾಂಸಾಹಾರ ನಡೆಯುತ್ತಿದೆ ಎಂಬುದೂ ಒಂದು. ಆದರೆ ಭಾರತದಲ್ಲಿ ನೂರಕ್ಕೆ ೯೦ 'ಹಿಂದು'ಗಳೆಂದು ಕರೆಯಲ್ಪಡುವ ಜನ ಮಾಂಸಾಹಾರಿಗಳು. ನೂರಕ್ಕೆ ೯೯ ಬುಡಕಟ್ಟುಗಳು ಮಾಂಸಾಹಾರಿಗಳು. ಪರಿಸ್ಥಿತಿ ಹೀಗಿರುವಾಗ ಅಲ್ಪಸಂಖ್ಯಾತ ಸಸ್ಯಾಹಾರಿಗಳು ದಂಡ ಹಿಡಿದು ಮಾತಾಡುವುದು ಸೋಜಿಗವಾಗುತ್ತದೆ. ಈಚೆಗೆ ಜಂಗಮ ಜಾತಿಗೆ ಸೇರಿದ ಶ್ರೀ. ಚಿದಾನಂದಮೂರ್ತಿ ಅವರು ಹಂಪಿಯ ಪುರಂದರ ಮಂಟಪದ ಬಳಿ ಕೆಲವು ಕೋಳಿಪುಕ್ಕದ ಗರಿಗಳು ಸಿಕ್ಕಿವೆಯೆಂದೂ, ಇದು ಹಿಂದುಗಳ ಪವಿತ್ರ ಜಾಗಗಳನ್ನು ಅಪವಿತ್ರಗೊಳಿಸುವ ಹುನ್ನಾರವೆಂದು ಹೇಳುವ ಮಾಧ್ವ ಬ್ರಾಹ್ಮಣರ ಸಮಾವೇಶದಲ್ಲಿ ಪ್ರಬಂಧ ಮಂಡಿಸಿ, ಹಂಪಿಯ ಪಾವಿತ್ರ್ಯ ರಕ್ಷಣೆಯಲ್ಲಿ ಮಾಂಸಾಹಾರವನ್ನು ಒಂದು ಅಜೆಂಡವಾಗಿಸಿದ್ದಾರೆ. ಆದರೆ ಇದೇ ಹಂಪಿಗೆ ಹೋಗುವ ದಾರಿಯಲ್ಲಿರುವ ಗಾಳೆಮ್ಮನ ಗುಡಿಯಲ್ಲಿ ಪ್ರತಿ ಮಂಗಳವಾರ ಮತ್ತು ಶನಿವಾರ, ಟ್ರಾಫಿಕ್ ಜಾಮ್ ಮಾಡುವಂತಹ ಸಣ್ಣಜಾತ್ರೆ ನೆರೆಯುತ್ತದೆ. ಕುರಿಯನ್ನು ಮೆರವಣಿಗೆಯಲ್ಲಿ ಗುಡಿಗೆ ಒಯ್ಯುವ, ಮಸಾಲೆ ಅರೆಯುವ, ಮಾಂಸದಡಿಗೆ ಮಾಡುತ್ತ ರಸ್ತೆಯಲ್ಲಿ ಹೋಗಿಬರುವವರ ಮೂಗಿಗೆ ಪರಿಮಳವನ್ನು ನುಗ್ಗಿಸಿ ಸಮ್ಮೋಹನಗೊಳಿಸುವ, ಸಾಲಾಗಿ ಕುಳಿತು ತಿನ್ನುವ, ಮರದಡಿ ಮಲಗಿ ವಿಶ್ರಾಂತಿ ಪಡೆಯುವ ದೃಶ್ಯಗಳಿಂದ ಅಲ್ಲಿನ ಪರಿಸರ ತುಂಬಿಹೋಗುತ್ತದೆ. ಇದೇ ದೃಶ್ಯವನ್ನು ಹಂಪಿಗೆ ಅನತಿದೂರದಲ್ಲಿರುವ ಹುಲಗಿಯಲ್ಲಿ ನೋಡಬಹುದು. ಇವ್ಯಾರಾರೂ ಮುಸ್ಲಿಮರ ಫಿತೂರಿಯಿಂದ ಇದನ್ನು ಮಾಡುತ್ತಿಲ್ಲ. ಆ ಆಚರಣೆಯನ್ನು ಕ್ರೂರ ಎನ್ನುವುದು, ಅವರ ಆಹಾರವನ್ನು ಅನಾಗರಿಕವೆನ್ನುವುದು, ಹುಲಿಗೆಮ್ಮನ ಅಥವಾ ಗಾಳೆಮ್ಮನ ಭಕ್ತರನ್ನು ನಮ್ಮವರಲ್ಲ ಎಂದಂತೆ ತಾನೇ? ಒಂದರ್ಥದಲ್ಲಿ ಇದು ನಿಜ. ಬಲಿ ಮತ್ತು ಮಾಂಸಾಹಾರವನ್ನು ಹಿಂಸೆ ಅಪವಿತ್ರ ಎನ್ನುವವರೇ ನಮ್ಮ ದೇಶದ ಸಂಸ್ಕೃತಿಗೆ ಬಾಹಿರರು.

ಮಾಂಸಾಹಾರದ ವಿರುದ್ಧ ಒಂದು ಯುದ್ಧವನ್ನೆ ಉಚ್ಚಜಾತಿವಾದಿಗಳು ಕೈಗೊಂಡಂತೆ ಕಾಣುತ್ತದೆ. ಗಂಗಾ ನದಿಯ ತೀರದ ಕ್ಷೇತ್ರಗಳಲ್ಲಿ ಅಡ್ಡಾಡುವಾಗ ಹೃಷಿಕೇಶದಲ್ಲಿ ನಾನೊಂದು ಬೋರ್ಡನ್ನು ನೋಡಿದೆ. ಅದರಲ್ಲಿ ಮಾಂಸಾಹಾರವನ್ನು ಹೇಯವೆಂದು ಬಣ್ಣಿಸುವ ಸಾಲುಗಳಿವೆ. ಬೆಂಗಳೂರಿನ ಜಯನಗರ ಮುಂತಾದ ಬಡಾವಣೆಗಳಲ್ಲಿ ಮೀನಿನಂಗಡಿ ತೆರೆಯುವುದಕ್ಕೆ ಮೀನುಗಾರಿಕೆ ಇಲಾಖೆಯು ಆಲೋಚಿಸುವಾಗ, ಅದನ್ನು ವಿರೋಧಿಸಿ ಪ್ರಜಾವಾಣಿಯಲ್ಲಿ ಆನಂದರಾಮಶಾಸ್ತ್ರಿ ಎಂಬುವವರು ಬರೆದ ಪತ್ರದ ಧಾಟಿಯು, 'ನಾವಿರುವ ಸ್ವರ್ಗದಲ್ಲಿ ಯಾಕೆ ಈ ನರಕ ತಂದು ಸ್ಥಾಪಿಸುತ್ತೀರಿ' ಎಂಬ ಹೇವರಿಕೆಯ ಧ್ವನಿಯಲ್ಲಿತ್ತು. ವಾಸ್ತವದಲ್ಲಿ ಇದು ಮೀನನ್ನು ತಿನ್ನುವವರ ಆಹಾರದ ಹಕ್ಕಿನ ಪ್ರಶ್ನೆ ಮಾತ್ರವಲ್ಲ, ನಮ್ಮ ನಾಡಿನ ಮೀನುಗಾರರ ಉದ್ಯೋಗದ ಪ್ರಶ್ನೆ ಕೂಡ. ಆದರೆ ಈ ದೇಶದ ಬಹುಸಂಖ್ಯಾತ ದುಡಿಯುವ ಜನ, ಮಾಂಸ ಮೀನು ಮೊಟ್ಟೆಗಳ ಸೇವನೆಯ ವಿಷಯ ಬಂದಾಗ, ಹಿಂಸೆ ಕ್ರೂರ ಅಸಹ್ಯ ಎಂಬ ತಕರಾರು ತೆಗೆಯುತ್ತಾರೆ. ಕರ್ನಾಟಕದ ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆ ಕೊಡುವ ಪ್ರಕರಣವನ್ನು ಗಮನಿಸಿ. ಅದು ಬಹುಸಂಖ್ಯಾತರ ಮತ್ತು ಬಡ ಹಳ್ಳಿಗಾಡಿನ ಮಕ್ಕಳು ಆಹಾರದಲ್ಲಿ ಪೌಷ್ಟಿಕತೆಯನ್ನು ಸಾರ್ವಜನಿಕ ವ್ಯವಸ್ಥೆಯಲ್ಲಿ ಪಡೆಯುವ ಸಣ್ಣ ಅವಕಾಶವನ್ನು ಅಲ್ಪಸಂಖ್ಯಾತರೂ ಪ್ರಭಾವಶಾಲಿಗಳೂ ಆದ ಮೇಲ್ಜಾತಿಯ ಸಸ್ಯಾಹಾರಿಗಳು ತಪ್ಪಿಸಿಬಿಟ್ಟರು. ಅದೇ ಹೊತ್ತಲ್ಲಿ, ಜೈನಸ್ವಾಮಿಯೊಬ್ಬರು, ಮೊಟ್ಟೆ ಕೊಟ್ಟರೆ ಶಾಲೆಗಳಿಂದ ವೀರಪ್ಪನ್‌ಗಳು ಹುಟ್ಟುತ್ತಾರೆ ಎಂದು ಎಚ್ಚರಿಸಿದರು. ಮಾಂಸಾಹಾರಕ್ಕೂ ಮಾನವ ಸ್ವಭಾವಕ್ಕೂ ಸಂಬಂಧ ಜೋಡಿಸುವ ಮತ್ತು ಅದನ್ನು ರಾಕ್ಷಸೀಕರಿಸುವ ಈ ವಿಧಾನವು ಸೋಜಿಗ ಹುಟ್ಟಿಸುತ್ತದೆ. ತಾವು ಜಪ್ತಿಮಾಡುವ ಸ್ಥಳಗಳಲ್ಲಿ ಮಾರ್ಕ್ಸ್‌ನ ಪುಸ್ತಕ ಅಥವಾ ಕುರಾನ್ ಸಿಕ್ಕರೆ ಅದನ್ನು ಅಪರಾಧಕ್ಕೆ ಒಂದು ಸಾಕ್ಷ್ಯವೆಂಬಂತೆ ಹೇಳುವ ಪೋಲಿಸ್ ವರದಿಗಳಂತೆ, ಒಬ್ಬ ವ್ಯಕ್ತಿಯು ದುಷ್ಟನೆಂದು ಸೂಚಿಸಲು ಅವನ ಮಾಂಸಾಹಾರದ ಅಭ್ಯಾಸಕ್ಕೆ ಲಗತ್ತಿಸುವಿಕೆ ನಡೆದಿದೆ. ರಾಕ್ಷಸರು ಯಾಗಕೆಡಿಸಲು ಮಾಂಸ ತಂದು ಹಾಕುತ್ತಿದ್ದರು ಅವರಿಗೆ ಕೋರೆಹಲ್ಲು ದ್ದವು, ಅವರು ಮಾಂಸಾಹಾರ ಮಾಡುತ್ತಿದ್ದರು ಎಂಬ ಬ್ರಾಹ್ಮಣವಾದಿ ಪುರಾಣಗಳ ಆಧುನಿಕ ಆವೃತ್ತಿಗಳಿವು. ಈಗಲೂ ಸಿನಿಮಾಗಳಲ್ಲಿ ('ದುನಿಯಾ') ಭೂಗತ

ಮಾಂಸಾಹಾರವನ್ನು ಒಂದು ಸಮುದಾಯ ಅಥವಾ ಕೆಲವು ವ್ಯಕ್ತಿಗಳು ನಿಷೇಧಿಸಿಕೊಳ್ಳುವುದು, ಒಂದು ದೊಡ್ಡ ಸಮಸ್ಯೆಯಲ್ಲ; ಆದರೆ ಅದು ತಿರುಗಿ ತಿನ್ನುವವರ ಮೇಲೆ ಹಲ್ಲೆಯಾಗಿ ಪರಿಣಮಿಸಿರುವುದು ಸಮಸ್ಯೆ. ತಿನ್ನುವ ಜನ ತಮ್ಮ ದೇವತೆಗಳಿಗೆ ಪ್ರಾಣಿಬಲಿ ಕೊಡುವುದನ್ನು 'ಬರ್ಬರ ಹತ್ಯೆ' ಎಂದು ಬಣ್ಣಿಸುವ ಮನೋಭಾವವು ಒಂದು ಸಮಸ್ಯೆ; ನಮ್ಮ ಕೆಲವು ಪತ್ರಕರ್ತರು ಗ್ರಾಮದೇವತೆಗಳ ಜಾತ್ರೆಗಳ ಮೇಲೆ ಮಾಡುವ ವರದಿಯಲ್ಲಿ ಈ ಮನೋಭಾವವನ್ನು ಕಾಣಬಹುದು.

ಜಗತ್ತಿನಕೇಡಿಗಳು ಕೊಲೆಮಾಡಿಸಿದ ಬಳಿಕ ಮಾಂಸದೂಟ ಮಾಡುವ ದೃಶ್ಯಗಳಿರುವುದನ್ನು ಗಮನಿಸಬೇಕು. ಭೈರಪ್ಪನವರ ಆವರಣದಲ್ಲಿ ನೀಚಪಾತ್ರವಾದ ಶಾಸ್ತ್ರಿಯು ಹೋಟೆಲಿನಲ್ಲಿ ದನದ ಮಾಂಸ ತಿನ್ನುವ ದೃಶ್ಯವಿದೆ; ಕಾದಂಬರಿ ಸಜ್ಜನನೆಂದು ಚಿತ್ರಿಸುವ ಒಕ್ಕಲಿಗರು ಮಾಂಸ ತ್ಯಜಿಸಿ ಸಸ್ಯಾಹಾರಿಗಳಾಗುತ್ತಾರೆ. ದನದ ಮಾಂಸ ತಿನ್ನುವವರ ಕೈಕಡಿಯಬೇಕು, ನಾಲಿಗೆ ಕತ್ತರಿಸಬೇಕು ಎಂಬ ಹುಕುಮುಗಳನ್ನು ಸಂಘಪರಿವಾರದ ಜನರು ಬೇಕಾದಷ್ಟು ಸಲ ಆಡಿದರು. ಹರಿಯಾಣದ ಜಜ್ಜರ್ ಪ್ರಕರಣದಲ್ಲಿ ಒಬ್ಬ ವಿಶ್ವಹಿಂದೂ ಪರಿಷತ್ತಿನ ಸ್ವಾಮಿಯವರು, "ಹೌದು ದಲಿತರಿಗಿಂತ ದನದ ಜೀವ ಹೆಚ್ಚು ಪವಿತ್ರ" ಎಂದು ಎಗ್ಗಿಲ್ಲದೆ ಒಪ್ಪಿಕೊಂಡರು. ಭಾರತದಲ್ಲಿ ಮಾಂಸಾಹಾರದ ಮೇಲಿನ ಹಲ್ಲೆಯು ಸಸ್ಯಾಹಾರವಾದಿ ಕ್ಲಬ್ಬುಗಳ ಮೂಲಕ, ವೈದ್ಯರ ಹೇಳಿಕೆಗಳ ಮೂಲಕ, ಗೋರಕ್ಷಣ ಚಳವಳಿಗಳ ಮೂಲಕ, ಜೈನ ವ್ಯಾಪಾರಿಗಳ ಪ್ರಾಣಿದಯಾ ಸಂಘಗಳ ಮೂಲಕ ಹೀಗೆ ನಾನಾ ನೆಲೆಗಳಿಂದ ಮಾಡಲಾಗುತ್ತಿದೆ.

ಮಾಂಸಾಹಾರದ ಮೇಲೆ ಸಾರಲಾಗಿರುವ ಈ ಯುದ್ಧವು ಕೇವಲ ಆಹಾರದ ಮೇಲಿನ ಹಲ್ಲೆಯಲ್ಲ. ಆಳದಲ್ಲಿದ್ದು ಕೆಳಜಾತಿಗಳ ದಲಿತರ ಮುಸ್ಲಿಮರ ಕ್ರೈಸ್ತರ ಮೇಲೆ, ಅವರ ಧರ್ಮ, ದೈವಗಳು, ಜೀವನಕ್ರಮ ಮತ್ತು ಚಿಂತನೆಗಳ ಮೇಲೆ ಸಾರಿರುವ ಸಾಂಸ್ಕೃತಿಕ ಹಲ್ಲೆ. ಜನ ತಮ್ಮ ಇಚ್ಛೆಯಿಂದ ಮಾಂಸಾಹಾರ ಮಾಡುವ ಕಾರಣದಿಂದ ಮುಜುಗರಕ್ಕೆ ಈಡಾಗುವ, ಅಪಮಾನಿತನಾಗುವ ಹಾಗೂ ಪ್ರಾಣಕಳೆದುಕೊಳ್ಳಬೇಕಾದ ಸಮಾಜವನ್ನು ಏನೆಂದು ಕರೆಯಬೇಕು? ಹೀಗೆ ಅಪಮಾನ ಮುಜುಗರ ಮತ್ತು ಕೊಲೆಗೆ ಈಡಾಗುವವರಲ್ಲಿ ಬ್ರಾಹ್ಮಣರೂ ಇದ್ದಾರೆ. (ಉಡುಪಿಯ ದನದವ್ಯಾಪಾರಿ ಕೃಷ್ಣಯ್ಯನವರು) ಆದರೆ ಹೆಚ್ಚಿನವರು ದಲಿತರು ಮತ್ತು ಮುಸ್ಲಿಮರು. ಇದು ಆಕಸ್ಮಿಕವಲ್ಲ. ಈಚೆಗೆ ಬಾಳೆಹೊನ್ನೂರಿನಲ್ಲಿ ಮಾಂಸ ಒಯ್ಯುತ್ತಿದ್ದ ಇಬ್ಬರನ್ನು ಹಿಡಿದು ಸಂಘಪರಿವಾರದವರು ಅವರ ಕೊರಳಿಗೆ ಅದನು ಹಾರವಾಗಿ ಹಾಕಿ ಅರೆಬೆತ್ತಲೆ ಮೆರವಣಿಗೆ ಮಾಡಲಾಗಿದೆ.

ಆಹಾರದ ಒಳಹಲ್ಲೆಗಳು ಸ್ವತಃ ಮಾಂಸಾಹಾರಿಗಳ ಒಳಗೇ ಬೇರೆಬೇರೆ ತರಹ ಇವೆ. ಉದಾಹರಣೆಗೆ, ಕೋಳಿ ಕುರಿ ತಿನ್ನುವವರು ದನದ ಮಾಂಸ ತಿನ್ನುವವರನ್ನು ಕೀಳೆಂದು ತಿಳಿಯುತ್ತಾರೆ; ಮೀನು ತಿನ್ನುವ ಕೊಂಕಣಿ ಬ್ರಾಹ್ಮಣರನ್ನು ಉಳಿದ ಬ್ರಾಹ್ಮಣರು ಕೀಳಾಗಿ ನೋಡುತ್ತಾರೆ; ದನದ ಮಾಂಸದ ತಿನ್ನದ ಮೇಲ್ವರ್ಗದ ಮುಸ್ಲಿಮರಲ್ಲಿ ಕೆಲವರು, ಹಾಗೆ ತಿನ್ನುವವರನ್ನು ಕೀಳಾಗಿ ನೋಡುತ್ತಾರೆ; ಕುರಿ ಕೋಳಿ ದನದ ಮಾಂಸ ಮಾರುವ ಅಂಗಡಿಗಳಲ್ಲಿ ಹೋದರೆ ಅಲ್ಲಿ ಬರುವ ಗಿರಾಕಿಗಳಿಗೂ ಅವರ ವರ್ಗಕ್ಕೂ ಇರುವ ಸಂಬಂಧ ಗೊತ್ತಾಗುತ್ತದೆ. ಇದು ಸಾಲದು ಎಂಬಂತೆ ಕೆಲವೊಮ್ಮೆ ನಮ್ಮ ವಿಚಾರವಾದಿಗಳೂ ಮಾಡುವುದುಂಟು. ಮಾಜಿಮಂತ್ರಿ ಎಚ್. ವಿಶ್ವನಾಥರು ಕುರಿಬಲಿ ಕೊಟ್ಟಿದ್ದು ತಪ್ಪೆಂದು ಮೈಸೂರಿನ ಕೆ. ರಾಮದಾಸ್ ಪ್ರತಿಭಟನೆ ಮಾಡಿದರು. ಅದರಲ್ಲಿ ಸಾಂಸ್ಕೃತಿಕ ಅಸೂಕ್ಷ್ಮತೆಯಿತ್ತು ಎಂದೇ ನನ್ನ ಅಭಿಪ್ರಾಯ.

ಒಬ್ಬ ವ್ಯಕ್ತಿ ಅಥವಾ ಸಮುದಾಯ ಮಾಂಸ ತಿನ್ನುವುದು ಅಥವಾ ತಿನ್ನದೆ ಇರುವುದು ಅಪರಾಧವಾಗಲಿ ಸಾಧನೆಯಾಗಲಿ ಆಗಬೇಕಿಲ್ಲ. ಆದರೆ ಅದು ದ್ವೇಷ ಮತ್ತು ಹಲ್ಲೆಗೆ ಕಾರಣವಾಗುವುದು ಮಾತ್ರ ವಿಚಿತ್ರ, ನಮ್ಮ ದೇಶದಲ್ಲಿ ಒಬ್ಬರ ಅಥವಾ ಒಂದು ಗುಂಪಿನ ಮೇಲೆ ಅನೇಕ ಕಾರಣಕ್ಕಾಗಿ ಹಲ್ಲೆಗಳು ನಡೆಯುತ್ತಿವೆ. ಅವನ್ನು ರಾಜಕೀಯ ಹಲ್ಲೆ, ಜಾತಿದ್ವೇಷದ ಹಲ್ಲೆ, ಕೋಮುದ್ವೇಷದ ಹಲ್ಲೆ, ಅನ್ಯಭಾಷಿಕರ ಮೇಲಣ ಹಲ್ಲೆ, ಅನ್ಯ ಪ್ರದೇಶಗಳಿಂದ ಬಂದವರ ಮೇಲಣ ಹಲ್ಲೆ ಎಂದು ಪಟ್ಟಿಮಾಡಬಹುದು. ಯಾವುದೊ ಒಂದು ಶಕ್ತಿದೇವತೆಯನ್ನು ಪೂಜಿಸುವವರು ಎಂದು ಟಿಬೆಟ್ಟಿನ ಬೌದ್ಧರಲ್ಲಿ ಒಂದು ಗುಂಪನ್ನು ಹಲ್ಲೆಗೆ ಒಳಪಡಿಸಲಾಗಿದೆ. ನಾಗರಿಕ ಸಮಾಜಗಳು ಬುಡಕಟ್ಟಿನವರ ಮೇಲೆ ಮಾಡುವ ದಬ್ಬಾಳಿಕೆಯಿದೆ. ಗಂಡಸರು ಮಹಿಳೆಯರ ಮೇಲೆ ಎಸಗುತ್ತಿರುವ ಕೌಟುಂಬಿಕ ಹಿಂಸೆಗಳಿವೆ. ತಮ್ಮ ಚರ್ಮದ ಬಣ್ಣಕ್ಕಾಗಿಯೇ ನೋವಿಗೆ ಒಳಗಾದ ನೀಗ್ರೋಗಳಿದ್ದಾರೆ. ಯಹೂದಿಗಳು ಧರ್ಮಕಾರಣಕ್ಕಾಗಿ ಕೊಲ್ಲಲ್ಪಟ್ಟರು. ಕರ್ನಾಟಕದಲ್ಲಿ ಜೈನರು ಮತ್ತು ಬೌದ್ಧರನ್ನು ಹಾಗೆ ಕೊಲ್ಲಲಾಗಿದೆ. ನಂಬಿದ ವಿಚಾರಧಾರೆಯು ಹಲ್ಲೆಯನ್ನು ಆಹ್ವಾನಿಸುತ್ತದೆ. ಭಾರತದ ಚಾರ್ವಾಕರು ಇಂತಹ ಸಾವನ್ನು ಕಂಡಿದ್ದಾರೆ. ಇವುಗಳಲ್ಲೆಲ್ಲ ಆಹಾರದ ಮೇಲಣ ಹಲ್ಲೆಯು ಅತ್ಯಂತ ನೀಚವಾಗಿದೆ.

ಒಬ್ಬ ವ್ಯಕ್ತಿ ಅಥವಾ ಸಮುದಾಯ ಮಾಂಸ ತಿನ್ನುವುದು ಅಥವಾ ತಿನ್ನದೆ ಇರುವುದು ಅಪರಾಧವಾಗಲಿ ಸಾಧನೆಯಾಗಲಿ ಆಗಬೇಕಿಲ್ಲ. ಆದರೆ ಅದು ದ್ವೇಷ ಮತ್ತು ಹಲ್ಲೆಗೆ ಕಾರಣವಾಗುವುದು ಮಾತ್ರ ವಿಚಿತ್ರ, ನಮ್ಮ ದೇಶದಲ್ಲಿ ಒಬ್ಬರ ಅಥವಾ ಒಂದು ಗುಂಪಿನ ಮೇಲೆ ಅನೇಕ ಕಾರಣಕ್ಕಾಗಿ ಹಲ್ಲೆಗಳು ನಡೆಯುತ್ತಿವೆ. ಅವನ್ನು ರಾಜಕೀಯ ಹಲ್ಲೆ, ಜಾತಿದ್ವೇಷದ ಹಲ್ಲೆ, ಕೋಮುದ್ವೇಷದ ಹಲ್ಲೆ, ಅನ್ಯಭಾಷಿಕರ ಮೇಲಣ ಹಲ್ಲೆ, ಅನ್ಯ ಪ್ರದೇಶಗಳಿಂದ ಬಂದವರ ಮೇಲಣ ಹಲ್ಲೆ ಎಂದು ಪಟ್ಟಿಮಾಡಬಹುದು.

ಆಹಾರವು ಸಂಸ್ಕೃತಿಯ ಬಹಳ ಸೂಕ್ಷ್ಮಸಂವೇದನೆಗೆ ಸಂಬಂಧಪಟ್ಟ ಮತ್ತು ಆಳವಾಗಿ ಬೇರುತಳೆದ ಸಂಗತಿಯಾಗಿದೆ. ಆದ್ದರಿಂದ ಅದನ್ನು ದೈಹಿಕ ಮತ್ತು ಸಾಂಸ್ಕೃತಿಕ ಹಲ್ಲೆಗಳಿಂದ ಸುಲಭವಾಗಿ ಸೋಲಿಸಲು ಸಾಧ್ಯವಿಲ್ಲ. ಜಿಗುಟುತನದಿಂದ ಅದು ತನ್ನನ್ನು ಬದುಕಿಸಿಕೊಳ್ಳುತ್ತದೆ. ಮಾಂಸಾಹಾರವನ್ನು ಲಿಂಗದೀಕ್ಷೆ ಪಡೆದವರಿಗೆ ನಿಷೇಧಿಸಿದ ಬಸವಣ್ಣನೆ ಒಂದು ಕಡೆ ಕೈಯಲ್ಲಿ ಮಾಂಸ, ಬಾಯಲ್ಲಿ ಸುರೆಗಡಿಗೆ, ಕೊರಳಲ್ಲಿ ಲಿಂಗ ಇರುವವರನ್ನು ಮುಖಲಿಂಗಿಗಳು ಎಂದು ಒಪ್ಪಿಕೊಳ್ಳಬೇಕಾಗಿದ್ದು ಇದಕ್ಕೆ ಸಾಕ್ಷಿ. ಲಂಕೇಶರ 'ಸಂಕ್ರಾಂತಿ' ನಾಟಕವು ಆಹಾರ ಮತ್ತು ದೈವಗಳ ಮೇಲಿನ ಹಲ್ಲೆಗಳು ಒಂದೇ ಕೇಂದ್ರದಿಂದ ಹುಟ್ಟುತ್ತವೆ ಮತ್ತು ಅದು ಎಂತಹ ಹಿಂಸೆ ಮತ್ತು ಪ್ರತಿರೋಧಗಳನ್ನು ಹುಟ್ಟಿಸುತ್ತದೆ ಎಂಬುದನ್ನು ಕಾಣಿಸುತ್ತದೆ. ಕಳೆದ ತಿಂಗಳು ದನದ ಮಾಂಸ ತಿನ್ನುವವರು ರಾಕ್ಷಸರು ಎಂದು ಹೇಳಿದ ರಾಮಚಂದ್ರಾಪುರದ ಸ್ವಾಮಿಗಳ ಮಾತಿಗೆ, ಪುಟ್ಟಣ್ಣಚೆಟ್ಟಿ ಹಾಲಿನ ಎದುರು ದಲಿತರು ಮಾಂಸ ಬೇಯಿಸಿ ತಿಂದ ಪ್ರಕರಣವು ಒಂದು ಅರ್ಥಪೂರ್ಣ ಪ್ರತಿರೋಧವಾಗಿದೆ. ಆದರೂ ಈ ಆಹಾರದ ಹಲ್ಲೆಯನ್ನು ಬೇರೆಬೇರೆ ಬಗೆಯಲ್ಲಿ ಭವಿಷ್ಯದಲ್ಲಿ ಎದುರಿಸುತ್ತಲೇ ಇರಬೇಕಾದ ಸನ್ನಿವೇಶವು ಮಾತ್ರ ದುಗುಡವನ್ನು ಉಂಟುಮಾಡುತ್ತದೆ.

ವೈರುಧ್ಯವೆಂದರೆ, ಈ ಹಲ್ಲೆಯನ್ನು ಮಾಡುತ್ತಿರುವವರ ಹಿರೀಕರು ಚರಿತ್ರೆಯಲ್ಲಿ ಮಾಂಸಾಹಾರಿಗಳಾಗಿದ್ದುದು. ಆದರೆ ಈ ಸತ್ಯವನ್ನು ಅನಾವರಣ ಮಾಡುವ ವಿದ್ವಾಂಸರ ಮೇಲೂ ಹಲ್ಲೆ ನಡೆಯುತ್ತಿದೆ. ಅವರ ಪುಸ್ತಕಗಳನ್ನು ನಿಷೇಧಿಸಲಾಗುತ್ತಿದೆ. ಇದರಲ್ಲಿ ದೆಹಲಿ ವಿವಿಯ ಡಿ.ಎನ್ ಝಾ ಬರೆದ 'ಹೋಲಿ ಕೌ: ಬೀಫ್ ಇನ್ ಇಂಡಿಯನ್ ಡಯಟರಿ ಟ್ರೆಡಿಶನ್' ಕೃತಿಯೂ ಸೇರಿದೆ. ಝಾ ಅವರು ಕೊಲೆಯ ಬೆದರಿಕೆಗಳಲ್ಲಿ ಬದುಕಿದ್ದಾರೆ. ದನದ ಮಾಂಸ ತಿನ್ನುತ್ತಿದ್ದ ಬ್ರಿಟಿಶರಿಗೆ ಊಳಿಗ ಮಾಡುವಾಗ ಬಾರದ ಕೋಪ, ದನದ ಮಾಂಸ ತಿನ್ನುವ ಸಮಾಜಗಳಿರುವ ಇಂಗ್ಲೆಂಡು ಅಮೆರಿಕಕ್ಕೆ ಹೋಗಿ ನೆಲೆಸುವಾಗ ಬಾರದ ದ್ವೇಷ, ತಮ್ಮ ಜತೆಯಲ್ಲಿ ಬದುಕುವ ಜನರ ಮೇಲೆ ಹುಟ್ಟಿರುವುದು ಒಂದು ಹಿಪಾಕ್ರಸಿಯಾಗಿದೆ. 'ಅಸ್ಪೃಶ್ಯರು' ಕೃತಿಯನ್ನು ಬರೆಯುವಾಗ ಅಂಬೇಡ್ಕರ್ ಅವರಲ್ಲಿರುವುದು, ವಿದ್ವತ್ತಿನಿಂದ ಆಹಾರ ಸಂಸ್ಕೃತಿಯ ಚರಿತ್ರೆಯನ್ನೆಲ್ಲ ಹೊರಗೆಡಹುವ ವಿದ್ವತ್ತಿನ ಪ್ರಖರತೆ ಮಾತ್ರವಿಲ್ಲ; ಇಂತಹ ಸಣ್ಣವಿಷಯಕ್ಕೂ ಅಪಮಾನ ಹಿಂಸೆ ಸೃಷ್ಟಿಮಾಡಿರುವ ಸಮಾಜದಲ್ಲಿ ನಾವಿದ್ದೇವಲ್ಲ ಎಂಬ ಗಾಢ ವಿಷಾದ. ಆಹಾರದ ಹಕ್ಕನ್ನು ಮನ್ನಿಸದ ಸಮಾಜವು ಎಂದೂ ಮಾನುಷವಾಗಿರುವುದು ಸಾಧ್ಯವಿಲ್ಲ. ಒಂದು ದೇಶದಲ್ಲಿ ಚುನಾವಣೆಗಳು ಸಕಾಲಕ್ಕೆ ನಡೆಯುತ್ತಿವೆ ಎಂಬ ಕಾರಣಕ್ಕೆ ಡೆಮಾಕ್ರಸಿ ಇರಬಹುದು. ಆದರೆ ಆಹಾರದ ಸ್ವಾತಂತ್ರ್ಯವನ್ನು ಮನ್ನಿಸದ ಸಮಾಜದಲ್ಲಿ ಅರ್ಥಪೂರ್ಣ ಡೆಮಾಕ್ರಸಿ ಇರುವುದು ಸಾಧ್ಯವಿಲ್ಲ. □

ಭಯ

ಗೇಣು
ಹೊಟ್ಟೆಯಲ್ಲಿ
ಹಸಿದ
ಹುಲಿಗಳಿವೆ
ನನ್ನನ್ನೇ
ತಿಂದು
ಬಿಡುತ್ತವೆಂದು
ಭಯವಾಗಿದೆ!



○ ಟಿ.ಎಸ್. ರಾಜೇಂದ್ರ ಪ್ರಸಾದ್

೨೦೦೬-೨೦೧೫ರ ಹೊತ್ತಿಗೆ ಭಾರತೀಯ ಕೈಗಾರಿಕೆಗಳ ಒಕ್ಕೂಟ ಅಂದಾಜಿಸಿರುವಂತೆ ಭಾರತದಲ್ಲಿ ೧೫೫ ವಾಣಿಜ್ಯ ವಾಹನಗಳನ್ನು ಹೊಂದಿರುತ್ತದೆ. ಇವುಗಳಲ್ಲಿ ಶೇ. ೧೦ರಷ್ಟು ರಸ್ತೆಯ ಮೇಲೆ ಇರುವುದಿಲ್ಲವೆಂದು ಭಾವಿಸಿದರೂ ಸಹ ಇನ್ನು ಹತ್ತು ವರ್ಷಗಳಲ್ಲಿ ೧೪೦ ವಿಲಿಯನ್ ವಾಹನಗಳನ್ನು ನಡೆಸಲು ಡ್ರೈವರ್‌ಗಳ ಅಗತ್ಯವಿರುತ್ತದೆ. ಹೀಗಿರುವಾಗ ಜಾತಿ ರಹಿತವಾಗಿರುವ ಈ ಡ್ರೈವರು ಉದ್ಯೋಗ ಹೆಚ್ಚು ಆದಾಯಗಳಿಸುವಂತದ್ದಾಗಿದ್ದು ಮೇಲೆ ಹೇಳಿದ ಜಾತಿ ಆಧಾರಿತ ಉದ್ಯೋಗಗಳಿಗಿಂತ ಉತ್ತಮವಾದುದಾಗಿದೆಯಲ್ಲದೆ ಅದು ಮಿಲಿಯಗಟ್ಟಲೆ ಅಭ್ಯರ್ಥಿಗಳನ್ನು ಬಯಸುತ್ತದೆ. ಅರ್ಧಕ್ಕಿಂತಲೂ ಅಧಿಕವಾಗಿ ೧೦ನೇ ತರಗತಿಯ ನಂತರ ದಲಿತ ಮಕ್ಕಳು ಶಿಕ್ಷಣ ನಿಲ್ಲಿಸುತ್ತಾರೆನ್ನುವ ಸಂಗತಿಯನ್ನು ಗಮನಿಸುವಾಗ ಗಣ್ಯ ಉದ್ಯೋಗ ಮಾರುಕಟ್ಟೆಯಲ್ಲಿ ಚಾಲಕ-ಉದ್ಯೋಗ ಅವರಿಗೆ ತೆರೆದು ಕೊಳ್ಳುತ್ತದೆ.

ಅನು : ಡೊಮಿನಿಕ್. ಡಿ

ಶತಮಾನಗಳಿಂದ ಸಮುದಾಯದ ಮೇಲೆ ಹೇರಲಾಗಿರುವ ಜಾತಿ ಆಧಾರಿತ ವೃತ್ತಿಯಿಂದ ಬಿಡುಗಡೆಯಾಗದ ಹೊರತು, ದಲಿತರು ಎಂದೂ ವಿಮೋಚನೆಯನ್ನು ಕಾಣಲು ಸಾಧ್ಯವಿಲ್ಲ. ದಲಿತರಿಗೆ ಮತ್ತೊಂದು ಶಾಪವಾಗಿರುವ ಕೃಷಿಯಿಂದ ಅವರು ಮತ್ತೊಂದಕ್ಕೆ ಪಲ್ಲಟಗೊಳ್ಳಬೇಕಾಗಿದೆ. ಕಮ್ಮಿ ಕೂಲಿ ಮತ್ತು ಹೆಚ್ಚಿನ ದಮನಕ್ಕೊಳಗಾಗಿರುವವರೆಂದರೆ ಭೂರಹಿತ ಕೃಷಿ ಕಾರ್ಮಿಕರು. ಪ್ರಜಾಪ್ರಭುತ್ವ ನೀಡಿರುವಂಥ ಹಕ್ಕುಗಳನ್ನು ಈ ಕೃಷಿ ಕಾರ್ಮಿಕರು ಕಾಯ್ದುಕೊಳ್ಳುತ್ತಾರಲ್ಲದೆ, ಸಾರ್ವತ್ರಿಕ ಮತ ಚಲಾಯಿಸುವ ಹಕ್ಕನ್ನೂ ಸಹ ಇವರೇ ಉಳಿಸಿಕೊಳ್ಳುತ್ತಾರೆ.

ಸಮಾಜದಲ್ಲಿ ಬೂಟು ರಿಪೇರಿ/ಪಾಲೀಷು ಮಾಡುವುದು, ಹಂದಿ ಸಾಕಾಣೆ ಮಾಡುವುದು ದಲಿತರಿಗೆ ಹೆಚ್ಚು ಹಣ ಒದಗಿಸಬಹುದಾದರೂ ಸಹ ಅದು ಅವಮಾನೀಯವಾದುದು. ೬೦ ವರ್ಷಗಳ ಯೋಜನಾ ಬದ್ಧ ಅಭಿವೃದ್ಧಿ ತಂತ್ರೋಪಾಯಗಳ ಹೊರತಾಗಿಯೂ ಸಹ ಸಮಗಾರರೆಲ್ಲಾ ದಲಿತರೇ ಆಗಿದ್ದಾರೆ.

ಅಂದರೆ ಕಮ್ಮಿ ಕೂಲಿ ತರುವ ಮತ್ತು ಸಾಮಾಜಿಕವಾಗಿ ಅವಮಾನೀಯವಾದ ಈ ವೃತ್ತಿಗಳಿಂದ ದಲಿತರನ್ನು ಬಿಡಿಸುವುದಾದರೂ ಹೇಗೆ? ಅದನ್ನು ಮಾಡಲು ಅನೇಕ ಮಾರ್ಗಗಳು ಇವೆ. ಅವುಗಳನ್ನು ಮುಂದೆ ಚರ್ಚಿಸಬಹುದಾಗಿದೆ:

ತೀವ್ರವಾಗಿ ಮುಂದುವರೆಯುತ್ತಿರುವ ಬಂಡವಾಳಶಾಹಿ ಭಾರತದಲ್ಲಿ ಆರ್ಥಿಕ ಸುಧಾರಣೆ ಆದಮೇಲೆ ಆಟೋಮೊಬೈಲ್ ಕೈಗಾರಿಕೆ ಬಹುವಾಗಿ ಬೆಳವಣಿಗೆಯನ್ನು ಕಂಡಿದೆ. ೨೦೦೬-೨೦೦೭ರಲ್ಲಿ ಭಾರತೀಯ ಕೈಗಾರಿಕೆಗಳ ಒಕ್ಕೂಟ ನಡೆಸಿದ ಅಧ್ಯಯನದ ಪ್ರಕಾರ ೩.೬೫ ಮಿಲಿಯನ್ ವಾಣಿಜ್ಯ ವಾಹನಗಳು (ಲಾರಿ, ಬಸ್, ಟ್ಯಾಕ್ಸಿಗಳು), ೩.೭೯ ಮಿಲಿಯನ್ ಮೂರು ಚಕ್ರ ವಾಹನಗಳು ಮತ್ತು ೧೨.೭೩ ಮಿಲಿಯನ್ ಖಾಸಗಿ ಕಾರುಗಳು ರಸ್ತೆಯಲ್ಲಿ ಇದ್ದವು. ಅಂದರೆ ಪ್ರತಿ ೫ ಪ್ಯಾಸೆಂಜರ್ ಕಾರ್‌ಗಳಲ್ಲಿ ಒಂದನ್ನು ಒಬ್ಬ ಚಾಲಕ ನಡೆಸುತ್ತಾನೆಂದು ಭಾವಿಸಿದಲ್ಲಿ ಈ ವಾಹನ ಕೈಗಾರಿಕೆಯಗೆ ಒಂದು ವರ್ಷದಲ್ಲಿ ಒಂದು ಮಿಲಿಯನ್ ಡ್ರೈವರ್‌ಗಳು ಬೇಕಾಗುತ್ತಾರೆ.

೨೦೦೬-೨೦೧೫ರ ಹೊತ್ತಿಗೆ ಭಾರತೀಯ ಕೈಗಾರಿಕೆಗಳ ಒಕ್ಕೂಟ ಅಂದಾಜಿಸಿರುವಂತೆ ಭಾರತದಲ್ಲಿ ೧೫೫ ವಾಣಿಜ್ಯ ವಾಹನಗಳನ್ನು ಹೊಂದಿರುತ್ತದೆ. ಇವುಗಳಲ್ಲಿ ಶೇ. ೧೦ರಷ್ಟು ರಸ್ತೆಯ ಮೇಲೆ ಇರುವುದಿಲ್ಲವೆಂದು ಭಾವಿಸಿದರೂ ಸಹ ಇನ್ನು ಹತ್ತು ವರ್ಷಗಳಲ್ಲಿ ೧೪೦ ವಿಲಿಯನ್ ವಾಹನಗಳನ್ನು ನಡೆಸಲು ಡ್ರೈವರ್‌ಗಳ ಅಗತ್ಯವಿರುತ್ತದೆ. ಹೀಗಿರುವಾಗ ಜಾತಿ ರಹಿತವಾಗಿರುವ ಈ ಡ್ರೈವರು ಉದ್ಯೋಗ ಹೆಚ್ಚು ಆದಾಯಗಳಿಸುವಂತದ್ದಾಗಿದ್ದು ಮೇಲೆ ಹೇಳಿದ ಜಾತಿ ಆಧಾರಿತ ಉದ್ಯೋಗಗಳಿಗಿಂತ ಉತ್ತಮವಾದುದಾಗಿದೆಯಲ್ಲದೆ ಅದು ಮಿಲಿಯಗಟ್ಟಲೆ ಅಭ್ಯರ್ಥಿಗಳನ್ನು ಬಯಸುತ್ತದೆ.

ಅರ್ಧಕ್ಕಿಂತಲೂ ಅಧಿಕವಾಗಿ ೧೦ನೇ ತರಗತಿಯ ನಂತರ ದಲಿತ ಮಕ್ಕಳು ಶಿಕ್ಷಣ ನಿಲ್ಲಿಸುತ್ತಾರೆನ್ನುವ ಸಂಗತಿಯನ್ನು ಗಮನಿಸುವಾಗ ಗಣ್ಯ ಉದ್ಯೋಗ ಮಾರುಕಟ್ಟೆಯಲ್ಲಿ ಚಾಲಕ-ಉದ್ಯೋಗ ಅವರಿಗೆ ತೆರೆದುಕೊಳ್ಳುತ್ತದೆ. ವಾಣಿಜ್ಯ ವಾಹನ ನಡೆಸುವ ಪರವಾನಿಗೆ ಪಡೆಯಲು ೮ನೇ ತರಗತಿಯ ಪ್ರಮಾಣ ಪತ್ರ ಸಾಕಾಗುತ್ತದೆ. ತರಬೇತಿಗಾಗಿ ಸ್ವಲ್ಪ ಹಣ ಬೇಕಾಗುತ್ತದೆಯಷ್ಟೆ.

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಹಾಗಾದರೆ ದಲಿತರು ಏನು ಮಾಡಬಹುದು? ದಲಿತ ಕುಟುಂಬವೊಂದರಲ್ಲಿ ೧೦ನೇ ತರಗತಿ ಬಿಟ್ಟ ವ್ಯಕ್ತಿಯನ್ನು ಒಂದು ಡ್ರೈವಿಂಗ್ ಶಾಲೆಗೆ ಸೇರಿಸುವಂತೆ ಪ್ರಚಾರಾಂದೋಲನ ಕೈಗೊಳ್ಳಬೇಕಾಗುತ್ತದೆ.

ಸರ್ಕಾರ ಏನು ಮಾಡಬಹುದು?

ಎಲ್ಲಾ ರಾಜಕೀಯ ಪಕ್ಷಗಳನ್ನೊಳಗೊಂಡಂತೆ ಸರ್ಕಾರಗಳೂ ಸಹ ದಲಿತರ ಏಳಿಗೆಯ ಬಗ್ಗೆ ಮಾತನಾಡುತ್ತವೆಯಾದ್ದರಿಂದ ಸಾಮಾಜಿಕವಾಗಿ ಅವಮಾನಕರ ಉದ್ಯೋಗಗಳಲ್ಲಿ ತೊಡಗಿರುವ ದಲಿತರ ಬಗ್ಗೆ ಸಮಗ್ರ ಮಾಹಿತಿ ಕೇಂದ್ರವನ್ನು ತೆರೆದು ಅಂಥ ಕುಟುಂಬವೊಂದರಲ್ಲಿ ವ್ಯಕ್ತಿಯೊಬ್ಬನಿ/ಳಿಗೆ ಚಾಲಕ ತರಬೇತಿಯನ್ನು ನೀಡಿವುದು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಖಾಸಗಿ ಕ್ಷೇತ್ರವೇನು ಮಾಡಬಹುದು? ಭಾರತೀಯ ಕೈಗಾರಿಕೆಗಳ ಒಕ್ಕೂಟ ಈಗ ಒಂದು ಸಕಾರಾತ್ಮಕ ಕಾರ್ಯಯೋಜನೆಯನ್ನು ಈ ಕೆಳಗಿನಂತೆ ಹಾಕಿಕೊಂಡಿದೆ:

– ಭಾರತೀಯ ರಾಷ್ಟ್ರಕ್ಕಾಗಿ ಅದರ ಪಿತಾಮಹರು ಸಮಾನತೆ ಮತ್ತು ಸಾಮಾಜಿಕ ನ್ಯಾಯ ಅನ್ನೋ ತಳಪಾಯವನ್ನು ಹಾಕಿ ಕೊಟ್ಟಿರುವುದರಿಂದ ಅದರ ಎಲ್ಲಾ ಫಲಾನುಭವಿಗಳಾಗಿರುವ ಸರ್ಕಾರ, ಸಮಾಜ, ಕೈಗಾರಿಕೆ ಎಲ್ಲವೂ ಮಹತ್ವದ ಪ್ರಗತಿಯನ್ನು ಸಾಧಿಸಿದೆ.

– ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅನಾನುಕೂಲ ಸ್ಥಿತಿಯಲ್ಲಿರುವ ಭಾರತೀಯ ಎಸಿ/ಎಸ್‌ಟಿ ಜನ ತಮ್ಮ ಪೂರ್ಣ ಸಾಮರ್ಥ್ಯವನ್ನು ಇನ್ನೂ ಸಾಧಿಸಲಾಗಿಲ್ಲ.

– ಸರ್ಕಾರ ಮತ್ತು ನಾಗರಿಕ ಸಮಾಜಗಳೆರಡೂ ಸೇರಿ ಎಲ್ಲಾ ಹಂತಗಳಲ್ಲಿ ಉದ್ಯೋಗದ ಉತ್ತಮ ಅವಕಾಶಗಳನ್ನು ವಂಚಿತ ಎಸ್/ಎಸ್‌ಟಿ ಜನಕ್ಕೆ ಸೃಷ್ಟಿಸುತ್ತಿರುವ ಪ್ರಯತ್ನಗಳಿಗೆ ಬೆಂಬಲವನ್ನೊದಗಿಸುವುದೇ ಖಾಸಗಿ ಕೈಗಾರಿಕೋದ್ಯಮದ ಸ್ಪಷ್ಟ ಗುರಿಯಾಗಿದೆ.

– ಎಲ್ಲಾ ವ್ಯಕ್ತಿಗಳ ವೈಯಕ್ತಿಕ ಬೆಳವಣಿಗೆಯ ಅವಕಾಶಗಳು ಎಲ್ಲರಿಗೂ ಸಿಗಬೇಕಾದರೆ ಐಕ್ಯ-ಸಮಷ್ಟಿ ಸಮಾಜವಿದ್ದು ಅಲ್ಲಿ, ಎಲ್ಲರನ್ನು ಒಳಗೊಂಡಂಥ ಅಭಿವೃದ್ಧಿಯ ಆರ್ಥಿಕ ಬೆಳವಣಿಗೆ ಮತ್ತು ಆರೋಗ್ಯಕರ ಸ್ಪರ್ಧೆಯನ್ನು ಭಾರತೀಯ ಕೈಗಾರಿಕೆಗಳ ಒಕ್ಕೂಟ ನಂಬುತ್ತದೆ.

ಇಂಥ ಒಳ್ಳೆಯ ಧ್ಯೇಯೋದ್ದೇಶಗಳನ್ನು ಹೊಂದಿರುವ ಭಾರತೀಯ ಕೈಗಾರಿಕೆಗಳ ಒಕ್ಕೂಟದ ಪ್ರತಿಯೊಬ್ಬ ಸದಸ್ಯನೂ ಸಹ ಒಂದೊಂದು ಪ್ರೌಢಶಾಲೆಯನ್ನು ದತ್ತು ತೆಗೆದುಕೊಂಡು ದಲಿತ ಕುಟುಂಬದಲ್ಲಿನ ಶಾಲೆ ಬಿಟ್ಟ ವ್ಯಕ್ತಿಯನ್ನು ಆಯ್ದುಕೊಂಡು ಚಾಲಕ ತರಬೇತಿಯನ್ನು ನೀಡಿ, ಅವರನ್ನು ಉದ್ಯೋಗಕ್ಕೆ ತೆಗೆದುಕೊಳ್ಳಬಹುದಲ್ಲವೇ?. ವಸ್ತುಸಂಗತಿಯೆಂದರೆ ಭಾರತೀಯ ಕೈಗಾರಿಕೆಗಳ ಒಕ್ಕೂಟ ೨೦೦೦ ಮಂದಿ ನೇರ ಸದಸ್ಯರನ್ನು ಹೊಂದಿದ್ದರೆ, ಸುಮಾರು ೬೦೦೦೦ ಮಂದಿ ಅಪರೋಕ್ಷ ಸದಸ್ಯರನ್ನು ಹೊಂದಿದೆ. ಶಾಲೆ ಬಿಟ್ಟ ಒಬ್ಬ ದಲಿತ ಯುವಕನೋರ್ವನನ್ನು ಮೇಲಿನ ಪ್ರತಿ

ಹುಡುಕಿ ಹೊಸ ಮಾರ್ಗ

ಯೊಬ್ಬ ಸದಸ್ಯರು ದತ್ತು ತೆಗೆದುಕೊಂಡಲ್ಲಿ ಭಾರತೀಯ ಕೈಗಾರಿಕೆಗಳ ಒಕ್ಕೂಟ ಪ್ರತಿವರ್ಷ ೧ ಲಕ್ಷ ದಲಿತ ಕುಟುಂಬಗಳಿಗೆ ಮುಕ್ತಿಯನ್ನು ನೀಡಿದಂತಾಗುತ್ತದೆ.

ದಲಿತ ಚಳುವಳಿ, ಸರ್ಕಾರ ಮತ್ತು ಖಾಸಗಿ ವಲಯಗಳು ಒಂದುಗೂಡಿ ಈ ಮೇಲಿನ ನೀಲನಕಾಶೆಯನ್ನು ಅಥವಾ ಉದ್ಯೋಗ ಅವಕಾಶವನ್ನು ಒಪ್ಪಿ ನಡೆದಲ್ಲಿ ಕೇವಲ ಒಂದು ದಶಕದಲ್ಲಿ ದಲಿತಕುಟುಂಬಗಳನ್ನು ಜಾತಿ ಆಧಾರಿತ ವೃತ್ತಿಗಳಿಂದ ಬಿಡುಗಡೆಗೊಳಿಸಬಹುದು. ಆದರೆ ಈ ಭರವಸೆ ಕೈಗೂಡುವುದೇ?

ಶಾಲೆಗಳಲ್ಲಿ ಪ್ರವೇಶ ಪಡೆದ ದಲಿತ ಮಕ್ಕಳಲ್ಲಿ ಬಹುಮಂದಿ ೭ನೇ ತರಗತಿಯ ವೇಳೆಗೆ ಶಾಲೆಯಿಂದ ಹೊರಬೀಳುತ್ತಾರೆ. ಉದ್ಯೋಗ ಮಾರುಕಟ್ಟೆಯಲ್ಲಿ ಅವರ ಜಾಗ ಎಲ್ಲಿರುತ್ತದೆ? ಭಾರತವೇ ದಲಿತರಾಷ್ಟ್ರ ಎಂದು ಭಾವಿಸಿದರೂ ಸಹ ೭ನೇ ತರಗತಿ ಓದಿದವರು ಅಥವಾ ಶಿಕ್ಷಣ ಇಲ್ಲದವರು ಎಲ್ಲಿರುತ್ತಾರೆ?

ಜಾಡಮಾಲಿಗಳು ಮತ್ತು ಸಮಗಾರರ ಮಕ್ಕಳು ತಮ್ಮ ಕುಟುಂಬದ ಕಸುಬನ್ನು ಮುಂದುವರೆಸಿಕೊಂಡು ಅವರ ಜೀವಿತಾವಧಿ ಪೂರ ಅವಮಾನಿತರಾಗಿಯೇ ಇದ್ದು ಬಿಡುತ್ತಾರೆ. ದೇಶದುದ್ದಕ್ಕೂ ಇರುವ ಈ ಸ್ಥಿತಿ ಕೊನೆಗೊಳ್ಳಲೇ ಬೇಕು. ಸಾಮಾಜಿಕವಾಗಿ ಇಂಥ ವೃತ್ತಿಗಳಲ್ಲಿ ಸಿಲುಕಿರುವ ಇಂಥ ದಲಿತರ ವಿಮೋಚನೆಯಾದಲ್ಲಿ ಮಾತ್ರ ಮೇಲಿನ ಸ್ಥಿತಿ ಬದಲಾಗುತ್ತದೆ.

ನಾವೇನು ಮಾಡಬಹುದು: ಅಂಥ ವೃತ್ತಿಗಳಲ್ಲಿರುವ ಕುಟುಂಬಗಳ ಸದಸ್ಯರೊಬ್ಬರನ್ನು ನಾವು ಹೆಕ್ಕಿ ಅವರನ್ನು ಹೂ ಮಾರುವವರನ್ನಾಗಿ ಮಾಡೋಣ. ಆದರೆ ಸಾವಿರಾರು ಮಂದಿ ಜಾಡಮಾಲಿ ಮತ್ತು ಸಮಗಾರರಿರುವ ಈ ದೇಶದಲ್ಲಿ ಹೂಮಾರುವುದರಿಂದ ಸಾಕಷ್ಟು ಆದಾಯ ಸಿಗುತ್ತದೆಯೇ?

ನಾನು ವಾಸಿಸುವ ದೆಹಲಿಯ ಸುತ್ತಲು ನಾನೊಂದು ಸಮೀಕ್ಷೆ ಮಾಡಲು ತೊಡಗಿದೆ. ಅಲ್ಲಿ ೧೩ ಮಂದಿ ಹೂ ಮಾರಾಟಗಾರರಿದ್ದರು ಮತ್ತು ಒಂಬತ್ತು ಮಂದಿ ಸಮಗಾರರಿದ್ದರು. ನಾನು ಗಮನಿಸಿದಂತೆ ಈ ೯ ಮಂದಿ ಸಮಗಾರರಲ್ಲಿ ಮೂರು ಮಂದಿ ೫ ವರ್ಷಗಳ ಹಿಂದೆಯಷ್ಟೆ ಈ ವೃತ್ತಿಗೆ ಬಂದಿದ್ದರು. ಹಾಗೆಯೇ ೧೩ ಮಂದಿ ಹೂ ಮಾರಾಟಗಾರರಲ್ಲಿ ೫ ಮಂದಿ ಪಶ್ಚಿಮ ಬಂಗಾಲದಿಂದ ವಲಸೆ ಬಂದವರಾಗಿದ್ದು, ೭ ಮಂದಿ ೫ ವರ್ಷಗಳ ಹಿಂದೆಯಷ್ಟೆ ಈ ವೃತ್ತಿಗೆ ಬಂದಿದ್ದರು.

ದೆಹಲಿಯಲ್ಲಿರುವ ಹೂ ಮಾರಾಟಗಾರರ ಬಗ್ಗೆ ಮತ್ತಷ್ಟು ತಿಳಿಯಲು ನಾನು ಕನ್ನಾಟ್ ಪ್ರದೇಶದಲ್ಲಿರುವ ಹೂ ಮಂಡಿಗೆ ಭೇಟಿ ನೀಡಿದೆ. ಅಚ್ಚರಿಯೆಂದರೆ ಅಲ್ಲಿ ಸುಮಾರು ೫ ರಿಂದ ೬ ಸಾವಿರ ಮಂದಿ ಹೂ ಮಂಡಿಗಳಿಂದ ಹೂ ಕೊಳ್ಳುತ್ತಿದ್ದರು. ಮತ್ತೂ ತಿಳಿದುಕೊಂಡ ಸಂಗತಿಯೆಂದರೆ ಈ ಹೂ ಮಂಡಿಯಂತೆ ಕುತುಬ್ ಮಿನಾರ್ ಬಳಿ ಮತ್ತು ಚಾಂದಿನಿಬಾರ್ ಬಳಿ ಮತ್ತೆರಡು ಹೂ ಮಂಡಿಗಳಿದ್ದವು. ಈ ಮಂಡಿಗಳು ಮುಂಜಾವಿನ ವೇಳೆ ೪ ಗಂಟೆಗೆ ತೆರೆದು ಬೆಳಿಗ್ಗೆ ೧೦ರ ವೇಳೆಗೆ ತಮ್ಮ ವಹಿವಾಟನ್ನು ಮುಚ್ಚುತ್ತವೆ. ಈ ಮೂರು ಕಡೆಗಳಲ್ಲಿ ಸರಾಸರಿ ೫೦೦೦ ಮಂದಿ ಹೂ ಕೊಳ್ಳುತ್ತಿರುತ್ತಾರೆ. ಅಂದಾಜಿನಂತೆ ಸುಮಾರು ೧೫೦೦೦ ಮಂದಿ ದೆಹಲಿಯಲ್ಲಿ ಹೂ ಮಾರಾಟ ಮಾಡುತ್ತಿರುತ್ತಾರೆ. ಈ ಸಂಖ್ಯೆ ಸಮಗಾರರ ಸಂಖ್ಯೆಗಿಂತ ಅಧಿಕವಾದುದು.

ದಲಿತರ ವಿಮೋಚನೆ

ನನ್ನ ಅಧ್ಯಯನದ ಪ್ರಕಾರ ಭಾರತದಲ್ಲಿ ಈ ಹೂ ಮಾರಾಟ ಪ್ರತಿ ವರ್ಷ ಶೇ.೩೦ರಷ್ಟು ಬೆಳವಣಿಗೆಯನ್ನು ಕಾಣುತ್ತದೆ. ಈ ವಹಿವಾಟು ಭಾರತದಲ್ಲಿ ಬಿಲಿಯನ್ ರೂಗಳಿಗಿಂತಲೂ ಅಧಿಕವಾದುದು. ಈ ಬೆಳೆಯಿತ್ತಿವ ಬೇಡಿಕೆಯನ್ನು ಪೂರೈಸಲು ೧೯೯೩-೯೪ರಲ್ಲಿ ಸುಮಾರು ೫೩,೦೦೦ ಎಕರೆ ಜಾಗದಲ್ಲಿ ಹೂ ಬೆಳೆಯಲಾಗುತ್ತಿತ್ತು. ಇದು ೨೦೦೪ -೨೦೦೫ರ ಹೊತ್ತಿಗೆ ಸುಮಾರು ೧,೧೬,೦೦೦ ಎಕರೆಗಳಿಗೆ ಬೆಳೆಯಿತು. ಕಳೆದ ಆರ್ಥಿಕ ಸುಧಾರಣೆಗಳಿಂದಾಗಿ ಭಾರತೀಯ ಮಧ್ಯಮ ವರ್ಗದ ವರ್ತನೆಯಲ್ಲಿ ಬಿರುಗಾಳಿಯಂತೆ ಒಂದು ಬದಲಾವಣೆ ಕಾಣಿಸಿಕೊಂಡಿದೆ. ಅಂದರೆ ಅವರು ಹಣ ಸೇವಿಸುವ ಬದಲು ಹಣ ಖರ್ಚು ಮಾಡುತ್ತಿದ್ದಾರೆ.

ಇತ್ತೀಚೆಗೆ ಜನ ತಮ್ಮ ಬಂಧು-ಮಿತ್ರರಿಗೆ ಭೇಟಿ ನೀಡುವಾಗ ಸ್ವೀಟ್ಸ್‌ಗಿಂತ ಹೂವನ್ನು ಅಧಿಕವಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ. ನನ್ನ ಪ್ರಕಾರ ನನ್ನ ವಾಸ ಪ್ರದೇಶದಲ್ಲಿ ಈಗಿರುವ ಹೂ ಮಾರಾಟಗಾರರ ಸಂಖ್ಯೆ ಇನ್ನೊಂದು ದಶಕದಲ್ಲಿ ದ್ವಿಗುಣಗೊಳ್ಳುತ್ತದೆ.

ಈ ದಶಕದ ವೇಳೆಗೆ ಅದೇ ಪ್ರದೇಶದಲ್ಲಿರುವ ಸಮಗಾರರು ತಮ್ಮ ವೃತ್ತಿಯಿಂದ ಬಿಡುಗಡೆಗೊಳ್ಳಲು ಸಾಧ್ಯವಿಲ್ಲವೇ? ಓರ್ವ ಹೂ ಮಾರಾಟ ಮಾಡುವ ವ್ಯಕ್ತಿ ಒಂದು ದಿನದಲ್ಲಿ ಗಳಿಸುವಷ್ಟು ಆದಾಯವನ್ನು ಒಬ್ಬ ಸಮಗಾರ ಒಂದು ವಾರದಲ್ಲಿ ಗಳಿಸುತ್ತಾನೇನೋ!

ಹಾಗಾದರೆ ವಿಮೋಚನೆ ಹೇಗೆ?

ನನ್ನ ವಾಸ ಪ್ರದೇಶದಲ್ಲಿರುವ ಸಮಗಾರರಿಗಿಂತ ಅಧಿಕವಾಗಿ ದಲಿತ ಗುಂಪುಗಳಿವೆ. ಇವರಲ್ಲಿ ಅನೇಕವು ಅಂಬೇಡ್ಕರ್ ಅಥವಾ ಬೌದ್ಧ ಸಂಘಟನೆಗೆ ಸೇರಿದವರಾಗಿದ್ದಾರೆ. ಇವರ ಸದಸ್ಯತ್ವ ಜಾಡಮಾಲಿ ಮತ್ತು ಕಸ ಎತ್ತುವವರಿಗಿಂತ ಅಧಿಕ ಎಂಬುದನ್ನು ನಾನು ಬಲ್ಲೆ. ಆದ್ದರಿಂದ ಅಲ್ಲಿರುವ ಸಮಗಾರರು ತಮ್ಮ ವೃತ್ತಿಯಿಂದ ಹೂ ಮಾರಾಟಕ್ಕೆ ಪಲ್ಲಟ ಮಾಡಿಸುವುದು ಸುಲಭ ಸಾಧ್ಯ ಕೆಲಸ. ಚುನಾವಣೆ ಸಂದರ್ಭದಲ್ಲಿ ಮಾಡುವ ಪ್ರಚಾರಾಂದೋಲನದಂತೆ ಹೂ ಮಾರಾಟದಿಂಧ ಅಧಿಕ ಹಣ ಗಳಿಸಬಹುದೆನ್ನುವ ಸಂದೇಶವನ್ನು ಮತ್ತು ಸಾಮಾಜಿಕವಾಗಿ ವೃತ್ತಿಗೆ ಅಂಟಿಕೊಂಡಿರುವ ಅವಮಾನವನ್ನು ಬೇಗನೆ ಪ್ರಚಾರ ಮಾಡಬಹುದು. ಅಲ್ಲದೆ ಹೂ ಮಾರಾಟಕ್ಕೆ ಯಾವುದೇ ಜಾಗ, ನೀರು ಅಥವಾ ವಿದ್ಯುತ್ ಅಗತ್ಯವಿಲ್ಲ. ಬೀದಿ ಬದಿ ಸ್ವಲ್ಪ ಜಾಗ ಅದಕ್ಕೆ ಸಾಕಷ್ಟೆ. ಅದಕ್ಕೆ ಶಿಕ್ಷಣವೂ ಸಹ ಅಗತ್ಯವಿಲ್ಲ.

ದಲಿತ ಗುಂಪುಗಳು, ಸರ್ಕಾರ ಮತ್ತು ಖಾಸಗಿ ವಲಯಗಳು ಸೇರಿ ನಗರದಲ್ಲಿರುವ ದಲಿತರನ್ನು ಅವರ ಅವಮಾನಕರವಾದ ವೃತ್ತಿಗಳಿಂದ ಕೆಲವೇ ವರ್ಷಗಳಲ್ಲಿ ಬಿಡುಗಡೆ ಮಾಡಬಹುದಲ್ಲವೇ? ಆದರೆ ಇದನ್ನು ಕೃತಿಯಲ್ಲಿ ತೋರಿಸಬಹುದೇ?

ಸರ್ಕಾರ ಏನು ಮಾಡಬಹುದು?

ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಸಹ ದಲಿತ ಉದ್ಧಾರ ಮಾಡುತ್ತಿವೆ ಎಂದು ಹೇಳುತ್ತವೆ. ಹೀಗಿರುವಾಗ ಮೇಲೆ ಹೇಳಿದ ದಲಿತ ಕುಟುಂಬಗಳಲ್ಲಿ ಒಬ್ಬೊಬ್ಬರನ್ನು ಆಯ್ಕೆ ಮಾಡಿ ಅವರಿಗೆ ಹೂ ಮಾರಾಟ ತರಬೇತಿಯನ್ನು ನೀಡಿ ಅವರಿಗೊಂದು ಸಣ್ಣ ಜಾಗವನ್ನು ನೀಡಿ, ಪೋಲೀಸರಿಂದ ಅಥವಾ ಮುನಿಸಿಪಾಲಿಟಿಯಿಂದ ಯಾವುದೇ ತೊಂದರೆಯಾಗದಂತೆ ಮಾಡಲಿ. ಪ್ರತಿ ವರ್ಷ ಸುಮಾರು ೧೦೦೦ ದಲಿತ ಕುಟುಂಬಗಳನ್ನು ದೆಹಲಿಯೊಂದರಿಂದಲೇ ಪ್ರಗತಿಯತ್ತ ಹೊಯ್ಯಬಹುದಲ್ಲವೇ?

ಖಾಸಗಿ ವಲಯ ಏನು ಮಾಡಬಹುದು?

ಭಾರತೀಯ ಕೈಗಾರಿಕೆಗಳ ಒಕ್ಕೂಟ ೭೦೦೦ ಮಂದಿ ನೇರ ಸದಸ್ಯರನ್ನು ಹೊಂದಿದ್ದರೆ, ಸುಮಾರು ೯೦೦೦೦ ಮಂದಿ ಅಪರೋಕ್ಷ ಸದಸ್ಯರನ್ನು ಹೊಂದಿದೆ ಎಂಬುದನ್ನು ಈಗಾಗಲೆ ಗಮನಿಸಿದ್ದೇವೆ. ಇವುಗಳೊಡನೆ FICCI, ASSOCHAM, ಮತ್ತು PHD ಎನ್ನೋ ವಾಣಿಜ್ಯ ಚೇಂಬರ್ಸ್‌ಗಳೂ ಇದ್ದು ಸುಮಾರು ಅರ್ಧ ಮಿಲಿಯನ್ ಕಂಪನಿಗಳನ್ನು ಅವು ಪ್ರತಿನಿಧಿಸುತ್ತವೆ. ಇವರು ಒಬ್ಬೊಬ್ಬರಾಗಿ ಅಥವಾ ೫ ಮಂದಿ ಒಟ್ಟಾಗಿ ಒಂದು ಸಮಗಾರ ಕುಟುಂಬವನ್ನು ತೆಗೆದುಕೊಂಡು ಅವರಲ್ಲಿ ಒಬರನ್ನು ಹೂ ಮಾರಾಟಗಾರರನ್ನಾಗಿ ಮಾಡಲಾಗುವುದಿಲ್ಲವೇ?

ಹೀಗೆ ದಲಿತ ಗುಂಪುಗಳು, ಸರ್ಕಾರ ಮತ್ತು ಖಾಸಗಿ ವಲಯಗಳು ಸೇರಿ ನಗರದಲ್ಲಿರುವ ದಲಿತರನ್ನು ಅವರ ಅವಮಾನಕರವಾದ ವೃತ್ತಿಗಳಿಂದ ಕೆಲವೇ ವರ್ಷಗಳಲ್ಲಿ ಬಿಡುಗಡೆ ಮಾಡಬಹುದಲ್ಲವೇ? ಆದರೆ ಇದನ್ನು ಕೃತಿಯಲ್ಲಿ ತೋರಿಸಬಹುದೇ?

ದಲಿತ ವಿಮೋಚನೆಯ ಬಗ್ಗೆ ಸರಣಿ ಲೇಖನಗಳನ್ನು ಬರೆಯುವಾಗ ಉದಯಿಸುವ ಮುಖ್ಯ ಪ್ರಶ್ನೆಯೆಂದರೆ ಭಾರತೀಯ ಉದ್ಯೋಗ ಮಾರುಕಟ್ಟೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಿಂದ ಹೊರ ಬೀಳುವ ಮಕ್ಕಳ ಭವಿಷ್ಯವೇನಾಗುತ್ತದೆ? ಎನ್ನುವುದು. ಈ ಕುರಿತು ಯೋಚಿಸುವಾಗ ಮತ್ತೊಂದು ಜಾತಿರಹಿತ ವೃತ್ತಿಯನ್ನು ಗಮನಿಸಿದೆ – ಅದೇ ಐಸ್‌ಕ್ರೀಮ್ ಮಾರಾಟ.

ಐಸ್‌ಕ್ರೀಮ್ ಮಾರಾಟ ಮಾಡಲು ವಿದ್ಯಾರ್ಹತೆ ಬೇಕಿಲ್ಲ. ಹಾಗೆಯೇ ಅದಕ್ಕೆ ಆದಾಯ ತೆರಿಗೆ ಅಥವಾ ಮಾರಾಟ ತೆರಿಗೆ, ವಿದ್ಯುತ್ ಅಥವಾ ಜಾಗವಾಗಲೀ, ಹಣದ ಹೂಡಿಕೆಯಾಗಲೀ ಬೇಕಾಗಿಲ್ಲ. ಅವರಿಗೆ ಅಗತ್ಯವಾಗಿರುವುದೆಂದರೆ ಸಣ್ಣ ರೆಫ್ರಿಜರೇಟರನ್ನೊಳಗೊಂಡ ಸೈಕಲ್‌ಗಾಡಿ. ಇದರೊಡನೆ ಅದೇ ವರತ್ತಿಯಲ್ಲಿರುವವರಿಂದ ಅಥವಾ ಐಸ್‌ಕ್ರೀಮ್ ಮಾಲೀಕರಿಂದ ಅಥವಾ ಸರ್ಕಾರದಿಂದ ಒಂದು ಸಣ್ಣ ಸಲಹೆ ಅಷ್ಟೆ. ಈ ತಳ್ಳೋ ಗಾಡಿಗೆ ಐಸ್‌ಕ್ರೀಮ್ ಲೋಡ್‌ಮಾಡಿ ಪ್ರತಿ ಮಧ್ಯಾಹ್ನ ಹೊರಟು ಕಮಿಷನ್ ಆಧಾರದಲ್ಲಿ ಮಾರಾಟ ಮಾಡಿ ಬರುವುದು ಅಷ್ಟೆ.

ಆದರೆ ಇಲ್ಲಿರುವ ಪ್ರಶ್ನೆಯೆಂದರೆ ಎಷ್ಟು ಮಂದಿ ದಲಿತರು ಈ ವೃತ್ತಿಗೆ ಬರಬಹುದು ಮತ್ತು ಅದರಲ್ಲಿ ಅವರ ಗಳಿಕೆ ಎಂಥದ್ದು?

ತಳ್ಳೋಗಾಡಿಯ ಮೂಲಕ ವಿಮೋಚನೆ

ಬದಲಾವಣೆಯ ರೂವಾರಿಗಳು

ನನ್ನ ಅಪಾರ್ಟ್‌ಮೆಂಟ್ ಜೊತೆಗೆ ನಿತಿನ್ ಟ್ರೇಡರ್ಸ್ ಕುಮಾರ್ ಒಬ್ಬ ಐಸ್‌ಕ್ರೀಮ್ ಮಾರಾಟಗಾರ ನೆಂದು ಪರಿಚಯವಾಯಿತು. ಆತನೊಂದನೆ ಮಾತನಾಡುತ್ತಿರುವಾಗ ಆತನ ಸೂಪರ್‌ವೈಸರ್ ಸೋಂಪಾಲ್ ಅಲ್ಲಿಗೆ ಬಂದ. ಆತ ಎಷ್ಟು ಮಂದಿಯನ್ನು ನೋಡಿಕೊಳ್ಳುತ್ತಾನೆ ಎಂಬುದಕ್ಕೆ, "ನಮ್ಮಲ್ಲಿ ಇಂಥ ೨೮ ತಳ್ಳೋಗಾಡಿಗಳನ್ನು ಈ ಪ್ರದೇಶದಲ್ಲಿ ಮಾರಾಟ ನಡೆಯುತ್ತವೆ" ಎಂದ. ಆತನ ಪ್ರಕಾರ ಈ ಪ್ರದೇಶವೊಂದರಲ್ಲೇ ಮದರ್‌ಡೈರಿ, ಕ್ವಾಲಿಟಿ ವಾಲ್ಸ್, ಕ್ರೀಮ್‌ಬೆಲ್‌ನಂಥ ಕಂಪನಿಗಳಿಗೆ ಸೇರಿದ ನೂರಕ್ಕಿಂತಲೂ ಅಧಿಕ ಮಾರಾಟಗಾರರು ಇದ್ದಾರೆ. ಇದರೊಡನೆ ಅಲ್ಲಿ ಅನೇಕ ಸ್ಥಳೀಯ ಐಸ್ ಕ್ರೀಮ್ ಮಾರಾಟಗಾರರಿದ್ದಾರೆ.

"ದೆಹಲಿಯಲ್ಲಿ ಎಷ್ಟು ಮಂದಿ ಇಂಥ ಮಾರಾಟಗಾರರಿದ್ದಾರೆ?" ಎಂದದಕ್ಕೆ, "ಕ್ರೀಮ್‌ಬೆಲ್ ೧೨೦೦, ಮದರ್‌ಡೈರಿ ೨೦೦೦, ಕ್ವಾಲಿಟಿ ವಾಲಸ್೨೦೦೦, ವಾಡಿಲಾಲ್ ೭೦೦ ಮತ್ತು ಅಮುಲ್ ೪೦೦ ಮಂದಿ" ಎಂದು ಅಂದಾಜಿಸಿದ ಸೋಂಪಾಲ್. ಅಂದರೆ ದೆಹಲಿಯಲ್ಲಿ ಸುಮಾರು ೬೦೦೦ ಮಂದಿ ತಳ್ಳೋಗಾಡಿಯ ಮೂಲಕ ಕಂಪನಿ ಐಸ್‌ಕ್ರೀಮ್ ಮಾರಾಟಮಾಡುವವರಿದ್ದಾರೆ. ಸ್ಥಳೀಯ ಬ್ರಾಂಡ್‌ನಲ್ಲಿ ಮಾರಾಟಮಾಡುವ ಸುಮಾರು ೫೦೦೦ ಮಂದಿ ದೆಹಲಿಯಲ್ಲಿದ್ದಾರೆಂದು ಸೋಂಪಾಲ್ ತಿಳಿಸಿದ. ಅಂದರೆ ಸುಮಾರು ೧೦,೦೦೦ ಮಂದಿ ದೆಹಲಿಯಲ್ಲಿ ಹೀಗೆ ಐಸ್‌ಕ್ರೀಮ್ ಮಾರಾಟಗಾರರಿದ್ದಾರೆ.

"ದಿನಕ್ಕೆ ನಿನ್ನ ಗಳಿಕೆ ಎಷ್ಟಿದೆ?" ಎಂದು ಕುಮಾರ್‌ಗೆ ಕೇಳಿದೆ. "೧೦೦ ರಿಂದ ೧೫೦ ರೂ ಗಳಿಸುತ್ತೇನೆ" ಎಂದ. "ಈ ಸೀಸನ್ ಸ್ವಲ್ಪವೇ ಮಾರಾಟವಾಗುತ್ತದೆ. ಆದರೆ ಮಾರ್ಚ್ ವೇಳೆಗೆ ಅದು ಅಧಿಕವಾಗಿ ಅಕ್ಟೋಬರ್ ಮಧ್ಯದ ವರೆಗೆ ನಡೆಯುತ್ತಿರುತ್ತದೆ" ಎಂದ. "ಈ ಅವಧಿಯಲ್ಲಿ 'ದಿನವೊಂದಕ್ಕೆ ರೂ ೪೦೦/- ರಿಂದ ರೂ೫೦೦/- ರವರೆಗೆ ಗಳಿಕೆಯಾಗುತ್ತದೆ" ಎಂದು ಮುಂದುವರೆಸಿದ.

ವೀರೇಂದ್ರನಿಗಿಂತ ಭಿನ್ನವಾಗಿ ವಿನೋದ್ ಕುಮಾರ್ ತ್ಯಾಜ್ಯ ಕಲೆಕ್ಟ್ ಮಾಡುತ್ತಾನೆ. ಆತನದ್ದು ಭಿನ್ನವಾದ ಕತೆ. ನಮ್ಮ ಅಪಾರ್ಟ್‌ಮೆಂಟ್ ಆತನಿಗೆ ತಿಂಗಳಿಗೆ ೧೦೦೦/- ವೇತನ ನೀಡಿ ತ್ಯಾಜ್ಯಸಾಗಿಸುವ ಕೆಲಸಕ್ಕೆ ಇಟ್ಟುಕೊಂಡಿದೆ. ಇದಲ್ಲದೆ ಹೀಗೆಯೇ ಆತ ಹನ್ನೆರಡು ಅಪಾರ್ಟ್‌ಮೆಂಟ್‌ಗಳಲ್ಲಿ ತಿಂಗಳಿಗೆ ೧೫೦೦/-ರಂತೆ ಅದೇ ಕೆಲಸವನ್ನು ಮಾಡುತ್ತಿದ್ದಾನೆ. ಇದಲ್ಲದೆ ಇತರೆ ಕೆಲಸವನ್ನು ಆತ ಮಾಡುತ್ತಿದ್ದನಾದರೂ ತಿಂಗಳಿಗೆ ಆತನ ಗಳಿಕೆ ರೂ.೫೦೦೦/-ಕ್ಕಿಂತಲೂ ಕಮ್ಮಿಯೇ. ಆತ ಈ ಮೂರು ಅಪಾರ್ಟ್‌ಮೆಂಟ್‌ಗಳಲ್ಲಿ ತ್ಯಾಜ್ಯವನ್ನು ತೆಗೆಯುವಾಗ ಆತನೊಡನೆ ಆತನ ಮನೆಯವರೂ ಸಹ ತೊಡಗಿಕೊಳ್ಳುತ್ತಾರೆ. ಆತ ಹೇಳುವಂತೆ ಈ ಪ್ರದೇಶದಲ್ಲಿ ಸುಮಾರು ೧೦೦ ಮಂದಿ ವಾಲ್ಮೀಕಿ ಈ ಕೆಲಸದಲ್ಲಿ ತೊಡಗಿದ್ದಾರೆ.

ಈ ಜಾಡಮಾಲಿ ಮತ್ತು ಸಮಗಾರ ಕುಟುಂಬಗಳಲ್ಲಿ ಅವರ ಮಕ್ಕಳೂ ಸಹ ಅದೇ ವೃತ್ತಿಯಲ್ಲಿ ಭಾಗವಹಿಸುತ್ತಾರೆ. ಅವರೆಲ್ಲಾ ಹಸಿವು ಮತ್ತು ಅಗೌರವಯುತ ಬದುಕಿಗೆ ಸಿಲುಕುತ್ತಾರೆ. ಇದನ್ನು ನಾವು ಬದಲಾಯಿಸಬಹುದೇ? ಅಥವಾ ಇದನ್ನು ಬದಲಾಯಿಸಬಾರದೇ? ಭಾರತ ಇಂದು ತೀವ್ರವಾದ ಬದಲಾವಣೆಯಲ್ಲಿ ಸಿಲುಕಿದೆ. ಭಾರತದ ಸುಮಾರು ೩೫೦ ಮಿಲಿಯನ್ ಮಧ್ಯಮವರ್ಗ ತಮ್ಮ ಪರ್ಸ್‌ಗಳನ್ನು ತೆರೆಯುತ್ತಿದ್ದಾರೆ. ಬೇಸಿಗೆಯಲ್ಲಿ ಎಲ್ಲರಿಗೂ ಐಸ್‌ಕ್ರೀಮ್ ತಿನ್ನುವ ಆತುರವಿರುತ್ತದೆ.

ಭಾರತೀಯ ಐಸ್‌ಕ್ರೀಮ್ ಇಂಡಸ್ಟ್ರಿ ವಾರ್ಷಿಕವಾಗಿ ೨೬ರಷ್ಟು ಬೆಳವಣಿಗೆಯನ್ನು ಕಾಣುತ್ತಿದೆ. ಅಂದರೆ ದೆಹಲಿಯೊಂದರಲ್ಲೇ ೨೬೦೦ ಮಂದಿ ತಳ್ಳೋಗಾಡಿ ಮಾರಾಟಗಾರರು ವಾರ್ಷಿಕವಾಗಿ ಬೇಕಾಗುತ್ತಾರೆ. ಈ ಜಾತಿ ಇಲ್ಲದ ವೃತ್ತಿಗೆ ೧೦೦೦ ಮಂದಿ ದಲಿತರು ಸೇರಬಾರದೇಕೆ?

ಇಂದು ಸಾವಿರಾರು ಇಂಜಿನಿಯರ್‌ಗಳು, ಡಾಕ್ಟರ್‌ಗಳು, ವಿಜ್ಞಾನಿಗಳು ದಲಿತರು ಆಗುತ್ತಿದ್ದಾರಾದರೂ,

ಜಾಡಮಾಲಿ ಮತ್ತು ಸಮಗಾರ ಕುಟುಂಬ ಗಳಲ್ಲಿ ಅವರ ಮಕ್ಕಳೂ ಸಹ ಅದೇ ವೃತ್ತಿಯಲ್ಲಿ ಭಾಗವಹಿಸುತ್ತಾರೆ. ಅವರೆಲ್ಲಾ ಹಸಿವು ಮತ್ತು ಅಗೌರವಯುತ ಬದುಕಿಗೆ ಸಿಲುಕುತ್ತಾರೆ. ಇದನ್ನು ನಾವು ಬದಲಾಯಿ ಸಬಹುದೇ? ಅಥವಾ ಇದನ್ನು ಬದಲಾಯಿಸಬಾರದೇ? ಭಾರತ ಇಂದು ತೀವ್ರವಾದ ಬದಲಾವಣೆಯಲ್ಲಿ ಸಿಲುಕಿದೆ. ಭಾರತದ ಸುಮಾರು ೩೫೦ ಮಿಲಿಯನ್ ಮಧ್ಯಮವರ್ಗ ತಮ್ಮ ಪರ್ಸ್‌ಗಳನ್ನು ತೆರೆಯುತ್ತಿದ್ದಾರೆ. ಬೇಸಿಗೆಯಲ್ಲಿ ಎಲ್ಲರಿಗೂ ಐಸ್‌ಕ್ರೀಮ್ ತಿನ್ನುವ ಆತುರವಿರುತ್ತದೆ.
ಭಾರತೀಯ ಐಸ್‌ಕ್ರೀಮ್ ಇಂಡಸ್ಟ್ರಿ ವಾರ್ಷಿಕವಾಗಿ ೨೬ರಷ್ಟು ಬೆಳವಣಿಗೆಯನ್ನು ಕಾಣುತ್ತಿದೆ. ಅಂದರೆ ದೆಹಲಿಯೊಂದರಲ್ಲೇ ೨೬೦೦ ಮಂದಿ ತಳ್ಳೋಗಾಡಿ ಮಾರಾಟಗಾರರು ವಾರ್ಷಿಕವಾಗಿ ಬೇಕಾಗುತ್ತಾರೆ. ಈ ಜಾತಿ ಇಲ್ಲದ ವೃತ್ತಿಗೆ ೧೦೦೦ ಮಂದಿ ದಲಿತರು ಸೇರಬಾರದೇಕೆ?

ಭಾರತದಲ್ಲಿ ಮೇಲೆ ತಿಳಿಸಿದ ತಳ್ಳೋಗಾಡಿ ವ್ಯಾಪಾರದಲ್ಲಿ ಒಂದು ಲಕ್ಷ ಮಂದಿ ದಲಿತರು ವಾರ್ಷಿಕವಾಗಿ ತೊಡಗಿಕೊಳ್ಳಬಹುದಲ್ಲವೇ? ಇದನ್ನು ನಾವು ಆಚರಣೆಯಲ್ಲಿ ತಾರದೆ ನಾವು ಬರೀ ಮಾತನಾಡಿಕೊಂಡಿದ್ದರೆ ಏನೂ ಆಗುವುದಿಲ್ಲ.

ದಲಿತ ಸಂಘಟನೆಗಳು, ಸರ್ಕಾರ ಮತ್ತು ಖಾಸಗಿ ವಲಯ ಈ ಕಾರ್ಯ ಸೂಚಿಯನ್ನು ಪ್ರಾಮಾಣಿಕವಾಗಿ ಜಾರಿಯಾಗಿಸಬಾರದೇಕೆ?

೮ನೇ ತರಗತಿ ಅಥವಾ ೧೦ನೇ ತರಗತಿಯಿಂದ ಹೊರಬಿದ್ದ ದಲಿತ ಯುವಜನ ಕೆಲಸ ಹುಡುಕುವಾಗ ಅವರಿಗೆ ಸೂಚಿಸುವ ಮತ್ತೊಂದು ವೃತ್ತಿಯನ್ನು ನಾನು ಗಮನಿಸಿದ್ದೇನೆ. ಆ ಕೆಲಸವೆಂದರೆ ಪಾನ್/ಸಿಗರೇಟ್ ಮಾರುವುದು. ಈ ವಸ್ತುಗಳನ್ನು ಮಾರುವ ವ್ಯಕ್ತಿಗೆ ಸಾರ್ವತ್ರಿಕವಾಗಿ ಮತ್ತು ಗ್ರಾಹಕರಿಂದ ಮರ್ಯಾದೆ ದೊರೆಯುತ್ತದೆ. ಇದಕ್ಕೆ ಹೊರತಾಗಿ ಕಸ ಗುಡಿಸುವವರು ಮತ್ತು ಸಮಗಾರರು ಜಾತಿವಾದ ಹಿಂದೂ ಸಮಾಜದಲ್ಲಷ್ಟೇ ಅಲ್ಲ, ತಮ್ಮ ಸಮುದಾಯದಲ್ಲೇ ಅಪಮಾನಕ್ಕೊಳಗಾಗುತ್ತಿರುತ್ತಾರೆ.

ಆದರೆ, ಪಾನ್ ಮತ್ತು ಸಿಗರೇಟ್ ಮಾರಾಟಮಾಡುವ ವ್ಯಕ್ತಿಯ ಆದಾಯ ಎಷ್ಟಿರುತ್ತದೆ? ಈ ಮೊದಲೇ ಹೇಳಿದಂತೆ ಒಬ್ಬ ಸಮಗಾರ ದಿನಕ್ಕೆ ೧೦೦ರಿಂದ ೧೫೦ ರೂ ಗಳಿಸಿದರೆ, ಕಸಗುಡಿಸುವವ ತಿಂಗಳಿಗೆ ರೂ.೪೦೦೦ದಿಂದ ರೂ ೫೦೦೦/- ತನಕ ಗಳಿಸಬಹುದಷ್ಟೆ. ಆದರೆ ಅಚ್ಚರಿಯ ಸಂಗತಿಯೆಂದರೆ ಇದಕ್ಕೆ ಸಮನಾಗಿಯೇ ಅಥವಾ ಒಬ್ಬ ಲೆಕ್ಚರರ್ ಗಳಿಸುವುದಕ್ಕಿಂತಲೂ ಹೆಚ್ಚಾಗಿ ಸಂಪಾದಿಸುತ್ತಿದ್ದದ್ದು.

ದಿನವೊಂದಕ್ಕೆ ನಾನು ಹೇಳಿದ ವ್ಯಕ್ತಿ ೧೫ರಿಂದ ೨೦ ಕ್ಲಾಸಿಕ್ ಸಿಗರೇಟ್ ಪ್ಯಾಕೆಟ್ ಮಾರುತ್ತಾನೆ. ಅದರ ಬೆಲೆ ರೂ ೮೦. ಪ್ರತಿಯೊಂದು ಪ್ಯಾಕೆಟ್ ಮಾರಾಟವಾದರೆ ಆತನಿಗೆ ಸಿಗುವ ಕಮಿಷನ್ ರೂ.೯.೫೦. ಹೀಗೆ ದಿನವೊಂದಕ್ಕೆ ರೂ.೧೪೦ ರಿಂದ ರೂ.೧೯೦ ಗಳಿಸುತ್ತಾನೆ. ಅದೇ ರೀತಿಯಲ್ಲಿ ಆತ ಭಾರತೀಯ ಕಿಂಗ್ಸ್ ಸಿಗರೇಟ್ ೨೦ ಪ್ಯಾಕೆಟ್‌ಗಳನ್ನು ಮಾರಿದರೆ ಪ್ರತಿ ಪ್ಯಾಕೆಟ್‌ನ ಮೇಲೆ ರೂ. ೧೩ ಕಮಿಷನ್ ದೊರೆಯುತ್ತದೆ. ಅಂದರೆ ದಿನಕ್ಕೆ ರೂ.೬೫ ಇದರಿಂದ ದೊರೆಯುತ್ತದೆ. ಹಾಗೆಯೇ ೨೦ ವಿಲ್ಸ್ ನೇವಿ ಪ್ಯಾಕೆಟ್‌ಗಳನ್ನು ಮಾರಿದಲ್ಲಿ ರೂ.೫೫ದಿನಕ್ಕೆ ಕಮಿಷನ್ ದೊರೆಯುತ್ತದೆ. ಅಂದರೆ ಸಿಗರೇಟ್ ಮಾರಾಟದಿಂದಲೇ ರೂ. ೩೦೦ರನ್ನು ದಿನವೊಂದರಲ್ಲೇ ಗಳಿಸುತ್ತಾನೆ.

ಕೆಳ ಮಧ್ಯಮ ವರ್ಗದ ಸ್ಥಳಗಳಲ್ಲಿ ಹೆಚ್ಚು ಬೆಲೆಯ ಸಿಗರೇಟ್ ಮಾರಾಟವಾಗುವುದಿಲ್ಲವಾದರೂ, ಕಮ್ಮಿ ಬೆಲೆಯ ಸಿಗರೇಟ್ ಮಾರಾಟವಾಗುತ್ತದೆ. ಉದಾಹರಣೆಗೆ ರೂ ೧೯ ಬೆಲೆಯ ಕ್ಯಾಪ್‌ಸ್ಟಾನ್ ಬೆಲೆಯ ಪ್ಯಾಕೆಟ್‌ನಿಂದ

ರೂ.೧.೪೦ರಷ್ಟು ಕಮಿಷನ್‌ಸಿಗುತ್ತದೆ. ಅಂದರೆ ದಿನಕ್ಕೆ ರೂ.೨೮ ಕಮಿಷನ್ ದೊರೆಯುತ್ತದೆ. ಹೀಗೆ ಇಂಥ ಸ್ಥಳಗಳಲ್ಲಿ ಈ ಮಾರಾಟಗಾರನಿಗೆ ದಿನಕ್ಕೆ ೧೦೦ ರೂ ಆರಾಮವಾಗಿ ದೊರೆಯುತ್ತದೆ.

ಹಾಗೆಯೇ ಪಾನ್ ಮಾರಾಟದಿಂದ ಆತ ಎಷ್ಟು ಗಳಿಸುತ್ತಾನೆ ಎನ್ನುವುದರ ಬಗ್ಗೆ ಗಮನಿಸೋಣ. ಒಂದು ಜೊತೆ ಪಾನ್ ಪ್ಯಾಕೆಟ್ ಮಾರಾಟ ಮಾಡಿದರೆ ಶೇ.೨ರಷ್ಟು ಕಮಿಷನ್ ದೊರೆಯುತ್ತದೆ. ಹಾಗೆಯೆ ಗುಟ್ಕ ಮಾರಾಟ ಮಾಡುವುದರಿಂದಲೂ ದೊರೆಯುತ್ತದೆ. ಇದರೊಡನೆ ಬೆಂಕಿ ಪೊಟ್ಟಣ, ಬೀಡಿ ಮಾರಾಟವಾಗುತ್ತದೆ.

ನನ್ನ ಅಂದಾಜಿನಂತೆ ಮಧ್ಯಮವರ್ಗ ಅಥವಾ ಸಿರಿವಂತ ವರ್ಗ ಜೀವಿಸುವ ಪ್ರದೇಶಗಳಲ್ಲಿ ಒಬ್ಬ ಸಿಗರೇಟ್ ಮಾರಾಟ ಮತ್ತು ಪಾನ್ ಮಾರಾಟದಿಂದಲೇ ದಿನಕ್ಕೆ ೧೦೦೦/- ರೂ ಗಳಿಸುತ್ತಾನೆ. ಹೀಗೆಯೇ ಕೆಳ ಮಧ್ಯಮವರ್ಗದ ಪ್ರದೇಶಗಳಲ್ಲಿ ದಿನಕ್ಕೆ ರೂ.೩೦೦ರನ್ನು ಗಳಿಸಬಹುದಾಗಿದೆ.

ಯಾವುದೇ ಲೆಕ್ಕಚಾರದಿಂದಲೂ ಆತನ ಗಳಿಕೆಯು ಕಾಬ್ಲರ್ ಮತ್ತು ಕಸಗುಡಿಸುವವರಿಗಿಂತಲೂ ಅಧಿಕವಾಗಿರುತ್ತದೆ. ಹೀಗಿರುವಾಗ ದಲಿತರು ಈ ವೃತ್ತಿಗೆ ಬರಬಹುದೇ? ನಾನು ವಾಸಿಸುವ ಕ್ಷೇತ್ರದಲ್ಲಿ ನಾನು ಸುತ್ತಾಡಿ ಗಮನಿಸಿದಾಗ ಅಂಥ ಪಾನ್/ಸಿಗರೇಟ್ ಅಂಗಡಿಗಳು ೪೫ ಇದ್ದವು. ಇಂಥ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಪ್ರತಿ ೧೦೦ ಮೀ. ದೂರದಲ್ಲಿ ಒಂದು ಸಿಗರೇಟ್/ಪಾನ್ ಅಣಗಡಿ ಇರುತ್ತದೆ. ಅಂದರೆ ದೆಹಲಿಯೊಂದರಲ್ಲೇ ಕಸಗುಡಿಸುವವರು ಮತ್ತು ಚಮಗಾರರಿಗಿಂತಲೂ ಅಧಿಕವಾಗಿ ಇಂಥ ಅಂಗಡಿಗಳು ಇವೆಯಲ್ಲವೇ.

ಒಬ್ಬ ಪಾನ್/ಸಿಗರೇಟ್ ಮಾರಾಟ ಮಾಡುವ ವ್ಯಕ್ತಿಗೆ ವಿದ್ಯಾಭ್ಯಾಸದ ಅವಶ್ಯಕತೆ ಇಲ್ಲ. ಆತನಿಗೆ ಆದಾಯ ತೆರಿಗೆ/ಮಾರಾಟ ತೆರಿಗೆ ಯಾವುದೂ ಇಲ್ಲ. ಸುಮಾರು ೧೦೦೦/- ಹೂಡಿಕೆ ಮಾಡಬೇಕಾಗುತ್ತದೆ ಅಷ್ಟೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ದಲಿತ ಸಂಘಟನೆಗಳು, ಸರ್ಕಾರ ಮತ್ತು ಖಾಸಗಿ ವಲಯಗಳು ತಾವು ಹೇಳಿದಂತೆ ಕೃತಿಯಲ್ಲಿ ತಂದರೆ ಕೇವಲ ಒಂದು ದಶಕಗಳಿಗಿಂತಲೂ ಕಮ್ಮಿ ಸಮಯದಲ್ಲಿ ಸಾಮಾಜಿಕವಾಗಿ ಅವಮಾನಕರ ವೃತ್ತಿಯಲ್ಲಿ ತೊಡಗಿರುವ ದಲಿತರನ್ನು ವಿಮೋಚನೆಯತ್ತ ಕೊಂಡೊಯ್ಯಬಹುದು.

ಇದು ಸಾಧ್ಯವಾಗ ಬೇಕಾದರೆ ದಲಿತ ಸಂಘಟನೆಗಳು ತಮ್ಮ ದಲಿತ ಬಂಧುಗಳ ಕುಟುಂಬಗಳಿಗೆ ಭೇಟಿ ನೀಡಿ ಚರಿತ್ರೆ ವಿಧಿಸಿರುವ ಅವಮಾನಕರ ವೃತ್ತಿಯಿಂದ ಬಿಡುಗಡೆಯಾಗುವಂತೆ ಹೇಳುತ್ತಾ ಪರ್ಯಾಯ ಮಾರ್ಗಗಳನ್ನು ತಿಳಿಸಿಕೊಡಬೇಕಾಗುತ್ತದೆ. ಹಾಗೆಯೇ ಸರ್ಕಾರ ದಲಿತ ಯುವಜನತೆಗೆ ಜಾಗವನ್ನು ಒದಗಿಸಬೇಕಾಗುತ್ತದೆ. ಖಾಸಗಿ ವಲಯ ಈ ಯುವ ಜನರನ್ನು ತಮ್ಮತ್ತ ಬರಮಾಡಿಕೊಂಡು ಅವರಿಗೆ ತಂತ್ರಜ್ಞಾನದ ಅರಿವು ಮತ್ತು ತರಬೇತಿಯನ್ನು ನೀಡಿದಲ್ಲಿ ಅವರು ಖಂಡಿತವಾಗಿಯೂ ಪ್ರಗತಿಹೊಂದುವುದನ್ನು ಕಾಣಬಹುದು.

ಇದನ್ನು ಮಾಡಿದಲ್ಲಿ ಒಂದು ಮಿಲಿಯನ್ ದಲಿತ ಯುವಜನ ತಮ್ಮ ಅಲ್ಪ ವಿದ್ಯಾಭ್ಯಾಸದ ನಡುವೆಯೂ ಸಹ ಸಾಮಾಜಿಕವಾಗಿ ಗೌರವಯುತ ಬದುಕನ್ನು ನಡೆಸಬಹುದಾಗುತ್ತದೆ. □



ಹಾದಿ ಹುಣ್ಣಿಮೆ

ಆಕಾಶಕ್ಕರಳಿದ ಅರಳಿ ಮರದ ಕೆಳಗೆ
ಉದುರಿದೆಲೆಗಳ ತರಗುಚರ್ಮ
ಎಲುಬಿಗಂಟಿದ ಎದೆಗೂಡಿನ ತಪ್ಪಸ್ಸು
ಹೊಕ್ಕುಳ ಬಳ್ಳಿಯಿಂದರಳಿದ ಹುತ್ತ
ನೆತ್ತಿಯಲಿ ಕಟ್ಟಿದ ಜಟಾಜೂಟ
ಕೊನೆಯಾಗುವುದೆಂದು?
ಗೊನೆಯಾಗುವುದೆಂದು?
ಗಂಗಮ್ಮನ ಗುಡಿಗೆಂದು ಬಂದ ಗರತಿ
ಸುಜಾತ ಕಂಡ ಹಾದಿಯ ನೋಟ
ತಾಯಿ ಕರುಳಿನ ಪ್ರಸಾದ ಯೋಗ
ಹಾಲು ಚೆಲ್ಲಿದ ಬೆಳುದಿಂಗಳು
ಹಬ್ಬಿ ಹರಡಿತ್ತು ತನುಮನದೊಳಗೆ
ಹಾಲು ಪಾಯಸ ಎದೆ ತುಂಬಿ ಮೊರೆದು
ಹಾಲು ಹುಣ್ಣಿಮೆಯ ಜೇನುಗೂಡು
ಜೀವ ಮರದ ಕೊಂಬೆ ಕೊಂಬೆಯಲಿ
ಹಾಲು ಪಾಯಸ ಗಗನದಲ್ಲಿ
ತಾಯ ಕರುಳಿನಲ್ಲಿ ಕುಡಿದ ತನುಮನದಲ್ಲಿ
ನಾಡು ತೊರೆದ ಸುಟ್ಟರೆ ಗಾಳಿ
ಕಾಡು ಸೇರಿ ಹುಟ್ಟಡಗಿ ಮರಳಿ
ಮಣ್ಣಿಗೆಂದು ನಡೆದಿದೆ ತಂಪು ತಂಗಾಳಿಯಾಗಿ
ಮನುಜ ಮತಗಳೆಲ್ಲ ಸುಜಾತಯೋಗದ
ಬೆಳುದಿಂಗಳಿನಲ್ಲಿ ಮುಳುಗೇಳಿ ಹಾಯಾಗಿ
ಕತ್ತಲೆಯು ಹುಣ್ಣಿಮೆಯ ತಾಯಿ



○ ವಿ. ಚಂದ್ರಶೇಖರ ನಂಗಲಿ

ಬುದ್ಧಾಯಣ

೩೨

ವೈದಿಕರು ಇತಿಹಾಸದಿಂದ ಪಾಠ ಕಲಿಯಲಿಲ್ಲ. ಬದಲಿಗೆ ಮಡಿ ಮೈಲಿಗೆಯೇ ಸರ್ವಸ್ವವೆಂದು ಬಗೆದು ಬದುಕಿದರು ಜನ ಸಾಮಾನ್ಯರ ಬಳಿ ಸುಳಿಯುವುದಾಗಲಿ, ಅವರನ್ನು ಅರ್ಥ ಮಾಡಿಕೊಳ್ಳುವುದಾಗಲಿ, ಅವರ ನೋವು ನಲಿವುಗಳಿಗೆ ಸ್ಪಂಧಿಸುವುದಾಗಲಿ ಅವರನ್ನು ನಮ್ಮಂತೆ ಕೇವಲ ಮನುಷ್ಯರೆಂದು ಒಪ್ಪಿಕೊಳ್ಳುವುದಾಗಲಿ ಅವರಿಂದ ಸಾಧ್ಯವೇ ಆಗಲಿಲ್ಲ. ಇದು ಅವರ ನೈತಿಕ ಅಂಧ ಪತನಕ್ಕೆ ಮತ್ತು ಹಿನ್ನಡೆಗೆ ಬಹು ದೊಡ್ಡ ಕಾರಣವಾಗಿ ವೈದಿಕ ಧರ್ಮ ಕ್ಷೀಣಿಸಿ ಕಡೆಗೆ ಸರ್ವನಾಶದ ಹಂಚು ತಲುಪಿತು.

ಸಿ. ಎಚ್. ರಾಜಶೇಖರ್

'ಬುದ್ಧ ಬದುಕಿದ್ದಾಗಲೇ ದಂತಕಥೆಯಾಗಿದ್ದ ಜನ ನಾಯಕನಾಗಿದ್ದ, ಅದ್ವಿತೀಯ ಧರ್ಮ ಸಂಸ್ಥಾಪಕನೂ, ಧರ್ಮ ಬೋಧಕನೂ ಆಗಿದ್ದ, ಸಂಸ್ಕೃತ ಭಾಷೆಯನ್ನು ಪಂಡಿತರ ಭಾಷೆ ಎಂದು ಬಗೆದು ಜನ ಸಾಮಾನ್ಯರ ಪಾಳಿ ಭಾಷೆಯಲ್ಲಿ ಗಂಭೀರವಾದ ವಿಚಾರಗಳನ್ನು ಸರಳಗೊಳಿಸಿ ಸಾಮಾನ್ಯರಿಗೆ ಅರ್ಥವಾಗುವಂತೆ ಬೋಧಿಸಿದ ಇದು ಬುದ್ಧನ ಯಶಸ್ಸಿಗೆ ಮೊದಲು ಕಾರಣ. ಪಾರಮಾರ್ಥಿಕತೆಯೇ ನಿಜ ಧರ್ಮವೆಂದು, ವೇದ, ಉಪನಿಷತ್, ಅರಣ್ಯಕಗಳು, ಪುರಾಣಗಳು, ಗೀತೆಯೇ ಪವಿತ್ರ ಧರ್ಮಗ್ರಂಥಗಳೆಂದು ಅಜ್ಞಾನ, ಅವಿವೇಕ ಅಂಧಕಾರ, ಅಸಮಾನತೆ, ಗುಲಾಮಗಿರಿ ಮತ್ತು ಶೋಷಣೆಯೇ ಧರ್ಮವೆಂದು ಸಾರಿದ್ದ. ಬದುಕಿ ತೋರಿಸುತ್ತಿದ್ದ ವೈದಿಕ ಋಷಿ ಮುನಿಗಳಿಗೆ ವಿರುದ್ಧವಾಗಿ ತಿರುಗಿ ಬಿದ್ದ ಬುದ್ಧ;

ಭೌತಿಕವಾದವೇ ನಿಜ ಧರ್ಮ, ಸತ್ಯಗಳೆ ಪವಿತ್ರ ಗ್ರಂಥ, ಜ್ಞಾನ, ವಿವೇಕ, ದುಃಖ ನಿವಾರಣೆಯೇ, ಮನುಷ್ಯ ಧರ್ಮವೆಂದು ಸಾಮಾನ್ಯರ ಮಟ್ಟಕ್ಕೆ ಇಳಿದು ತಿಳಿ ಹೇಳಿದ ಅವರಿಗೆ ನೈತಿಕ ಸ್ಥೈರ್ಯ ಮತ್ತು ಮಾನಸಿಕ ಶಕ್ತಿ ಕೊಟ್ಟ ನುಡಿದಂತೆ ನಡೆದ ಬುದ್ಧ ಅಸಮಾನತೆಯನ್ನು ತೊಡೆದು ಹಾಕಿದ ಇದು ಬುದ್ಧನ ಬಹು ದೊಡ್ಡ ಯಶಸ್ಸಿಗೆ ಕಾರಣವಾಯಿತು.

ವೈದಿಕರು ಇತಿಹಾಸದಿಂದ ಪಾಠ ಕಲಿಯಲಿಲ್ಲ. ಬದಲಿಗೆ ಮಡಿ ಮೈಲಿಗೆಯೇ ಸರ್ವಸ್ವವೆಂದು ಬಗೆದು ಬದುಕಿದರು ಜನ ಸಾಮಾನ್ಯರ ಬಳಿ ಸುಳಿಯುವುದಾಗಲಿ, ಅವರನ್ನು ಅರ್ಥ ಮಾಡಿಕೊಳ್ಳುವುದಾಗಲಿ, ಅವರ ನೋವು ನಲಿವುಗಳಿಗೆ ಸ್ಪಂಧಿಸುವುದಾಗಲಿ ಅವರನ್ನು ನಮ್ಮಂತೆ ಕೇವಲ ಮನುಷ್ಯರೆಂದು ಒಪ್ಪಿಕೊಳ್ಳುವುದಾಗಲಿ ಅವರಿಂದ ಸಾಧ್ಯವೇ ಆಗಲಿಲ್ಲ. ಇದು ಅವರ ನೈತಿಕ ಅಂಧ ಪತನಕ್ಕೆ ಮತ್ತು ಹಿನ್ನಡೆಗೆ ಬಹು ದೊಡ್ಡ ಕಾರಣವಾಗಿ ವೈದಿಕ ಧರ್ಮ ಕ್ಷೀಣಿಸಿ ಕಡೆಗೆ ಸರ್ವನಾಶದ ಹಂಚು ತಲುಪಿತು.

ವೈದಿಕರು ಅಂದಿನಂತೆ, ಇಂದಿನಂತೆ, ಎಂದಿನಂತೆ, ತಮ್ಮ ಚಾಡಿ, ಕುತಂತ್ರ, ಆರೋಪ ಮತ್ತು ಕುಟೀಲ ತಂತ್ರವನ್ನು ಬಳಸಿದರು. ಪ್ರಬಲವಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಅವನ ಧರ್ಮದ ಬಗ್ಗೆ ಅಪಪ್ರಚಾರ ಮಾಡ ತೊಡಗಿದರು. ಇತಿಹಾಸಕ್ಕೆ ಪ್ರಮುಖ ಸಾಕ್ಷಿಯಾಗಬಲ್ಲ ಈ ಘಟನೆಗೆ ಬುದ್ಧ ಹೇಗೆ ಸ್ಪಂದಿಸಿದ ಮತ್ತು ಉತ್ತರಿಸಿದ ಎಂಬುದನ್ನು ಕಾಣೋಣ;

ಒಮ್ಮೆ ಬುದ್ಧನು ಮಗಧದ ರಾಜಗೃಹದಲ್ಲಿ ತಂಗಿದ್ದ ಆ ಸಮಯದಲ್ಲಿ ಅವನ ಅನೇಕ ಶಿಷ್ಯರು ಖಿನ್ನ ಮದನರಾಗಿ ಬುದ್ಧನ ಬಳಿ ಬಂದು ಅವನಿಗೆ ವಂದಿಸಿ ಗೌರವ ತೋರಿ ಗುರುವಿನ ಎದುರಿನಲ್ಲಿ ಕುಳಿತರು, ಬುದ್ಧ ಭಿಕ್ಷು ಸಹೋದರರನ್ನು ಉದ್ದೇಶಿಸಿ;

'ಗುರುವೇ, ತಮ್ಮ ಶ್ರೇಯಸ್ಸನ್ನು ಕಂಡು ಕರುಬುತ್ತಿರುವ ಪ್ರಭಾವಶಾಲಿಗಳು ತಮ್ಮ ಮತ್ತು ತಮ್ಮ ಧರ್ಮದ ವಿರುದ್ಧ ವ್ಯವಸ್ಥಿತವಾದ ಸಂಚನ್ನು ರೂಪಿಸಿದ್ದಾರೆ. ಜನ ಸಾಮಾನ್ಯರ ಮನ ಕಲಕಿ ವಿಷ ಬೀಜ ಬಿತ್ತುತ್ತಿದ್ದಾರೆ. ತಾವು ಧರ್ಮ ವಿರೋಧಿ ಎಂದು. ಧರ್ಮ ನಾಶಕರೆಂದು, ಜನ ವಿರೋಧಿ ಎಂದು ಮತ್ತು ಸುಖಿ ಕುಟುಂಬಗಳನ್ನು ಒಡೆಯುವವನೆಂದು ಆರೋಪವನ್ನು ಹರಡುತ್ತಿದ್ದಾರೆ.' ಎಂದ ಅಷ್ಟರಲ್ಲಿ ಮತ್ತೊಬ್ಬ ಭಿಕ್ಷು ನಡುವೆ ಬಾಯಿ ಹಾಕಿ;

'ಗುರುವೇ, ಅಷೇ ಅಲ್ಲ ಸಮಣ ಗೌತಮನ ಕಡೆಯಿಂದ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಕಳೆದುಕೊಳ್ಳುತ್ತಿದ್ದಾರೆ. ಹೆಂಡತಿಯರು ಗಂಡನನ್ನು ಕಳೆದುಕೊಂಡು ವಿಧವೆಯರಾಗುತ್ತಿದ್ದಾರೆ. ಆ ಗೌತಮನಿಂದ ಕುಟುಂಬಗಳು ಛಿದ್ರವಾಗುತ್ತಿವೆ. ಆಗ ಒಂದು ಸಾವಿರ ಜಟಿಲರಿಗೆ ದೀಕ್ಷೆ ಕೊಟ್ಟ, ಮತ್ತೊಂದು ದಿನ ಸಂಜಯನ ಅನುಯಾಯಿಗಳಾದ ಇನ್ನೂರಾ ಐವತ್ತು ಪರ್ಯಟಕ ಸನ್ಯಾಸಿಗಳಿಗೆ ದೀಕ್ಷೆ ಕೊಟ್ಟ ಈಗ ಸಮಣ ಗೌತಮನ ಮಾರ್ಗದರ್ಶನದಲ್ಲಿ ಮಗಧದ ಕುಲೀನರಲ್ಲಿ ಅನೇಕ ಗಣ್ಯ ವ್ಯಕ್ತಿಗಳು ಆಧ್ಯಾತ್ಮಿಕ ಜೀವನ ನಡೆಸುತ್ತಿದ್ದಾರೆ. ಹೀಗಾದರೆ ಮುಂದೇನು? ಯಾರೂ ಊಹಿಸಲಾರರು' ಎನ್ನುತ್ತಿದ್ದಾರೆ ಎಂದ. ಅಷ್ಟರಲ್ಲಿ ಮತ್ತೊಬ್ಬ ಭಿಕ್ಷುವು ಮಾತು ಮುಂದುವರೆಸಿ;

'ಗುರುವೇ, ಕೆಲವರು ಹೀಗೂ ಆಪಾದಿಸುತ್ತಿದ್ದಾರೆ. ಆ ಮಹಾ ಸಮಣ ಗೌತಮ ಮತ್ತೆ ಮಗಧ ರಾಜ್ಯಕ್ಕೆ ಬಂದಿದ್ದಾನೆ. ಆತನ ಜೊತೆಯಲ್ಲಿ ಸಂಜಯನ ಅನುಯಾಯಿಗಳು ಬಂದಿದ್ದಾರೆ. ಮತ್ತೆ ಬುದ್ಧನ ಹಿಂದೆ ಯುವಕರು. ಗೃಹಸ್ಥರು. ಗೃಹತ್ಯಾಗಿ ಮಾಡಿ ಹೋಗುತ್ತಾರೋ ಏನೋ' ಎನ್ನುತ್ತಿದ್ದಾರೆ. ಎಂದ. ಆಗ ಬುದ್ಧನು ತನ್ನ ಭಿಕ್ಷು ಸಹೋದರರನ್ನು ಉದ್ದೇಶಿಸಿ;

'ಗೆಳೆಯರೇ, ಚಿಂತಿಸದಿರಿ, ವಿವೇಕ ಮತ್ತು ತಾಳ್ಮೆಯನ್ನು ಕಳೆದುಕೊಳ್ಳಬೇಡಿ. ಯಾವುದೇ ಆರೋಪ ಮತ್ತು ಆಪಾದನೆಯ ಹಿಂದೆ ಸತ್ಯವಿರಬೇಕು. ಅದಿಲ್ಲವಾದರೆ ಈ ಗದ್ದಲ ಬಹಳ ದಿನ ಇರುವುದಿಲ್ಲ. ಇದು ಏಳು ದಿನಗಳವರೆಗೆ ಮಾತ್ರವಿರುತ್ತದೆ ಆ ನಂತರ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ.'

'ಎಲೈ ಭಿಕ್ಷು ಸಹೋದರರೇ, ಎದೆಗುಂದದಿರಿ ಆರೋಪಿಸುವವರು, ಆಪಾದಿಸುವವರು ನಿಮ್ಮನ್ನು ಹೀಯಾಳಿಸಿದರೆ ಸತ್ಯ ಮತ್ತು ಸಹ ಧರ್ಮದ ಮೂಲಕವೇ ಉತ್ತರಿಸಿ. ತಥಾಗತನು ಜನರನ್ನು ತಮ್ಮ ಹಿಂದೆ ಸ್ವಾರ್ಥಕ್ಕಾಗಿ ಕರೆದೊಯ್ಯುವುದಿಲ್ಲ. ಜನರ ಮನಸ್ಸನ್ನು ಕಲುಷಿತಗೊಳಿಸಿ ಕರೆದೊಯ್ಯುವುದಿಲ್ಲ. ಪವಾಡದಿಂದ ಕರೆದೊಯ್ಯುವುದಿಲ್ಲ. ಅಜ್ಞಾನ ತುಂಬಿದ ಮನಸ್ಸಿಗೆ ಜ್ಞಾನವನ್ನು ತುಂಬುತ್ತಾರೆ. ಅಸತ್ಯಕ್ಕೆ ಬದಲಾಗಿ ಸತ್ಯದ ದರ್ಶನ ಮೂಡಿಸುತ್ತಾರೆ. ಅವಿವೇಕವನ್ನು ತೊಡೆದು ವಿವೇಕವನ್ನು ಮೂಡಿಸುತ್ತಾರೆ. ಅಜ್ಞಾನ ಮತ್ತು ಶೋಷಣೆ



ನಾನು ತೊಡೆದದ್ದು ನಿಮ್ಮ ಅಜ್ಞಾನವನ್ನು!

ಯಿಂದ ನರಳುತ್ತಿರುವ ಬಹು ಜನರ ಬದುಕನ್ನು ಸಮರ್ಥರು ಮತ್ತು ವಿವೇಕಿಗಳು ಸರಿ ಪಡಿಸಿ ಅವರ ದುಃಖ ನಿವಾರಿಸುವುದು ನಮ್ಮಗಳ ಕರ್ತವ್ಯ ಹೌದೋ ಅಲ್ಲವೋ? ಎಂದು ಪ್ರಶ್ನಿಸಿ'

ಹೌದೆನ್ನುವ ವಿವೇಕಿಗಳನ್ನು ಉದ್ದೇಶಿಸಿ ತಥಾಗತನು ಹೀಗೆ ಮರು ಪ್ರಶ್ನೆ ಕೇಳುತ್ತಾನೆ; ಎಲ್ಲೈ ವಿವೇಕಿಗಳೇ, ಸಮರ್ಥತರೇ, ಯುವಕರೆ ಮತ್ತು ಮಾನವೀಯ ಕಾಳಜಿಯುಳ್ಳವರೇ, ನಿಮ್ಮ ಅಲ್ಪ ಸುಖವನ್ನು ಅಲ್ಪ ಸ್ವಾರ್ಥವನ್ನು ಅಶಾಶ್ವತ ಜೀವಮಾನವನ್ನು ನಿಮ್ಮೊಂದಿಗೆ ದುಃಖ, ಅಜ್ಞಾನ, ಅಸಮಾನತೆ, ಅವಿದ್ಯೆ ಮತ್ತು ನಿರಂತರ ಶೋಷಣೆಗೆ ತುತ್ತಾಗಿರುವವರ ಬದುಕಿಗೆ ನೆಲೆ ಕೊಡುವ, ಬೆಲೆ ಕೊಡುವ, ಅವರುಗಳ ಮುಖದಲ್ಲಿ ಜೀವಕಳೆ ಹುಟ್ಟಿಸುವ ಅವರನ್ನು ದುಃಖದಿಂದ ಬಿಡುಗಡೆಗೊಳಿಸಿ ಸ್ವಾತಂತ್ರ್ಯರಾಗಿಸುವ ಈ ಯುದ್ಧಕ್ಕೆ ಯುಗ ಪರಿವರ್ತನೆಗೆ, ಊತು ಹೋಗಿರುವ ಧರ್ಮಚಕ್ರದ ಮರು ಚಾಲನೆಗೆ ಯಾರೂ ತಮ್ಮನ್ನು ಸಮರ್ಪಿಸಿಕೊಳ್ಳುತ್ತೀರಾ ಅಂತವರು ಸ್ವಇಚ್ಛೆಯಿಂದ ವಿವೇಕ ಮತ್ತು ವಿವೇಚನೆಯಿಂದ ಕೈ ಎತ್ತಿ ಎಂದರೆ, ಕೈ ಎತ್ತುವವರು ಅವಿವೇಕಿಗಳೋ? ಅಥವಾ ವಿವೇಕಿಗಳೋ? ಎಂದು ಪ್ರಶ್ನಿಸಿ'

'ಎಲ್ಲೈ ಗೆಳೆಯರೇ, ಮುಂದುವರೆದು ಹೀಗೆ ಪ್ರಶ್ನಿಸಿ; ಧರ್ಮದ ಹಾದಿಯಲ್ಲಿ ಕರೆದುಕೊಂಡು ಹೋಗುವ ಜ್ಞಾನಿಗಳನ್ನು ನೀವು ದ್ವೇಷಿಸುವುದು ಸರಿಯೇ? ನಿಮ್ಮ ಆತ್ಮಸಾಕ್ಷಿ ಒಪ್ಪುವುದೇ? ಎಂದು ಪ್ರಶ್ನಿಸಿ. ಬುದ್ಧನ ಧರ್ಮದಲ್ಲಿ ಬಲ ಪ್ರಯೋಗವಿಲ್ಲ. ಎಂಬುದನ್ನು ನಿದರ್ಶನಗಳ ಮೂಲಕ ವಿವರಿಸಿ. ಮನೆಯನ್ನು ಸ್ವಇಚ್ಛೆಯಿಂದ ತ್ಯಜಿಸುವುದು ಮತ್ತು ಸ್ವಇಚ್ಛೆಯಿಂದ ಅಂಟಿಕೊಳ್ಳುವುದು ಅವರವರ ವಿವೇಚನೆಗೆ ಬಿಟ್ಟ ವಿಷಯವೆನ್ನಿ. ಬುದ್ಧನ ಧರ್ಮಯುದ್ಧ ಸ್ವಾರ್ಥ ಸಾಧನೆಗಲ್ಲ. ಪರಾವಲಂಬಿತನಕಲ್ಲ. ಆಸೆ ಆಮೀಷಗಳಿಗಲ್ಲ ಬಹು ಜನರ ದುಃಖ ನಿವಾರಣೆಗೆ ಎಂದು ಸಾರಿ ಸಾರಿ ಹೇಳಿ...!!' ಎಂದ.

ಭಿಕ್ಷು ಸಹೋದರರ ಮನಸ್ಸಿಗೆ ಹೊಸ ಚೈತನ್ಯ ಮತ್ತು ಚಾಲನೆ ಸಿಕ್ಕಿದಂತಾಯಿತು. ತಮ್ಮ ಗುರುವಿನ ವಾದದಲ್ಲಿ ಸತ್ಯ ಮತ್ತು ವಾಸ್ತವ ಸಂಗತಿ ಇದೆ ಎಂದು ಅರಿತು, ಅವರು ಮುಂದೆ ಊರೂರು ಅಲೆದು ನಿಂದಕರಿಗೆ ಸಮರ್ಪಕ ಉತ್ತರ ಕೊಟ್ಟರು. ದಿನ ಕಳೆದಂತೆ ವಾತಾವರಣ ತಿಳಿಯಾಯಿತು. ಪಟ್ಟ ಭದ್ರ ಹಿತಾಸಕ್ತರು ತಮ್ಮ ಬಾಲ ಮುದುರಿ ಕೊಂಡರು ಜನಸಾಮಾನ್ಯರಿಗೆ ಯಾರು ಹಿತವರು ಎಂಬ ಬಗ್ಗೆ ಸ್ಪಷ್ಟತೆ ಮೂಡಿತು. ಆಗ ಜನಗಳು ಹೀಗೆ ನುಡಿದರು;

'ಹೌದು... ಶಾಕ್ಯ ಪುತ್ರನಾದ ಸಮಣ ಗೌತಮರು, ಧರ್ಮದ ಮೂಲಕ ಜನರು ತನ್ನನ್ನು ಅನುಸರಿಸುವಂತೆ ಮಾಡುತ್ತಾರೆಯೇ ಹೊರತು ಅಧರ್ಮದ ಮೂಲಕವಲ್ಲ...!' ಎಂಬ ನಿರ್ಧಾರಕ್ಕೆ ಬಂದರು ಮತ್ತು ಬುದ್ಧನತ್ತ ಮೊದಲಿಗಿಂತ ಹೆಚ್ಚಾಗಿ ಒಲಿದರು ಈ ವಿಷಯವನ್ನು ಭಿಕ್ಷು ಸಹೋದರರು ಬುದ್ಧನಿಗೆ ತಿಳಿಸಿದರು. ಆಗ ಬುದ್ಧನು ಶಾಂತಚಿತ್ತನಾಗಿ

'ಭಿಕ್ಷು ಸಹೋದರರೇ ಅದೇ ಸತ್ಯಕ್ಕಿರುವ ಶಕ್ತಿ...!' ಎಂದ. ಆಗ ಆ ಭಿಕ್ಷು ಸಮೂಹ;

'ಹೌದು ಗುರುದೇವಾ, ಸತ್ಯವೇ ಶಕ್ತಿ...! ಸತ್ಯವೇ ಧರ್ಮ...!! ಸತ್ಯವೇ ಸರ್ವಕಾಲೀಕ...!!!' ಎಂದರು. □

ಇನ್ನು ನನ್ನ ಭುಜವೇ ನಿನ್ನಯ ಊರುಗೋಲು

ಒಮ್ಮೆ ಸರ್ವೋತ್ತಮನಾದ ಗೌತಮ ಬುದ್ಧನು ರಾಜಗೃಹದ ಬಳಿ ವೇಣುವನದಲ್ಲಿ ತಂಗಿದ್ದ. ದಿನ ನಿತ್ಯವೂ ಅಲ್ಲಿ ಅಳಿಲುಗಳಿಗೆ ಆಹಾರವನ್ನು ನೀಡುತ್ತಿದ್ದ. ಸಾವಿರಾರು ಜನ ವೇಣುವನಕ್ಕೆ ಬರುತ್ತಿದ್ದರು. ಬುದ್ಧನ ದರ್ಶನ ಮತ್ತು ಬೋಧನೆ ಕೇಳಿ ಧನ್ಯರಾಗುತ್ತಿದ್ದರು.

ಇಂತಹ ಸಮಯದಲ್ಲಿ ಸುಪ್ರಬುದ್ಧನೆಂಬುವವನು ರಾಜಗೃಹದಲ್ಲಿ ವಾಸಿಸುತ್ತಿದ್ದನು. ಕಡು ಬಡವನಾದ ಅವನು ಕುಷ್ಠರೋಗಕ್ಕೆ ತುತ್ತಾಗಿದ್ದ. ಈಗಾಗಿ ಅವನು ಮನೆಯವರಿಂದ, ಊರಿನವರಿಂದ ತಿರಸ್ಕರಿಸಲ್ಪಟ್ಟಿದ್ದ. ಹಸಿವು ಮತ್ತು ಆಶ್ರಯದಿಂದ ವಂಚಿತನಾಗಿದ್ದ. ಅವನು ದಿನದಿಂದ ದಿನಕ್ಕೆ ಅತಿಯಾಗಿ ನರಳುತ್ತಿದ್ದ. ಕೀಳಿರಿಮೆ ಮತ್ತು ದುಃಖ ಅವನಲ್ಲಿ ಮಡವುಗಟ್ಟಿತ್ತು ಈ ಬಾಧೆಯಿಂದ ಪಾರಾಗಬೇಕೆಂಬ ದಿಟ್ಟತನವು ಆಶಾವಾದವು ಅವನಲ್ಲಿ ಮನೆ ಮಾಡಿತು.

ರೋಗವೆಂಬುದು ತನಗೊಬ್ಬನಿಗೇ ತಗುಲಿದ ಬಾಧೆ ಎಂದು ಭ್ರಮಿಸಿದ್ದನು. ಅವನು ಜನಗಳನ್ನು ಜನಗಳ ಗುಂಪನ್ನು ಕಂಡರೆ ಬೆಚ್ಚಿ ಬೀಳುತ್ತಿದ್ದನು. ಅದೇ ಸಮಯದಲ್ಲಿ ಅವರಲ್ಲಿ ಯಾರಾದರು ದಾಯಾಳುಗಳು ನನ್ನ ಹಸಿವಿಗೆ ಹಿಡಿ ಅನ್ನ ಕೊಟ್ಟಾರು ಎಂದು ಆಶಿಸುತ್ತಿದ್ದ. ಇಂತಹ ಸಮಯದಲ್ಲಿ ಸರ್ವೋತ್ತಮನು ವೇಣುವನದಲ್ಲಿ ನೆರದಿದ್ದ ಸಾವಿರಾರು ಜನರ ಮಧ್ಯೆ ಕುಳಿತು ಧರ್ಮೋಪದೇಶ ಮಾಡುತ್ತಿದ್ದ. ದೂರದಿಂದಲೇ ಇಷ್ಟೊಂದು ಜನ ಒಟ್ಟಿಗೆ ಸೇರಿರುವುದನ್ನು ಕಂಡ ಕುಷ್ಠರೋಗಿ ಸುಪ್ರಬುದ್ದನ್ನು ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿದನು; ಖಂಡಿತ ಆ ಗುಂಪಿನಲ್ಲಿ ಯಾರೋ ಪುಣ್ಯಾತ್ಮರು ಅನ್ನದಾನ ಮಾಡುತ್ತಿದ್ದಾರೆ. ನಾನು ಅಲ್ಲಿಗೆ ಹೋದರೆ ನನಗೂ ಹೊಟ್ಟೆಯ ತುಂಬಾ ಮೃದುವಾಪ. ರುಚಿಯಾದ ಅಥವಾ ಕಠಿಣವಾದ ಯಾವುದಾದರೂ ಆಹಾರ ಸಿಕ್ಕಿ ನನ್ನ ಹಸಿವು ನೀಗಬಹುದು ಎಂದು ಆ ಕಡೆ ಕುಂಟುತ್ತ ಹೆಜ್ಜೆ ಹಾಕಿದ. ಹತ್ತಿರ ಹೋದ ಬಳಿಕ ತಿಳಿಯಿತು ಇಲ್ಲಿ ಯಾರೂ ಅನ್ನದಾನ ಮಾಡುತ್ತಿಲ್ಲ. ಗೌತಮನೆಂಬ ಸಮಣನು ಧರ್ಮೋಪದೇಶ ಮಾಡುತ್ತಿದ್ದಾನೆಂದು.

ತನ್ನ ಪ್ರಯತ್ನ ಮತ್ತು ಆಸೆ ವ್ಯರ್ಥವಾದುದಕ್ಕೆ ಖಿನ್ನನಾಗಿ ಭಿಕ್ಷೆಗಾಗಿ ಮುಂದೆ ತೆರಳ ತೊಡಗಿದ. ಅಷ್ಟರಲ್ಲಿ ಅವನ ಕಿವಿಗೆ ದೃಢಚಿತ್ತವೂ ಶಾಂತವೂ, ಆಕರ್ಷಕವೂ ಮತ್ತು ಮಧುರತೆಯಿಂದ ಕೂಡಿದ ಕಂಠವು ಅವನನ್ನು ಹಿಡಿದು ನಿಲ್ಲಿಸಿತು. ವಿಚಿತ್ರ ಬಯಕೆಯೊಂದು ಅವನಲ್ಲಿ ಮನೆಮಾಡಿ ಆ ಸಮಣನ ಮುಖ ದರ್ಶನವನ್ನಾದರೂ ಪಡೆಯೋಣ ಅವನ ಧರ್ಮೋಪದೇಶವನ್ನು ಕೇಳೋಣವೆಂದು ಅನಿಸಿತು. ತಿರುಗಿನಿಂತ ಅವನು ಬುದ್ಧನ ಕಡೆಗೊಮ್ಮೆ ದೃಷ್ಟಿ ಹಾಯಿಸಿದ. ಆ ತೇಜೋಮಯನ ಸೌಂದರ್ಯ ಮತ್ತು ಕುಳಿತ ಭಂಗಿಗೆ ಆಕರ್ಷಕನಾಗಿ ತನ್ನ ಮೊಂಡು ಕೈಗಳನ್ನು ತಾನೊದ್ದ ಹೊದಿಕೆಯಿಂದ ಬಲವಂತವಾಗಿ ಹೊರತಂದು ಭಕ್ತಿ ಪೂರ್ವಕವಾಗಿ ನಮಿಸಿ ನಿಂತ. ಸುಪ್ರಬುದ್ಧನ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಬುದ್ಧನು ಶಾಂತನಾಗಿ ಮುಗುಳ್‌ನಕ್ಕು ಕಣ್ಣ್‌ಸನ್ನೆ ಮತ್ತು ಕೈಸನ್ನೆಯಿಂದ ಅವನನ್ನು ಕೂರಲು ಸೂಚಿಸಿದ. ಜನ ಸಮೂಹದಿಂದ ಅತೀ ದೂರದ ಒಂದು ಮರದ ಮರೆಯಲ್ಲಿ ಮುದುರಿ ಕುಳಿತ ಆತ ಬುದ್ಧನ ಕಡೆ ತನ್ನ ಕಣ್ಣು, ಮನಸ್ಸು ಮತ್ತು ಕಿವಿಯನ್ನು ಚಾಚಿದ.

ಆಗ ಸರ್ವೋತ್ತಮನು ತನ್ನ ಮನಸ್ಸಿನಲ್ಲೇ ಅಲ್ಲಿ ನೆರೆ ದಿದ್ದವರ ಮನಸ್ಸನ್ನು ಅಳೆಯುತ್ತಾ ಹೀಗೆ ಯೋಚಿಸಿದ: ಇಲ್ಲಿ ನೆರೆದಿದ್ದವರಲ್ಲಿ ಯಾರು ಸತ್ಯವನ್ನು ಗ್ರಹಿಸಲು ಶಕ್ತರಾಗಿದ್ದಾರೆಂದು ತಿಳಿಯಲು ನನಗೆ ಕುತೂಹಲವಾಗಿದೆ. ಆದರೆ ಈ ಗುಂಪಿನಲ್ಲಿ ಕುಳಿತಿರುವವರು ಬರೀ ತೋರಿಕೆಯವರು. ಇವರಿಗೆ ಸತ್ಯದ ಹಸಿವಿಲ್ಲ. ಆ ಕುಷ್ಠ ರೋಗಿಯೊಬ್ಬನೇ ಸತ್ಯ ಗ್ರಹಿಸಬಲ್ಲ ಎಂಬುದನ್ನು ಕಂಡುಕೊಂಡ. ಬಳಿಕ ಈ ಮುಂದಿನ ವಿಷಯಗಳನ್ನು ಬೋಧಿಸ ತೊಡಗಿದ:

'ದಾನ ನೀಡುವುದು ಭಿಕ್ಷೆಯಲ್ಲ. ಅದೊಂದು ತ್ಯಾಗ. ಆ ತ್ಯಾಗದ ಹಿಂದೆ ಸಂತೋಷವಿದೆ. ಸಾಲ ಬಾಧೆಯಿಂದ ಮುಕ್ತಿಯಿದೆ. ಅದು ನಮ್ಮ ನೈತಿಕ ಕರ್ತವ್ಯ ಅದರಲ್ಲಿ ಹೆಚ್ಚುಗಾರಿಕೆಯನ್ನು ಕಾಣಬೇಡಿ, ಬಯಸಬೇಡಿ. ದಾನದ ಮೂಲಕ ನಿಮ್ಮನ್ನು ನೀವು ಕಾಣಿರಿ. ನಿಮ್ಮ ಶುಚಿಯನ್ನು ನೀವು ಮಾಡಿಕೊಳ್ಳಿರಿ. ಋಣ ಮುಕ್ತತೆಯಲ್ಲಿ ದಾನದ, ತ್ಯಾಗದ, ಭಿಕ್ಷೆಯ ಮೂಲ ಅಡಗಿದೆ. ನೀವು ಯಾರಿಂದ ಏನು ಪಡೆದಿರುತ್ತೀರೋ ಮತ್ತೆ ಅವರಿಗೆ ಮರಳಿ ಕೊಡುವುದೇ ದಾನ. ಅದರಲ್ಲಿ ನಿಮ್ಮ ಮೇಲುಗಾರಿಕೆ ಏನಿದೆ?'

'ಸ್ವರ್ಗ ಲೋಕ, ದೇವಲೋಕ ಎಂಬುದು ಬೇರಿಲ್ಲ. ಪವಿತ್ರ ಜೀವನವೇ ಸ್ವರ್ಗಲೋಕ. ಇಂದ್ರಿಯಾ ಬಯಕೆಗಳು ನಿಮ್ಮ ಆಸೆಗಳ ಉಪಶಮನವಲ್ಲ. ದುಃಖವನ್ನು ಹೆಚ್ಚಿಸುವ ಸಲಕರಣೆಗಳು. ಅದರಿಂದ ದುಃಖ ನಿವಾರಣೆ ಸಾಧ್ಯವಿಲ್ಲ. ಆಸೆಗಳೆಂಬ ಉಪಾದಿಗಳನ್ನು ತೊಡೆದುಕೊಂಡಾಗಲೇ ದುಃಖ ನಿವಾರಣೆ. ಯಾವುದಕ್ಕೆ ಹಾದಿ ಇದೆಯೋ, ಯಾವುದಕ್ಕೆ ಹುಟ್ಟು ಇದೆಯೋ, ಅದಕ್ಕೆ ಅಂತ್ಯವಿರಲೇಬೇಕು! ಈ ಸತ್ಯದ ಬಗೆಗೆ ಶುದ್ಧ ನಿರಂಜನ ಅಂತರ್ದೃಷ್ಠಿ ಅಥವಾ ಜ್ಞಾನವನ್ನು ಪಡೆಯಿರಿ.' 'ಹುಟ್ಟು, ರೋಗ, ಮುಪ್ಪು ಮತ್ತು ಸಾವು ಪೂರ್ವಜನ್ಮದ ಕರ್ಮಫಲವಲ್ಲ. ಅದು ಪ್ರಕೃತಿ ಸಹಜ ಧರ್ಮ! ಅದನ್ನು ಸಹಜವಾಗಿ ಅಂಗೀಕರಿಸಿ. ಅದರಿಂದ ಝರ್ಜರಿತರಾಗಬೇಡಿ. ದುಃಖಿತರಾಗಬೇಡಿ. ಕೀಳಿರಿಮೆ ಬೆಳೆಸಿಕೊಳ್ಳಬೇಡಿ!'

ಹೀಗೆ ಬುದ್ಧನ ಉಪದೇಶ ನಿರಂತರವಾಗಿ ಸಾಗುತ್ತಲೇ ಇತ್ತು ಇದರಿಂದ ಸುಪ್ರಬುದ್ಧನ ಹೃದಯವು ಮೃದುವೂ, ದೀನವೂ, ಮುಕ್ತವೂ, ಸಂತೃಪ್ತವೂ ಮತ್ತು ಶ್ರದ್ಧೆಯಿಂದ ತುಂಬಿ ತುಳುಕಿತು. ಯಾವುದೇ ಕಲೆ ಇಲ್ಲದ ಬಿಳಿ ಬಟ್ಟೆಯು ಹೇಗೆ ಯಾವುದೇ ಬಣ್ಣವನ್ನು ಪಡೆಯಲು ಯೋಗ್ಯವಾಗಿರುತ್ತದೋ ಹಾಗೆಯೆ ಅವನು ಸತ್ಯವನ್ನು ನೋಡಿದ. ತಲುಪಿದ ಅರಿತ ಮತ್ತು ಲೀನವಾದ. ಸಂದೇಹಗಳಿಂದ ಪ್ರಶ್ನೆಗಳಿಂದ ಮುಕ್ತನಾದ. ಅವನ ಮನದಲ್ಲಿ ವಿಶ್ವಾಸ □

'SAMVADA' Kannada Monthly, Apr 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಸಾಧನೆಗೆ ಅಂಗವಿಕಲತೆ ಸಮಸ್ಯೆಯೇ ಅಲ್ಲ...
ಅಂಗವಿಕಲರಲ್ಲಿ ಹುದುಗಿರುವ ಪ್ರತಿಭೆಯು ಬೆಳಕಿಗೆ ಬರುವಂತಾಗಲು ಸರ್ಕಾರ ಅವರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ.

ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು:

* ಶಿಕ್ಷಣ
* ಉದ್ಯೋಗ ಮತ್ತು ತರಬೇತಿ
* ಪುನರ್ವಸತಿ
* ಸಾಮಾಜಿಕ ಭದ್ರತೆ
* ವಿದ್ಯಾರ್ಥಿ ವೇತನ
* ಶ್ರವ್ಯ ಗ್ರಂಥಾಲಯ ಸ್ಥಾಪನೆ
* ಸ್ವಯಂ ಉದ್ಯೋಗ
* ದೂರವಾಣಿ ಬೂತ್ ಸೌಲಭ್ಯ
* ಸಾಲ ಸೌಲಭ್ಯ
* ವಿಮಾ ಯೋಜನೆ
* ಮಾಸಿಕ ನಿರ್ವಹಣೆ ಭತ್ಯ (ರು. 125/-)
* ಉದ್ಯೋಗದಲ್ಲಿ ಶೇಕಡ 5 ರಷ್ಟು ಮೀಸಲು
* ವಿಶೇಷ ವಾಹನ
* ರಿಯಾಯಿತಿ ಬಸ್ ಪಾಸ್
* ಅಂಗವಿಕಲರಿಗಾಗಿ ಶಾಲೆಗಳು

ಉದಾಸೀನತೆ ಬಿಡಿ–ಉತ್ತೇಜನ ನೀಡಿ

ಕರ್ನಾಟಕ ವಾರ್ತೆ
Karnataka Information